ವಿಶ್ವವಾಣಿ
ವಿಶ್ವಾಸವೇ ವಿಶ್ವ

ಆರು ವಂದೇ ಭಾರತ್ ರೈಲುಗಳಿಗೆ ಪ್ರಧಾನಿ ಮೋದಿ ಚಾಲನೆ

ಜಾರ್ಖಂಡ್, ಒಡಿಶಾ, ಬಿಹಾರ ಮತ್ತು ಉತ್ತರ ಪ್ರದೇಶ ರಾಜ್ಯಗಳಲ್ಲಿ ಸಂಚರಿಸುವ ಆರು ವಂದೇ ಭಾರತ್ ರೈಲುಗಳಿಗೆ ಪ್ರಧಾನಿ ನರೇಂದ್ರ ಮೋದಿಯವರು ರಾಂಚಿಯಲ್ಲಿ ವರ್ಚುವಲ್ ಮೂಲಕ ಭಾನುವಾರ ಚಾಲನೆ ನೀಡಿದರು. ಹೊಸ ರೈಲುಗಳು ಟಾಟಾನಗರ-ಪಟ್ನಾ, ಬ್ರಹ್ಮಪುರ-ಟಾಟಾನಗರ, ರೂರ್ಕೆಲಾ-ಹೌರಾ, ದೇವಗಢ-ವಾರಾಣಸಿ, ಭಾಗಲ್ಪುರ-ಹೌರಾ ಮತ್ತು ಗಯಾ-ಹೌರಾ ಮಾರ್ಗಗಳಲ್ಲಿ ಸಂಚರಿಸಲಿವೆ.

ಬೀದರ್‌ನಿಂದ ಚಾಮರಾಜನಗರವರೆಗೆ 2500 ಕಿ.ಮೀ ಮಾನವ ಸರಪಳಿ | ವಿವಿಧೆಡೆ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ

ಕರುನಾಡು ಜೋಡಿಸಿದ ಮಾನವ ಸರಪಳಿ

ಬೆಂಗಳೂರು: ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಹಿನ್ನೆಲೆಯಲ್ಲಿ ರಾಜ್ಯ ಸರಕಾರ ಹಮ್ಮಿಕೊಂಡಿದ್ದ ವಿಶ್ವ ದಾಖಲೆಯ ಮಾನವ ಸರಪಳಿ ಅಭಿಯಾನ ಸಂಪನ್ನಗೊಂಡಿದ್ದು, ಚಾಮರಾಜನಗರದಿಂದ ಬೀದರ್‌ವರೆಗೆ ಸುಮಾರು 2500 ಕಿ.ಮೀ ಉದ್ದದ ಮಾನವ ಸರಪಳಿ ಅಭಿಯಾನ ಯಶಸ್ವಿಯಾಯಿತು.

ಈ ವಿಭಿನ್ನ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧದ ಮುಂಭಾಗ ಚಾಲನೆ ನೀಡಿದರು. ರಾಜ್ಯದ ವಿವಿಧ ಭಾಗಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ಸ್ಥಳೀಯ ಶಾಸಕರು, ಜನಪ್ರತಿನಿಧಿಗಳ ನೇತೃತ್ವದಲ್ಲಿ ಮಾನವ ಸರಪಳಿ ಕಾರ್ಯ ನಡೆಯಿತು. ರಾಜ್ಯಾದ್ಯಂತ ಒಟ್ಟಿಗೆ ನಡೆಯಬೇಕಿದ್ದ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು, ಪ್ರತಿ ನಾಲ್ಕೈದು ಕಿ.ಮೀಗೆ ಒಬ್ಬರಂತೆ ಕೆಎಎಸ್ ಅಧಿಕಾರಿಯನ್ನು ನಿಯೋಜಿಸಲಾಗಿತ್ತು.

ರಾಜ್ಯದ ವಿವಿಧ ಭಾಗಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಯಕ್ಷಗಾನ, ವೀರಗಾಸೆ ಸೇರಿದಂತೆ ವಿವಿಧ ಕಲೆಗಳನ್ನು ಕಲಾವಿದರು ಸಂಭ್ರಮದಿಂದ ಪ್ರದರ್ಶಿಸಿದರು. ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಭಿಯಾನದ ರಾಯಭಾರಿ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಹರೇಕಳ ಹಾಜಬ್ಬ, ತೃತೀಯ ಲಿಂಗಿ ಪ್ರಿಯಾಂಕಾ ಸೇರಿದಂತೆ ಪೌರಕಾರ್ಮಿಕರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಡಾ.ಎಚ್.ಸಿ.ಮಹಾದೇವಪ್ಪ, ಕೆ.ಜೆ.ಜಾರ್ಜ್, ದಿನೇಶ್ ಗುಂಡೂರಾವ್, ಪ್ರಿಯಾಂಕ್ ಖರ್ಗೆ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ವಿಧಾನಸಭಾ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ, ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್ ಸೇರಿದಂತೆ ಅನೇಕರಿದ್ದರು.

ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಹಿನ್ನಲೆಯಲ್ಲಿ ರಾಜ್ಯ ಸರಕಾರ ಹಮ್ಮಿಕೊಂಡಿದ್ದ ಮಾನವ ಸರಪಳಿ ಅಭಿಯಾನಕ್ಕೆ ವಿಧಾನಸೌಧದ ಮುಂಭಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು.

- ರಾಜ್ಯಾದ್ಯಂತ 10ಲಕ್ಷಕ್ಕೂ ಹೆಚ್ಚು ಸಸಿ ನೆಡುವ ಕಾರ್ಯಕ್ರಮ
- ಧಾರವಾಡದಲ್ಲಿ ಮಾನವ ಸರಪಳಿಯಲ್ಲಿ ಮೂಡಿಬಂದ ಭಾರತ ನಕ್ಷೆ
- ಚಿಕ್ಕಮಗಳೂರು ಜಿಲ್ಲೆಯಲ್ಲಿ 92 ಕಿ.ಮೀ ಮಾನವ ಸರಪಳಿ ನಿರ್ಮಾಣ
- ಗದಗದಲ್ಲಿ ವಿದ್ಯಾರ್ಥಿಗಳ ಮೇಲೆ ಹೆಜ್ಜೇನು ದಾಳಿ, ಹಲವರಿಗೆ ಗಾಯ
- ಪ್ರತಿ ನಾಲ್ಕೈದು ಕಿ.ಮೀಗೆ ಒಬ್ಬರಂತೆ ಕೆಎಎಸ್ ಅಧಿಕಾರಿ ನಿಯೋಜನೆ
- ಯಕ್ಷಗಾನ, ವೀರಗಾಸೆ ಸೇರಿ ವಿವಿಧ ಕಲೆಗಳನ್ನು ಸಂಭ್ರಮದಿಂದ ಪ್ರದರ್ಶಿಸಿದ ಕಲಾವಿದರು.

ಕಾರ್ಯಕ್ರಮದಲ್ಲಿ ಭದ್ರತಾ ಲೋಪ

ವಿಧಾನಸೌಧದ ಮುಂಭಾಗ ನಡೆಯುತ್ತಿದ್ದ ಕಾರ್ಯಕ್ರಮದಲ್ಲಿ ಭದ್ರತಾ ನಿಯಮ ಉಲ್ಲಂಘನೆಯಾದ ಪ್ರಸಂಗ ನಡೆದಿದೆ. ವೇದಿಕೆಯಲ್ಲಿ ಸಚಿವ ಎಚ್.ಡಿ.ಮಹದೇವಪ್ಪ ಅವರು ಮಾತನಾಡುತ್ತಿದ್ದ ವೇಳೆ ಕನ್ನಡ ಬಾವುಟದ ಶಾಲು ಧರಿಸಿದ್ದ ಯುವಕನೊಬ್ಬ ಕೈಯಲ್ಲಿ ಶಾಲು ಹಿಡಿದು ವೇದಿಕೆಯತ್ತ ನುಗ್ಗಿ, ಸಿಎಂ ಸಿದ್ದರಾಮಯ್ಯ ಅವರ ಹತ್ತಿರ ಬರಲು ಯತ್ನಿಸಿದ್ದಾನೆ. ಕೂಡಲೇ ಆತನನ್ನು ಭದ್ರತಾ ಸಿಬ್ಬಂದಿ ವಶಕ್ಕೆ ಪಡೆದಿದ್ದಾರೆ. ಅಷ್ಟರಲ್ಲೇ ತನ್ನ ಕೈಯಲ್ಲಿನ ಶಾಲನ್ನು ಮುಖ್ಯಮಂತ್ರಿಗಳತ್ತ ಎಸೆದಿದ್ದಾನೆ. ಆದರೆ ಆ ಶಾಲು ಸಿಎಂ ಬದಲಿಗೆ ಜಾರ್ಜ್ ಬಳಿ ಬಿದ್ದಿದೆ. ಈ ಅನಿರೀಕ್ಷಿತ ಘಟನೆಯಿಂದ ಕೆಲ ಕಾಲ ಗೊಂದಲ ಸೃಷ್ಟಿಯಾಯಿತು.

ಏಕತೆ ನೆಪದಲ್ಲಿ ಸಮಾಜವನ್ನು ಒಡೆಯುವ ವಿಚ್ಛಿದ್ರಕಾರಕ ಶಕ್ತಿಗಳನ್ನು ನಾಶ ಮಾಡಲು ಪ್ರಜಾಪ್ರಭುತ್ವವಾದಿಗಳು ಎದ್ದು ನಿಲ್ಲಿ. ನಮ್ಮ ಸಂವಿಧಾನ ಎತ್ತಿ ಹಿಡಿದಿರುವ ಬಹುತ್ವವನ್ನು ನಾವು ಬದುಕಿನಲ್ಲಿ ಆಚರಿಸೋಣ. ಆ ಮೂಲಕ ಸಮಾಜ ಒಡೆಯುವ ದುಷ್ಟರ ಷಡ್ಯಂತ್ರ ಸೋಲಿಸೋಣ. ಪ್ರಜಾಪ್ರಭುತ್ವ ಗಟ್ಟಿಗೊಳಿಸೋಣ. **– ಸಿದ್ದರಾಮಯ್ಯ** ಮುಖ್ಯಮಂತ್ರಿ

ಪುಟ ತೆರೆದಂತೆ...

ಬಿಜೆಪಿಯಲ್ಲಿ ಬಾಲಭವನ V/S ವೃದ್ಧಾಶ್ರಮ
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ
ಸಂ.ಪುಟ | 6

ಬಗೆಬಗೆಯ ಬಯಕೆ ಸಿರಿಯ ಕಂಡು...
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
ಸಂ.ಗಮ | 7

ದಾರಿದೀಪೋಕ್ತಿ

ಕೆಲವು ಸಲ ಒಳ್ಳೆಯ ಸುದ್ದಿಯನ್ನು ನಿಮ್ಮೊಳಗೇ ಇಟ್ಟುಕೊಳ್ಳಬೇಕು, ಅದನ್ನು ಜಗಜ್ಜಾಹೀರು ಮಾಡಬಾರದು. ಎಲ್ಲರೂ ನಿಮ್ಮ ಏಳಿಗೆಯನ್ನು ಸಹಿಸುವುದಿಲ್ಲ. ಆಟ ಕೆಡಿಸುವುದು ಹೇಗೆ ಎಂದು ಹವಣಿಸುತ್ತಲೇ ಇರುತ್ತಾರೆ.

ವಕ್ರತುಂಡೋಕ್ತಿ

ಸದಾ ನಗುವನ್ನು ಧರಿಸಿರಬೇಕು. ಹಾಗೆಂದು ಪೈಜಾಮ ಅಥವಾ ಪ್ಯಾಂಟು ಧರಿಸುವುದನ್ನು ಮರೆಯಬಾರದು.

ಪಕ್ಷದಿಂದ ಉಚ್ಚಾಟನೆ, ಶಾಸಕ ಸ್ಥಾನದಿಂದ ಅನರ್ಹಕ್ಕೆ ಆಗ್ರಹ

ಮುನಿರತ್ನ 2 ದಿನ ಪೊಲೀಸ್ ಕಸ್ಟಡಿಗೆ

ಬೆಂಗಳೂರು: ಬಿಬಿಎಂಪಿ ಗುತ್ತಿಗೆದಾರ ಚಲುವರಾಜು ವಿರುದ್ಧ ವಾಚಾಮಗೋಚರವಾಗಿ ನಿಂದಿಸಿರುವ ಶಾಸಕ ಮುನಿರತ್ನ ಅವರನ್ನು ಎರಡು ದಿನ ಪೊಲೀಸ್ ಕಸ್ಟಡಿಗೆ ಒಪ್ಪಿಸಿ 82ನೇ ಜನಪ್ರತಿನಿಧಿಗಳ ನ್ಯಾಯಾಲಯದ ನ್ಯಾಯಾಧೀಶರು ಆದೇಶಿಸಿದ್ದಾರೆ.

ಗುತ್ತಿಗೆದಾರನಿಗೆ ಜೀವ ಬೆದರಿಕೆ, ಜಾತಿ ನಿಂದನೆ ಮಾಡಿದ್ದ ಶಾಸಕ ಮುನಿರತ್ನ ವಿರುದ್ಧ ಎರಡು ಪ್ರಕರಣಗಳು ದಾಖಲಾಗಿದ್ದವು. ಬಂಧನ ಭೀತಿಯಿಂದ ತಪ್ಪಿಸಿಕೊಳ್ಳಲು ಯತ್ನಿಸಿದ್ದ ಮುನಿರತ್ನ ಅವರನ್ನು ಎಸಿಪಿ ಪ್ರಕಾಶ್ ನೇತೃತ್ವದ ತಂಡ ಕೋಲಾರದ ಮುಳಬಾಗಿಲು ತಾಲೂಕಿನ ನಂಗಲಿ ಬಳಿ ಶನಿವಾರ ಸಂಜೆ ಬಂಧಿಸಿತ್ತು. ನಂತರ ಯಲಹಂಕದ ಕೋಗಿಲೆ ಕ್ರಾಸ್ ಬಳಿ ಇರುವ ನ್ಯಾಯಾಧೀಶರ ನಿವಾಸಕ್ಕೆ ಕರೆತಂದು ನ್ಯಾಯಾಧೀಶರ ಎದುರು ಹಾಜರುಪಡಿಸಿತ್ತು. ಈ ವೇಳೆ ಪೊಲೀಸರು ಒಂದು ವಾರ ಪೊಲೀಸ್ ಕಸ್ಟಡಿಗೆ ನೀಡುವಂತೆ ಮನವಿ ಮಾಡಿದರು. ಆದರೆ ವಿಚಾರಣೆ ನಡೆಸಿದ ಬಳಿಕ, 2 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡಿ ನ್ಯಾಯಾಧೀಶರು ಆದೇಶಿಸಿದ್ದಾರೆ.

ಬಿಜೆಪಿಯನ್ನು ಇಕ್ಕಟ್ಟಿಗೆ ಸಿಲುಕಿಸಲು ಸಿದ್ಧತೆ: ಈ ಪ್ರಕರಣವನ್ನೇ ಮುಂದಿಟ್ಟುಕೊಂಡು, ಬಿಜೆಪಿಯನ್ನು ಇಕ್ಕಟ್ಟಿಗೆ ಸಿಲುಕಿಸಲು ಕಾಂಗ್ರೆಸ್ ಸಿದ್ಧತೆ ನಡೆಸಿಕೊಂಡಿದೆ. ಕಾನೂನಾತ್ಮಕ ಹೋರಾಟದೊಂದಿಗೆ ಈ ಪ್ರಕರಣವನ್ನು ರಾಜಕೀಯವಾಗಿ ಬಳಸಿಕೊಳ್ಳಲು ಕಾಂಗ್ರೆಸ್ ಮುಂದಾಗಿದೆ. ದಲಿತರನ್ನು ಅವಮಾನಿಸಿರುವ ಮುನಿರತ್ನ ಅವರನ್ನು ಶಾಸಕ ಸ್ಥಾನದಿಂದ ಅನರ್ಹ ಗೊಳಿಸಬೇಕು ಹಾಗೂ ಬಿಜೆಪಿಯೂ ಪಕ್ಷದಿಂದ ಉಚ್ಚಾಟಿಸಬೇಕು ಎಂದು ಆಗ್ರಹ ಮಾಡಿದ್ದಾರೆ. ಇದರೊಂದಿಗೆ ಮುನಿರತ್ನ ದಲಿತನನ್ನು ಬೈದಿರುವುದರಿಂದ, ರಾಜ್ಯಾದ್ಯಂತ ದಲಿತ ಸಂಘಟನೆಗಳು ಪ್ರತಿಭಟನೆ ನಡೆಸುವ ಸಾಧ್ಯತೆ ಇದೆ.

- ಒಂದು ವಾರ ಪೊಲೀಸ್ ಕಸ್ಟಡಿಗೆ ಕೇಳಿದ ಪೊಲೀಸರು, ಎರಡು ದಿನ ಕೊಟ್ಟ ನ್ಯಾಯಾಧೀಶರು
- ಶಾಸಕ ಮುನಿರತ್ನ ವಿರುದ್ಧ ರಾಜ್ಯಾದ್ಯಂತ ದಲಿತ ಸಂಘಟನೆಗಳು ಪ್ರತಿಭಟನೆ ನಡೆಸುವ ಸಾಧ್ಯತೆ
- ಪ್ರಕರಣವನ್ನು ಕಾನೂನು ಹೋರಾಟದೊಂದಿಗೆ, ರಾಜಕೀಯವಾಗಿ ಬಳಸಿಕೊಳ್ಳಲು ಕಾಂಗ್ರೆಸ್ ಸಿದ್ಧತೆ

ಮುಜುಗರ ತಪ್ಪಿಸಿಕೊಳ್ಳಲು ನೋಟಿಸ್

ಕಾಂಗ್ರೆಸ್ ನಾಯಕರು ಈ ಪ್ರಕರಣವನ್ನು ಮುಂದಿಟ್ಟುಕೊಂಡು ಬಿಜೆಪಿಗೆ ದಲಿತ ವಿರೋಧಿಯೆಂದು ಪಟ್ಟಕಟ್ಟಲು ಸಿದ್ಧತೆ ನಡೆಸಿಕೊಳ್ಳುವ ಮಾಹಿತಿ ಸಿಗುತ್ತಿದ್ದಂತೆ, ಪ್ರಕರಣಕ್ಕೆ ಸಂಬಂಧಿಸಿದಂತೆ ಮುನಿರತ್ನರಿಗೆ ನೋಟಿಸ್ ಜಾರಿ ಮಾಡಿದೆ. ಈ ಮೂಲಕ ಪಕ್ಷಕ್ಕೆ ಆಗಬಹುದಾದ ಡ್ಯಾಮೇಜ್ ಕಂಟ್ರೋಲ್‌ಗೆ ಮುಂದಾಗಿದೆ.

ಕೆಲವು ಮುಖಂಡರು, ಪ್ರತಿಪಕ್ಷದವರು ಈ ಪ್ರಕರಣಕ್ಕೆ ರಾಜಕೀಯ ಬಣ್ಣ ಬಳಿಯಲು ಪ್ರಯತ್ನಿಸುತ್ತಿದ್ದಾರೆ. ಘಟನೆಯ ಎಲ್ಲ ವಿವರಗಳು ತೆರೆದ ಪುಸ್ತಕದಂತೆ ಇರುವಾಗ ಸಮರ್ಥನೆ ಮಾಡಿಕೊಳ್ಳುವುದು ಸರಿಯೇ? ನಾವ್ಯಾರೂ ಮುನಿರತ್ನ ಅವರಿಗೆ ಕೆಟ್ಟ ಮಾತುಗಳನ್ನು ಬೈಯಿರಿ ಹಾಗೂ ಕಮಿಷನ್ ತೆಗೆದುಕೊಳ್ಳಿ ಎಂದು ಹೇಳಿರಲಿಲ್ಲ. ಮಹಿಳೆಯರ ಬಗ್ಗೆ ಆಡಿರುವ ಕೀಳು ಮಾತುಗಳನ್ನು ಸಹಿಸುವುದಿಲ್ಲ. **– ಡಿ.ಕೆ.ಸುರೇಶ್** ಮಾಜಿ ಸಂಸದ

ಮುನಿರತ್ನ ಅವಮಾನಿಸಿದ್ದಾರೆ ಎನ್ನುವ ಕುರಿತು ದೂರು ಬಂದ ಹಿನ್ನೆಲೆಯಲ್ಲಿ ಎಫ್‌ಐಆರ್ ದಾಖಲಾದ ನಂತರ ಬಂಧಿಸಲಾಗಿದ್ದು, ತನಿಖೆ ಪ್ರಾರಂಭಿಸಲಾಗಿದೆ. ಎರಡು ದಿನಗಳ ಅವಧಿಗೆ ಪೊಲೀಸರು ಕಸ್ಟಡಿಗೆ ತೆಗೆದುಕೊಂಡಿದ್ದಾರೆ. ಅವರ ಧ್ವನಿಯನ್ನು ಪಡೆದು ಫೊರೆನ್ಸಿಕ್‌ನವರು ದೃಢಪಡಿಸಿಕೊಳ್ಳುತ್ತಾರೆ. ಖಚಿತವಾದರೆ ಕಾನೂನು ಪ್ರಕಾರ ಮುಂದಿನ ಕ್ರಮ ಜರುಗಿಸಲಾಗುವುದು. **– ಡಾ.ಜಿ.ಪರಮೇಶ್ವರ್** ಗೃಹ ಸಚಿವ

ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ವಿಡಿಯೊ
ಬಂಧನಕ್ಕೆ ಬಿಜೆಪಿ ಆಗ್ರಹ

ಪ್ಯಾಲೆಸ್ತೇನ್ ಬಾವುಟ ಹಿಡಿದು ಬೈಕ್ ರೈಡ್

ಪ್ಯಾಲೆಸ್ತೇನ್ ಬಾವುಟ ಹಿಡಿದು ಬೈಕ್‌ನಲ್ಲಿ ಹೋಗುತ್ತಿರುವ ಯುವಕರು

ಚಿಕ್ಕಮಗಳೂರು: ಪ್ಯಾಲೆಸ್ತೇನ್ ಬಾವುಟ ಹಿಡಿದು ಎರಡು ಬೈಕ್‌ನಲ್ಲಿ ಯುವಕರು ನಗರದಲ್ಲಿ ಭಾನುವಾರ ಓಡಾಡಿದ್ದು, ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ಒಂದು ಸ್ಕೂಟರ್‌ನಲ್ಲಿ ಮೂವರು ಕುಳಿತಿದ್ದು, ಪ್ಯಾಲೆಸ್ತೇನ್ ಬಾವುಟ ಹಿಡಿದು ದಂಟರಮಕ್ಕಿ ಕೆರೆ ಮೇಲಿನ ರಸ್ತೆಯಲ್ಲಿ ಹನುಮಂತಪ್ಪ ವೃತ್ತದ ಕಡೆಗೆ ಬಂದಿದ್ದಾರೆ. ಮತ್ತೊಂದು ಬೈಕ್‌ನಲ್ಲಿ ಇನ್ನೂ ಮೂವರು ಕುಳಿತು ಮತ್ತೊಂದು ಬಾವುಟ ಹಿಡಿದು ಅದೇ ರಸ್ತೆಯಲ್ಲಿ ಹಿಂಬಾಲಿಸಿದ್ದಾರೆ. ಈ ವಿಡಿಯೊ ಹರಿದಾಡುತ್ತಿದ್ದಂತೆ ಬಜರಂಗ ದಳ ಮತ್ತು ಬಿಜೆಪಿ ಕಾರ್ಯಕರ್ತರು ನಗರ ಠಾಣೆಗೆ ಬಳಿ ಜಮಾಯಿಸಿದರು. ಆರೋಪಿಗಳನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿ ಪ್ರತಿಭಟನೆ ನಡೆಸಿದರು.

ಬಾವುಟ ಹಿಡಿದು ಸಂಚರಿಸಿರುವ ಬೈಕ್ ನಂಬರ್ ಪತ್ತೆಯಾಗಿದೆ. ಆರೋಪಿಗಳನ್ನು ಬಂಧಿಸಲು ತಂಡ ರಚನೆ ಮಾಡಲಾಗಿದೆ. **– ಜಿ.ಕೃಷ್ಣಮೂರ್ತಿ** ಜಿಲ್ಲಾ ಹೆಚ್ಚುವರಿ ಎಸ್‌ಪಿ

ಮತ್ತೆ ಜನಾದೇಶದ ನಂತರವೇ ಸಿಎಂ ಕುರ್ಚಿ ಮೇಲೆ ಕೂರುವೆ: ಅರವಿಂದ ಕೇಜ್ರಿವಾಲ್

ಇನ್ನೆರಡು ದಿನಗಳಲ್ಲಿ ರಾಜೀನಾಮೆ ನೀಡುವೆ

ದೆಹಲಿ: ಭ್ರಷ್ಟಾಚಾರ ಹಗರಣದಲ್ಲಿ ಜಾಮೀನಿನ ಮೂಲಕ ಹೊರಬಂದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಇನ್ನೆರಡು ದಿನಗಳಲ್ಲಿ ತಮ್ಮ ಹುದ್ದೆಗೆ ರಾಜೀನಾಮೆ ನೀಡುವುದಾಗಿ ಭಾನುವಾರ ಘೋಷಿಸಿದ್ದಾರೆ.

ಜೈಲಿನಿಂದ ಹೊರಬಂದ ಬಳಿಕ ಮೊದಲ ಬಾರಿಗೆ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, ಜನರು ನನಗೆ ಪ್ರಾಮಾಣಿಕತೆಯ ಪ್ರಮಾಣಪತ್ರ ನೀಡಿದ ನಂತರವೇ ನಾನು ಸಿಎಂ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತೇನೆ. ಜೈಲಿನಿಂದ ಹೊರಬಂದ ನಂತರ ಅಗ್ನಿಪರೀಕ್ಷೆಗೆ ಒಳಪಡುತ್ತಿದ್ದೇನೆ ಎಂದು ಹೇಳಿದ್ದಾರೆ. ದೆಹಲಿ ಚುನಾವಣೆ 2025ರ ಫೆಬ್ರವರಿಯಲ್ಲಿ ನಡೆಯಲಿದೆ. ಆದರೆ ಮಹಾರಾಷ್ಟ್ರದೊಂದಿಗೆ 2024ರ ನವೆಂಬರ್‌ನಲ್ಲಿಯೇ ಚುನಾವಣೆ ನಡೆಸಬೇಕೆಂದು ನಾನು ಒತ್ತಾಯಿಸುತ್ತೇನೆ ಎಂದು ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಬ್ರಿಟೀಷರಿಗಿಂದ ಹೆಚ್ಚು ಸರ್ವಾಧಿಕಾರಿ ಎಂದು ಟೀಕಿಸಿರುವ ಕೇಜ್ರಿವಾಲ್, ಪ್ರಜಾಪ್ರಭುತ್ವ ಉಳಿಸುವುದಕ್ಕಾಗಿ ನನ್ನನ್ನು ಬಂಧಿಸಿದ್ದರೂ ರಾಜೀನಾಮೆ ನೀಡಲಿಲ್ಲ ಎಂದರು. ಕರ್ನಾಟಕ ಸಿಎಂ ಸಿದ್ದರಾಮಯ್ಯ, ಕೇರಳ ಸಿಎಂ ಪಿಣರಾಯಿ ವಿಜಯನ್ ಮತ್ತು ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ವಿರುದ್ಧ ಕೂಡ ಪ್ರಕರಣ ದಾಖಲಿಸಲಾಗಿದೆ. ನಿಮ್ಮ ವಿರುದ್ಧ ಪ್ರಕರಣ ದಾಖಲಿಸಿದರೆ ರಾಜೀನಾಮೆ ನೀಡಬೇಡಿ ಎಂದು ಬಿಜೆಪಿಯೇತರ ಪಕ್ಷಗಳ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದರು. ಕೇಜ್ರಿವಾಲ್ ಅವರ ರಾಜೀನಾಮೆ ಹೇಳಿಕೆ ಕಾರ್ಯಕರ್ತರಲ್ಲಿ ಅಚ್ಚರಿ ಮೂಡಿಸಿದೆ.

ವಿವರಪುಟ → 8



ಇನ್ನೆರಡು ದಿನಗಳಲ್ಲಿ ಎಎಪಿ ಶಾಸಕರ ಸಭೆ ನಡೆಸುತ್ತೇನೆ, ಪಕ್ಷದ ನಾಯಕರೊಬ್ಬರು ಸಿಎಂ ಆಗಿ ಅಧಿಕಾರ ಸ್ವೀಕರಿಸಲಿದ್ದಾರೆ. ನಾವು ಪ್ರಾಮಾಣಿಕರು ಎಂದು ಜನರು ಹೇಳಿದಾಗ ಮಾತ್ರ ನಾನು ಮುಖ್ಯಮಂತ್ರಿಯಾಗಿ, ಸಿಸೋಡಿಯಾ ಉಪ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಲಿದ್ದೇವೆ. **–ಅರವಿಂದ ಕೇಜ್ರಿವಾಲ್** ದೆಹಲಿ ಸಿಎಂ

ಹಂಗಾಮಿ ಸಿಎಂ ಆಗಿಯೂ ಮುಂದುವರಿಯಲ್ಲ

ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ಸಲ್ಲಿಸಿದ ನಂತರ, ಚುನಾವಣೆ ನಡೆದು ಹೊಸ ಸರಕಾರ ಬಂದು ನೂತನ ಮುಖ್ಯಮಂತ್ರಿ ಪ್ರಮಾಣ ವಚನ ಸ್ವೀಕರಿಸುವವರೆಗೂ ಈಗಿರುವ ಮುಖ್ಯಮಂತ್ರಿಗಳೇ ಹಂಗಾಮಿ ಮುಖ್ಯಮಂತ್ರಿಯಾಗಿ ಮುಂದುವರಿಯಬೇಕಿರುತ್ತದೆ. ಆದರೆ, ತಾವು ಹಂಗಾಮಿಯಾಗಿರೂ ಮುಂದುವರಿಯುವುದಿಲ್ಲ ಎಂದು ಕೇಜ್ರಿವಾಲ್ ಸ್ಪಷ್ಟಪಡಿಸಿದ್ದಾರೆ.

ಗಣೇಶ ವಿಸರ್ಜನೆ: ನೀರಲ್ಲಿ ಮುಳುಗಿ ಮೂವರು ಸಾವು

ತುಮಕೂರು: ತುರುವೇಕೆರೆ ತಾಲೂಕಿನ ರಂಗನಹಟ್ಟಿ ಕಟ್ಟೆಯಲ್ಲಿ ಭಾನುವಾರ ಗಣಪತಿ ವಿಸರ್ಜನೆ ವೇಳೆ ನೀರಲ್ಲಿ ಮುಳುಗಿ ತಂದೆ, ಮಗ ಸೇರಿ ಮೂವರು ಮೃತಪಟ್ಟಿದ್ದಾರೆ.

ರಂಗನಹಟ್ಟಿ ಗ್ರಾಮದ ರೇವಣ್ಣ (50), ಪುತ್ರ ಶರತ್ (26) ಮತ್ತು ದಯಾನಂದ್ (22) ಮೃತರು. ಗ್ರಾಮದಲ್ಲಿ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿಯನ್ನು ಊರಿನ ಯುವಕರು ಬೆಳಗ್ಗೆಯಿಂದ ಮೆರವಣಿಗೆ ನಡೆಸಿ, ಮಧ್ಯಾಹ್ನ ರಂಗನಕಟ್ಟೆಯಲ್ಲಿ ವಿಸರ್ಜನೆ ಮಾಡಲು ಹೋಗಿದ್ದರು. ಮೂರ್ತಿ ಹಿಡಿದು ಶರತ್ ಮತ್ತು ದಯಾನಂದ್ ನೀರಿಗೆ ಇಳಿದಿದ್ದರು. ಕಟ್ಟೆಯಲ್ಲಿನ ಕೆಸರಿನಲ್ಲಿ ಕಾಲು ಸಿಲುಕಿಕೊಂಡಿವೆ. ಈಜಲು ಸಾಧ್ಯವಾಗದೆ ಕಟ್ಟೆಯ ದಡದಲ್ಲಿದ್ದವರ ಸಹಾಯಕ್ಕೆ ಕೂಗಿಕೊಂಡಿದ್ದಾರೆ. ತಕ್ಷಣ ಶರತ್ ಅವರ ತಂದೆ ರೇವಣ್ಣ ನೀರಿಗೆ ಧುಮಿಕಿದ್ದಾರೆ. ಈಜಲು ಆಗದೆ ಅವರು ಸಹ ನೀರಿನಲ್ಲಿ ಮುಳುಗಿದ್ದಾರೆ.

ನಿಪಾ ವೈರಸ್‌ಗೆ ವಿದ್ಯಾರ್ಥಿ ಬಲಿ

ಬೆಂಗಳೂರು: ಬೆಂಗಳೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಕೇರಳ ಮೂಲದ 24 ವರ್ಷದ ವಿದ್ಯಾರ್ಥಿ ನಿಪಾ ವೈರಸ್‌ಗೆ ಬಲಿಯಾಗಿದ್ದಾರೆ. ನಿಫಾಗೆ ಬಲಿಯಾದ ವಿದ್ಯಾರ್ಥಿ ಸಂಪರ್ಕಕ್ಕೆ ಬಂದ 70 ಪ್ರೈಮರಿ ಕಾಂಟ್ಯಾಕ್ಟ್ ಇದ್ದು, ಈ ಎಲ್ಲರೂ ಕೂಡ ಕೇರಳದವರು ಎಂಬ ಮಾಹಿತಿ ಲಭ್ಯವಾಗಿದೆ. ಈ ಹಿನ್ನೆಲೆಯಲ್ಲಿ ಬೆನ್ನಲ್ಲೇ ಸೋಮವಾರ ಆರೋಗ್ಯ ಇಲಾಖೆ ತುರ್ತು ಸಭೆ ಕರೆದಿದೆ.

ಎಚ್‌ಎಸ್‌ಆರ್‌ಪಿ ಕುರಿತು ಜಾಗೃತಿ

ಬೆಂಗಳೂರು: ವಾಹನಗಳಿಗೆ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಸಲು ಭಾನುವಾರ ವೇ ಕೊನೆಯ ದಿನವಾಗಿದ್ದರೂ, ಮುಂದಿನ ಮೂರು ದಿನ ದಂಡ ಸಂಗ್ರಹಿಸದೇ ಜಾಗೃತಿ ಮೂಡಿಸಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ. 2023ರ ಆಗಸ್ಟ್‌ನಿಂದ ಅವಕಾಶ ನೀಡಲಾಗಿದೆ. ಈಗಾಗಲೇ 3 ಬಾರಿ ವಿಸ್ತರಣೆ ಮಾಡಲಾಗಿದ್ದು, ಭಾನುವಾರ ಕಡೆ ದಿನ. ಮತ್ತೆ ವಿಸ್ತರಿಸುವ ಯೋಚನೆ ಇಲ್ಲ ಎಂದರು.

ಎನ್‌ಐಎ ತನಿಖೆ ಸಿಎಂ ಜತೆ ಚರ್ಚೆ

ಮಂಡ್ಯ: ಗಣೇಶ ವಿಸರ್ಜನೆ ವೇಳೆ ನಾಗಮಂಗಲದಲ್ಲಿ ನಡೆದ ಗಲಭೆಯಲ್ಲಿ ಕೇರಳ ಮೂಲದ ಇಬ್ಬರು ಪಾಲ್ಗೊಂಡಿದ್ದ ಬಗ್ಗೆ ತನಿಖೆ ನಡೆಸುತ್ತೇವೆ. ರಾಷ್ಟ್ರೀಯ ತನಿಖಾ ದಳದಿಂದ ತನಿಖೆ ಮಾಡಿಸುವ ಬಗ್ಗೆ ಸಿಎಂ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ತಿಳಿಸಿದರು.

ಆಧಾರ್ ನವೀಕರಣ ಗಡುವು ವಿಸ್ತರಣೆ

ದೆಹಲಿ: ಆಧಾರ್ ಕಾರ್ಡ್‌ಗಳ ಉಚಿತ ನವೀಕರಣಕ್ಕೆ ನೀಡಿದ್ದ ಗಡುವನ್ನು ಡಿಸೆಂಬರ್ 14ರವರೆಗೆ ವಿಸ್ತರಿಸಿ ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರವು ಪ್ರಕಟಣೆ ಹೊರಡಿಸಿದೆ. ಈ ಉಚಿತ ಸೇವೆಯು myAadhaar ಪೋರ್ಟಲ್‌ನಲ್ಲಿ ಮಾತ್ರ ಲಭ್ಯವಿದೆ. ಗಡುವು ಮುಗಿದ ಬಳಿಕ ₹50 ಹಣ ಪಾವತಿಸಿ ಆಧಾರ್ ಕಾರ್ಡ್ ನವೀಕರಣ ಮಾಡಬೇಕಾಗುತ್ತದೆ ಎಂದು ತಿಳಿಸಿದೆ.

ಜನಗಣತಿ ಪ್ರಕ್ರಿಯೆ ಶೀಘ್ರದಲ್ಲೇ ಶುರು

ದೆಹಲಿ: ಹತ್ತು ವರ್ಷಗಳಿಗೊಮ್ಮೆ ನಡೆಸಲಾಗುವ ಜನಗಣತಿ ಪ್ರಕ್ರಿಯೆ ಶೀಘ್ರದಲ್ಲೇ ಆರಂಭವಾಗಲಿದೆ. ಆದರೆ, ಜಾತಿ ಗಣತಿಯನ್ನು ಜತೆಗೆ ನಡೆಸಬೇಕೇ ಎಂಬುದನ್ನು ಇನ್ನೂ ತೀರ್ಮಾನಿಸಿಲ್ಲ. ಪ್ರಕ್ರಿಯೆಗೆ ಅಂದಾಜು ₹12 ಸಾವಿರ ಕೋಟಿಗೂ ಅಧಿಕ ವೆಚ್ಚವಾಗಬಹುದು. ಪ್ರಥಮ ಡಿಜಿಟಲ್ ಜನಗಣತಿ ಪ್ರಕ್ರಿಯೆ ಆಗಿರಲಿದೆ ಎನ್ನಲಾಗಿದೆ.

ಟಿಪಿಸಿಸಿ ಅಧ್ಯಕ್ಷರಾಗಿ ಗೌಡ್ ನೇಮಕ

ಹೈದರಾಬಾದ್: ತೆಲಂಗಾಣ ರಾಜ್ಯ ಕಾಂಗ್ರೆಸ್ ಅಧ್ಯಕ್ಷರಾಗಿ ಬಿ.ಮಹೇಶ್ ಕುಮಾರ್ ಗೌಡ್ ಅವರು ಭಾನುವಾರ ಅಧಿಕಾರ ವಹಿಸಿಕೊಂಡರು. 3 ದಶಕಗಳಿಗೂ ಹೆಚ್ಚು ಕಾಲ ಕಾಂಗ್ರೆಸ್ ಕಾರ್ಯಕರ್ತರಾಗಿರುವ ಗೌಡ್, ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. 2021ರಲ್ಲಿ ಟಿಪಿಸಿಸಿ ಅಧ್ಯಕ್ಷರಾಗಿ ನೇಮಕಗೊಂಡಿದ್ದ ರೇವಂತ್ ರೆಡ್ಡಿ, ಕಳೆದ ಡಿಸೆಂಬರ್‌ನಲ್ಲಿ ಸಿಎಂ ಆದ ಬಳಿಕವೂ ಅಧ್ಯಕ್ಷ ಸ್ಥಾನದಲ್ಲಿಯೂ ಮುಂದುವರಿದಿದ್ದರು.

ವಾಡಿಕೆಗಿಂತ ಹೆಚ್ಚು ಮಳೆಯಾದರೂ ಶೇ.40ರಷ್ಟು ಕೆರೆಗಳಲ್ಲಿ ಅರ್ಧಕ್ಕಿಂತ ಕಡಿಮೆ ನೀರು

ಭರಪೂರ ಮಳೆಯಾದರೂ ಭರ್ತಿಯಾಗದ ಕೆರೆಗಳು

ಬೆಂಗಳೂರು: ಈ ಬಾರಿ ವಾಡಿಕೆಗಿಂತ ಹೆಚ್ಚು ಮಳೆಯಾಗಿರುವ ಖುಷಿಯಲ್ಲಿ ರಾಜ್ಯದ ರೈತರಿದ್ದಾರೆ. ಆದರೆ ಈ ಪ್ರಮಾಣದಲ್ಲಿ ಮಳೆಯಾಗಿದ್ದರೂ, ಶೇ.40ರಷ್ಟು ಸಣ್ಣ ಕೆರೆಗಳಲ್ಲಿ ಅರ್ಧಕ್ಕಿಂತ ಕಡಿಮೆ ನೀರು ತುಂಬಿರುವುದು ಆತಂಕಕ್ಕೆ ಕಾರಣವಾಗಿದೆ.

ಜೂ.1 ರಿಂದ ಸೆ.9ರವರೆಗೆ 733 ಮಿ.ಮೀ ವಾಡಿಕೆ ಮಳೆಯಾಗಬೇಕಿತ್ತು. ಆದರೆ 902 ಮಿ.ಮೀ.ನಷ್ಟು ಮಳೆಯಾಗಿದೆ. ವಾಡಿಕೆಗಿಂತ ಶೇ.23ರಷ್ಟು ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿದ್ದರೂ, ಶೇ.60ರಷ್ಟು ಸಣ್ಣ ಕೆರೆಗಳಿನ್ನೂ ಭರ್ತಿಯಾಗಿಲ್ಲ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ವರದಿಯಲ್ಲಿ ಬಹಿರಂಗವಾಗಿದೆ. ಒಂದೆಡೆ ಜಲಾಶಯಗಳು ತುಂಬಿ ತುಳುಕುತ್ತಿದ್ದರೆ, ಮತ್ತೊಂದೆಡೆ ಸಣ್ಣ ಕೆರೆಗಳಿಗೆ ನೀರಿನ ಕೊರತೆ ಉಂಟಾಗಿದೆ. ಆಗಸ್ಟ್‌ನಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿದೆ. ಅದರಲ್ಲೂ ಒಳನಾಡಿನಲ್ಲಿ ಒಣ ಹವೆ ಹೆಚ್ಚಾಗಿದೆ. ಕೆಲವೆಡೆ ಸಾಧಾರಣ ಮಳೆಯಾಗಿದ್ದರೂ ಕೆರೆ-ಕಟ್ಟೆಗಳಿಗೆ ನೀರು ಬಂದಿಲ್ಲ ಎಂದು ತಿಳಿದುಬಂದಿದೆ. ರಾಜ್ಯದ 3683 ಸಣ್ಣ ಕೆರೆಗಳಲ್ಲಿ ಶೇ.40 ಕೆರೆಗಳಲ್ಲಿ ಮಾತ್ರ ಅರ್ಧಕ್ಕಿಂತ ಹೆಚ್ಚು ನೀರು ಸಂಗ್ರಹವಾಗಿದೆ. ಶೇ.50ರಷ್ಟು ಕೆರೆಗಳಿಗೆ ಶೇ.30 ರಿಂದ ಶೇ.50ರಷ್ಟು ಮಾತ್ರ ನೀರು ಬಂದಿದೆ. ಆದರೆ, ಶೇ.10ರಷ್ಟು ಕೆರೆಗಳು ನೀರಿಲ್ಲದೆ ಒಣಗಿವೆ. ಇನ್ನು ಶೇ.10ರಷ್ಟು ಕೆರೆಗಳಿಗೆ ಈ ಬಾರಿ ಇನ್ನೂ ನೀರೇ ಬಂದಿಲ್ಲ.

ಲಿಂಗನಮಕ್ಕಿ, ಸೂಪ, ಹಾರಂಗಿ, ಹೇಮಾವತಿ, ಕೆಆರ್‌ಎಸ್, ಕಬಿನಿ, ಭದ್ರಾ, ತುಂಗಭದ್ರಾ, ಆಲಮಟ್ಟಿ ಹಾಗೂ ನಾರಾಯಣಪುರ ಜಲಾಶಯಗಳು ಭರ್ತಿಯಾಗಿವೆ. ಆದರೆ, ವಾಣಿ ವಿಲಾಸ ಸಾಗರ ಜಲಾಶಯದಲ್ಲಿ ಶೇ.71ರಷ್ಟು ಮಾತ್ರ ನೀರು ಸಂಗ್ರಹವಾಗಿದೆ. ಒಳಹರಿವು ಕೇವಲ 693 ಕ್ಯುಸೆಕ್‌ನಷ್ಟು ಮಾತ್ರ ಇದ್ದು, ಗರಿಷ್ಠ ಪ್ರಮಾಣದಲ್ಲಿ ಭರ್ತಿಯಾಗುವ ಸಾಧ್ಯತೆ ವಿರಳ.

- ಜೂ.1 ರಿಂದ ಸೆ.9ರವರೆಗೆ 733 ಮಿ.ಮೀ ವಾಡಿಕೆ ಮಳೆಯಾಗಬೇಕಿತ್ತು. ಆದರೆ 902 ಮಿ.ಮೀ.ನಷ್ಟು ಮಳೆಯಾಗಿದೆ
- ವಾಡಿಕೆಗಿಂತ ಶೇ.23ರಷ್ಟು ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿದ್ದರೂ, ಶೇ.60ರಷ್ಟು ಸಣ್ಣ ಕೆರೆಗಳಿನ್ನೂ ಭರ್ತಿಯಾಗಿಲ್ಲ
- ಒಂದೆಡೆ ಜಲಾಶಯಗಳು ತುಂಬಿ ತುಳುಕುತ್ತಿದ್ದರೆ, ಮತ್ತೊಂದೆಡೆ ಸಣ್ಣ ಕೆರೆಗಳಿಗೆ ನೀರಿನ ಕೊರತೆ ಉಂಟಾಗಿದೆ

ಸಣ್ಣ ಕೆರೆಗಳಿಗೆ ನೀರಿನ ಅಭಾವ

ಮಲೆನಾಡು ಹಾಗೂ ಕರಾವಳಿ ಭಾಗದ ಜಲಾಶಯ, ಕೆರೆ ಕಟ್ಟೆಗಳು ಗರಿಷ್ಠ ಪ್ರಮಾಣದಲ್ಲಿ ಭರ್ತಿಯಾಗಿವೆ. ಬಯಲು ಸೀಮೆಯಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾದ ಪರಿಣಾಮ ಕೆರೆಗಳು ಭರ್ತಿಯಾಗಿಲ್ಲ. ಸೆಪ್ಟೆಂಬರ್‌ನಲ್ಲಿ ಒಣ ಹವೆ ಮುಂದುವರಿದಿದ್ದು, ದಕ್ಷಿಣ ಒಳನಾಡಿನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿದೆ. ಇದರಿಂದ ಸಣ್ಣ ಕೆರೆಗಳಿಗೆ ನೀರಿನ ಅಭಾವ ಉಂಟಾಗಿದೆ.

ಭಾರತದ ಸಂಬಂಧ ಹಳಸಿದ ಬಳಿಕ ಚೀನಾಕ್ಕೆ ಹತ್ತಿರ

ಮಾಲ್ಡೀವ್ಸ್ - ಚೀನಾ ಸೇನಾ ನೆರವು ಒಪ್ಪಂದ

ಬೀಜಿಂಗ್: ಭಾರತದ ಜತೆ ಸಂಬಂಧ ಹಳಸಿದ ಬಳಿಕ ಚೀನಾಕ್ಕೆ ಬಹಳ ಹತ್ತಿರವಾಗಿರುವ ದ್ವೀಪ ರಾಷ್ಟ್ರ ಮಾಲ್ಡೀವ್ಸ್, ಈಗ ಕಮ್ಯುನಿಸ್ಟ್ ದೇಶದ ಜತೆ ಸೇನಾ ನೆರವು ಪಡೆಯುವ ಸಂಬಂಧ ಒಪ್ಪಂದ ಮಾಡಿಕೊಂಡಿದೆ. ಒಪ್ಪಂದ ಪ್ರಕಾರ ಮಾಲ್ಡೀವ್ಸ್ ದೇಶಕ್ಕೆ ಶಸ್ತ್ರಾಸ್ತ್ರಗಳು ಮತ್ತು ಮಿಲಿಟರಿ ಉಪಕರಣಗಳನ್ನು ಚೀನಾ ಒದಗಿಸಲಿದೆ ಮತ್ತು ಸೈನಿಕರಿಗೆ ಅವುಗಳನ್ನು ಬಳಸುವ ಕುರಿತು ತರಬೇತಿಯನ್ನೂ ನೀಡಲು ಒಪ್ಪಿಕೊಂಡಿದೆ. ಮಾಲ್ಡೀವ್ಸ್-ಚೀನಾ ದ್ವಿಪಕ್ಷೀಯ ಮಾತುಕತೆ ನಡೆಸಿ ರಕ್ಷಣಾ ಸಹಕಾರ ಬಲಪಡಿಸುವ ಮಾರ್ಗಗಳನ್ನು ಚರ್ಚಿಸಿದವು ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಈ ಹಿಂದೆ ಭಾರತೀಯ ಸೇನೆಗೆ ನೆಲೆ

ಭಾರತದ ಜತೆಗಿನ ಸಂಬಂಧ ಉತ್ತಮವಾಗಿದ್ದಾಗ ಮಾಲ್ಡೀವ್ಸ್ ಹಿಂದಿನ ಸರಕಾರ ಭಾರತೀಯ ಸೇನೆಗೆ ದ್ವೀಪದಲ್ಲಿ ನೆಲೆಗೊಳ್ಳಲು ಅವಕಾಶ ಮಾಡಿಕೊಟ್ಟಿತ್ತು. ಅದಕ್ಕೆ ಪ್ರತಿಯಾಗಿ ಭಾರತವೂ ಮಾಲ್ಡೀವ್ಸ್‌ಗೆ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಆರ್ಥಿಕ ಸಹಕಾರ ಮತ್ತು ಆಹಾರ ಪದಾರ್ಥಗಳ ಮಾನವೀಯ ನೆರವು ನೀಡಿತ್ತು. ಕೆಲ ತಿಂಗಳ ಹಿಂದೆ ಮುಯಿಝು ಅವರು ಮಾಲ್ದೀವ್ಸ್ ಅಧ್ಯಕ್ಷರಾದ ಬಳಿಕ ದ್ವೀಪರಾಷ್ಟ್ರ ಚೀನಾಗೆ ಹತ್ತಿರವಾಗಿತ್ತು. ಭಾರತದ ಸೇನೆಯನ್ನು ವಾಪಸ್ ಕರೆಸಿಕೊಳ್ಳುವಂತೆ ಒತ್ತಾಯಿಸಿತ್ತು.

ಫನ್‌ತರಂಗ
– ರಘುಪತಿ ಶೃಂಗೇರಿ –

ಜಲಮಂಡಳಿಯಲ್ಲಿ ರಾತ್ರೋರಾತ್ರಿ 200ಕ್ಕೂ ಹೆಚ್ಚು ಮಂದಿ ಎತ್ತಂಗಡಿ
ಸುದ್ದಿ



ಸಮಾಚಾರ ಸಣ್ಣದಲ್ಲ

ಚುಟುಕು ಸಾಹಿತ್ಯ ಸಮ್ಮೇಳನ ಇಂದು

ಯಲ್ಲಾಪುರ: ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಶನಿವಾರ ನಡೆದ ರಾಷ್ಟ್ರೀಯ ಲೋಕ್ ಅದಾಲತ್‌ನಲಿ **ಶಿರಸಿ:** ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ಉತ್ತರ ಕನ್ನಡ ಜಿಲ್ಲಾ 7ನೇ ಸಮ್ಮೇಳನ ಸೆ.16ರಂದು ಬೆಳಗ್ಗೆ 10 ಗಂಟೆಗೆ ಗೋಕರ್ಣದ ಅಶೋಕೆಯ ಮಠದ ಸಭಾಂಗಣದಲ್ಲಿ ಜರುಗಲಿದೆ ಎಂದು ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ ತಿಳಿಸಿದ್ದಾರೆ. ಚುಟುಕು ಸಾಹಿತ್ಯದ ಹಿರಿಯ ಸಾಹಿತಿ ಬೀರಣ್ಣ ನಾಯಕ ಹಿರೇಗುತ್ತಿ ಅವರು ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿದ್ದು, ಅಂಕೋಲೆಯ ದಿನಕರ ದೇಸಾಯಿ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷ ಮೋಹನ ಹಬ್ಬು ಸಮಾರಂಭ ಉದ್ಘಾಟಿಸುವರು. ಜಿಲ್ಲಾಧ್ಯಕ್ಷ ಜಿ.ಯು. ನಾಯಕ ರಚಿಸಿದ ಪುಸ್ತಕ ಅನಾವರಣಗೊಳ್ಳಲಿದೆ. ನಂತರ ರಾಮಾಯಣ ದರ್ಶನ ವಿಚಾರಗೋಷ್ಠಿಯು ಹಿರಿಯ ಚಿಂತಕ ಗಣಪತಿ ಭಟ್ಟ ವರ್ಗಾಸರ ಅಧ್ಯಕ್ಷತೆಯಲ್ಲಿ ಸಾಹಿತಿಗಳಾದ ಕೃಷ್ಣ ಪದಕಿ, ಜನಾರ್ದನ ನಾಯಕ ಮತ್ತು ದಾಕ್ಷಾಯಿಣಿ ಪಿ.ಸಿ. ಉಪನ್ಯಾಸ ನೀಡುವರು. ಮಧ್ಯಾಹ್ನ 2-30 ಗಂಟೆಗೆ ಚುಟುಕು ವಾಚನ ಗೋಷ್ಠಿಯು ಕವಿ ಮನೋಹರ ಮಲ್ಮನೆ ಅಧ್ಯಕ್ಷತೆಯಲ್ಲಿ ಜರುಗಲಿದೆ.

ಮದುವೆ ಅತ್ಯಂತ ಪವಿತ್ರ ಬಂಧನ: ದೈವಜ್ಞ ಶ್ರೀ

ಶಿರಸಿ: ಅನೇಕ ಬಾರಿ ಮನುಷ್ಯ ಭಗವಂತನ ಪರೀಕ್ಷೆಗೆ ಒಳಪಡಬ ಸಾನ್ನಿಧ್ಯ ವಹಿಸಿದ್ದರು.
ಶಿರಸಿ: ಮದುವೆ ಅತ್ಯಂತ ಪವಿತ್ರ ಬಂಧನ, ದಾಂಪತ್ಯ ಅಷ್ಟೇ ಪವಿತ್ರವಾಗಿ ಇರಬೇಕು, ಹೊಂದಾಣಿಕೆಯಿಂದ ಸಂಸಾರ ನಡೆಸಬೇಕು ಎಂದು ದೈವಜ್ಞ ಮಠಾದೀಶ ಪ. ಪೂ. ಶ್ರೀ ಸಚ್ಚಿದಾನಂದ ಜ್ಞಾನೇಶ್ವರ ಭಾರತೀ ಸ್ವಾಮೀಜಿ ನುಡಿದರು.

ಚಾತುರ್ಮಾಸ್ಯ ಪೂಜಾ ಸಂದ್ಯಾ ಕಾಲದಲ್ಲಿ ಅವರು ಆಶೀರ್ವಚನ ನೀಡಿದರು. ಮದುವೆ ಆದ ಮೇಲೆ ಹೊಂದಾಣಿಕೆಬೇಕು, ಹೀಗೇ ಇರಬೇಕು ಎನ್ನುವ ಭಾವನೆ ಬೇಡ. ಇದೀಗ ಅನೇಕ ಸಮಾಜಗಳಲ್ಲಿ ವಧು ಕೊರತೆ ಇದೆ. ಹೆಣ್ಣು ಮಕ್ಕಳ ಸಂಖ್ಯೆ ಕಡಮೆ ಆಗಿದೆ. ಇದ್ದವರು ಅನೇಕ ಡಿಮ್ಯಾಂಡ್ ಮಾಡುತ್ತಿದ್ದಾರೆ.

ಹುಡುಗ ಹೀಗೇ ಇರಬೇಕು, ನೌಕರಿ ಚೆನ್ನಾಗಿ ಇರಬೇಕು, ಇಷ್ಟೇ ಸಂಬಳ ಇರಬೇಕು, ಶಹರದಲ್ಲೇ ಇರಬೇಕು, ಬೇರೆ ಜಂಜಾಟ ಇರಬಾರದು ಎಂದೆಲ್ಲ ಡಿಮ್ಯಾಂಡ್ ಇದೆ. ಇದು ಸರಿಯಲ್ಲ. ಹಿಂದೊಮ್ಮೆ ಹೆಣ್ಣು ಮಕ್ಕಳ ಸಂಖ್ಯೆ ಹೆಚ್ಚು ಇದ್ದಾಗ ಹುಡುಗನ ಮನೆಯಲ್ಲಿ ಹೀಗೆ ಡಿಮ್ಯಾಂಡ್ ಇರುತ್ತಿತ್ತು. ಈಗ ಕಾಲ ಬದಲಾಯಿತು. ಉಲ್ಟಾ ಹೊಡೆದಿದೆ ನೋಡಿ. ಹುಡುಗ ತನ್ನ ಕಾಯಕ ಮಾಡಿ ಚೆನ್ನಾಗಿ ಇದ್ದರೆ ಆಯಿತು. ಗುಣ ಚನ್ನಾಗಿ ಇರಬೇಕು, ಅದೇ ಶಾಶ್ವತ, ದುಡ್ಡು ಮುಖ್ಯ ಅಲ್ಲ. ದುಡ್ಡಿನ ಹಿಂದೆ ಬೀಳುವುದು ಸರಿಯಲ್ಲ. ಗುಣದ ಹಿಂದೆ ಹೋದರೆ ಜೀವನ ತುಂಬಾ ಸಂತೋಷ, ನೆಮ್ಮದಿ ಕಾಣಿರಿ ಎಂದರು.

ಪ. ಪೂ. ಶ್ರೀ ಸುಜ್ಞಾನೇಶ್ವರ ಭಾರತೀ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಕಾರವಾರ ಕಾಳಿ ನದಿಯ ಹಳೆಯ ಸೇತುವೆಯ ತೆರವು ಕಾರ್ಯ ನಡೆಯುತ್ತಿದ್ದ ಸ್ಥಳಕ್ಕೆ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹಾಗೂ ರಾಜ್ಯ ಬಿಜೆಪಿ ಉಪಾಧ್ಯಕ್ಷರಾದ ರೂಪಾಲಿ ಎಸ್. ನಾಯ್ಕ ಅವರು ಭೇಟಿ ನೀಡಿದರು. ಜಿಲ್ಲಾಧಿಕಾರಿಗಳು ಹಾಗೂ ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ ಸೂಕ್ತ ಮುಂಜಾಗ್ರತೆ ಯೊಂದಿಗೆ ಮತ್ತು ಸಾರ್ವಜನಿಕರಿಗೆ ತೊಂದರೆ ಯಾಗದಂತೆ ಶೀಘ್ರವಾಗಿ ತೆರವು ಮಾಡುವಂತೆ ಸೂಚಿಸಿದರು.
ಈ ಸಂದರ್ಭ ವಿಧಾನ ಪರಿಷತ್ ಸದಸ್ಯ ಗಣಪತಿ ಉಳ್ವೇಕರ್, ಹಾಗೂ ಪಕ್ಷದ ಕಾರ್ಯಕರ್ತರು ಜೊತೆಯಲ್ಲಿ ಇದ್ದರು.

ಪ್ರಜಾಪ್ರಭುತ್ವ ವ್ಯವಸ್ಥೆ ಸೋಲಲು ಬಿಡಬಾರದು

ಸುಳ್ಳು ಸಂದೇಶ ಸಾರುವವರ ವಿರುದ್ಧ ಹೋರಾಟ ಅಗತ್ಯ: ಸಚಿವ ಮಂಕಾಳ ವೈದ್ಯ ಹೇಳಿಕೆ

ಹೊನ್ನಾವರ: ಸುಳ್ಳು ಸಂದೇಶ ಸಾರುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ದುರ್ಬಲಗೊಳಿಸಲು ನಡೆಸುವ ಪ್ರಯತ್ನಗಳನ್ನು ಸಾರ್ವಜನಿಕರು ಒಗ್ಗಟ್ಟಾಗಿ ವಿರೋಧಿಸಬೇಕು ಎಂದು ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್. ವೈದ್ಯ ಹೇಳಿದರು.

ಹೊನ್ನಾವರದ ಮೂಡಗಣಪತಿ ಸಭಾಭವನದಲ್ಲಿ ಜಿಲ್ಲಾಡಳಿತ ಜಿಲ್ಲಾ ಪಂಚಾಯತ್, ಸಮಾಜಕಲ್ಯಾಣ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಅರಣ್ಯಜೀವ ಪರಿಸರ ಮತ್ತು ಪರಿಸರ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉತ್ತರಕನ್ನಡಜಿಲ್ಲೆ ಮತ್ತು ವಿವಿಧ ಸಂಘಟನೆಯವರ ಸಹಭಾಗಿತ್ವದಲ್ಲಿ ಭಾನುವಾರ ಆಯೋ ಜಿಸಲಾದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಮಾನತೆ, ಗೌರವ, ಒಗ್ಗಟ್ಟು, ಸಾಮರಸ್ಯದಿಂದ ಜನತೆ ಜೀವಿಸಬೇಕು. ಪ್ರಜಾಪ್ರಭುತ್ವ ಮತ್ತು ಸಂವಿಧಾನ ನಮ್ಮ ಅಮೂಲ್ಯ ಆಸ್ತಿ ಎಂದರು.

ಪ್ರಜಾಪ್ರಭುತ್ವದ ಆಶಯಗಳಿಗೆ ಪ್ರಜಾಪ್ರಭುತ್ವ ವಿರೋಧಿಗಳಿಂದ ಯಾವುದೇ ಧಕ್ಕೆಯಾಗದಂತೆ ಪ್ರತಿಯೊಬ್ಬ ಸಾರ್ವಜನಿಕರ ಕೂಡಾ ಒಗ್ಗಟ್ಟಾಗಿ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ತತ್ವಗಳನ್ನು ಎತ್ತಿ ಹಿಡಿಯುವುದರ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಬೇಕು. ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಕುರಿತಂತೆ ಮುಂದಿನ ಜನಾಂಗಕ್ಕೆ ಅರಿವು ಮತ್ತು ಜಾಗ್ರತೆ ಮೂಡಿಸುವುದು ಅಗತ್ಯವಾಗಿದ್ದು ಶಾಲಾ ಕಾಲೇಜುಗಳಲ್ಲಿ ಪ್ರತಿ ದಿನ ಇವುಗಳ ಬಗ್ಗೆ ತಿಳಿಸುವ ಮೂಲಕ ಸುಭದ್ರದೇಶ ನಿರ್ಮಾಣ ಮಾಡಬೇಕು ಎಂದರು.

ಗೇರುಸೊಪ್ಪ ಸರ್ಕಲ್ ಬಳಿ ನಡೆದ ಮಾನವ ಸರಪಳಿ ಕಾರ್ಯಕ್ರಮದಲ್ಲಿ, ಡಾ.ಬಿ.ಆರ್. ಅಂಬೇಡ್ಕರ್, ಒನಕೆ ಓಬವ್ವ, ಸುಭಾಷ್‌ಚಂದ್ರ ಬೋಸ್, ಕಿತ್ತೂರು ರಾಣಿ ಚೆನ್ನಮ್ಮ, ಭಾರತ ಮಾತೆಯ ವೇಷ ಧರಿಸಿದ್ದ ಪುಟಾಣಿಗಳು, ಹಾಲಕ್ಕಿ ವೇಷಧಾರಿಗಳು ಸಾರ್ವಜನಿಕರ ಗಮನ ಸೆಳೆದರು. ಜಿಲ್ಲೆಯಲ್ಲಿ ಅತ್ಯಂತ ಯಶಸ್ವಿಯಾಗಿ ಕಾರ್ಯಕ್ರಮ ನಡೆಯಿತು.

ಹೊನ್ನಾವರ ಪಟ್ಟಣ ಪಂಚಾಯಿತಿ ಅಧ್ಯಕ್ಷ ನಾಗರಾಜ ಭಟ್, ಉಪಾಧ್ಯಕ್ಷ ಸುರೇಶ ಹೊನ್ನಾವರ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಈಶ್ವರಕುಮಾರ್ ಕಾಂದೂ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಯಕುಮಾರ್, ಉಪವಿಭಾಗಾಧಿಕಾರಿಗಳಾದ ಕನಿಷ್ಕ, ಡಾ.ನಯನಾ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಉಮೇಶ್, ಅಪರ ಜಿಲ್ಲಾಧಿಕಾರಿ ಪ್ರಕಾಶರಜಪೂತ ಸ್ವಾಗತಿಸಿದರು.

ಶಿಕ್ಷಕರಾದ ಸುದೇಶ ನಾಯ್ಕ ಮತ್ತು ವಸಂತಲಕ್ಷ್ಮೀ ಹೆಗಡೆ ನಿರೂಪಿಸಿದರು. ನಳಿನಿ ಪಟಗಾರ ವಂದಿಸಿದರು.

253 ಕಿಮೀ ಉದ್ದದ ಮಾನವ ಸರಪಳಿ

ಪ್ರಾಸ್ತವಿಕವಾಗಿ ಮಾತನಾಡಿದ ಜಿಲ್ಲಾಧಿಕಾರಿ ಕೆ.ಲಕ್ಷ್ಮೀ ಪ್ರಿಯಾ, ಜಿಲ್ಲೆಯಲ್ಲಿ ಹಳಿಯಾಳ ತಾಲೂಕಿನ ಮಾವಿನಕೊಪ್ಪದಿಂದ ಭಟ್ಕಳ ತಾಲೂಕಿನ ಗೋರಟೆವರೆಗೆ ಒಟ್ಟು 253 ಕಿಮೀ ಉದ್ದದ ಮಾನವ ಸರಪಳಿ ರಚಿಸಿದ್ದು, ಅರಣ್ಯ ಪ್ರದೇಶದಲ್ಲಿ ಮತ್ತು ಅಪಾಯಕಾರಿ ಗುಡ್ಡ ಕುಸಿತ ಪ್ರದೇಶದಲ್ಲಿ ವಾಹನಗಳಲ್ಲಿ ಧ್ವಜರ‍್ಯಾಲಿಯ ಮೂಲಕ ಸರಪಳಿಯನ್ನು ಜೋಡಿಸಲಾಗಿದ್ದು ಜಿಲ್ಲೆಯ 1 ಲಕ್ಷ ಕ್ಕೂ ಅಧಿಕ ಸಾರ್ವಜನಿಕರು ಈ ಕಾರ್ಯಾಕ್ರಮದಲ್ಲಿ ಭಾಗವಹಿಸಿದ್ದಾರೆ. ದೇಶದ ಪ್ರಜೆಗಳು ಶಾಂತಿ, ಸಮಾನತೆ, ಸಹಿಷ್ಣುತೆ, ಸೌಹಾರ್ದತೆ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನುಜೀವನದಲ್ಲಿ ಅಳವಡಿಸಿಕೊಂಡು ಸಹೋದರ ಸಹೋದರಿಯರಂತೆ ಬಾಳಬೇಕು ಎಂದರು.

ಜಗತ್ತಿಗೆ ಮಾದರಿಯಾದ ವ್ಯವಸ್ಥೆ

ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷಆರ್.ವಿ. ದೇಶಪಾಂಡೆ ಮಾತನಾಡಿ, ಭಾರತವು ತನ್ನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜಗತ್ತಿಗೆ ಮಾದರಿಯಾಗಿದೆ. ಪ್ರಜಾಪ್ರಭುತ್ವದ ಪ್ರತಿಯೊಂದು ಸೂತ್ರವು ನಮ್ಮ ರಾಷ್ಟ್ರದ ಪ್ರಗತಿ ಮತ್ತು ಸೌಹಾರ್ದತೆಯ ಆಧಾರವಾಗಿದೆ ಎಂದರು. ರಾಜ್ಯದಲ್ಲಿ ಕಳೆದ ವರ್ಷ ಸಂವಿಧಾನ ಓದು ಎಂಬ ಮಹತ್ವದ ಕಾರ್ಯಕ್ರಮವನ್ನು ಯಶಸ್ವಿಯಾಗಿ ಹಮ್ಮಿಕೊಂಡಿದ್ದೇವು. ಈ ವರ್ಷ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಮತ್ತಷ್ಟು ಬಲಪಡಿಸಲು, ವಿಶೇಷವಾದ ಮಾನವ ಸರಪಳಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಪಕ್ಷಾತೀತವಾಗಿ ಎಲ್ಲರೂ ಭಾಗವಹಿಸುವುದು ಅತಿ ಮುಖ್ಯವಾಗಿದೆ. ಕಾರ್ಯಕ್ರಮದ ನಂತರ ಸಸಿ ನೆಡುವ ಕಾರ್ಯಕ್ರಮಕೂಡ ಹಮ್ಮಿಕೊಳ್ಳಲಾಗಿದ್ದು, ಇದು ಪರಿಸರ ಸಂರಕ್ಷಣೆಯತ್ತ ಒಂದು ಮಹತ್ವದ ಹೆಜ್ಜೆಯಾಗಿದೆ ಎಂದರು.

ಪ್ರಜಾಪ್ರಭುತ್ವ ರಕ್ಷಿಸಬೇಕು: ಹೆಬ್ಬಾರ

ಯಲ್ಲಾಪುರ: ತಾಲೂಕಾಡಳಿತದಿಂದ ಅಂತಾ ರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ನಿಮಿತ್ತ ಅಯೋಜಿಸಿದ್ದ ಮಾನವಸರಪಳಿ ನಿರ್ಮಾಣ ಕಾರ್ಯಕ್ರಮಕ್ಕೆ ತಾಲೂಕಿನ ಗಡಿಭಾಗವಾದ ತಾಟವಾಳದಲ್ಲಿ ಶಾಸಕ ಶಿವರಾಮ ಹೆಬ್ಬಾರ ಚಾಲನೆ ನೀಡಿದರು.

ನಂತರ ಮಾತನಾಡಿ, ಪ್ರಜಾಪ್ರಭುತ್ವದ ಅಡಿಗಲ್ಲು ಅಲುಗಾಡುತ್ತಿರುವುದರ ನಡುವೆ ಪ್ರಜಾಪ್ರಭುತ್ವದ ಮಹತ್ವವನ್ನು ನಾವೆಲ್ಲರೂ ಅರ್ಥೈಸಿಕೊಂಡು, ಅದನ್ನು ರಕ್ಷಿಸಲು ಜಾಗೃತರಾಗಬೇಕುಎಂದರು.

ತಹಸೀಲ್ದಾರ್ ಯಲ್ಲಪ್ಪ ಗೋನೆಣ್ಣವರ, ವೀಕೆಂದ್ರಿ ಕರಣ ಯೋಜನೆ ರಾಜ್ಯ ಉಪಾಧ್ಯಕ್ಷ ಪ್ರಮೋದ ಹೆಗಡೆ, ಪ.ಪಂ. ಅಧ್ಯಕ್ಷೆ ನರ್ಮದಾ ನಾಯ್ಕ, ಜಿ.ಪಂ. ಮಾ ಜಿಸದಸ್ಯ ವಿಜಯ ಮಿರಾಶಿ, ಅಧಿಕಾರಿಗಳು ಸೇರಿದಂತೆ ಇತರರು ಇದ್ದರು.

ತಾಟವಾಳದಿಂದ, ಹಳಿಯಾಳ ಕ್ರಾಸ್, ಪಟ್ಟಣದ ಬೀಸ್ಗೋಡ್ ಕ್ರಾಸ್ ನಿಂದ ಸವಣಗೇರಿವರೆಗೆ ಹಾಗೂ ಯಲ್ಲಾಪುರ ಶಿರಸಿ ಗಡಿಯಾದ ತುಡಗುಣಿವರೆಗೆ ಎಲ್ಲಾ ಗ್ರಾಮಗಳಲ್ಲಿ ಬೃಹತ್ ಸಂಖ್ಯೆಯಲ್ಲಿ ಸ್ಥಳೀಯ ಜನಪ್ರತಿನಿಧಿಳು, ಸರ್ಕಾರಿ ಅಧಿಕಾರಿಗಳು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳೆಲ್ಲ ಸೇರಿ ಸರ್ಕಾರದ ಆದೇಶದಂತೆ ಮಾನವ ಸರಪಳಿ ನಿರ್ಮಿಸಿ, ನಾಡಗೀತೆ ಹಾಡಿ, ಸಸಿನೆಡುವ ಕಾರ್ಯಕ್ರಮವನ್ನು ನೆರವೇರಿಸಿದರು. ಪಟ್ಟಣ ವ್ಯಾಪ್ತಿಯಲ್ಲಿ ಸುಮಾರು 3 ಸಾವಿರಕ್ಕೂ ಅಧಿಕ ಜನ ಸೇರಿ ಮಾನವ ಸರಪಳಿ ನಿರ್ಮಿಸಿದ್ದು ಆಕರ್ಷಣೀಯವಾಗಿತ್ತು.

ಸೈಬರ್ ವಂಚನೆಗೆ ಕೋಟ್ಯಂತರ ರು. ಮಾಯ

ಸಿಇಎನ್ ಠಾಣೆಯಲ್ಲಿ ಮೂರು ವರ್ಷದಲ್ಲಿ 305 ಪ್ರಕರಣ ದಾಖಲು | 12 ಕೋಟಿ 49 ಲಕ್ಷ ಹಣ ಎಗರಿಸಿದ ಖದೀಮರು

ಪರಶುರಾಮ ಎಸ್.ಡಿ

ಹಾವೇರಿ: ಹಣ ಎಂದರೆ ಹೆಣವೂ ಬಾಯಿ ತೆರೆಯುತ್ತ ದೆಯಂತೆ ಅಂಥದ್ದರಲ್ಲಿ ಆಧುನಿಕ ತಂತ್ರಜ್ಞಾನ ಬಳಸಿ ಹಣ ಮಾಡುವ ದಂಧೆಗೆ ಬಿದ್ದಿದ್ದೇನೂ ಹೆಚ್ಚಲ್ಲ. ಆದರೆ ನಮ್ಮ ಎಚ್ಚರಿಕೆಯಲ್ಲಿ ನಾವಿರಬೇಕು.
ಉಳ್ಳವರನ್ನೆ ಟಾರ್ಗೆಟ್ ಮಾಡಿಕೊಂಡು ಸೈಬರ್ ವಂಚಕರು ನೀವು ನಮ್ಮ ಕಂಪನಿಗೆ ಹಣ ತೊಡಗಿಸಿದರೆ ದುಪ್ಪಟ್ಟು ಮಾಡಿಕೊಡುವುದಾಗಿ ನಂಬಿಸಿ ಹಣ ದೋಚುವ ಸೈಬರ್ ವಂಚನೆ ಗ್ಯಾಂಗ್ ಹಾವಳಿ ದಿನೇ ದಿನೇ ಹೆಚ್ಚುತ್ತಿದೆ. ಇವರ ಮಾತಿಗೆ ಮರುಳಾಗಿ ಹಾವೇರಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷದಿಂದ ಸೆನ್ ಠಾಣೆಯಲ್ಲಿ 305 ಪ್ರಕರಣಗಳು ದಾಖಲಾಗಿದ್ದು ಬರೋಬ್ಬರಿ 12 ಕೋಟಿ 49ಲಕ್ಷ ಬೃಹತ್ ಮೊತ್ತದ ಹಣವನ್ನು ವಂಚಕರು ಪಂಗನಾಮ ಹಾಕಿದ್ದಾರೆ. ಸಾರ್ವಜನಿಕರು ಇನ್ನಲಾದರೂ ಎಚ್ಚರ ವಹಿಸುವಂತೆ ಸೂಚನೆ ನೀಡಿದೆ.

ದೂರು ದಾಖಲು: ಸಪ್ಟೆಂಬರ್ 13 ರಂದು ಜಿಲ್ಲೆಯ ಇಬ್ಬರು ವೈದ್ಯರು ಸೈಬರ್ ವಂಚಕರಿಂದ 90 ಲಕ್ಷ ಹಣ ಕಳೆದುಕೊಂಡ ಮೇಲೆ ನಗರದ ಸಿಇಎನ್ ಠಾಣೆಯಲ್ಲಿ ದೂರು ದಾಖಲು ಮಾಡಿದ್ದಾರೆ. ಪಸ್ಟ ಮಾರ್ಕ್ ಪ್ಲಾಟಪಾರ್ಮ ಮೂಲಕ 75 ಲಕ್ಷ ತೊಡಗಿಸಿದರೆ ಐಪಿಓ ಖರೀದಿಸಲು ಶೇ 100 ಮತ್ತು ಷೇರಿಗೆ ಶೇ.20 ರಷ್ಟು ಲಾಭ ನೀಡುವುದಾಗಿ ನಂಬಿಸಿದ್ದ ವಂಚಕರು ಇದನ್ನು ನಂಬಿದ ಹಾವೇರಿ ನಗರದ ವೈದ್ಯ ಡಾ.ಗೌತಮ್ ಲೋಡಾಯಿ ಅವರು ತಮ್ಮ ವಿವಿಧ ಬ್ಯಾಂಕ್ ಖಾತೆಯ ಮೂಲಕ ವಂಚಕರ ಖಾತೆಗೆ ಬರೋಬ್ಬರಿ 71ಲಕ್ಷ 50 ಸಾವಿರ ಹಣ ವರ್ಗಾವಣೆ ಮಾಡಿ ಹಣ ಕಳೆದುಕೊಂಡಿದ್ದಾರೆ. ಸವಣೂರಿನ ಪಾರ್ಮಾ ಸಿಸ್ಟ್ ರಾಮಕೃಷ್ಣ ಘಾಟಗೆ ಇವರು ಸಹಿತ ಬ್ಯಾಂಕ್ ಖಾತೆಯಿಂದ 17ಲಕ್ಷ 40 ಸಾವಿರ ಹೂಡಿಕೆ ಮಾಡಿ ಹಣ ಕಳೆದುಕೊಂಡು ದಿಕ್ಕು ತೋಚದಂತಾಗಿದ್ದಾರೆ. ಸುಶಿಕ್ಷಿತರಾಗಿರುವ ಇವರು ಹಣ ಗಳಿಸುವ ದುರಾಶೆಗೆ ಹೋಗಿ ಹಣವನ್ನು ಕಳೆದುಕೊಂಡು ಕಂಗಾಲಾಗಿದ್ದಾರೆ.

ಸೈಬರ್ ವಂಚಕರಿಂದ ಮೋಸಕ್ಕೆ ಒಳಗಾದ ಬಗ್ಗೆ 2022 ರಲ್ಲಿ 118 ಪ್ರಕರಣ ದಾಖಲಾಗಿದ್ದು 17 ಪತ್ತೆ ಮಾಡಿದರೂ ಕಳೆದು ಕೊಂಡ 1ಕೋಟಿ 88 ಲಕ್ಷದಲ್ಲಿ ವಸೂಲಿಯಾಗಿದ್ದು 89 ಲಕ್ಷ ಮಾತ್ರ ಇದೇ ರೀತಿ 2023 ರಲ್ಲಿ 107 ಪ್ರಕರಣ ದಾಖಲು 91 ಪತ್ತೆ ಮಾಡಲಾಗಿದ್ದು ಕಳೆದುಕೊಂಡ ಹಣ 2ಕೋಟಿ 16 ಲಕ್ಷ ವಸೂಲಿ ಮಾಡಿದ್ದು 22 ಲಕ್ಷ ಮಾತ್ರ ಇನ್ನು ಪ್ರಸಕ್ತ 2024 ಸಾಲಿನ ಎಂಟು ತಿಂಗಳಲ್ಲಿ 80 ಪ್ರಕರಣ ದಾಖಲು 55 ಪತ್ತೆ ಮಾಡಿದ್ದು ಕಳೆದುಕೊಂಡ ಹಣ 8ಕೋಟಿ 43 ಲಕ್ಷವಾಗಿದ್ದು, ವಸೂಲಿಯಾಗಿದ್ದು 72 ಲಕ್ಷ ಮಾತ್ರ ಕಳೆದ ಎರಡು ವರ್ಷ ಎಂಟು ತಿಂಗಳಲ್ಲಿ 305 ಪ್ರಕರಣ ದಾಖಲಾಗಿದ್ದು 267 ಪ್ರಕರಣ ಪತ್ತೆ ಮಾಡಿ ಕಳೆದುಕೊಂಡ 12ಕೋಟಿ 40 ಲಕ್ಷದಲ್ಲಿ 1 ಕೋಟಿ 84 ಲಕ್ಷ ಮಾತ್ರ ರಿಕವರಿ ಮಾಡಲಾಗಿದೆ. ಹಣ ಕಳೆದುಕೊಂಡವರ ಕೈಗೆ ಸೇರಿದ್ದು 42 ಲಕ್ಷ ಅಷ್ಟೆ ಎಂದು ತಿಳಿದು ಬಂದಿದೆ.

ಇತ್ತಿಚಿನ ದಿನಗಳಲ್ಲಿ ಸೈಬರ್ ಕ್ರೈಮ್ ಹೆಚ್ಚುತ್ತಿದೆ. ಸಾರ್ವಜನಿಕರು ತಮ್ಮ ಮೊಬೈಲ್ ಗೆ ಬರುವ ಸಂಶಯಾಸ್ಪದ ಲಿಂಕ್ ಮೇಲೆ ಕ್ಲಿಕ್ ಮಾಡುವುದನ್ನು ನಿಲ್ಲಿಸಬೇಕು. ಅಪರಿಚಿತ ಆ್ಯಪ್ ಡೌನ್ ಲೋಡ್ ಕೂಡ ಮಾಡಬಾದರು. ಹಣಕಾಸಿನ ವ್ಯವಹಾರ ವಿಚಾರದಲ್ಲಿ ಎಚ್ಚರಿಕೆ ವಹಿಸಬೇಕು. ವಂಚನೆಯಾದರೆ ತಕ್ಷಣವೇ ನಮ್ಮ ಹತ್ತಿರದ ಸೈಬರ್ ಠಾಣೆಗೆ ದೂರು ದಾಖಲು ಮಾಡಬೇಕು.
-ಅಂಶುಕುಮಾರ, ಎಸ್ಪಿ

ದುರಾಸೆ ಸಲ್ಲ

ಮಾಹಿತಿ ತಂತ್ರಜ್ಞಾನ ಮಾಯಾ ಲೋಕದಲ್ಲಿ ಸುಲಭ ಹಣ ಮಾಡುವ ದುರಾಸೆ ಒಳ್ಳೆಯದಲ್ಲ. ಹಾಗೇನಾದರೂ ಮಾರು ಹೋದರೆ ಮೂರು ನಾಮ ಹಾಕಿಸಿಕೊಳ್ಳೋದು ಗ್ಯಾರಂಟಿಯಾಗಿದೆ. ಸಾರ್ವಜನಿಕರು ಅಪರಿಚಿತರಿಂದ ಕರೆಗಳು ಬಂದು ನಮ್ಮದೊಂದು ದೊಡ್ಡ ಕಂಪನಿ ನಮ್ಮಲ್ಲಿ ಷೇರು ತೊಡಗಿಸಿ ನೀವು ತೊಡಗಿಸುವ ಹಣಕ್ಕೆ ಐದತ್ತು ಪಟ್ಟು ಲಾಭಾಂಶ ನೀಡುತ್ತೇವೆ ಎಂದು ಮಾತನಾಡುವವರ ಮಾತಿಗೆ ಮರು ಳಾಗದೇ ಎಚ್ಚರ ವಹಿಸಬೇಕು. ನಿಮ್ಮ ಹಣವನ್ನು ಸುರಕ್ಷಿತವಾಗಿ ಇಟ್ಟುಕೊಂಡು ಉತ್ತಮ ಭವಿಷ್ಯ ಕಟ್ಟಿಕೊಳ್ಳಬೇಕು.ಇಲ್ಲದೇ ಹೋದರೆ ಬೀದಿಗೆ ಬೀಳ ಬೇಕಾಗುತ್ತದೆ.

ಪ್ರಜಾಪ್ರಭುತ್ವ ಉಳಿಸಿ ಬೆಳೆಸುವುದು ಪ್ರತಿ ಪ್ರಜೆಯ ಕರ್ತವ್ಯ

ಹಾವೇರಿ: ಜಗತ್ತಿನಲ್ಲೇ ಅತೀ ದೊಡ್ಡ ಪ್ರಜಾಪ್ರಭುತ್ವ ರಾಷ್ಟ ಭಾರತ ಎನ್ನುವುದು ಹೆಮ್ಮೆಯ ಸಂಗತಿ. ಇಂದು ಪ್ರಜಾಪ್ರಭುತ್ವ ಮೌಲ್ಯಗಳು ಕುಂಟಿತ ಗೊಳ್ಳುತ್ತಿವೆ, ಪ್ರಜಾಪ್ರಭಾತ್ವ ಉಳಿಸಿ ಬೆಳೆಸುವುದು ಪ್ರತಿ ಪ್ರಜೆಯ ಕರ್ತವ್ಯವಾಗಿದೆ ಎಂದು ಶಾಸಕ ಪ್ರಕಾಶ ಕೋಳಿವಾಡ ಅವರು ಹೇಳಿದರು.

ರಾಣೇಬೆನ್ನೂರ ನಗರದ ಆರ್.ಟಿ.ಇ.ಎಸ್. ಕಾಲೇಜ್ ಮುಂಭಾಗ ರವಿವಾರ ಜಿಲ್ಲಾಡಳಿತ, ಜಿ.ಪಂ. ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಭಾರತ ದೇಶದಲ್ಲಿ 2,500 ರಾಜಕೀಯ ಪಕ್ಷಗಳಿವೆ, ವಿವಿಧ 20 ರಾಜ್ಯಗಳಲ್ಲಿ 20 ಪಕ್ಷದವರು ಅಧಿಕಾರ ನಡೆಸುತ್ತಿದ್ದಾರೆ. ನಮ್ಮ ದೇಶದಲ್ಲಿ ವಿವಿಧ ಭಾಷೆ, ವಿವಿಧ ಸಂಸ್ಕೃತಿಗಳಿದ್ದರೂ ಸಹ ಇಂದು ಭಾರತ ಅಖಂಡತೆಯಿಂದ ಇರಲು ಡಾ.ಬಿ.ಆರ್. ಅಂಬೇಡ್ಕರ ರಚಿಸಿದ ಸಂವಿಧಾನ ಕಾರಣವಾಗಿದೆ ಎಂದರು.

ಬುದ್ಧ, ಬಸವ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಕಂಡ ಸಮ ಸಮಾಜ ನಿರ್ಮಾಣದ ಕನಸು ನನಸು ಮಾಡಲಾಗಿದೆ ಎಂದು ಆತ್ಮಾವ ಲೋಕ ಮಾಡಿಕೊಳ್ಳಬೇಕಾಗಿದೆ. ಜಾತಿ, ಧರ್ಮ ಹಾಗೂ ಹಣದ ಆಮಿಷ ಬಿಟ್ಟಾಗ ಮಾತ್ರ ಸಮ ಸಮಾಜ ನಿರ್ಮಾಣ ಸಾಧ್ಯ, ಶಿಕ್ಷಣ ಹಾಗೂ ಆರೋಗ್ಯದಿಂದ ಸದೃಢ ರಾಷ್ಟಕಟ್ಟಲು ಸಾಧ್ಯ. ಜಾತಿ, ಧರ್ಮ ಮರೆತು ಕುವೆಂಪು ಅವರಂತೆ ವಿಶ್ವಮಾನವರಾಗಬೇಕು ಎಂದು ಕರೆ ನೀಡಿದರು.

ಶಾಸಕ ಯು.ಬಿ.ಬಣಕಾರ ಅವರು ಮಾತನಾಡಿ, ಪ್ರಜಾಪ್ರಭುತ್ವದ ಆಶಯಗಳು ಹಾಗೂ ಮೌಲ್ಯಗಳು ಕಡಿಮೆಯಾಗುತ್ತಿವೆ. ಅವುಗಳನ್ನು ಎತ್ತಿಹಿಡಿಯುವ ಕೆಲಸವಾಗಬೇಕು. ವಿಶ್ವಸಂಸ್ಥೆಯು 2007ರಲ್ಲಿ ಪ್ರಜಾಪ್ರಭುತ್ವ ದಿನಾಚರಣೆ ಜಾರಿಗೆ ತಂದಿತು. 2008ರಿಂದ ಅಂತಾ ರಾಷ್ಟ್ರೀಯ ಪ್ರಜಾಭುತ್ವ ದಿನಾಚರಣೆ ಆಚರಿಸಲಾ ಗುತ್ತಿದೆ. ಮಹಾತ್ಮಗಾಂಧೀಜಿ ಸೇರಿದಂತೆ ಸ್ವಾತಂತ್ರ್ಯ ಹೋರಾಟಗಾರರು ಸಂವಿಧಾನ ಕರಡು ಸಮಿತಿ ರಚಿಸಿದರು. ಎಲ್ಲರಿಗೂ ಸಮಾನ ಅವಕಾಶ ದೊರೆಯುವ ಬಹುದೊಡ್ಡ ಲಿಖಿತ ಸಂವಿಧಾನ ನೀಡಿದ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ನಾವು ಸ್ಮರಿಸಬೇಕು ಎಂದರು.

ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಭಾರತ ಸಂವಿಧಾನ ಪೀಠಿಕೆಯ ವಾಚಿಸಿ ಮಾತನಾಡಿ, ಭಾರತ ದೇಶದ ಪ್ರತಿ ಪ್ರಜೆಗೂ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯ ಒದಗಿಸುವುದು ಸಂವಿಧಾನ ಉದ್ದೇಶವಾಗಿದೆ ಂದರು.

ಇದೇ ಸಂದರ್ಭದಲ್ಲಿ ಸಸಿ ನೆಡುವ ಕಾರ್ಯಕ್ರಮಕ್ಕೆ ಬ್ಯಾಡಗಿ ಶಾಸಕರು ಹಾಗೂ ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸವರಾಜ ಶಿವಣ್ಣನವರ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಹಾವೇರಿ ನಗರಸಭೆ ಅಧ್ಯಕ್ಷೆ ಶಶಿಕಲಾ ರಾಮು ಮಾಳಗಿ, ಉಪಾಧ್ಯಕ್ಷ ಮಲ್ಲಿಕಾರ್ಜುನ ಸಾತೇನಹಳ್ಳಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಕ್ಷಯ್ ಶ್ರೀಧರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಂಶುಕುಮಾರ, ಹಾವೇರಿ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಸುರೇಶ ಜಂಗಮಶೆಟ್ಟಿ, ಉಪ ವಿಭಾಗಾಧಿಕಾರಿ ಚೆನ್ನಪ್ಪ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಪ್ರಶಾಂತ ವರಗಪ್ಪನವರ, ಜಿಲ್ಲಾ ಹಾಗೂ ತಾಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ಇತರರು ಉಪಸ್ಥಿತರಿದ್ದರು. ಅಪರ ಜಿಲ್ಲಾಧಿಕಾರಿ ಪೂಜಾರ ವೀರಮಲ್ಲಪ್ಪ ಅವರು ಸ್ವಾಗತಿಸಿದರು.

ಸೆ.17 ರಂದು ಬೃಹತ್ ಸ್ವಚ್ಛತಾ ಶ್ರಮದಾನ

ಕಾರವಾರ: ಸ್ವಚ್ಛತಾ ಹಿ ಸೇವಾ/ ಸ್ವಚ್ಛತೆಯೇ ಸೇವೆ' -2024 ರ ಆಂದೋಲನದ ಅಂಗವಾಗಿ ಸೆಪ್ಟೆಂಬರ್ 17 ರಂದು ಬೆಳಗ್ಗೆ 7.30 ಕ್ಕೆ ಕಾರವಾರದ ರವೀಂದ್ರನಾಥ್ ಟಾಗೋರ್ ಕಡಲ ತೀರದಲ್ಲಿ ಬೃಹತ್ ಸ್ವಚ್ಛತಾ ಶ್ರಮದಾನ ಹಮ್ಮಿಕೊಳ್ಳಲಾಗಿದೆ. ಜಿಲ್ಲಾಡಳಿತ,ಜಿಲ್ಲಾ ಪಂಚಾಯತ್ , ಉತ್ತರ ಕನ್ನಡ ಹಾಗೂ ನಗರಸಭೆ ಕಾರವಾರ ವತಿಯಿಂದ ಈ ಕಾರ್ಯಕ್ರಮ ನಡೆಯಲಿದೆ. ಗಾಂಧೀಜಿ ಅವರ ಧ್ಯೆಯವಾಕ್ಯ 'ಸ್ವಚ್ಛತೆಯೇ ದೈವತ್ವ' ಎಂಬ ಕನಸನ್ನು ನನಸಾಗಿಸಲು ಸೆಪ್ಟೆಂಬರ್ 17 ರಿಂದ ಅಕ್ಟೋಬರ್ 02ರ ವರೆಗೆ 17 ದಿನಗಳ ವರೆಗೆ ಜಿಲ್ಲೆಯ ನಗರ ಮತ್ತು ಎಲ್ಲಾ ಗ್ರಾಮೀಣ ಪ್ರದೇಶಗಳಲ್ಲಿ 'ಸ್ವಚ್ಛತಾ ಹಿ ಸೇವಾ/ಸ್ವಚ್ಛತೆಯೇ ಸೇವೆ' ಎಂಬ ವಿಶೇಷ ಆಂದೋಲನದ ಅಂಗವಾಗಿ ಪ್ರತಿದಿನವೂ ಕೂಡ ಸ್ವಚ್ಚತೆಗೆ ಸಂಬಂಧಿಸಿದಂತೆ ವಿವಿಧ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ. ಸೆಪ್ಟೆಂಬರ್ 17 ರಂದು ಬೆಳಗ್ಗೆ 7.30 ಕ್ಕೆ ಕಾರವಾರದ ರವೀಂದ್ರನಾಥ್ ಟಾಗೋರ್ ಕಡಲ ತೀರದಲ್ಲಿ ಹಮ್ಮಿಕೊಂಡ ಬೃಹತ್ ಸ್ವಚ್ಛತಾ ಶ್ರಮದಾನದಲ್ಲಿ ಜಿಲ್ಲೆಯ ಎಲ್ಲಾ ಚುನಾಯಿತ ಪ್ರತಿನಿಧಿಗಳು, ಸಾರ್ವಜನಿಕರು, ವಿವಿಧ ಇಲಾಖೆಗಳ ಅಧಿಕಾರಿಗಳು, ಸ್ವಸಹಾಯ ಸಂಘದ ಸದಸ್ಯರು, ಶಾಲಾ, ಕಾಲೇಜು, ಸ್ಕೌಟ್ಸ್ ವಿದ್ಯಾರ್ಥಿಗಳು, ವಿವಿಧ ಸ್ವಯಂ ಸೇವಾ ಸಂಘಟನೆಗಳು, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯಿತಿ, ಕಾರವಾರ ನಗರ ಸಭೆ ನಗರ ಸಭೆಯ ಪ್ರಕಟಣೆ ತಿಳಿಸಿದೆ.

ಅಸಂಘಟಿತ ಪತ್ರಿಕಾ ವಿತರಕರಿಗೆ ವಿಶೇಷ ಸಭೆ

ಹಾವೇರಿ: ಪತ್ರಿಕಾ ವಿತರಕರು ಒಳಗೊಂಡಂತೆ ಅಸಂಘಟಿತ ಕಾರ್ಮಿಕರಿಗೆ ವಲಯದಲ್ಲಿ ಕೆಲಸ ಮಾಡುವವರಿಗೆ ಜಿಲ್ಲಾ ಕಾರ್ಮಿಕ ಇಲಾಖೆಯಿಂದ ಗುರವಾರ ವಿಶೇಷ ಸಭೆ ನಡೆಸಲಾಯಿತು. ಜಿಲ್ಲಾ ಕಾರ್ಮಿಕ ಇಲಾಖೆಯ ಕಚೇರಿಯಲ್ಲಿ ಈ ಸಭೆ ಜರುಗಿತು.

ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ ಅಸಂಘಟಿತ ಕಾರ್ಮಿಕರನ್ನು ನೋಂದಣಿ ಹಾಗೂ ಸೌಲಭ್ಯ ವಿತರಿಸಲು ದತ್ತಾಂಶ ಸಂಗ್ರಹ ಅಭಿಯಾನದ ಈ ಸಭೆಯಲ್ಲಿ 23 ವಲಯಗಳ ಅಸಂಘಟಿತ ಕಾರ್ಮಿಕರ ಕುಂದು ಕೊರತೆಗಳ ಕುರಿತು ಚರ್ಚೆ ನಡೆಸಲಾಯಿತು.

ಈ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾ ಕಾರ್ಮಿಕ ನಿರೀಕ್ಷರಾದ ದೇವೇಂದ್ರ, ನಾಟೀಕರ್, ಅಸಂಘಟಿತ ಕಾರ್ಮಿಕರಿಗೆ ಇಲಾಖೆಯಿಂದ ನಾನಾ ಸೌಲಭ್ಯಗಳು ಒದಗಿಸಲಾಗುತ್ತಿದೆ. ಹಾಗಾಗಿ ಅಸಂಘಟಿತ ಕಾರ್ಮಿಕರಾದವರು ಅಗತ್ಯ ದಾಖಲಾತಿಗಳನ್ನು ನೀಡಿ ನೋಂದಣಿ ಮಾಡಿಕೊಳ್ಳಬೇಕು. ಇದರಲ್ಲಿ ಸಂಘಟನೆಗಳ ಪಾತ್ರ ಬಹಳ ಮುಖ್ಯವಾಗಿದೆ. ಇಲಾಖೆಯ ನಿಯಮಗಳನ್ನು ಆಧಾರದಂತೆ ನೋಂದಣಿ ಮಾಡಿಸಿಕೊಂಡು ಸೌಲಭ್ಯ ಪಡೆದುಕೊಳ್ಳಿ ವೃತ್ತಿ ಮಾಡದೇ ಇರುವವರು ನೋಂದಣಿ ಅವಕಾಶ ಇರುವುದಿಲ್ಲ. ಅಂತವರ ಬಗ್ಗೆ ಸಂಘಟನೆಯವರು ನಿಗಾ ವಹಿಸಬೇಕು ಅರ್ಹರಿಗೆ ಮಾತ್ರ ನೊಂದಣಿ ಅವಕಾಶ ನೀಡಲಾಗುವುದು ಎಂದರು. ಜಿಲ್ಲೆಯ ಪೆಂಡಾಲ,ಹೊಲಿಗೆ ಕಸುಬು, ಫೋಟೋ ಗ್ರಾಫರ್, ಪತ್ರಿಕಾ ವಿತರಕರು ಸೇರಿದಂತೆ ಅಸಂಘಟಿತ ಕಾರ್ಮಿಕರು ಒಳಗೊಂಡಿಂತೆ ಸಭೆಯಲ್ಲಿ ಹಾಜರಿದ್ದರು.

ಈ ಸಂದರ್ಭದಲ್ಲಿ ತಾಲೂಕಾ ಪತ್ರಿಕಾ ವಿತರಕರ ಅಧ್ಯಕ್ಷರಾದ ಕರಬಸಪ್ಪ ಹಳದೂರ, ಸಂಘಟನಾ ಕಾರ್ಯದರ್ಶಿ ಬೀರಪ್ಪ ಕುರಗುಂದ, ಚೇತನ ರಾಜಪೂರೋಹಿತ, ಬಸವರಾಜ ಬೆನ್ನೂರ, ವಿರೇಶ ಪುಂಜಣ್ಣನವರ, ಸಂಜೀವ ರಿತ್ತಿ, ಮಾಣಿಕ್ ಲಾರ್ಡ್, ರಬ್ಬಾನಿ ಚೂಡಿಗಾರ ಉಪಸ್ಥಿತರಿದ್ದರು.

ಸಿಎಂ ಬದಲಾವಣೆ ಪ್ರಶ್ನೆಯೇ ಇಲ್ಲ

ಶಿರಸಿ: ರಾಜ್ಯದಲ್ಲಿ 5 ವರ್ಷಗಳ ಕಾಲ ಸಿದ್ಧರಾಮಯ್ಯ ಮುಖ್ಯ ಮಂತ್ರಿ ಆಗಿ ಕೆಲಸ ಮಾಡುತ್ತಾರೆ ಎಂದು ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ ಹೇಳಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ನಾಯಕತ್ವದಲ್ಲಿ ಸರ್ಕಾರ ಒಳ್ಳೇ ಕೆಲಸ ಮಾಡ್ತಿದೆ. ಸಿದ್ದರಾಮಯ್ಯ ಅನುಭವಿ ಹಾಗೂ ಒಳ್ಳೆ ನಾಯಕ. ಎಲ್ಲರೂ ಅದಕ್ಕೆ ಸಹಕರಿಸಬೇಕು ಎಂದರು. ಸಿದ್ದರಾಮಯ್ಯ ಈಗಾಗಲೇ ಇದ್ದಾಗ ನನ್ನ ಮುಖ್ಯಮಂತ್ರಿ ಮಾಡೋ ಪ್ರಶ್ನೆ ಉದ್ಭವಿಸಲ್ಲ. ಅರ್ಹತೆ ಪ್ರಶ್ನೆ ಬೇರೆ. ನಾವು ಪಕ್ಷದ ಶಿಸ್ತಿನ ಸಿಪಾಯಿಗಳಾಗಬೇಕು. ಸರ್ಕಾರ ಇಷ್ಟು ಚೆನ್ನಾಗಿ ನಡೆತಿರೋವಾಗ ಬೇರೆ ಯಾರೂ ಕೂಡ ಇದರ ಬಗ್ಗೆ ಬೇರೆ ವಿಚಾರ ಮಾಡಬಾರದು ಎಂದು ತಾವೂ ಮುಖ್ಯಮಂತ್ರಿ ಆಕಾಂಕ್ಷಿ ಎಂದು ಹೇಳಿದ್ದ ವಿಚಾರವಾಗಿ ಪ್ರತಿಕ್ರಿಯಿಸಿದರು.

ನಾಗಮಂಗಲದಲ್ಲಿ ಸರ್ಕಾರ ಗಣೇಶನ ಮೂರ್ತಿಯನ್ನು ಪೊಲೀಸ್ ಜೀಪಿನಲ್ಲಿ ತೆಗೆದುಕೊಂಡು ಹೋದ ಬಗ್ಗೆ ಮಾತನಾಡಿದ ದೇಶಪಾಂಡೆ, ಇದು ಸರಿಯಲ್ಲ. ಮೆರವಣಿಗೆ ನಡೆದಾಗ ಎಲ್ಲರೂ ಸಹಕರಿಸಬೇಕು. ಸಿಎಂ ಬದಲಾವಣೆ ಪ್ರಶ್ನೆಯೇ ಇಲ್ಲ ಎಂದ ಆರ್. ವಿ. ದೇಶಪಾಂಡೆ

ಗಣೇಶ ಎಲ್ಲರ ಪ್ರೀತಿಯ ದೇವರು. ಎಲ್ಲರಿಗೂ ಒಳ್ಳೇದು ಮಾಡೋ ದೇವರು. ಇಂಥ ಸಂದರ್ಭದಲ್ಲಿ ಈ ಘಟನೆ ನನ್ನ ಮನಸ್ಸಿಗೂ ನೋವಾಗಿದೆ. ಇಂಥ ಘಟನೆಗಳು ಆಗಬಾರದು. ಇದನ್ನ ನಾವೆಲ್ಲ ಖಂಡಿಸ ಬೇಕು. ಸರ್ಕಾರ ಇದರ ಬಗ್ಗೆ ಕ್ರಮ ಕೈಗೊಳ್ಳುತ್ತಿದೆ. ಸರ್ಕಾರ ಪಾರದರ್ಶಕವಾಗಿ ಕ್ರಮ ಕೈಗೊಳ್ಳುತ್ತದೆ ಎಂದರು. ಅಲ್ಲದೇ ಗೃಹ ಸಚಿವರು ಸಣ್ಣ ಘಟನೆ ಅಂತ ಹೇಳಿಲ್ಲ. ಮಾಧ್ಯಮದವರು ಸುಮ್ಮನೆ ತಪ್ಪು ತಿಳಿದುಕೊಂಡು ಬರೆಯುತ್ತೀರಿ ಎಂದರು. ಈ ವೇಳೆ ಶಾಸಕ ಭೀಮಣ್ಣ ನಾಯ್ಕ ಇದ್ದರು.

ಗಣೇಶನ ಮೂರ್ತಿ ಬಂಧಿಸಿದ್ದು ಸರಿಯಾದ ಕ್ರಮವಲ್ಲ
ಸರಕಾರ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತದೆ

ಹಿಂದಿ ಹೇರಿಕೆ ನಿಲ್ಲಿಸುವಂತೆ ಪ್ರತಿಭಟನೆ

ಹಾವೇರಿ: ಕರ್ನಾಟಕದಲ್ಲಿ ತ್ರಿಭಾಷಾ ಸೂತ್ರದ ಬದಲು ದ್ವಿಭಾಷಾ ಸೂತ್ರ ಜಾರಿಗೆ ಬರಬೇಕಾಗಿದೆ. ನಮ್ಮ ಶಾಲಾಪಠ್ಯಕ್ರಮಗಳಿಂದ ಹಿಂದಿ ಕಡ್ಡಾಯ ಕಲಿಕೆ ಕೊನೆಗೊಳ್ಳಬೇಕು ಎಂದು ಒತ್ತಾಯಿಸಿ ಕರವೇ ಸಂಘಟನೆಯವರು ಪ್ರತಿಭಟನೆ ನಡೆಸಿದರು.

ಶನಿವಾರ ನಗರದ ಸಂಗೂರ ಕರಿಯಪ್ಪ ವೃತ್ತದಲ್ಲಿ ಕರ್ನಾಟಕದಲ್ಲಿ ಹಿಂದೆ ಹೇರಿಕೆ ವಿರುದ್ಧ ಕರವೇ ನಾರಾಯಣ ಗೌಡ ಬಣದವರು ಪ್ರತಿಭಟನೆ ಮಾಡಿದರು. ನಂತರ ಮಾತನಾಡಿದ ಜಿಲ್ಲಾಧ್ಯಕ್ಷ ಗಿರೀಶ ಬಾರ್ಕಿ ಕೇಂದ್ರ ಸರ್ಕಾರ ಈ ಕೂಡಲೇ ಸಂವಿಧಾನಕ್ಕೆ ತಿದ್ದುಪಡಿ ತಂದು ಸಂವಿಧಾನದ 8ನೇ ಪರಿಚ್ಛೇದದಲ್ಲಿ ಉಲ್ಲೇಖಿಸಿರುವ ಎಲ್ಲ 23 ಭಾಷೆಗಳನ್ನೂ ಅಧಿಕೃತ, ಆಡಳಿತ ಭಾಷೆಗಳನ್ನಾಗಿ ಮಾಡಿ ಈ ದೇಶದ ಬಹುತ್ವವನ್ನು ಆ ಮೂಲಕ ಸಾರ್ವಭೌಮತೆಯನ್ನು ಕಾಪಾಡಬೇಕು. ಹಿಂದಿಗೆ ಅನೈತಿಕವಾಗಿ ವಿಶೇಷ ಮನ್ನಣೆ ನೀಡುವ ಸಂವಿಧಾನದ 343ರಿಂದ 351ನೇ ವಿಧಿಗಳನ್ನು ರದ್ದುಪಡಿಸಿ ಎಲ್ಲ ಭಾಷೆಗಳೂ ಒಕ್ಕೂಟದ ದೃಷ್ಟಿಯಲ್ಲಿ ಸಮಾನ ಎಂದು ಸಾರಬೇಕು ಎಂದು ಆಗ್ರಹಿಸಿದರು. ಕೇಂದ್ರ ಸರ್ಕಾರದ ಅಡಿಯಲ್ಲಿನ ಉದ್ಯಮಗಳು, ರೈಲ್ವೆ ಇಲಾಖೆ, ಬ್ಯಾಂಕಿಂಗ್ ವಲಯ ಹಾಗು ಸೇನಾ ನೇಮಕಾತಿಗಳ ಸಂದರ್ಭದಲ್ಲಿ ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿ ಮಾತ್ರ ಪರೀಕ್ಷೆಗಳನ್ನು ನಡೆಸುವ ಮೂಲಕ ಪ್ರಾದೇಶಿಕ ಭಾಷೆಗಳನ್ನು ಆಡುವ ಜನರ ಉದ್ಯೋಗದ ಹಕ್ಕನ್ನು ಕಿತ್ತುಕೊಳ್ಳಲಾಗುತ್ತಿದೆ. ಹಿಂದಿಯನ್ನು ಮಾತೃಭಾಷೆಯನ್ನಾಗಿ ಹೊಂದಿದವರು ಎಲ್ಲ ಅವಕಾಶಗಳನ್ನು ಆಕ್ರಮಣಕಾರಿಯಾಗಿ, ಅನೈತಿಕವಾಗಿ ಪಡೆದುಕೊಳ್ಳುತ್ತಿದ್ದರೆ, ಹಿಂದಿಯೇತರ ಭಾಷಿಕ ಯುವ ಸಮುದಾಯ ಉದ್ಯೋಗ ಮತ್ತು ಇತರ ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷರಾದ ಗಿರೀಶ ಬಾರ್ಕಿ ನೇತೃತ್ವದಲ್ಲಿ ಹೋರಾಟ ಕೈಗೊಳ್ಳಲಾಯಿತು. ರಾಜ್ಯ ಕಾರ್ಯದರ್ಶಿ ಕರಬಸಯ್ಯ ಬಸರಿಹಳ್ಳಿಮಠ, ಜಿಲ್ಲಾ ಮಹಿಳಾಧ್ಯಕ್ಷರಾದ ವಿಜಯಲಕ್ಷ್ಮಿ ಗುಡಮಿ, ಹಾವೇರಿ ತಾಲೂಕ ಅಧ್ಯಕ್ಷ ಹಾಲೇಶ್ ಹಾಲಣ್ಣನವರ್, ಹೀರೆಕೆರೂರ ತಾಲೂಕು ಅಧ್ಯಕ್ಷ ಮಾರುತಿ ಪೂಜಾರ, ಹಾನಗಲ್ ತಾಲೂಕು ಅಧ್ಯಕ್ಷರು ಸಿಕಂದರ ವಾಲಿಕಾರ ಬ್ಯಾಡಗಿ ತಾಲೂಕು ಅಧ್ಯಕ್ಷ ಬಿ.ಎಚ್. ಬಣಕಾರ, ಬಸವರಾಜ ಅರಳಿ, ಕಾಳಪ್ಪ ಬಡಿಗೇರ, ಸತ್ಯವತಿ ಕಡೇರ,ಲಕ್ಷ್ಮೇಶ ಮೇಲ್ಮೂರಿ, ಬಸಲಿಂಗಪ್ಪ ನರಗುಂದ, ಇಮಾಮಸಾಬ ತಿಮಾಪೂರ, ಬಸವರಾಜ ಕಡೆಮನಿ, ಕರವೇ ಕಾರ್ಯಕರ್ತರು ಹಾಜರಿದ್ದರು.

ಸಮಾಚಾರ ಸಣ್ಣದಲ್ಲ

ಶ್ರೀಶರಣಮ್ಮನವರ ಪುರಾಣ ಪ್ರಾರಂಭೋತ್ಸವ

ಗಜೇಂದ್ರಗಢ: ಸಮೀಪದ ಸೂಡಿ ಗ್ರಾಮದ ಲಿಂ. ಉಮಾಪತಿ ಶಿವಾಚಾರ್ಯರ 77ನೇ ಪುಣ್ಯ ಸ್ಮರಣೆ ಹಾಗೂ ಜಾತ್ರಾ ಮಹೋತ್ಸವ ನಿಮಿತ್ತ ಸಜ್ಜಲಗುಡ್ಡದ ಶ್ರೀಶರಣಮ್ಮನವರ ಪುರಾಣ ಪ್ರಾರಂಭೋತ್ಸವ ಸೆ. 15 ರಿಂದ ನಡೆಯಲಿದೆ. ಖ್ಯಾತ ಪ್ರವಚನಕಾರ ಶ್ರೀಸಿದ್ದೇಶ್ವರ ಶಾಸ್ತ್ರಿಗಳಿಂದ ಪ್ರವಚನ ನಡೆಯಲಿದ್ದು, ಕಾರ್ಯಕ್ರಮದಲ್ಲಿ ಕೊಪ್ಪಳದ ಗವಿಮಠದ ಶ್ರೀ ಶಿವಶಾಂತಲಿಂಗವೀರ ಸ್ವಾಮೀಜಿ, ಸೂಡಿ ಜುಕ್ತಿ ಹಿರೇಮಠದ, ಡಾ. ಕೊಟ್ಟೂರ ಬಸವೇಶ್ವರ ಶಿವಾಚಾರ್ಯರು ಸಾನಿಧ್ಯ ವಹಿಸಲಿದ್ದಾರೆ. ಅ. 9 ರಂದು ಮಹಾಮಂಗಲಗೊಳ್ಳಲಿದೆ ಎಂದು ಸಂಘಟಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ವಿಶ್ವಕರ್ಮ ಜಯಂತ್ಯೋತ್ಸವ

ಗಜೇಂದ್ರಗಢ: ರೋಣ ತಾಲೂಕಾ ವಿಶ್ವಕರ್ಮ ಸಮಾಜ ಹಾಗೂ ಕಾಳಿಕಾದೇವಿ ದೇವಸ್ಥಾನ ಸುಧಾರಣಾ ಸಮಿತಿ, ವಿಶ್ವಕರ್ಮ ಮಹಿಳಾ ಮಂಡಳ ವತಿಯಿಂದ ವಿಶ್ವಕರ್ಮ ಜಯಂತ್ಯೋತ್ಸವ ಹಾಗೂ ಸನ್ಮಾನ ಸಮಾರಂಭ ಸೆ. 17 ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿದೆ. ಸೆ. 17 ರಂದು ಬೆಳಗ್ಗೆ 9 ಗಂಟೆಗೆ ಶ್ರೀ ಮೌನೇಶ್ವರ ದೇವಸ್ಥಾನದಿಂದ ರೋಣ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಕಲ ಮಂಗಲ ವಾದ್ಯಗಳೊಂದಿಗೆ ಮೂರ್ತಿ ಮೆರವಣಿಗೆ ನಡೆಯಲಿದೆ. ಬಳಿಕ ನಡೆಯುವ ಧಾರ್ಮಿಕ ಸಭೆಯಲ್ಲಿ ಶಾಡಲಗೇರಿಯ ಶ್ರೀ ತೀರ್ಥೇಂದ್ರ ಸ್ವಾಮೀಜಿ, ಹೊಳೆಆಲೂರಿನ ಶ್ರೀಯಚ್ಚರೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು, ರಾಜ್ಯ ಖನಿಜ ಅಭಿವೃದ್ಧಿ ನಿಗಮ ಅಧ್ಯಕ್ಷ, ಶಾಸಕ ಜಿ.ಎಸ್. ಪಾಟೀಲ ಉದ್ಘಾಟಿಸುವರು, ವಿಶ್ವಕರ್ಮ ಸಮಾಜ ಅಧ್ಯಕ್ಷ ಕಾಳೇಶ ಪೋತದಾರ ಅಧ್ಯಕ್ಷತೆ ವಹಿಸುವರು, ಯೊಗೇಶ ಕಮ್ಮಾರ, ನಾಗರಾಜ ಕೆ, ಮಿಥುನ ಪಾಟೀಲ, ಗೀತಾ ಮಾಡಲಗೇರಿ, ಎ.ಎನ್. ಬಡಿಗೇರ, ಗಂಗಾಧರ ಬಡಿಗೇರ ಸೇರಿದಂತೆ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದು ವಿಶ್ವಕರ್ಮ ಸಮಾಜ ಅಧ್ಯಕ್ಷ ಕಾಳೇಶ ಪೋತದಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗುರುವಿನ ಋಣ ತೀರಿಸಲು ಸಾಧ್ಯವಿಲ್ಲ

ಧಾರವಾಡ: ಜಗತ್ತಿನಲ್ಲಿ ತಂದೆ, ತಾಯಿ, ಭೂಮಿ, ಗೋಮಾತೆ ಋಣದಂತೆ ಗುರುವಿನ ಋಣವನ್ನು ತೀರಿಸಲು ಸಾಧ್ಯವಿಲ್ಲ ಎಂದು ಅಮ್ಮಿನಬಾವಿ ಪಂಚಗೃಹ ಹಿರೇಮಠದ ಕಿರಿಯ ಶ್ರೀಗಳಾದ ಅಭಿನವ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಹೇಳಿದರು. ಧಾರವಾಡ ತಾಲೂಕಿನ ಅಮ್ಮಿನಬಾವಿಯ ಶ್ರೀ ಶಾಂತೇಶ್ವರ ಪ್ರೌಢಶಾಲೆಯಲ್ಲಿ ಇತ್ತೀಚೆಗೆ 2000-2001 ನೇ ಸಾಲಿನ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಸಮಾರಂಭ ಉದ್ಘಾಟಿಸಿ ಮಾತನಾಡುತ್ತಾ, ಎಲ್ಲೋ ಹುಟ್ಟಿ, ಎಲ್ಲೋ ಬೆಳೆದ ನಮಗೆ ಜೀವನದ ಬಗ್ಗೆ ಮಾರ್ಗದರ್ಶನ ಮಾಡುವ ಮೂಲಕ ಉತ್ತಮ ಪ್ರಜೆಗಳನ್ನಾಗಿ ರೂಪಿಸುವವನೇ ಗುರು. ಅಂತಹ ಗುರುಗಳನ್ನು ಜೀವನಪೂರ್ತಿ ಮರೆಯಲು ಸಾಧ್ಯವಿಲ್ಲ ಎಂದರು. ನಿವೃತ್ತ ಮುಖ್ಯಾಧ್ಯಾಪಕ ಎಸ್.ಬಿ.ಪವಾರ, ನಿವೃತ್ತ ಅಧ್ಯಾಪಕರುಗಳಾದ ವಿ.ಬಿ. ಕೆಂಚನಗೌಡ್ರ, ಆರ್. ಎಸ್. ಗುಲಗಂಜಿಕೊಪ್ಪ, ಪುಷ್ಪಾ ಬಾಗಲವಾಡಿ, ಚನ್ನವ್ವ ನೀರಲಕಟ್ಟಿ, ಸುಮನ್ ಬೋಂಗಾಳೆ, ಡಿ.ಎಸ್. ಪೂಜಾರ, ರಾಜು ಕಾಳಗಿ, ನಾಗರಾಜ ಅಮರಗೋಳ, ಮುಖ್ಯಾಧ್ಯಾಪಕ ಎಂ. ವಿ. ಅಂಗಡಿ ಮಾತನಾಡಿದರು. ವಿದ್ಯಾರ್ಥಿಗಳ ಪರವಾಗಿ ಎಸ್. ಎಂ. ಪ್ರಶಾಂತ ರಾಜಗುರು, ಡಾ. ಭಾರತಿ ಗಾಣಗೇರ, ತವನ, ಕಲ್ಮೇಶ ಹಂಪಣ್ಣವರ, ಪ್ರೇಮಾ ಹಿರೇಮಠ, ಗೀತಾ ಗದಗಿನ ತಮ್ಮ ನೆನಪುಗಳನ್ನು ಹಂಚಿಕೊಂಡರು. ಶಾಲಾ ಆಡಳಿತ ಮಂಡಳಿಯ ಎಂ.ಸಿ. ಹುಲ್ಲೂರ, ಮಾಳಪ್ಪ ಅಮರಶೆಟ್ಟಿ, ಸುನೀಲ ಗುಡಿ ಇದ್ದರು.

ಹಿಂದಿ ದಿವಸ್ ಆಚರಣೆ ಸಂಪನ್ನ

ಧಾರವಾಡ: ವಿಶ್ವ ಹಿಂದಿ ದಿವಸದ ಅಂಗವಾಗಿ ಧಾರವಾಡದ ದಕ್ಷಿಣ ಭಾರತ್ ಹಿಂದಿ ಪ್ರಚಾರ ಸಭಾ ಕರ್ನಾಟಕ ಧಾರವಾಡ ಪ್ರಾಂತದಲ್ಲಿ, ವಿಶ್ವ ಹಿಂದಿ ದಿವಸ ಸಮಾರೋಪ ಆಚರಿಸಲಾಯಿತು. 1949ರಲ್ಲಿ ಹಿಂದಿಗೆ ಪ್ರಾಥಮಿಕ ಭಾಷೆಯನ್ನಾಗಿ ಅಳವಡಿಸಲು ಕೇಂದ್ರ ಸರಕಾರ ಅನುಮೋದಿಸಿದ ಸೆ.14 ದಿನವನ್ನು, ವಿಶ್ವ ಹಿಂದಿ ದಿವಸವನ್ನಾಗಿ ವಿಶ್ವದೆಲ್ಲೆಡೆ ಆಚರಿಸಲಾಗುತ್ತದೆ. ಎಂದು ಐಐಟಿ ನಿವೃತ್ತ ನಿರ್ದೇಶಕರಾದ ಜೆಎಸ್ ಭಟ್ಟ ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಭಾರತ ಸರಕಾರ ಭಾರತದಲ್ಲಿ ಸಂಪೂರ್ಣವಾಗಿ ಹಿಂದಿ ಭಾಷೆಯನ್ನ ಅಳವಡಿಸುವ ಮೂಲಕ ರಾಷ್ಟ್ರೀಯ ಸಂಪರ್ಕ ಭಾಷೆಯಾಗಿ ಅಳವಡಿಸಿಕೊಂಡ ಸುದಿನವಿದು. ನಾವೆಲ್ಲರೂ ಹಿಂದಿ ಭಾಷೆ ಕಲಿಯುವ ಮೂಲಕ ರಾಷ್ಟ್ರೀಯ ನಿರ್ಮಾಣ ಕಾರ್ಯದಲ್ಲಿ ಕೊಡುಗೆ ನೀಡಬಹುದೆಂದು ತಿಳಿಸಿದರು. ಈ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ಮಾಜಿ ಮಹಾಪೌರರು ಈರೇಶ ಅಂಚಟಗೇರಿ, ರಾಘವೇಂದ್ರ ತವನಪ್ಪನವರ, ಜಗದೀಶ್ ಮಳಗಿ, ರಾಧಾಕೃಷ್ಣನ್, ಹರ್ಷ ಡಂಬಳ ಎಸ್‌ವಿ ಯಕ್ಕುಂಡಿಮಠ, ಜಿ ಜಿ ಹಿರೇಮಠ, ಉಮಾ ಚವ್ಹಾಣ ಕವಿತಾ ಹಾಗೂ ವಿದ್ಯಾರ್ಥಿಗಳು ಶಿಕ್ಷಕರು ಸಂಸ್ಥೆಯ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಪ್ರತಿಯೊಬ್ಬರೂ ದೇಶದ ಏಕತೆಯನ್ನು ಕಾಪಾಡಲಿ

ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ | ಬೃಹತ್ ಮಾನವ ಸರಪಳಿಯಲ್ಲಿ ಜಿಲ್ಲೆಯ 95 ಸಾವಿರ ಜನ ಭಾಗಿ | ಜಿಲ್ಲೆ ರಾಜ್ಯಕ್ಕೆ ಪ್ರಥಮ

ಧಾರವಾಡ: ಡಾ.ಬಿ.ಆರ್.ಅಂಬೇಡ್ಕರ್ ಅವರು ಬರೆದ ಸಂವಿಧಾನದಲ್ಲಿ ಎಲ್ಲರಿಗೂ ಸ್ವಾತಂತ್ರ್ಯ, ಸಮಾನತೆ ಹಾಗೂ ಭಾತೃತ್ವ ದೊರೆಯುವಂತೆ ಮಾಡಿದ್ದಾರೆ. ಪ್ರತಿಯೊಬ್ಬರೂ ದೇಶದ ಏಕತೆಯನ್ನು ಕಾಪಾಡಿಕೊಂಡು ಹೋಗಬೇಕು ಎಂದು ಕಾರ್ಮಿಕ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ ಲಾಡ್ ಹೇಳಿದರು.

ಕರ್ನಾಟಕ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಬೃಹತ್ ಮಾನವ ಸರಪಳಿ ನಿರ್ಮಾಣ ಕಾರ್ಯಕ್ರಮಕ್ಕೆ ನಗಾರಿ ಬಾರಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿ, ಪ್ರಜಾಪ್ರಭುತ್ವವು ಸ್ವಾತಂತ್ರ್ಯ, ಸಮಾನತೆ ಮತ್ತು ನ್ಯಾಯಕ್ಕಾಗಿ ನಮ್ಮ ಅತ್ಯುನ್ನತ ಆಕಾಂಕ್ಷೆಗಳನ್ನು ಸಾಕಾರಗೊಳಿಸುವ ಶಕ್ತಿಯುತ ಮತ್ತು ಕ್ರಿಯಾತ್ಮಕ ಶಕ್ತಿಯಾಗಿದೆ. ಭಾರತ ದೇಶವು ಅತ್ಯಂತ ಭವ್ಯ, ಶಕ್ತಿಶಾಲಿ ಮತ್ತು ಯಶಸ್ವಿ ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಿದ ದೇಶವಾಗಿದೆ ಎಂದು ಸಚಿವ ಸಂತೋಷ ಲಾಡ ಅವರು ತಿಳಿಸಿದರು.

ಜಿಲ್ಲಾಧಿಕಾರಿ ದಿವ್ಯಪ್ರಭು ಪ್ರಾಸ್ತಾವಿಕವಾಗಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಇಡೀ ರಾಜ್ಯದಲ್ಲಿ ಅತಿಹೆಚ್ಚು ನೋಂದಣಿ ಮಾಡಿದ್ದ ಧಾರವಾಡ ಜಿಲ್ಲೆಯು ಪ್ರಥಮ ಸ್ಥಾನ ಪಡೆದಿದ್ದರಿಂದ ಸಂಭ್ರಮಿಸಲಾಯಿತು.

ಕಾರ್ಯಕ್ರಮದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ, ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್, ಮಹರ್ಷಿ ವಾಲ್ಮೀಕಿ, ಡಾ.ಬಾಬು ಜಗಜೀವನ್ ರಾಂ ಅವರ ಭಾವಚಿತ್ರಗಳಿಗೆ ಗಣ್ಯರು ಪುಷ್ಪ ನಮನ ಅರ್ಪಿಸಿದರು. ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಅವರು ಸಂವಿಧಾನ ಪೀಠಿಕೆಯನ್ನು ಬೋಧಿಸಿದರು.

> ಇಡೀ ರಾಜ್ಯದಲ್ಲೇ ಧಾರವಾಡ ಜಿಲ್ಲೆಯು ಮೊದಲ ಸ್ಥಾನವನ್ನು ಪಡೆದುಕೊಂಡಿದೆ. ಈ ಬೃಹತ್ ಮಾನವ ಸರಪಳಿ ನಿರ್ಮಾಣದ ಕಾರ್ಯಕ್ರಮದಲ್ಲಿ ಭಾಗಿಯಾಗುವ ಮೂಲಕ ಸಾಕ್ಷಿಯಾದ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುವೆ.
> –ಸಂತೋಷ ಲಾಡ್
> ಸಚಿವ

ಬೀದರನಿಂದ ಚಾಮರಾಜನಗರದ ವರೆಗೆ ರಾಜ್ಯದ 31 ಜಿಲ್ಲೆಗಳನ್ನು ಒಳಗೊಂಡಿರುವ ಅತಿ ಉದ್ದದ ಮಾನವ ಸರಪಳಿಯನ್ನು ಮಾಡಲಾಯಿತು ತಾಲೂಕಿನ ತೇಗೂರದಿಂದ ಮಾವಿನಕೊಪ್ಪ ಗ್ರಾಮದ ವರೆಗೆ ಅಂದಾಜು 55 ಕಿ.ಮಿ ಉದ್ದದ ಮಾನವ ಸರಪಳಿಯನ್ನು ನಿರ್ಮಿಸಲಾಗಿತ್ತು.

ಜುಬ್ಲಿ ವೃತ್ತದಿಂದ ಕರ್ನಾಟಕ ಕಲಾ ಮಹಾವಿದ್ಯಾಲಯದ ಮೈದಾನದವರೆಗೆ ನಡೆದ ಮೆರವಣಿಗೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳ ಹಾಗೂ ವಿವಿಧ ಶಾಲೆಗಳ ವಿದ್ಯಾರ್ಥಿಗಳು ಕಿತ್ತೂರು ರಾಣಿ ಚೆನ್ನಮ್ಮ, ಒನಕೆ ಓಬವ್ವ, ಬೆಳವಡಿ ಮಲ್ಲಮ್ಮ, ತಾಯಿ ಭುವನೇಶ್ವರಿ, ಕನಕದಾಸರು, ಭಗತ್ ಸಿಂಗ್ ಸೇರಿದಂತೆ ವಿವಿಧ ಮಹಾನ ಪುರುಷರ ವೇಷಭೂಷಣಗಳಲ್ಲಿ ಮೆರಗು ತಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರು ಹಾಗೂ ಶಾಸಕರಾದ ಪ್ರಸಾದ ಅಬ್ಬಯ್ಯ, ಶಾಸಕರಾದ ಎನ್. ಎಚ್.ಕೋನರೆಡ್ಡಿ, ಕರ್ನಾಟಕ ಬಾಲವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ, ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶಾಕೀರ್ ಸನದಿ, ಮಾಜಿ ಸಂಸದರಾದ ಐ.ಜಿ.ಸನದಿ, ಹುಬ್ಬಳ್ಳಿ ಧಾರವಾಡ ಮಹಾನಗರದ ಪೊಲೀಸ್ ಆಯುಕ್ತರಾದ ಎನ್ ಶಶಿಕುಮಾರ್, ಎಸಿ ಶಾಲಂ ಹುಸೇನ್, ಮಹಾನಗರ ಪಾಲಿಕೆಯ ಆಯುಕ್ತ ಡಾ. ಈಶ್ವರ ಉಳ್ಳಾಗಡ್ಡಿ ಉಪಸ್ಥಿತರಿದ್ದರು. ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಸ್ವಾಗತಿಸಿದರು.

ಪೇಡಾ ನಗರಿಯಲ್ಲಿ ಕೃಷಿ ಮೇಳ

ಧಾರವಾಡ: ಪೇಡಾನಗರಿಯಲ್ಲಿ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಹವಾಮಾನ ವೈಪರೀತ್ಯ ನಿರ್ವಹಣೆಗೆ ಕೃಷಿ ತಾಂತ್ರಿಕತೆಗಳು ಎಂಬ ಶೀರ್ಷಿಕೆಯಡಿಯಲ್ಲಿ ಸೆ.21 ರಿಂದ 24 ರವರೆಗೆ ಕೃಷಿ ಮೇಳ ಅನ್ನದಾತರ ಹಬ್ಬ ನಡೆಯಲಿದೆ.

ಕುಲಪತಿ ಡಾ.ಪಿ.ಎಲ್.ಪಾಟೀಲ ಕೃಷಿ ವಿವಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಸೆ. 22 ರಂದು ಬೆಳಗ್ಗೆ 10-30 ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು.

ಉಪಮುಖ್ಯಮಂತ್ರಿಗಳಾದ ಸಚಿವ ಡಿ.ಕೆ. ಶಿವಕುಮಾರ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹಾಗೂ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ, ಕರ್ನಾಟಕ ವಿಧಾನ ಪರಿಷತ್ ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹ್ಮದ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ ಎಸ್. ಲಾಡ್ ಉಪಸ್ಥಿತರಿರುವರು ಎಂದರು.

ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅವರು ಕಾರ್ಯಕ್ರಮದಲ್ಲಿ ಕೃಷಿ ಪ್ರಕಟಣೆಗಳ ಬಿಡುಗಡೆ ಮಾಡಲಿದ್ದು ಸಚಿವರುಗಳಾದ ಎಚ್.ಕೆ.ಪಾಟೀಲ, ಎಮ್.ಬಿ.ಪಾಟೀಲ, ಸತೀಶ ಜಾರಕಿಹೊಳಿ, ಶಿವಾನಂದ ಪಾಟೀಲ, ಆರ್.ಬಿ.ತಿಮ್ಮಾಪುರ, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹಾಗೂ ಮಂಕಾಳ್ ವೈದ್ಯ,ಶಾಸಕರು, ನಿಗಮ ಮಂಡಳಿ ಅಧ್ಯಕ್ಷರು ಪಾಲ್ಗೊಳ್ಳಲಿರುವರು.

ನಾಲ್ಕು ದಿನಗಳ ಕಾಲ ಆಯೋಜಿಸಿರುವ ಕೃಷಿ ಮೇಳದಲ್ಲಿ ಅಲ್ಪ ಸಮಯದಲ್ಲಿ ಹೆಚ್ಚಿನ ಸಂಖ್ಯೆಯ ರೈತರಿಗೆ ಕೃಷಿ ತಂತ್ರಜ್ಞಾನಗಳನ್ನು ತಲುಪಿಸುವುದು ಈ ಮೇಳದ ಮುಖ್ಯ ಉದ್ದೇಶವಾಗಿದ್ದು, ಈ ಮೇಳದಲ್ಲಿ ಸುಮಾರು 14-16 ಲಕ್ಷ ರೈತರು ಭಾಗವಹಿಸುವ ನಿರೀಕ್ಷೆಯಿದೆ. ಮೊದಲಬಾರಿಗೆ ಕ್ಯೂಆರ್ ಕೋಡ್ ಮೂಲಕ ನೋಂದಣಿ ಮಾಡುವ ವ್ಯವಸ್ಥೆಯನ್ನು ಈ ಕೃಷಿಮೇಳದಲ್ಲಿ ಕಲ್ಪಿಸಲಾಗಿದೆ ಎಂದರು

ಹವಾಮಾನ ವೈಪರೀತ್ಯ ನಿರ್ವಹಣೆಯಲ್ಲಿ ಕೈಗೊಳ್ಳಬೇಕಾದ ಬೆಳೆ ಪದ್ಧತಿಗಳು ಹಾಗೂ ಕೃಷಿ ತಾಂತ್ರಿಕತೆಗಳು, ಸಮಗ್ರ ಬೆಳೆ ನಿರ್ವಹಣೆ, ಜೈವಿಕ ಗೊಬ್ಬರ ಹಾಗೂ ಪೀಡೆನಾಶಕಗಳು ಎಣ್ಣೆಕಾಳು, ದ್ವಿದಳ ಧಾನ್ಯಗಳು ಮತ್ತು ಹಿಂಗಾರು ಬೆಳೆಗಳ ತಾಂತ್ರಿಕತೆಗಳು, ಮಳೆ ನೀರು ಕೊಯ್ಲು ಮತ್ತು ಅಂತರ್ಜಲ ಮರುಪೂರಣ, ನೈಸರ್ಗಿಕ ಕೃಷಿ, ಸಾವಯವ ಕೃಷಿ ಮತ್ತು ಮಣ್ಣಿನ ಫಲವತ್ತತೆ ಸಂರಕ್ಷಣೆ, ಹೈಟೆಕ್ ತೋಟಗಾರಿಕೆ. ಹಣ್ಣು-ಹೂವಿನ ಪ್ರದರ್ಶನ ಮತ್ತು ಕೀಟ ಪ್ರಪಂಚ, ಸುಧಾರಿತ ಕೃಷಿ ಯಂತ್ರೋಪಕರಣ ಹಾಗೂ ಕಿಸಾನ್ ಡ್ರೋನ್ ಪ್ರದರ್ಶನ, ಕೃಷಿ ತಜ್ಞರೊಂದಿಗೆ ಸಮಾಲೋಚನೆ, ರೈತರ ಆವಿಷ್ಕಾರಗಳು, ವಿಶೇಷ ಸಾಧನೆಗೈದ ರೈತರೊಂದಿಗೆ ಸಂವಾದ, ಕೃಷಿ ಅರಣ್ಯ, ಮೇವಿನ ಬೆಳೆಗಳ ತಾಂತ್ರಿಕತೆ, ಪಶು ಸಂಗೋಪನೆ ಹಾಗೂ ಜಾನುವಾರುಗಳ ಪ್ರದರ್ಶನ, ಮೌಲ್ಯವರ್ಧನೆ, ದ್ವಿತೀಯ ಕೃಷಿ ಮತ್ತು ಸಮುದಾಯ ವಿಜ್ಞಾನ ತಾಂತ್ರಿಕತೆಗಳು ಆಕರ್ಷಣೆಗಳಾಗಿವೆ ಎಂದರು.

ಗೋಷ್ಠಿಯಲ್ಲಿ ವಿಸ್ತರಣಾ ನಿರ್ದೇಶಕ ಹಾಗೂ ಕೃಷಿ ಮೇಳದ ಅಧ್ಯಕ್ಷ ಡಾ. ಎಸ್.ಎಸ್. ಅಂಗಡಿ, ಕೃಷಿ ವಿ.ವಿ.ವಿವಿಧ ವಿಭಾಗದ ಮುಖ್ಯಸ್ಥರು ಉಪಸ್ಥಿತರಿದ್ದರು.

ಭವಿಷ್ಯ ರೂಪಿಸಲು ತಂತ್ರಜ್ಞಾನ ಬಳಸಿಕೊಳ್ಳಿ

ಧಾರವಾಡ: ಪ್ರಸ್ತುತ ಕಾಲದಲ್ಲಿ ತಂತ್ರಜ್ಞಾನದ ಬದಲಾಗುತ್ತಿರುವ ಮುಖ ಮತ್ತು ಎಂಜಿನಿಯರಗಳು ತಮ್ಮ ಜ್ಞಾನ ಮತ್ತು ಕೌಶಲಗಳನ್ನು ನಿರಂತರವಾಗಿ ನವೀಕರಿಸುವ ಅಗತ್ಯವಾಗಿದೆ ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ಕುಲಪತಿ ಡಾ.ಎಸ್ ವಿದ್ಯಾಶಂಕರ ಹೇಳಿದರು.

ಧಾರವಾಡದ ಎಸಡಿಎಂ ಎಂಜಿನಿಯರಿಂಗ್ ಕಾಲೇಜಿನಲ್ಲಿ 14 ನೇ ಘಟಿಕೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಅವರು, ನಿರಂತರ ಕಲಿಕೆಯಿಂದ ಅವರ ಜ್ಞಾನ ವೃದಿಸುತ್ತದೆ ಮತ್ತು ಉಪಯುಕ್ತವಾಗಿರುತ್ತದೆ ಎಂದು ಅವರು ಹೇಳಿದರು. ವಿಟಿಯು ಮುಂದಾಳತ್ವವನ್ನು ವಹಿಸಿದೆ ಮತ್ತು ಎಸ್ಡಿಎಂಸಿಇಟಿಯಂತಹ ಕಾಲೇಜುಗಳು ಈ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಹೇಳಿದರು.

ಎಸ್‌ಡಿಎಂ ಈ ಸೊಸೈಟಿ ಉಪಾಧ್ಯಕ್ಷ ಡಿ. ಸುರೇಂದ್ರ ಕುಮಾರ ಪದವಿ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಿ ಮಾತನಾಡಿದರು.

ಪ್ರಾಂಶುಪಾಲ ಡಾ.ರಮೇಶ ಎಲ್. ಚಕ್ರಸಾಲಿ ಸ್ವಾಗತಿಸಿ, ಕ್ಯಾಂಪಸ್ನಲ್ಲಿನ ಮೂಲಸೌಕರ್ಯ ಅಭಿವೃದ್ಧಿಯ ಜೊತೆಗೆ ಶೈಕ್ಷಣಿಕ, ಕ್ರೀಡೆ ಮತ್ತು ಇತರ ಕ್ಷೇತ್ರಗಳಲ್ಲಿ ಸಂಸ್ಥೆಯ ಸಾಧನೆಗಳನ್ನು ಎತ್ತಿ ತೋರಿಸುವ ಕಾಲೇಜು ವರದಿಯನ್ನು ಮಂಡಿಸಿದರು.

ಕಾಲೇಜಿನ ಅತ್ಯುತ್ತಮ ಉದ್ಯೋಗ ದಾಖಲೆ ಕುರಿತು ಪ್ರಸ್ತಾಪಿಸಿದರು. ಕ್ಯಾಂಪಸ್‌ನಲ್ಲಿ ನಡೆಯುತ್ತಿರುವ ಸುಮಾರು ರು. 5 ಕೋಟಿ ಮೌಲ್ಯದ ಪ್ರಾಯೋಜಿತ ಪ್ರಾಜೆಕ್ಟಗಳ ಬಗ್ಗೆ ಪ್ರಸ್ತಾಪಿಸಿದರು ಮತ್ತು ಕಾಲೇಜು ಅನೇಕ ಏಜೆನ್ಸಿಗಳಿಂದ ಅತ್ಯುತ್ತಮ ಶ್ರೇಯಾಂಕಗಳನ್ನು ಪಡೆದಿದೆ ಎಂದು ಹೈಲೈಟ್ ಮಾಡಿದರು.

ಜೀವಂಧರಕುಮಾರ ಕಾರ್ಯದರ್ಶಿ, ಎಸಡಿಎಂ ಈ ಸೊಸೈಟಿ, ಧಾರವಾಡ, ಆಡಳಿತ ಮಂಡಳಿ ಸದಸ್ಯರು, ಶೈಕ್ಷಣಿಕ ಮಂಡಳಿ ಸದಸ್ಯರು, ಡೀನಗಳು ಮತ್ತು ವಿಭಾಗದ ಮುಖ್ಯಸ್ಥರು, ಅಧ್ಯಾಪಕರು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ಡೀನ್, ಶೈಕ್ಷಣಿಕ ಕಾರ್ಯಕ್ರಮ ಡಾ.ವಿಜಯ ಸಿ ಅವರಿಂದ ಹೊರಹೋಗುವ ವಿದ್ಯಾರ್ಥಿಗಳಿಗೆ ಪ್ರಮಾಣ ವಚನ ಬೋಧಿಸಲಾಯಿತು. ಪ್ರೊ.ಇಂದಿರಾ ಉಮರ್ಜಿ ಮುಖ್ಯ ಅತಿಥಿಗಳನ್ನು ಸಭೆಗೆ ಪರಿಚಯಿಸಿದರು. ಪ್ರೊ.ವಿ.ಕೆ.ಪಾರ್ವತಿ, ಸಾರ್ವಜನಿಕ ಸಂಪರ್ಕ ಅಧಿಕಾರಿ ವಂದಿಸಿದರು. ಪ್ರೊ. ವಿ.ಕೆ.ಪಾರ್ವತಿ, ಪ್ರೊ. ಇಂದಿರಾ ಉಮರ್ಜಿ ಕಾರ್ಯಕ್ರಮ ನಿರೂಪಿಸಿದರು.

ಸಂಭ್ರಮ ಕೊಟ್ಟ ಕಲಾವಿದರಿಗಿಲ್ಲ ಗೌರವ ಧನ

ಸರಕಾರದತ್ತ ಕೈ ತೋರಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಕಾರ್ಯಕ್ರಮ ಕೊಟ್ಟವರ ಕೈ ಬರಿದು

ಮಾಲಿಂಗರಾಯ ಪೂಜಾರ

ಗದಗ: ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿ 50 ವರ್ಷಗಳು ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಕಳೆದ ವರ್ಷ ಅಂದರೆ 2023 ನ. 3 ರಂದು ನಡೆದ ಕರ್ನಾಟಕ ಸಂಭ್ರಮ 50 ಕಾರ್ಯಕ್ರಮದಿಂದ ಮತ್ತೆ ಇತಿಹಾಸ ಮರುಸೃಷ್ಟಿ ಆಯಿತು ಅದ್ದೂರಿತನ ಸುವರ್ಣ ಅಕ್ಷರಗಳಲ್ಲಿ ಬರೆದಿಡುವಂತೆ ಮಾಡಲಾಯಿತು. ಆದರೆ ಕಾರ್ಯಕ್ರಮದಲ್ಲಿ ಕಲೆಯನ್ನು ವ್ಯಕ್ತಪಡಿಸಿದ ಕಲಾವಿದರ ಸಂಭ್ರಮವನ್ನು ಕಿತ್ತುಕೊಂಡಿದೆ.

ಕರ್ನಾಟಕ ಸಂಭ್ರಮ 50 ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಹಯೋಗದಲ್ಲಿ ನಡೆದ ಈ ಕಾರ್ಯಕ್ರಮವನ್ನು ರಾಜ್ಯವೇ ಗದಗ ಜಿಲ್ಲೆಯತ್ತ ನೋಡುವಂತೆ ಮಾಡಲಾಗಿತ್ತು ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವ ಶಿವರಾಜ ತಂಗಡಗಿ ಸೇರಿ ಸರಕಾರದ ಗಣ್ಯರು ಸೇರಿ ಮುಂತಾದವರು ಉಪಸ್ಥಿತರಿದ್ದರು. ಈ ಎಲ್ಲಾ ಅದ್ದೂರಿತನಕ್ಕೆ ಕಾರಣಕರ್ತರು ಅಂದರೆ ಕಲಾವಿದರು ಎನ್ನುವದು ತಪ್ಪೇನಿಲ್ಲ ಇಂತಹ ಕಲಾವಿದರಿಗೆ ಒಂದು ವರ್ಷ ಆಗುತ್ತಾ ಬಂದರೂ ಇನ್ನೂ ಗೌರವಧನ ಸಿಗದೇ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಕಲಾವಿದರು ಮನವಿ ಸಲ್ಲಿಸಿದರು ಇದಕ್ಕೆ ಸಂಬಂಧಿಸಿದ ಇಲಾಖೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಸರ್ಕಾರದಿಂದ ಅನುದಾನ ಬಿಡುಗಡೆ ಆಗಿಲ್ಲ ಇನ್ನೂ ಸ್ವಲ್ಪ ದಿನದಲ್ಲಿ ಬರುತ್ತದೆ ಎಂದು ಹೇಳುತ್ತಾ ದಿನ ಕಳೆಯುತ್ತಾ ಹೋಗುತ್ತಿದ್ದಾರೆ.

ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಹಲವು ಕಾರ್ಯಕ್ರಮದಲ್ಲಿ ಭಾಷಣ ಮಾಡುವಾಗ ದೊಡ್ಡ ದೊಡ್ಡ ಮಾತುಗಳು ಆಡುತ್ತಾರೆ ಕನ್ನಡ ಸಾಹಿತ್ಯ ಮತ್ತು ಜಾನಪದದ ಜೀವಂತಿಕೆಗೆ ಕಲಾವಿದರೆ ಜೀವಾಳವಾಗಿದ್ದಾರೆ ಎನ್ನುತ್ತಾರೆ ಆದರೆ ಕೃತಿಯಲ್ಲಿ ಇಲ್ಲ, ರಾಜಕಾರಣಿಗಳು, ಅಧಿಕಾರಿಗಳು ವಿವಿಧ ಭತ್ಯೆಗಳ ಹೆಸರಿನಲ್ಲಿ ದೊಡ್ಡ ಮೊತ್ತದ ಹಣವನ್ನು ಪಡೆಯುತ್ತಾರೆ ಆದರೆ ಕಲಾವಿದರಿಗೆ ಗೌರವಧನ ನೀಡುವ ವಿಷಯ ಬಂದಾಗ ಹಣದ ಕೊರತೆ ಇನ್ನೂ ಸರಕಾರದಿಂದ ಅನುದಾನ ಬಂದಿಲ್ಲ ಎಂಬ ಇತ್ಯಾದಿ ಸಬೂಬು ಹೇಳುತ್ತಾ ಬರುವುದು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಕಲಾವಿದರಿಗೆ ಮಾಡುವ ಅಗೌರವವಾಗಿದೆ.

ಒಂದು ಕಲಾವಿದರ ತಂಡ ಎಂದರೆ ಆರೇಳು ಜನರ ಮೇಲೆ ಇರುತ್ತಾರೆ ಇಲಾಖೆ ನೀಡುವ ಗೌರವ ಧನ ಬಹಳ ಕಡಿಮೆ ಆದರೆ ಅದನ್ನು ನೀಡಲು ಸಮೀಪ ಒಂದು ವರ್ಷ ತೆಗೆದು ಕೊಳ್ಳುತ್ತಿರುವದರಿಂದ ತಂಡದ ಮುಂದಾಳತ್ವ ವಹಿಸಿಕೊಂಡಿರುವವರು ಸಾಲ ಶೂಲ ಮಾಡಿ ಉಳಿದ ಕಲಾವಿದರಿಗೆ ಹಣ ಕೊಡಬೇಕಾದ ಅನಿವಾರ್ಯತೆ ಇದೆ ಎಂದು ತಮ್ಮ ನೋವನ್ನು ತೋಡಿಕೊಳ್ಳುತ್ತಿದ್ದಾರೆ.

ಕಡತ ಚಿತ್ರ.

ಈ ಕರ್ನಾಟಕ ಸಂಭ್ರಮ 50 ರ ಕಾರ್ಯಕ್ರಮ ಅಲ್ಲದೆ ಗದಗ ನಗರದ ಪ್ರಮುಖ ಸ್ಥಳದಲ್ಲಿ ಮಾಡಲಾಗಿದ್ದ ಉದಯರಾಗ ಹಾಗೂ ಸಂಧ್ಯಾರಾಗ ಕಾರ್ಯಕ್ರಮದಲ್ಲಿ ಸುಮಾರು ಅಂದಾಜು 80ಕ್ಕೂ ಸ್ಥಳೀಯ ಕಲಾವಿದರಿಗೂ ಸಹ ಇನ್ನೂ ಗೌರವಧನ ಬಂದಿಲ್ಲ. ಅನುದಾನಕ್ಕಾಗಿ ಗದಗ ಜಿಲ್ಲಾಧಿಕಾರಿಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಪತ್ರ ಬರೆದರೆ ಅವರು ಇಲಾಖೆಯಲ್ಲಿ ಈ ಯೋಜನೆ ಇಲ್ಲ ಎಂದು ಹಿಂಬರಹ ಬರೆದು ಉತ್ತರ ನೀಡಿದ್ದಾರೆ ಎನ್ನುವ ಮಾಹಿತಿ ಸಿಕ್ಕಿದೆ. ಇನ್ನೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಾಯೋಜಿತ ಕಾರ್ಯಕ್ರಮದಲ್ಲಿ ಭಾಗವಹಿಸಿದ ಕಲೆಯನ್ನು ವ್ಯಕ್ತಪಡಿಸಿದ ಕಲಾವಿದರಿಗೂ ಸಹ ಇನ್ನೂ ಗೌರವಧನ ಬಂದಿಲ್ಲ. ಒಟ್ಟಾರೆ ಸರ್ಕಾರದಲ್ಲಿ ಕಲಾವಿದರಿಗೆ ನೀಡಲು ಹಣ ಇಲ್ಲವೇ ಎನ್ನುವ ಅನುಮಾನಗಳು ಮೇಲ್ನೋಟಕ್ಕೆ ಕಾಣುತ್ತಿದೆ.

ಇನ್ನೂ ಕಲಾವಿದರಿಗೆ ಗೌರವಧನ ನೀಡಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಅನುದಾನ ಬಿಡುಗಡೆಯಾಗಿಲ್ಲ ಇದಕ್ಕೆ ಕಾರಣ ಅಂದಿನ ಕಾರ್ಯಕ್ರಮದ ಯೋಜನೆ ಯೋಜನೆಯ ನೀಲನಕ್ಷೆ ಇಲ್ಲದೆ ಇರುವದರಿಂದ ಸರಿ ಸುಮಾರು 120 ಕ್ಕೂ ಹೆಚ್ಚು ಕಲಾವಿದರಿಗೆ ಗೌರವ ಧನ ನೀಡಿಲ್ಲ ಆದರೆ ರಾಜ್ಯ, ಅಂತರರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ದೊಡ್ಡ ದೊಡ್ಡ ಕಲಾವಿದರು ಎನಿಸಿಕೊಂಡವರಿಗೆ ಕಾರ್ಯಕ್ರಮದ ಮುಂಗಡ ಹಣ ನೀಡಲಾಗಿದೆ ಆದರೆ ಸ್ಥಳೀಯ ಕಲಾವಿದರಿಗೆ ಯಾಕೆ ಇಷ್ಟು ತಡ ಕಲಾವಿದರು ಎಂದರೆ ಎಲ್ಲರೂ ಒಂದೇ ಬೇದಭಾವ ಏಕೆ ಎಂದು ಕಲಾವಿದರು ಪ್ರಶ್ನಿಸುತ್ತಿದ್ದಾರೆ.

> ಜಿಲ್ಲಾಧಿಕಾರಿಗಳಿಗೆ ಮನವಿ ನೀಡಲಾಗಿದೆ. ಸರಕಾರದಿಂದ ಬಜೆಟ್ ಬಂದಿಲ್ಲ ಬಂದ ನಂತರ ಗೌರವಧನ ನೀಡಲಾಗುತ್ತದೆ ಎನ್ನುತ್ತಾರೆ ಆದರೆ ವೃತ್ತಿ ಕಲಾವಿದರು ಕಲೆಯನ್ನೇ ಆಧಾರವಾಗಿ ಇಟ್ಟುಕೊಂಡು ಜೀವನ ನಡೆಸಲಾಗುತ್ತದೆ ಹೀಗೆ ಮಾಡಿದರೆ ಬಹಳಷ್ಟು ಕಷ್ಟವಾಗುತ್ತದೆ.
> –ವೀರಣ್ಣ ಚೆನ್ನಪ್ಪ ಅಂಗಡಿ, ಜನಪದ ಕಲಾವಿದರು.

> ಸರಕಾರದಿಂದ ಅನುದಾನ ಬಿಡುಗಡೆಗೆ ಆದ ಕೂಡಲೇ ಕಲಾವಿದರ ಖಾತೆಗೆ ನೇರವಾಗಿ ಹಾಕಲಾಗುವುದು.
> –ವೀರಯ್ಯಸ್ವಾಮಿ ಬಿ, ಸಹಾಯಕ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸ್ವಚ್ಛತಾ ಆಂದೋಲನಕ್ಕೆ ಬಡಿಗೇರ್ ಕರೆ

ಗಜೇಂದ್ರಗಢ: ತಾಲೂಕಿನಾದ್ಯಂತ ಸೆ. 17 ರಿಂದ ಅಕ್ಟೋಬರ್ 2 ರವರೆಗೆ ಸ್ವಚ್ಛತೆಯೇ ಸೇವಾ-2024 ಆಂದೋಲನ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಬಸವರಾಜ ಬಡಿಗೇರ್ ತಿಳಿಸಿದರು.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಸ್ವಚ್ಛತಾ ಆಂದೋಲನಕ್ಕೆ ಸಂಬಂಧಿಸಿದಂತೆ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಎಲ್ಲಾ ಶಾಲಾ-ಕಾಲೇಜುಗಳಲ್ಲಿ ಜಾಥಾ, ಪ್ರತಿಜ್ಞಾ ವಿಧಿ, ಸಸಿ ನೆಡುವುದು ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಅ. 2ರವರೆಗೆ ಪ್ರತಿ ದಿನ ಒಂದೊಂದು ವಿಭಿನ್ನ ರೀತಿಯಲ್ಲಿ ಹಮ್ಮಿಕೊಳ್ಳಲಾಗುತ್ತಿದೆ. ಸೆ.17 ರಂದು ಸ್ವಚ್ಛತೆಯೇ ಸೇವಾ ಆಂದೋಲನಕ್ಕೆ ಚಾಲನೆ ನೀಡಲಾಗುತ್ತಿದೆ. ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ, ಆರ್.ಡ್ಬ್ಲ್ಯುಎಸ್ ಕಟ್ಟಡಗಳು, ಶೌಚಾಲಯಗಳು, ಆವರಣದಲ್ಲಿ ಶ್ರಮದಾನ ಮಾಡುವ ಮೂಲಕ ಸಂಪರ್ಣ ಸ್ವಚ್ಛಗೊಳಿಸುವ ಯೋಜನೆ ರೂಪಿಸಲಾಗಿದೆ.

ಸೆ.18 ರಿಂದ 20ರವರೆಗೆ ಸ್ವಚ್ಛತಾ ಅಭಿಯಾನ ಮೂಲಕ ಹಳ್ಳಿಗಳಲ್ಲಿ ಸ್ವಚ್ಚತೆ ಕಾಪಾಡುವುದು, ಶ್ರಮದಾನ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು, ಗ್ರಾಮದ ಪ್ರಮುಖ ಬೀದಿ, ಶಾಲೆ ಆವರಣ, ಆಟದ ಮೈದಾನ, ಕಲ್ಯಾಣಿ, ಧಾರ್ಮಿಕ ಕೇಂದ್ರಗಳ ಸಮೀಪ ಸ್ವಚ್ಛತೆ ಶ್ರಮದಾನ, ಗ್ರಾಮದ ಅತ್ಯಂತ ಹೆಚ್ಚು ತ್ಯಾಜ್ಯ ಸಂಗ್ರಹವಾಗುವ ಪ್ರದೇಶ, ಅಧಿಕ ಅನರ್ಮಲ್ಯ ಇರುವ ಸ್ಥಳ/ಬೀದಿ ಹಾಗೂ ಗಲೀಜು ಇರುವ ಸ್ಥಳಗಳನ್ನು ಗುರತಿಸಿ ಸ್ವಚ್ಛಗೊಳಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸೆ.21 ರಿಂದ 22ರವರೆಗೆ ಮೂಲದಲ್ಲಿಯೇ ಹಸಿ ಮತ್ತು ಒಣ ಕಸ ವಿಂಗಡಣೆ ಮಾಡುವ ಕುರಿತು ಸಮುದಾಯದಲ್ಲಿ ಜಾಗೃತಿ ಮೂಡಿಸುವುದು ಮತ್ತು ಶೌಚಾಲಯ ಬಳಕೆ ಕುರಿತು ಪ್ರಭಾತ್ ಸೇರಿ ಚಟುವಟಿಕೆಗಳನ್ನು ಆಯೋಜಿಸುವುದು, ಮನೆ-ಮನೆ ಬೇಟಿ ಮಾಡಿ ಮಾಹಿತಿ ನೀಡುವುದು. ಸ್ವಚ್ಛ ವಾಹಿನಿಗಳ ಮೂಲಕ ಪ್ರಚಾರ, ಗುಂಪುಸಭೆ ನಡೆಸಿ ಸಮುದಯಕ್ಕೆ ಮಾಹಿತಿ ನೀಡುವುದು, ಡಂಗೂರ ಸಾರಲಾಗುವುದು.

ಸೆ.23 ರಿಂದ 24ರವರೆಗೆ ಸ್ವಚ್ಛ ಸಂಕೀರ್ಣ ಘಟಕ (ತ್ಯಾಜ್ಯ ಸಂಗ್ರಹಣೆ)ಗಳ ನಿರ್ಮಾಣ ಪ್ರಗತಿಯಲ್ಲಿರುವ ಸ್ವಚ್ಛ ಸಂಕೀರ್ಣ ಘಟಕಗಳ ಕಾಮಗಾರಿಗಳನ್ನು ಪೂರ್ಣಗೊಳಿಸುವುದು, ಕಾಮಗಾರಿ ಪೂರ್ಣಗೊಂಡ ಘಟಕಗಳ ಉದ್ಘಾಟನೆ, ಕಾರ್ಯಾಚರಣೆಗೊಳಿಸುವ ಅಭಿಯಾನ ಕೈಗೊಳ್ಳಲಾಗಿದೆ. ಸೆ.25 ರಂದು ಸಮುದಾಯದಲ್ಲಿ ಜಾಗೃತಿ ಮೂಡಿಸುವುದು, ಸೆ.26 ರಿಂದ 28ರವರೆಗೆ ಏಕ ಬಳಕೆ ಪ್ಲಾಸ್ಟಿಕ್ ಬಳಕೆ ನಿಷೇಧ ಮತ್ತು ಅದರ ಬಳಿಯಿಂದಾಗುವ ದುಷ್ಪರಿಣಾಮಗಳ ಕುರಿತು ಅರಿವು, ಗ್ರಾಮ ಸಭೆಯನ್ನು ಆಯೋಜಿಸಿ ನಿರ್ಣಯ ಕೈಗೊಳ್ಳುವುದು.

ಸೆ.29 ರಿಂದ 30 ರವರೆಗೆ ಸ್ವಚ್ಛತಾ ಕಾರ್ಮಿಕರಿಗೆ ಸನ್ಮಾನ, ಓಡಿಎಫ್ ಪ್ಲಸ್ ಸುಸ್ಥಿರತೆ ಅಂಶಗಳ ಕುರಿತು ಗ್ರಾಮ ಪಂಚಾಯಿತಿ ಅಧ್ಯಕ್ಷರೊಂದಿಗೆ ಸಂವಾದ, ಅ 1 ರಂದು ಎಲ್ಲೆಂದರಲ್ಲಿ ಕಸ ಬೀಸಾಡಬೇಡಿ ಘೋಷ ವಾಕ್ಯದೊಂದಿಗೆ ಸಾರ್ವಜನಿಕ ಸ್ಥಳಗಳಲ್ಲಿ ಸ್ಲೋಗನ್ ಬರೆಸುವುದು ಮತ್ತು ಶಾಲಾ ಗ್ರಾಪಂ ಮಕ್ಕಳಲ್ಲಿ ಸ್ಲೋಗನ್ ಬರೆಯುವ ಸ್ಪರ್ಧೆ, ಅ. 2 ರಂದು ವಿಶೇಷ ಗ್ರಾಮ ಸಭೆ ಆಯೋಜನೆ ಮಾಡಿ ಸ್ವಚ್ಛತಾ ಪ್ರತಿಜ್ಞಾ ವಿಧಿ ಬೋಧಿಸುವ ಮೂಲಕ ಸ್ವಚ್ಛತೆ ಸೇವಾ 2024 ಅಭಿಯಾನದ ಆಂದೋಲನವನ್ನು ಯಶಸ್ವಿಗೊಳಿಸಲಾಗುತ್ತದೆ.

ಆಂದೋಲನದಲ್ಲಿ ಗ್ರಾಮ ಪಂಚಾಯತಿ ಮಟ್ಟದ ಜನಪ್ರತಿನಿಧಿಗಳು, ಎಲ್ಲಾ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಅನುಷ್ಠಾನ ಅಧಿಕಾರಿಗಳು, ಸಿಬ್ಬಂದಿಗಳು, ಶಾಲಾ ಕಾಲೇಜ್ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಭಾಗವಹಿಸಲಿದ್ದಾರೆ ಎಂದರು.

ಸ್ವಚ್ಛತೆಗೆ ಸ್ವಯಂ ಸೇವಕರಾಗಿ: ಮಂತಾ

ಗಜೇಂದ್ರಗಢ: ಪರಿಸರ ಸಂರಕ್ಷಣೆ ಹಾಗೂ ಪರಿಸರದ ಸ್ವಚ್ಛತೆ ನಮ್ಮೆಲ್ಲರ ಹೊಣೆ ಮತ್ತು ಕರ್ತವ್ಯ. ಈ ನಿಟ್ಟಿನಲ್ಲಿ ಸ್ವಚ್ಛತೆಗಾಗಿ ನಿತ್ಯ ಸ್ವಯಂ ಸೇವಕರಾಗಬೇಕಿದೆ ಎಂದು ಪುರಸಭೆ ಆರೋಗ್ಯಾಧಿಕಾರಿ ರಾಘವೇಂದ್ರ ಮಂತಾ ಹೇಳಿದರು.

ಪಟ್ಟಣದ ಪುರಸಭೆ ಆವರಣದಲ್ಲಿ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ ಜಯಂತಿ ನಿಮಿತ್ಯ ಸ್ವಚ್ಛತಾ ಹಿ ಸೇವಾ ಅಭಿಯಾನ ನಿಮಿತ್ಯ ಶನಿವಾರ ಪ್ರತಿಜ್ಞಾ ವಿಧಿ ಸ್ವೀಕರಿಸಿ ಮಾತನಾಡಿದ ಅವರು, ನಾವು ಮೌಲ್ಯಾಧಾರಿತ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಲು ನಮ್ಮಲ್ಲಿ ಸ್ವಚ್ಛತೆ, ಶಿಸ್ತು, ಶಿಷ್ಟಾಚಾರ ಹಾಗೂ ಪರಿಸರ ಸಂರಕ್ಷಣೆಯಂತಹ ಮೂಲ ಸಾಮಾಜಿಕ ಗುಣಗಳನ್ನು ನಮ್ಮಲ್ಲಿ ಅಳವಡಿಸಿಕೊಂಡು ಉತ್ತಮ ನಾಗರೀಕರಾಗಬೇಕು.

ಪರಿಸರ ಹಾಗೂ ಸ್ವಚ್ಚತೆಯ ಕುರಿತು ನಮ್ಮ ಆಲೋಚನೆಗಳು ಬದಲಾದರೆ ನಮ್ಮ ಪರಿಸರ, ಸಮುದಾಯ, ದೇಶ ಸ್ವಚ್ಛವಾಗುತ್ತದೆ ಎಂಬ ಪರಿಕಲ್ಪನೆ ಇರಬೇಕು. ಹಾಗಾಗಿ ಸ್ವಚ್ಛತೆ ಎಂಬುದು ಒಂದು ಭಾವನೆಯೇ ಹೊರತು ಚಟುವಟಿಕೆ ಅಲ್ಲ. ನಮ್ಮ ಪೌರ ಕಾರ್ಮಿಕರು ನಿತ್ಯ ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಳ್ಳುತ್ತಾರೆ. ಅವರಂತೆಯೇ ನಮ್ಮ ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿಸಿಕೊಳ್ಳಲು ಸ್ವಯಂ ಪ್ರೇರಣೆ ಹೊಂದಬೇಕಿದೆ ಎಂದರು.

ಉಪನೊಂದಣಾಧಿಕಾರಿ ವೀರುಪಾಕ್ಷಯ್ಯ ಚೌಕಿಮಠ ಮಾತನಾಡಿ, ಇಂದು ಜನರು ಸ್ವಚ್ಛತೆ ತಮ್ಮ ಜವಾಬ್ದಾರಿ ಎಂದು ಪರಿಗಣಿಸುತ್ತಿಲ್ಲ. ಯಾವಾಗ ಸ್ವಚ್ಛತೆ ನಮ್ಮ ಜವಾಬ್ದಾರಿ ಎಂದು ಅರಿತುಕೊಳ್ಳುತ್ತೇವೋ ಆಗ ಸ್ವಚ್ಛತೆಯ ಅರಿವು ಮೂಡಿಸುವಂತ ಕಾರ್ಯಕ್ರಮಗಳ ಅವಶ್ಯಕತೆ ಕಡಿಮೆಯಾಗುತ್ತದೆ. ಈ ನಿಟ್ಟಿನಲ್ಲಿ ನಾಗರಿಕರು ಪುರಸಭೆಯೊಂದಿಗೆ ಕೈ ಜೋಡಿಸಬೇಕಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಪುರಸಭೆ ಆರೋಗ್ಯಾಧಿಕಾರಿ ಶಿವಕುಮಾರ ಇಲ್ಲಾಳ ಪ್ರತಿಜ್ಞಾ ವಿಧಿ ಬೋಧಿಸಿದರು. ಪುರಸಭೆ ಅಧಿಕಾರಿಗಳಾದ ಎಂ.ಡಿ. ದೊಡ್ಡಮನಿ, ಮಲ್ಲಿಕಾರ್ಜುನ್ ಬಿ, ಜಿ.ಎನ್. ಕಾಳೆ, ಜಿ. ಎಸ್. ಪಟ್ಟಣಶೆಟ್ಟಿ, ನಜೀರಸಾಬ ಸಾಂಗ್ಲಿಕಾರ, ಆನಂದ ಮಳಗಿ, ಕನಕಪ್ಪ ಕಲ್ಲೋಡ್ಡರ, ಯಲ್ಲಮ್ಮ ಇದ್ದರು.

ಸಂಪುಟದಲ್ಲಿ ಕಲ್ಯಾಣ ಕರ್ನಾಟಕದ ವಿಷಯಗಳ ಬಗ್ಗೆ ಚರ್ಚೆ | ಹೊಸ ಕೈಗಾರಿಕಾ ನೀತಿ ಬಗ್ಗೆ ವಿಶ್ಲೇಷಣೆ, ಹೊಸ ತಾಲೂಕುಗಳಲ್ಲಿ ಮಿನಿ ವಿಧಾನಸೌಧ ನಿರ್ಮಾಣ | ಶಿಕ್ಷಣ, ಆರೋಗ್ಯ, ಉದ್ಯೋಗ, ಕೃಷಿ, ನೀರಾವರಿ, ಮೂಲ ಸೌಕರ್ಯಗಳಿಗೆ ಆದ್ಯತೆ | ಖಾಲಿ ಹುದ್ದೆಗಳ ಭರ್ತಿಗೆ ಕ್ರಮ, ಕೆಕೆಆರ್‌ಡಿಬಿಗೆ ಪ್ರತ್ಯೇಕ ಸಚಿವಾಲಯ ಬಂದರೆ ಸಹಕಾರಿ: ಡಾ. ಅಜಯ್ ಸಿಂಗ್

ಕಲ್ಯಾಣ ಕರ್ನಾಟಕದ ಸಮಗ್ರ ಪ್ರಗತಿಗೆ ಸರಕಾರ ಬದ್ಧ

ವಿಶ್ವವಾಣಿ ಸಂದರ್ಶನ

ದೇವೇಂದ್ರ ಜಾಡಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರಕಾರ ಈಗಾಗಲೇ ಐದು ಗ್ಯಾರಂಟಿಗಳನ್ನು ನೀಡುವ ಮೂಲಕ ನುಡಿದಂತೆ ನಡೆದಿದೆ. ತೀರಾ ಹಿಂದುಳಿದ ಪ್ರದೇಶವಾದ ಕಲ್ಯಾಣ ಕರ್ನಾಟಕದಲ್ಲಿ ಆಡಳಿತಾತ್ಮಕ ಬದಲಾವಣೆ ತರುವ ಉದ್ದೇಶದಿಂದ ಈ ಬಾರಿ ಸಚಿವ ಸಂಪುಟ ಸಭೆ ಕಲಬುರಗಿಯಲ್ಲಿಯೇ ನಡೆಸಲಾಗುತ್ತಿದೆ. ಈ ಭಾಗದ ಸಮಗ್ರ ಪ್ರಗತಿಗೆ ಕಾಂಗ್ರೆಸ್ ಸರಕಾರ ಬದ್ಧವಾಗಿದೆ. ಈಗಾಗಲೇ, ಈ ಭಾಗದ ಏಳು ಜಿಲ್ಲೆಗಳ 41 ಕ್ಷೇತ್ರಗಳಲ್ಲಿ ಶೈಕ್ಷಣಿಕ ಹಾಗೂ ಆರೋಗ್ಯ, ಉದ್ಯೋಗ, ಕೃಷಿ, ನೀರಾವರಿಯ ಸುಧಾರಣೆ ಜತೆ ಮೂಲಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಕೆಲಸ ಮಾಡಲಾಗುತ್ತಿದೆ. ಅದಕ್ಕಾಗಿ ಕೆಕೆಆರ್‌ಡಿಬಿಯ ಸಂಪೂರ್ಣ ಅನುದಾನವನ್ನು ಸಮರ್ಪಕವಾಗಿ ಬಳಸಲಾಗುತ್ತಿದ್ದು, ಐದು ಸಾವಿರ ಕೋಟಿ ರು.ಗಳ ಕ್ರಿಯಾಯೋಜನೆ ರೂಪಿಸಲಾಗಿದೆ ಎಂದು ಕೆಕೆಆರ್‌ಡಿಬಿ ಅಧ್ಯಕ್ಷ ಡಾ. ಅಜಯ್ ಸಿಂಗ್ 'ವಿಶ್ವವಾಣಿ'ಯೊಂದಿಗಿನ ವಿಶೇಷ ಸಂದರ್ಶನದಲ್ಲಿ ತಿಳಿಸಿದರು.

ಇದೆ ಸೆ.17ರಂದು ಕಲ್ಯಾಣ ಕರ್ನಾಟಕದ ಉತ್ಸವಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಗಮಿಸುತ್ತಿದ್ದಾರೆ. ಇತಿಹಾಸದಲ್ಲಿ ಮೊದಲ ಬಾರಿಗೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ನೇತೃತ್ವದಲ್ಲಿ ಕಲ್ಯಾಣ ಕರ್ನಾಟಕ ಉತ್ಸವದಂದೇ ಕಲಬುರಗಿಯಲ್ಲಿ ರಾಜ್ಯ ಸಚಿವ ಸಂಪುಟ ನಡೆಯುತ್ತಿದ್ದು, ಈ ಭಾಗದ ಖಾಲಿ ಹುದ್ದೆಗಳ ಭರ್ತಿ ಸೇರಿದಂತೆ ಹಲವಾರು ವಿಷಯಗಳ ಕುರಿತು ಪ್ರಸ್ತಾಪ ಸಲ್ಲಿಸುತ್ತೇವೆ. ಈ ಭಾಗದ ಜನರ ಆಶೋತ್ತರಗಳಿಗೆ ಸ್ಪಂದಿಸುವ ಮೂಲಕ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ನಮ್ಮ ಸರಕಾರ ಬದ್ಧವಾಗಲಿದೆ ಎಂದು ಸಂದರ್ಶನದಲ್ಲಿ ಹಂಚಿಕೊಂಡರು.

- **ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗಾಗಿ ಬಹುದಿನಗಳ ಬೇಡಿಕೆಯಾದ ಪ್ರತ್ಯೇಕ ಸಚಿವಾಲಯ ಸ್ಥಾಪನೆಯ ಬಗ್ಗೆ ಸಚಿವ ಸಂಪುಟದಲ್ಲಿ ಪ್ರಸ್ತಾಪಿಸುವಿರಾ?**

– ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಕಲ್ಯಾಣ ಕರ್ನಾಟಕ ಉತ್ಸವ ದಿನದಂದೇ ಸಚಿವ ಸಂಪುಟ ಸಭೆ ನಡೆಯುತ್ತಿದ್ದು, ಅತಿ ಹಿಂದುಳಿದ ಪ್ರದೇಶವಾಗಿರುವ ಕಲ್ಯಾಣ ಕರ್ನಾಟಕಕ್ಕೆ ಪ್ರತ್ಯೇಕ ಸಚಿವಾಲಯ ಸ್ಥಾಪನೆಯ ಕುರಿತು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇವೆ. ಈ ಭಾಗದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ನಡೆಯುತ್ತವೆ. ಸಚಿವಾಲಯ ಇಲ್ಲದಿರುವುದರಿಂದ ಅನೇಕ ಕಾಮಗಾರಿಗಳಿಗೆ ಹಿನ್ನಡೆಯಾಗುತ್ತಿವೆ. ಈ ಭಾಗದ ಅಭಿವೃದ್ಧಿಗಾಗಿ ಪ್ರತ್ಯೇಕ ಸಚಿವಾಲಯದ ಅವಶ್ಯವಾಗಿದೆ. ಪ್ರತ್ಯೇಕ ಅಭಿವೃದ್ಧಿ ಮಂಡಳಿ ಸ್ಥಾಪನೆಗೊಂಡರೆ ಅಭಿವೃದ್ಧಿ ಕೆಲಸಗಳಿಗೆ ವೇಗ ಸಿಗಲಿದೆ. ಈ ಕುರಿತು ಸಂಪುಟದಲ್ಲಿ ಚರ್ಚಿಸಲು ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗುವುದು.

- **ಕಲ್ಯಾಣ ಕರ್ನಾಟಕ ಬೋರ್ಡ್‌ನ ಅನುದಾನ ಬಳಕೆ ಯಾವ್ಯಾವ ಕ್ಷೇತ್ರದಲ್ಲಿ ಬಳಸಲಾಗುತ್ತಿದೆ?**

– ಕಲ್ಯಾಣ ಕರ್ನಾಟಕ ಭಾಗಕ್ಕೆ 371(ಜೆ) ಕಲಂ ಜಾರಿಗೊಂಡು ಹತ್ತು ವರ್ಷ ಕಳೆದ ಹಿನ್ನೆಲೆಯಲ್ಲಿ ದಶಮಾನೋತ್ಸವ ಆಚರಿಸಲಾಗುತ್ತಿದೆ. ಕಳೆದ ಬಾರಿಯ ಅನುದಾನ ಬಳಕೆ ಮಾಡಲಾಗಿದೆ. 5000 ಕೋಟಿ ಬಿಡುಗಡೆ ಆಗಿದೆ. ಈ ವರ್ಷ 5000 ಕೋಟಿ ರು.ಗಳ ಸಂಪೂರ್ಣ ಅನುದಾನದ ಕ್ರಿಯಾಯೋಜನೆ ಸಿದ್ಧವಾಗಿದೆ. ಕಲ್ಯಾಣದಲ್ಲಿ ಅಭಿವೃದ್ಧಿಯ ಪರ್ವ ಆಗಲಿದೆ. 41 ಕ್ಷೇತ್ರಗಳಲ್ಲಿ ಶೈಕ್ಷಣಿಕ ಪ್ರಗತಿಗಾಗಿ ಅಕ್ಷರ ಆವಿಷ್ಕಾರಕ್ಕಾಗಿ ಶೇ.25% ಅನುದಾನ ಮೀಸಲಿಡಲಾಗಿದೆ. ಆರೋಗ್ಯ ಆವಿಷ್ಕಾರ ಅನುದಾನ ಮೀಸಲಿಟ್ಟು ಈ ಭಾಗದ ಜನರ ಆರೋಗ್ಯ ಸುಧಾರಣೆಗೆ ಬದ್ಧರಾಗಿದ್ದೇವೆ. ಕಲ್ಯಾಣ ಕರ್ನಾಟಕ ಭಾಗದ ಬಡಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಮಂಡಳಿಯಿಂದ 180 ಕೋಟಿ ರು.ಗಳ ವೆಚ್ಚದಲ್ಲಿ 371 ಹಾಸಿಗೆಗಳ ಜಯದೇವ ಆಸ್ಪತ್ರೆ ನಿರ್ಮಿಸಲಾಗಿದೆ. ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಮಂಡಳಿಯಿಂದ 500 ಕೋಟಿ ಮೀಸಲಿಡಲಾಗಿದೆ. ಉದ್ಯೋಗ ನೀಡಲು ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತಿದೆ. ಜತೆಗೆ ಅಲ್ಪಸಂಖ್ಯಾತರ ಕಲ್ಯಾಣಕ್ಕೆ 90 ಕೋಟಿ, ಹಿಂದುಳಿದ ವರ್ಗಕ್ಕೆ ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ 75 ಕೋಟಿ, ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭಿವೃದ್ಧಿಗಾಗಿ 200 ಕೋಟಿ ರು. ಸೇರಿ ಇನ್ನೂ ಅನೇಕ ಯೋಜನೆಗಳು ಮಂಡಳಿಯಿಂದ ರೂಪಿಸಲಾಗುತ್ತಿದೆ.

- **ಕಲ್ಯಾಣ ಕರ್ನಾಟಕದ ಹೊಸ ತಾಲೂಕುಗಳಲ್ಲಿ ಮೂಲ ಸೌಕರ್ಯದ ಕೊರತೆ ಇದ್ದು, ಅದನ್ನು ಹೋಗಲಾಡಿಸಲು ಕಲ್ಯಾಣ ಕರ್ನಾಟಕ ಬೋರ್ಡ್ ಕೈಗೊಂಡ ಕಾರ್ಯಗಳು ಯಾವುವು?**

– ಈಗಾಗಲೇ, ಕಲ್ಯಾಣ ಕರ್ನಾಟಕದ 18 ಹೊಸ ತಾಲೂಕುಗಳಲ್ಲಿ ನೂತನ ಮಿನಿ ವಿಧಾನಸೌಧ ನಿರ್ಮಾಣಕ್ಕೆ ಸರಕಾರ ಅನುಮತಿಸಿದೆ. ಕಂದಾಯ ಇಲಾಖೆ ಜತೆಗೆ ಕಲ್ಯಾಣ ಕರ್ನಾಟಕ ಬೋರ್ಡ್ ಸಹಭಾಗಿತ್ವದಲ್ಲಿ ನಿರ್ಮಾಣ ಮಾಡುವ ಕನಸು ನಮ್ಮದಾಗಿದೆ. 15 ಕೋಟಿ ವೆಚ್ಚದಲ್ಲಿ ಒಂದು ವಿಧಾನಸೌಧ ನಿರ್ಮಾಣದ ಗುರಿ ಇದ್ದು, ಅದರಲ್ಲಿ ಕಂದಾಯ ಇಲಾಖೆ ಮತ್ತು ಕೆಕೆಆರ್‌ಡಿಬಿ 50:50 ಅನುಪಾತದಲ್ಲಿ ಹಣ ನೀಡಲಿವೆ. ಈ ವಿಷಯ ಸಚಿವ ಸಂಪುಟದಲ್ಲಿ ಚರ್ಚಿಲಾಗುತ್ತದೆ. ಇದಲ್ಲದೇ, ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯದ ಆರೋಗ್ಯ ಕೇಂದ್ರ, ಎಲ್ಲಾ ತಾಲೂಕಿನಲ್ಲಿ ಆಸ್ಪತ್ರೆಗಳ ನಿರ್ಮಾಣ ಜತೆಗೆ 50 ಹಾರ್ಟ್‌ಲೈನ್ ಆಂಬ್ಯುಲೆನ್ಸ್ ಸೇವೆ ನೀಡಲಾಗುತ್ತಿದೆ. ಗ್ರಾಮೀಣ ಭಾಗದಲ್ಲಿನ ರಸ್ತೆಗಳಲ್ಲಿ ಸುಧಾರಣೆ ಹಾಗೂ ನಿರ್ಮಾಣಕ್ಕಾಗಿ 'ಕಲ್ಯಾಣಪಥ' ಯೋಜನೆಗೆ 335 ಕೋಟಿ ಅನುದಾನ ಮೀಸಲು ಇಡಲಾಗಿದೆ.



ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಹಾಗೂ ರಾಜ್ಯ ಸರಕಾರ ಅತಿ ಹಿಂದುಳಿದ ಪ್ರದೇಶದ ಜನರ ಏಳಿಗೆಗಾಗಿ ಕಟ್ಟಿಬದ್ಧ ವಾಗಿದೆ. 5000 ಕೋಟಿ ರು. ಅನುದಾನ ಬಳಸುವ ಮೂಲಕ ಶೈಕ್ಷಣಿಕ, ಆರ್ಥಿಕ, ಆರೋಗ್ಯ, ಔದ್ಯೋಗಿಕ ಹಾಗೂ ಮೂಲಸೌಕರ್ಯಗಳ ಅಭಿವೃದ್ಧಿಗೆ ಮಾಡಲಾಗುತ್ತದೆ. ಆದರಿಂದ, ಕಲ್ಯಾಣ ಕರ್ನಾಟಕದ ಒಂದು ಕೋಟಿಗೂ ಅಧಿಕ ಜನರು ಸರಕಾರದ ಮೇಲೆ ನಂಬಿಕೆ ಇಟ್ಟು ಬೆಂಬಲಿಸಬೇಕು.

– ಡಾ.ಅಜಯ್ ಸಿಂಗ್ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ

- **ಕಳೆದ ವಿಧಾನಸಭೆ ಚುನಾವಣೆಗೂ ಮುನ್ನ, ಕಲ್ಯಾಣಕ್ರಾಂತಿ ಸಂದರ್ಭದಲ್ಲಿ** ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪಂಚ ಗ್ಯಾರಂಟಿ ಜತೆಗೆ ಕಲ್ಯಾಣ ಕರ್ನಾಟಕ ಭಾಗಕ್ಕೆ ಪ್ರತ್ಯೇಕ ಹತ್ತು ಅಂಶಗಳ ಪ್ರಣಾಳಿಕೆ ಘೋಷಿಸಿದ್ದರು. ಅದು ಪೂರ್ಣ ಪ್ರಮಾಣದಲ್ಲಿ ಇನ್ನೂ ಸಾಕಾರವಾಗಿಲ್ಲ. ಇದರ ಬಗ್ಗೆ ಸಂಪುಟದ ಗಮನಕ್ಕೆ ತರುವಿರಾ..?

– ಚುನಾವಣೆ ಸಂದರ್ಭದಲ್ಲಿ ಹೇಳಿದಂತೆ ಪಂಚ ಗ್ಯಾರಂಟಿಗಳನ್ನು ನೀಡುವ ಮೂಲಕ ರಾಜ್ಯ ಸರಕಾರ ನುಡಿದಂತೆ ನಡೆದಿದೆ. ಅದೇ ರೀತಿ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ ಪ್ರತ್ಯೇಕ ಹತ್ತು ಅಂಶಗಳ ಪ್ರಣಾಳಿಕೆಯಲ್ಲಿ ಈಗಾಗಲೇ ಒಂದಾದಾಗಿ ಭರವಸೆಗಳನ್ನು ಈಡೇರಿಸುತ್ತಾ ಬಂದಿದ್ದೇವೆ. ಅದರಲ್ಲಿ ಕಲ್ಯಾಣ ಕರ್ನಾಟಕ ಬೋರ್ಡ್‌ಗೆ ಐದು ಸಾವಿರ ಕೋಟಿ ರು. ಅನುದಾನ, ಶಿಕ್ಷಕರ ಭರ್ತಿ, ಹುದ್ದೆಗಳ ನೇಮಕ ಹಾಗೂ ಮುಂಬಡ್ತಿ ಸೇರಿ ಕೆಲವು ಈಡೇರಿವೆ. ಇನ್ನುಳಿದ ಬೇಡಿಕೆಗಳನ್ನು ಆದಷ್ಟೂ ಬೇಗ ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು.

- **ಕಲ್ಯಾಣ ಕರ್ನಾಟಕ ಭಾಗದಲ್ಲಿ ಯಾವುದೇ ದೊಡ್ಡ ಕೈಗಾರಿಕಾ ಯೋಜನೆಗಳು ಜಾರಿಯಾಗಿಲ್ಲ. ಇಲ್ಲಿನ ಉದ್ಯಮಿಗಳು ಪ್ರತ್ಯೇಕ ಕಲ್ಯಾಣ ಕರ್ನಾಟಕ ಕೈಗಾರಿಕಾ ನೀತಿ ಜಾರಿಗೆ ತರಬೇತಿ ಎನ್ನುವ ಬೇಡಿಕೆ ಸರಕಾರದ ಮುಂದೆ ಇಟ್ಟಿದ್ದಾರೆ. ಈ ಬಾರಿಯಾದರೂ ಅದು ಸಾಕಾರಗೊಳ್ಳುವುದೇ?**

– ನಿಜ, ಅನೇಕ ಉದ್ಯಮಿಗಳು ಪ್ರತ್ಯೇಕ ಕೈಗಾರಿಕಾ ನೀತಿ ಜಾರಿಯ ಬಗ್ಗೆ ಮನವಿ ಮಾಡಿದ್ದಾರೆ. ಅದು ಸರಕಾರ ಸಾಧಕ-ಭಾದಕ ಎಲ್ಲವನ್ನು ಗಮನಿಸಿ, ಪ್ರತ್ಯೇಕ ನೀತಿಯ ಕುರಿತು ನಿರ್ಧಾರ ತೆಗೆದುಕೊಳ್ಳಲಿದೆ. ಕಲಬುರಗಿ ಹಾಗೂ ಕಲ್ಯಾಣ ಕರ್ನಾಟಕದ ಇತರ ಜಿಲ್ಲೆಗಳಲ್ಲಿ ಬೃಹತ್ ಕೈಗಾರಿಕೆಗಳು ಇಲ್ಲ. ಆದರೆ, ಕೇಂದ್ರದ ನಿಯೋಜಿತ ಜವಳಿ ಪಾರ್ಕ್ ಯೋಜನೆ ಫರಥಾಬಾದ್ ಹಾಗೂ ಹೊನ್ನಕಿರಣಗಿ ಹತ್ತಿರ ರೂಪಿಸಲಾಗಿದೆ. ಇದರಿಂದಾಗಿ ಒಂದು ಲಕ್ಷ ಜನರಿಗೆ ಉದ್ಯೋಗ ಅವಕಾಶ ಸಿಗಲಿದೆ. ಅದಕ್ಕಾಗಿ ಕಲ್ಯಾಣ ಕರ್ನಾಟಕ ಮಂಡಳಿಯೇ ಮುಂದೆ ಬಂದು 50 ಸಾವಿರ ಕೋಟಿ ರು.ಗಳ ಅನುದಾನ ಮೀಸಲಿಟ್ಟು ಈ ಭಾಗದ ಜನರ ಆಶಾಕಿರಣವಾಗಿ ಕೆಲಸ ಮಾಡಲು ಶ್ರಮಿಸುತ್ತಿದೆ.

- **ಕಲಬುರಗಿಯಲ್ಲಿ ನೀರಾವರಿ ಯೋಜನೆ ಸಂಪೂರ್ಣ ಕುಸಿದಿದೆ. ಈ ಬಗ್ಗೆ ಸರಕಾರದ ಮುಂದೆ ಕೆಕೆಆರ್‌ಡಿಬಿ ನಿಲುವೇನು?**

– ಕಲಬುರಗಿ ಅಷ್ಟೇ ಅಲ್ಲ, ಇಡೀ ಕಲ್ಯಾಣ ಕರ್ನಾಟಕ ಭಾಗದ ನೀರಾವರಿಗಾಗಿ ಸಣ್ಣ ನೀರಾವರಿ ಇಲಾಖೆ ಜತೆ ಸೇರಿ ಯೋಜನೆ ರೂಪಿಸಲಾಗಿದೆ. ಅದಕ್ಕಾಗಿ 100 ಕೋಟಿ ರು. ಅನುದಾನ ಸಹ ಮೀಸಲಿಡಲಾಗಿದೆ. ಈ ಭಾಗದ ರೈತರಿಗೆ ಅನುಕೂಲ ಆಗುವ ನಿಟ್ಟಿನಲ್ಲಿ ಅಂತರ್ಜಲ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಅವಶ್ಯಕತೆ ಇರುವಲ್ಲಿ ಚೆಕ್‌ಡ್ಯಾಂ ಹಾಗೂ ಬ್ಯಾರೇಜ್ ಗಳ ನಿರ್ಮಾಣ ಕಾರ್ಯದ ಯೋಜನೆ ಸಹ ಹಾಕಿಕೊಳ್ಳಲಾಗಿದೆ.

- **ವಿವಿಧ ಹುದ್ದೆಗಳ ನೇಮಕಾತಿಯಲ್ಲಿ ಮೆರಿಟ್ ವಿಚಾರದಲ್ಲಿ ಕಲ್ಯಾಣ ಕರ್ನಾಟಕ ಭಾಗದ ಯುವಕರಿಗೆ ಅನ್ಯಾಯವಾಗುತ್ತಿದೆ. ಅದಕ್ಕಾಗಿಯೇ ಇತ್ತೀಚೆಗೆ ನಡೆದ 545 ಪಿಎಸ್‌ಐ ಹುದ್ದೆಗಳ ನೇಮಕಾತಿ ತಡೆ ಹಿಡಿಯಲಾಗಿದೆ. ಇದಕ್ಕೆ ಸಂಪುಟದಲ್ಲಿ ಪರಿಹಾರ ಸಿಗುವುದೇ?**

– ಹೌದು, ಈ ಕುರಿತು ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗಿದ್ದು, ಕಲ್ಯಾಣ ಕರ್ನಾಟಕದ ಯುವಕರು ಮೆರಿಟ್ ನಲ್ಲಿ ಪಾಸ್ ಆದರೆ, ಅವರು ನೇರವಾಗಿ ಜನರಲ್ ಮೆರಿಟ್ ಮೇಲೆ ಹುದ್ದೆ ಪಡೆಯಬೇಕು. ಇನ್ನೂ 371(ಜೆ) ಕೋಟಾದಲ್ಲಿ ಆಯ್ಕೆಯಾದ ಅಭ್ಯರ್ಥಿ ಕೋಟಾದ ಅನುಸಾರವಾಗಿಯೇ ಹುದ್ದೆ ಪಡೆಯಬೇಕು. ಇದರಲ್ಲಿ ಯಾವುದೇ ಬದಲಾವಣೆ ಇಲ್ಲ. ಇದು ಸ್ಪಷ್ಟವಾಗಿದೆ.

ಸಮಾಚಾರ ಸಣ್ಣದಲ್ಲ

ಸಾಲಬಾಧೆ: ಆತ್ಮಹತ್ಯೆ

ನ್ಯಾಮತಿ: ಜಮೀನು ಕೆಲಸಕ್ಕಾಗಿ ಮಾಡಿದ ಸಾಲ ತೀರಿಸಲು ಆಗದೆ ಮನನೊಂದ ಮಲ್ಲಿಗೇನಹಳ್ಳಿಯ ರೈತ ಕುಬೇರಪ್ಪ (55) ಕೆರೆಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡ ಘಟನೆ ನಡೆದಿದೆ. ನಾಲ್ಕು ದಿನಗಳ ಹಿಂದೆ ಮನೆ ಬಿಟ್ಟು ಹೋದವರು ವಾಪಸ್ ಬಂದಿರಲಿಲ್ಲ. ಇಸ್ಲಾಪುರ ಗಡಿಭಾಗದ ಬಾಳೆಕಟ್ಟೆ ಕೆರೆಯಲ್ಲಿ ಕುಬೇರಪ್ಪ ಅವರ ಶವ ಪತ್ತೆಯಾಗಿದೆ. ಮಾವನವರು ಜಮೀನು ಕೆಲಸಕ್ಕಾಗಿ ಬ್ಯಾಂಕ್, ಧರ್ಮಸ್ಥಳ ಹಾಗೂ ಸ್ವಸಹಾಯ ಸಂಘಗಳಲ್ಲಿ 12 ಲಕ್ಷ ಸಾಲ ಮಾಡಿದ್ದರು. ಅದನ್ನು ತೀರಿಸಲು ಆಗದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೃತರ ಅಳಿಯ ನ್ಯಾಮತಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಮರಕ್ಕೆ ಕಾರು ಡಿಕ್ಕಿ: ಇಬ್ಬರು ಬಲಿ

ರಾಮನಗರ: ಮರಕ್ಕೆ ಕಾರು ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಎಂಬಿಎ ವಿದ್ಯಾರ್ಥಿಗಳು ದಾರುಣವಾಗಿ ಸಾವನ್ನಪ್ಪಿದ ಘಟನೆ ಬೆಂಗಳೂರು ಗ್ರಾಮಾಂತರದ ಕಗ್ಗಲೀಪುರ ಠಾಣಾ ವ್ಯಾಪ್ತಿಯ ಸಾಲುಹುಣಸೆ ಗ್ರಾಮದ ಬಳಿ ನಡೆದಿದೆ. ಮುಖೇಶ್ (22), ಆಕಾಶ್ (22) ಮೃತ ವಿದ್ಯಾರ್ಥಿಗಳು. ತಮಿಳುನಾಡಿನ ಮೂಲದ ಮೃತರು ಬೆಂಗಳೂರಿನ ಖಾಸಗಿ ಕಾಲೇಜಿನಲ್ಲಿ ಎಂಬಿಎ ಓದುತ್ತಿದ್ದರು. ಶನಿವಾರ ತಡರಾತ್ರಿ ಸ್ನೇಹಿತರೊಂದಿಗೆ ಬೆಂಗಳೂರು ಕಡೆಯಿಂದ ಕನಕಪುರದ ಕಡೆಗೆ ತೆರಳುತ್ತಿದ್ದಾಗ ಅವರಿದ್ದ ಕಾರು ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಇಬ್ಬರು ವಿದ್ಯಾರ್ಥಿಗಳು ಸ್ಥಳದಲ್ಲೇ ಮೃತಪಟ್ಟರೆ, ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಕಗ್ಗಲೀಪುರ ಪೊಲೀಸರು ತನಿಖೆ ನಡೆಸಿದ್ದಾರೆ.

ನಾಗಮಂಗಲ: ಕೇರಳ ಮೂಲದ ಇಬ್ಬರ ಸೆರೆ

ಮಂಡ್ಯ: ನಾಗಮಂಗಲ ಗಲಭೆಯಲ್ಲಿ ಸಂಬಂಧ ಅಲ್ಲೇ ಬೇಕರಿಯಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ಕೇರಳ ಮೂಲದವರನ್ನು ಘಟನೆಯಲ್ಲಿ ಭಾಗಿಯಾಗಿದ್ದಾರೆ ಎಂದು ಬಂಧಿಸಲಾಗಿದೆ. ಹಾಗಂತ ಕೇರಳದವರು ಗಲಭೆಗೆ ಬಂದು ಹೋಗಿದ್ದಾರೆ ಎಂದಲ್ಲ. ಗಲಭೆ ಸಂಬಂಧ ಸಂಪೂರ್ಣವಾಗಿ ವರದಿ ತರಿಸಿಕೊಳ್ಳೋಣ ಎಂದು ಸಚಿವ ಚಲುವರಾಯ ಸ್ವಾಮಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗಣೇಶಮೂರ್ತಿ ನಿಮಜ್ಜನ ಮೆರವಣಿಗೆ ಎರಡು ಕೋಮುಗಳ ನಡುವೆ ಘರ್ಷಣೆ ಆಗಲಿಕ್ಕೆ ಅವಕಾಶವಾಗಿದೆ. ನಾಳೆ ಕೂಡ ಮುಸ್ಲಿಂ ಹಬ್ಬ ಈದ್ ಮಿಲಾದ್ ಇದೆ. ಅಂಗಡಿಗಳಿಗೆ ಬೆಂಕಿ ಹಾಕಿದ್ದು ಮತ್ತು ಕಲ್ಲು ತೂರಲು ಮೊದಲು ಪ್ರಾರಂಭ ಮಾಡಿದ್ದು ಯಾರು ಎಂಬ ಮಾಹಿತಿ ಬೇಕಾಗುತ್ತದೆ. ಒಟ್ಟಾರೆ ಎರಡೂ ಕೋಮಿನವರು ಒಟ್ಟಾಗಿ ಎಲ್ಲಾ ಹಬ್ಬಗಳನ್ನು ಮಾಡಬೇಕೆಂಬ ತೀರ್ಮಾನವನ್ನು ಸಭೆಯಲ್ಲಿ ತೆಗೆದುಕೊಂಡಿದ್ದೇವೆ ಎಂದು ತಿಳಿಸಿದರು.

ಪತ್ನಿ ಕೊಲೆಗೈದು ಸಹಜ ಸಾವೆಂದು ಬಿಂಬಿಸಿದ ಪತಿ

ಕಾಲ್ ರೆಕಾರ್ಡಿಂಗ್‌ನಲ್ಲಿ ಬಯಲಾದ ಸತ್ಯ | 7 ಜನರ ವಿರುದ್ಧ ದೂರು ದಾಖಲು

ಶಹಾಪುರ: ತಾನು ಮಾಡಿದ ಸಾಲ ತೀರಿಸಲು ಸಾಲಗಾರರಿಗೆ ಸಹಕಾರ ನೀಡಲು ಒಪ್ಪದ ಪತ್ನಿಯನ್ನು ಪತಿಯೇ ಕೊಲೆಗೈದ ಘಟನೆ ತಾಲೂಕಿನ ಗಂಗನಾಳ ಗ್ರಾಮದಲ್ಲಿ ತಡವಾಗಿ ಬೆಳಕಿಗೆ ಬಂದಿದೆ. ಶರಣಬಸಮ್ಮ ಬಾಗಿಲೇರ (25) ಮೃತ ದುರ್ದೈವಿ. ಪತಿ ಹುಣಸಿಗಿಯ ಭೀಮಣ್ಣ ಸಾಬಣ್ಣ ಭಾಗಲೇರ್ ಜೈಲು ಸೇರಿದ್ದಾನೆ.

ಜು. 25ರಂದು ಕೊಲೆ ನಡೆದಿದ್ದು ತವರು ಮನೆಯಲ್ಲಿ ಉಸಿರುಗಟ್ಟಿಸಿ ಕೊಲೆ ಮಾಡಿ ಸಹಜ ಸಾವೆಂದು ಬಿಂಬಿಸಿದ್ದ ಪಾಪಿ ಪತಿ ಕೃತ್ಯ ತನಿಖೆ ವೇಳೆ ಹೊರಬಿದ್ದಿದೆ. ಶರಣಬಸಮ್ಮ ಸಾವಿನ ಬಗ್ಗೆ ಅನುಮಾನಗೊಂಡಿದ್ದ ಆಕೆಯ ಸಹೋದರ ಅಂಬಲಪ್ಪ ಬಿರಾದಾರ್ ಗೋಗಿ ಠಾಣೆಗೆ ದೂರು ನೀಡಿದ್ದ. ತನಿಖೆಗಿಳಿದ ಪೊಲೀಸರು ಮೊಬೈಲ್‌ನಲ್ಲಿ ಆರೋಪಿ ತನ್ನ ಪತ್ನಿ ಜೊತೆ ಮಾತನಾಡಿದ್ದ ಆಡಿಯೊ ರೆಕಾರ್ಡಿಂಗ್ ಮೂಲಕ ಕೊಲೆಯ ಪ್ರಕರಣವನ್ನು ಭೇದಿಸಿದ್ದಾರೆ.

ಘಟನೆ ಹಿನ್ನೆಲೆ : ಗಂಗನಾಳ ಗ್ರಾಮದ ಶರಣ ಬಸಮ್ಮಳನ್ನು 2023 ಮೇ 30ರಂದು ಹುಣಸಿಗಿಯ ಭೀಮಣ್ಣನಿಗೆ ಮದುವೆ ಮಾಡಿಕೊಡಲಾಗಿತ್ತು. ಜು.25ರಂದು ಆರೋಪಿ ಭೀಮಣ್ಣ ಮತ್ತು ಪತ್ನಿ ಶರಣಬಸಮ್ಮ ಗಂಗನಾಳ ಗ್ರಾಮಕ್ಕೆ ಬಂದು ರಾತ್ರಿ ಊಟ ಮಾಡಿ ಮಹಡಿ ಮನೆಯ ಮೇಲೆ ಮಲಗಿದ್ದಾರೆ. ಏಕಾಏಕಿ ರಾತ್ರಿ 12 ಸುಮಾರಿಗೆ ಪತ್ನಿ ಶರಣಬಸಮ್ಮ ಮಾತನಾಡುತ್ತಿಲ್ಲ ಸತ್ತಿರಬಹುದು ಎಂದು ಆಕೆಯ ಮನೆಯವರಿಗೆ ಕರೆದಿದ್ದಾನೆ. ಆಗ ಮನೆಯವರು ನೋಡಿ ಮರುದಿನ ಅಂತ್ಯಕ್ರಿಯೆ ನೆರವೇರಿಸಿದ್ದಾರೆ.

ಮೃತಳ ಸಹೋದರ ಅಂಬಲಪ್ಪ ತಮ್ಮ ತಂಗಿ ಶರಣಬಸಮ್ಮಳದ್ದು ಅಸಹಜ ಸಾವು ಎಂದು ಪೊಲೀಸರಿಗೆ ದೂರು ನೀಡಿದ್ದ. ಕೆಲ ದಿನಗಳ ನಂತರ ಮೃತಳ ಮೊಬೈಲ್ ಪರಿಶೀಲನೆ ನಡೆಸಿದಾಗ ಕರೆ ದಾಖಲೆಯಲ್ಲಿ ಆಕೆಯ ಜತೆ ಪತಿ ಭೀಮಣ್ಣ ಮಾತಾಡಿದ್ದು ಗೊತ್ತಾಗಿದೆ.

ಮೃತಳ ಸಹೋದರ ಅಂಬಲಪ್ಪ ದೂರು ದಾಖಲಿಸಿದ್ದಾನೆ. ಜತೆಗೆ ಆರೋಪಿಗೆ ಪ್ರಚೋದನೆ ನೀಡಿದ ಆರೋಪದ ಮೇಲೆ ಭೀಮಣ್ಣನ ತಂದೆ ಸಾಬಣ್ಣ ಬಾಗಲೇರ್, ತಾಯಿ ನೀಲಮ್ಮ ಸಾಬಣ್ಣ, ಸಹೋದರರಾದ ಮುತ್ತಪ್ಪ, ಜಟ್ಟಪ್ಪ, ದೇವಪ್ಪ ಮತ್ತು ಶಾಂತಪ್ಪ ಸೇರಿ 7 ಜನರ ವಿರುದ್ಧ ದೂರು ದಾಖಲಿಸಲಾಗಿದೆ.

ತಹಸೀಲ್ದಾರ್ ಕಿರುಕುಳಕ್ಕೆ ಬೇಸತ್ತು ಎಫ್‌ಡಿಎ ವಿಷ ಸೇವಿಸಿ ಆತ್ಮಹತ್ಯೆ

ಮಡಿಕೇರಿ ತಾಲೂಕು ಕಚೇರಿ ಅಧಿಕಾರಿಗಳ ವಿರುದ್ಧ ಆರೋಪ

ಮೈಸೂರು: ಮೇಲಾಧಿಕಾರಿ ಕಿರುಕುಳಕ್ಕೆ ಬೇಸತ್ತು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದ ತಾಲೂಕು ಕಚೇರಿಯ ಎಫ್‌ಡಿಎ ಕೊನೆಯುಸಿರೆಳೆದಿದ್ದಾರೆ. ಮಡಿಕೇರಿ ತಹಸೀಲ್ದಾರ್ ಕಚೇರಿ ಬಿಲ್ಲಿಂಗ್ ವಿಭಾಗದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಎಫ್‌ಡಿಎ ಆಗಿ ಸೇವೆ ಸಲ್ಲಿಸುತ್ತಿದ್ದ ಪ್ರಜ್ವಲ್(32) ಸಾವನ್ನಪ್ಪಿದವರು.

ತಹಸೀಲ್ದಾರ್ ಪ್ರವೀಣ್ ಹಾಗೂ ಶಿರಸ್ತೇದಾರ್ ಗುರುರಾಜ್ ಕಿರುಕುಳದಿಂದ ತಮ್ಮ ಪತಿ ಸಾವನ್ನಪ್ಪಿದ್ದಾರೆ ಎಂದು ಪ್ರಜ್ವಲ್ ಪತ್ನಿ ಬಿ.ಜೆ.ಶ್ರುತಿ ಈ ಇಬ್ಬರು ಅಧಿಕಾರಿಗಳ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದಾರೆ. ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದ ಪ್ರಜ್ವಲ್ ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ಬೆಳಗ್ಗೆ ಕೊನೆಯುಸಿರೆಳೆದಿದ್ದಾರೆ.

ಸಿಬ್ಬಂದಿ ಮುಂದೆ ಅವಾಚ್ಯ ಶಬ್ದಗಳಿಂದ ನಿಂದನೆ: ಕಳೆದ ಆರು ತಿಂಗಳಿಂದ ಈ ಇಬ್ಬರು ಅಧಿಕಾರಿಗಳು ಕಚೇರಿ ಸಿಬ್ಬಂದಿ ಮುಂದೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದರು ಎಂದು ದೂರಿನಲ್ಲಿ ತಿಳಿಸಲಾಗಿದೆ. ಈ ಬಗ್ಗೆ ತಾಯಿ, ಪತ್ನಿ ಜತೆ ನೋವು ಹೇಳಿಕೊಂಡಿದ್ದ ಮೃತ ಪ್ರಜ್ವಲ್. ಇತ್ತೀಚೆಗೆ ಫೆಸ್ಟಿವಲ್ ಅಡ್ವಾನ್ಸ್ ಬಿಲ್‌ನಲ್ಲಿ ತಹಸೀಲ್ದಾರ್ ಸಹಿ ಹೋಲಿಕೆ ಆಗಿರಲಿಲ್ಲ. ಇದನ್ನೇ ನೆಪ ಮಾಡಿಕೊಂಡು 'ನೀನೇ ಸಹಿ ಮಾಡಿದ್ದೀಯ' ಎಂದು ಪ್ರಜ್ವಲ್ ವಿರುದ್ಧ ಆರೋಪಿಸಿದ್ದ ತಹಸೀಲ್ದಾರ್ ಪ್ರವೀಣ್, ಸಸ್ಪೆಂಡ್ ಮಾಡುವುದಾಗಿ ಬೆದರಿಕೆ ಹಾಕಿದ್ದರು. ಕಾಲು ಹಿಡಿದು ಬೇಡಿಕೊಂಡರೂ ಬಾಯಿಗೆ ಬಂದಂತೆ ಮಾತನಾಡಿದ್ದರು. ಇದರಿಂದ ಮನನೊಂದ ಪ್ರಜ್ವಲ್ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ನಂತರ ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆ ಐಸಿಯುನಲ್ಲಿ ಚಿಕಿತ್ಸೆ ಪಡೆಯುವಾಗಲೇ ಪೊಲೀಸರನ್ನು ಭೇಟಿ ಮಾಡಲು ಬಯಸಿದ್ದರು. ಲಿಖಿತ ಹೇಳಿಕೆಯನ್ನು ಮೈಸೂರಿನ ಅಶೋಕಪುರಂ ಠಾಣೆಗೆ ಕಳುಹಿಸಿದ್ದರು. ಆದರೆ, ಪೊಲೀಸರು ಬರುವ ಮುನ್ನವೇ ಪ್ರಜ್ವಲ್ ಸಾವಿಗೀಡಾದರು ಎಂದು ಪತ್ನಿ ಬಿ.ಜೆ.ಶ್ರುತಿ ಈ ಬಗ್ಗೆ ದೂರಿನಲ್ಲಿ ತಿಳಿಸಿದ್ದಾರೆ.

ಆಡಿಯೊ ಖಚಿತವಾದರೆ ಕ್ರಮ

ಶಾಸಕರ ಧ್ವನಿ ಎಂದು ಪೊಲೀಸರಿಂದ ಪರೀಕ್ಷೆ; ಗೃಹ ಸಚಿವರ ಸ್ಪಷ್ಟನೆ

ತುಮಕೂರು: ಗುತ್ತಿಗೆದಾರನಿಗೆ ಜೀವ ಬೆದರಿಕೆ ಹಾಗೂ ಜಾತಿ ನಿಂದನೆ ದೂರಿನ ಮೇರೆಗೆ ಶಾಸಕ ಮುನಿರತ್ನ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿ, ಅವರನ್ನು ಬಂಧಿಸಲಾಗಿದೆ. ತನಿಖೆ ಆರಂಭಿಸಲಾಗಿದ್ದು, ಎರಡು ದಿನದ ಅವಧಿಗೆ ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ ಎಂದು ಗೃಹ ಸಚಿವ ಜಿ. ಪರಮೇಶ್ವರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಆ ರೀತಿ ಹೇಳಿಲ್ಲ, ನನಗೆ ಸಂಬಂಧಿಸಿದ ಆಡಿಯೊ ಅಲ್ಲ ಎಂದು ಮುನಿರತ್ನ ಹೇಳಿದ್ದಾರೆ. ಎಫ್‌ಎಸ್‌ಎಲ್ ನವರು ಆಡಿಯೊ ಅವರದ್ದೇ ಅಥವಾ ಅಲ್ಲವೇ ಎಂದು ಪರೀಕ್ಷಿಸಿ ದೃಢಪಡಿಸುತ್ತಾರೆ. ಅವರದ್ದೇ ಆಡಿಯೊ ಎಂದು ಖಚಿತವಾದರೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ಮುಲಾಜಿಲ್ಲದೆ ಕ್ರಮ: ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬಂದಿದ್ದೇವೆ. ಅಲ್ಲಲ್ಲಿ ಆದ ಘಟನೆಗಳನ್ನು ನಿಯಂತ್ರಿಸಿದ್ದೇವೆ. ಹಿಂದಿನ ಸರಕಾರದ ಅವಧಿಯಲ್ಲಿ ನಡೆದ ಕೋಮುಗಲಭೆ, ರಾಜಕೀಯ ಗಲಾಟೆಗಳು ಈಗ ನಡೆದಿಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತೇನೆ. ರಾಜ್ಯದ ಶಾಂತಿ ಹಾಳುಮಾಡಲು ಪ್ರಯತ್ನಿಸುವವರ ವಿರುದ್ಧ ಮುಲಾಜಿಲ್ಲದೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಗೃಹ ಸಚಿವ ಪರಮೇಶ್ವರ ಎಚ್ಚರಿಕೆ ನೀಡಿದರು.

ನಾಗಮಂಗಲ ಗಲಭೆಗೆ ಸಂಬಂಧಿಸಿದಂತೆ ತನಿಖೆಯ ವರದಿ ಬರುವವರೆಗೂ ನಾನು ಏನನ್ನೂ ಹೇಳುವುದಿಲ್ಲ. ಆಕಸ್ಮಿಕ ಎಂಬ ಪದ ಬಳಸಿದ್ದಕ್ಕೆ ಪ್ರತಿಪಕ್ಷದವರು ಬಾಯಿಗೆ ಬಂದಂತೆ ಮಾತನಾಡಿದ್ದಾರೆ. ಗಲಭೆ ಪೂರ್ವಯೋಜಿತವೇ ಎಂಬುದು ವರದಿ ಬಂದ ನಂತರ ಗೊತ್ತಾಗಲಿದೆ. ಗಣೇಶಮೂರ್ತಿ ಮೆರವಣಿಗೆಯ ಮಾರ್ಗ ಏಕೆ ಬದಲಿಸಿದರು ಎಂಬ ಸತ್ಯಾಂಶವೂ ತನಿಖೆಯಿಂದ ಬಯಲಾಗಲಿದೆ. ಈಗಾಗಲೇ ಇನ್‌ಸ್ಪೆಕ್ಟರ್, ಡಿವೈಎಸ್ಪಿ ಅಮಾನತುಗೊಳಿಸಲಾಗಿದೆ.

– ಪರಮೇಶ್ವರ ಗೃಹ ಸಚಿವ

ಸಿಎಂ ವಿರುದ್ಧ ಎಚ್‌ಡಿಕೆ ಇಲ್ಲಸಲ್ಲದ ಆರೋಪ

ಕೊಪ್ಪಳ: ಸಿದ್ದರಾಮಯ್ಯ ಅವರು 2ನೇ ಬಾರಿಗೆ ಸಿಎಂ ಆಗಿದ್ದನ್ನು ಕೇಂದ್ರ ಸಚಿವ ಕುಮಾರಸ್ವಾಮಿ ಅವರಿಗೆ ಸಹಿಸಲು ಆಗುತ್ತಿಲ್ಲ. ಹಿಂದುಳಿದ ವರ್ಗದ ವ್ಯಕ್ತಿಯೊಬ್ಬರು ಆಡಳಿತ ಮಾಡುತ್ತಿರುವುದು ಅವರಿಗೆ ಸಮಾಧಾನ ಇಲ್ಲದಂತಾಗಿದೆ. ಅದಕ್ಕಾಗಿ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ ಎಂದು ಸಚಿವ ಶಿವರಾಜ ತಂಗಡಗಿ ಟೀಕಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಸಿದ್ದರಾಮಯ್ಯ ಅವರನ್ನು ಸಿಎಂ ಸ್ಥಾನದಲ್ಲಿ ನೋಡಲು ಬಿಜೆಪಿಗರಿಗೆ ಆಗುತ್ತಿಲ್ಲ. ಸಿದ್ದರಾಮಯ್ಯ ದಲಿತರ ಆಸ್ತಿ ಕಬಳಿಸಿದ್ದಾರೆ ಎನ್ನುವ ಕುಮಾರಸ್ವಾಮಿ ಇಷ್ಟು ದಿನ ಏನು ಮಾಡುತ್ತಿದ್ದರು ಎಂದರು.

ಬಿಜೆಪಿಗರು ಕೋಮುಗಲಭೆ ಸೃಷ್ಟಿ ಮಾಡುವ ಕೆಲಸ ಮಾಡುತ್ತಿದ್ದಾರೆ. ಜಾತಿ-ಧರ್ಮದ ಬಗ್ಗೆ ಮಾತನಾಡಿ, ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದಾರೆ. ನಾಗಮಂಗಲಕ್ಕೆ ಭೇಟಿ ನೀಡಿರುವ ಕುಮಾರಸ್ವಾಮಿ ಜಾತಿ, ಜಾತಿ ನಡುವೆ ವೈಮನಸ್ಯ ಮೂಡಿಸುತ್ತಿದ್ದಾರೆ ಎಂದರು.

ಲಿಂಗಾಯತರನ್ನು ಪ್ರತ್ಯೇಕ ಮಾಡುವ ಹುನ್ನಾರ

ಎಂ.ಬಿ.ಪಾಟೀಲ ವಿರುದ್ಧ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ವಾಗ್ದಾಳಿ

ವಿಜಯಪುರ: ಎಂ.ಬಿ. ಪಾಟೀಲರು ಹಿಂದೆ ಓರ್ವ ಸೂಫಿಸಂತ, ಮಹಾನ್ ದಾರ್ಶನಿಕರಿದ್ದಾರೆ. ಲಿಂಗಾಯತರು ಮುಸ್ಲಿಮರು ಒಂದು, ಅವರ ನಮ್ಮ ಆಚರಣೆಗಳು ಒಂದು ಎನ್ನುತ್ತಾರೆ. ಅಂದರೆ ಲಿಂಗಾಯಿತರು ದನದ ಮಾಂಸ ತಿನ್ನುತ್ತಾರಾ..? ಮುಸ್ಲಿಮರಿಗೆ ಲಿಂಗಾಯತರನ್ನು ಹೋಲಿಸುವುದು ಸರಿಯೇ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಕಿಡಿಕಾರಿದ್ದಾರೆ.

ರಾಹುಲ್‌ಗಾಂಧಿ ಜನ್ಮ ಕುರಿತು ಯತ್ನಾಳ ಹೇಳಿಕೆಗೆ ಸಚಿವ ಎಂ.ಬಿ. ಪಾಟೀಲ್ ವಿರೋಧ ವಿಚಾರವಾಗಿ ಸುದ್ದಿಗಾರರೊಂದಿಗೆ ಅವರು ಮಾತನಾಡಿ, ಹಿಂದೂ ಸಂಪ್ರದಾಯದಿಂದ ಲಿಂಗಾಯತರನ್ನು ಪ್ರತ್ಯೇಕ ಮಾಡುವ ಹುನ್ನಾರವಿದು. ಸನಾತನ ಧರ್ಮದ ಖಾವಿಬಟ್ಟೆಯನ್ನು ನಮ್ಮ ಸ್ವಾಮೀಜಿಗಳು ಹಾಕಿಕೊಳ್ಳುತ್ತಾರೆ. ಅವರೇನಾದರೂ ಹಸಿರುಬಟ್ಟೆ, ಉದ್ದ ದಾಡಿ ಬಿಟ್ಟುಕೊಂಡು ಓಡಾಡುತ್ತಾರಾ? ಲಿಂಗಾಯತರು ಮತ್ತು ಮುಸ್ಲಿಮರು ಹೇಗೆ ಒಂದಾಗಲು ಸಾಧ್ಯ. ಲಿಂಗಾಯತರಿರಲಿ, ವೀರಶೈವರಿರಲಿ ಎಲ್ಲರೂ ಸನಾತನ ಧರ್ಮದ ಭಾಗವೇ ಎಂದು ಪ್ರತಿಪಾದಿಸಿದರು.

ನಕಲಿ ಇರಬಹುದು

ಬಿಜೆಪಿ ಶಾಸಕ ಮುನಿರತ್ನ ಬಂಧನ ವಿಚಾರವಾಗಿ ಯತ್ನಾಳ ಪ್ರತಿಕ್ರಿಯೆ ನೀಡಿ, ಅದು ಏನಿದೆ ನನಗೆ ಗೊತ್ತಿಲ್ಲ. ಆದರೆ ಧ್ವನಿಯನ್ನು ಮಿಮಿಕ್ರಿ, ನಕಲು ಮಾಡುವವರು ಇದ್ದಾರೆ ಎಂದು ಪರೋಕ್ಷವಾಗಿ ಮುನಿರತ್ನ ಆಡಿಯೋ ನಕಲಿ ಎಂದು ಹೇಳಿದರು.

ತನಿಖೆ ನಡೆಸಿ ಶಾಸಕ ಮುನಿರತ್ನ ವಿರುದ್ಧ ಉಗ್ರ ಕ್ರಮ: ಸಚಿವ ಎಂ.ಬಿ.ಪಾಟೀಲ್

ವಿಜಯಪುರ: ಶಾಸಕ ಮುನಿರತ್ನ ಬಂಧನ ವಿಚಾರವಾಗಿ ಸೂಕ್ತ ತನಿಖೆ ನಡೆಸಿ, ಸತ್ಯಾಸತ್ಯತೆ ತಿಳಿದುಕೊಂಡು ಉಗ್ರ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಡಾ. ಎಂ.ಬಿ.ಪಾಟೀಲ್ ಹೇಳಿದರು.

ಮುನಿರತ್ನ ಬಂಧನ ವಿಚಾರವಾಗಿ ವಿಜಯಪುರದಲ್ಲಿ ಸುದ್ದಿಗಾರರೊಂದಿಗೆ ಪ್ರತಿಕ್ರಿಯೆ ನೀಡಿದ ಅವರು, ಮುನಿರತ್ನ ಆಂಧ್ರಪ್ರದೇಶಕ್ಕೆ ಪರಾರಿಯಾಗುವಾಗ ಬಂಧಿಸಲಾಗಿದೆ ಎಂದು ಮಾಧ್ಯಮಗಳಲ್ಲಿ ಗಮನಿಸಿ ನಾನು ತಿಳಿದುಕೊಂಡಿದ್ದೇನೆ. ಮುನಿರತ್ನ ಆಡಿಯೊದಲ್ಲಿ ಹಣಕ್ಕಾಗಿ ಒತ್ತಾಯ ಮಾಡಿದ್ದಾರೆ. ಅಶ್ಲೀಲವಾಗಿ ಕೆಟ್ಟದಾಗಿ ಮಾತನಾಡಿದ್ದಾರೆ. ಆಡಿಯೊದಲ್ಲಿ ಜಾತಿ ನಿಂದನೆ ಇದೆ, ಹೆಣ್ಣು ಮಕ್ಕಳಿಗೆ ಕೆಟ್ಟದಾಗಿ ನಿಂದಿಸಿದ್ದು ಇದೆ. ಇದರ ಸತ್ಯಾಸತ್ಯತೆ ನನಗೆ ಗೊತ್ತಿಲ್ಲ. ಈ ರೀತಿ ಮಾತನಾಡಿದ್ದು ಸತ್ಯವಾಗಿದ್ದರೆ ಕಠಿಣ ಕ್ರಮ ಜರುಗಿಸಲಾಗುವುದು. ಓರ್ವ ಜನಪ್ರತಿನಿಧಿಯಾಗಿ ಈ ರೀತಿ ಮಾತನಾಡಿ ಕ್ಷಮೆಗೆ ಅರ್ಹರಲ್ಲ ಎಂದರು.

ಯತ್ನಾಳ ವಿರುದ್ಧ ವಾಗ್ದಾಳಿ

ರಾಹುಲ್ ಗಾಂಧಿ ವಿರುದ್ಧ ಶಾಸಕ ಯತ್ನಾಳ ವಾಗ್ದಾಳಿ ವಿಚಾರಕ್ಕೆ, ಶಾಸಕ ಯತ್ನಾಳ ಬಾಯಿ, ನಾಲಿಗೆ ಮೇಲೆ ಹಿಡಿತ ಇಟ್ಟುಕೊಳ್ಳಬೇಕು. ಎಲ್ಲದಕ್ಕೂ ಒಂದು ಮಿತಿ ಇದೆ. ಇದು ಯತ್ನಾಳ್‌ಗೆ ಶೋಭೆ ತರುವಂತದ್ದು ಅಲ್ಲ. ಯಾರದ್ದೊ ತಂದೆ-ತಾಯಿ ಬಗ್ಗೆ ಮಾತನಾಡುವುದು, ಯಾರಿಗೆ ಹುಟ್ಟಿದ್ದಾರೆ ಎಂದು ಮಾತನಾಡುವುದು ಸರಿ ಅಲ್ಲ, ಯತ್ನಾಳ್ ಇಲ್ಲಿಗೆ ನಿಲ್ಲಿಸಲಿ. ವೈಯಕ್ತಿಕವಾಗಿ ಮಾತನಾಡುವುದು ನಮ್ಮ ಸಂಸ್ಕೃತಿ ಅಲ್ಲ, ವಿಜಯಪುರದ ಸಂಸ್ಕೃತಿ ಅಲ್ಲ, ಯತ್ನಾಳ್ ಅವರ ಮನೆತನದ ಸಂಸ್ಕೃತಿ ಅಲ್ಲ ಎಂದು ಸಚಿವ ಎಂ.ಬಿ.ಪಾಟೀಲ್ ವಾಗ್ದಾಳಿ ನಡೆಸಿದರು.

ದಲಿತ ಸಂಘಟನೆಗಳ ಆರೋಪ ವಿಚಾರವಾಗಿ ಪ್ರತಿಕ್ರಿಯಿಸಿ, ಎರಡು ಪ್ರಕರಣ ಒಂದಕ್ಕೊಂದು ತಳಕು ಹಾಕಬೇಡಿ. ಅದರಲ್ಲಿ ಚನ್ನಾರೆಡ್ಡಿ ಪಾತ್ರ ಇಲ್ಲ. ಮುನಿರತ್ನ ಪ್ರಕರಣದಲ್ಲಿ ಸಾಕ್ಷಾಧಾರಗಳಿವೆ ಎಂದರು.

ಮುನಿರತ್ನ ಬಂಧನದ ಹಿಂದೆ ದ್ವೇಷ ರಾಜಕಾರಣವಿಲ್ಲ: ಲಕ್ಷ್ಮೀ

ಬೆಳಗಾವಿ: ಬಿಜೆಪಿ ಶಾಸಕ, ಮಾಜಿ ಸಚಿವ ಮುನಿರತ್ನ ಅವರ ಬಂಧನದ ಹಿಂದೆ ಯಾವುದೇ ದ್ವೇಷ ರಾಜಕಾರಣವಿಲ್ಲ. ಅವರಿಗೀಗ ಮಾಡಿದ್ದುಣ್ಣೋ ಮಾರಾಯ ಎಂಬಂತಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಲೇವಡಿ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಶಾಸಕ ಮನಿರತ್ನ ಅವರ ವಿಚಾರದಲ್ಲಿ ಯಾರು ದ್ವೇಷ ರಾಜಕಾರಣ ಮಾಡುತ್ತಾರೆ? ಅವರು ಮಾಡಿರುವುದು ಎಲ್ಲರಿಗೂ ಗೊತ್ತಿದೆ. ಕಾಂಗ್ರೆಸ್ ನಾಯಕರೇನು ಮುನಿರತ್ನ ಅವರಿಗೆ ಕೆಟ್ಟ ಮಾತುಗಳಿಂದ ಬೈಯಿರಿ, ಅಥವಾ ಬ್ಲ್ಯಾಕ್ ಮೇಲ್ ಮಾಡಿ ಎಂದು ಹೇಳಿದ್ದಾರಾ? ಮಾಡಿದ್ದುಣ್ಣೋ ಮಾರಾಯ ಎನ್ನುವಂತಾಗಿದೆ ಅವರ ಸ್ಥಿತಿ ಎಂದು ಕಿಡಿಕಾರಿದರು.

ಮಾತಿಗೆ ಕನ್ನಡಿ ಹಿಡಿಯುವ ಅವಶ್ಯತೆ ಇಲ್ಲ: ಕೆಲ ರಾಜಕಾರಣಗಳು ಮೊದಲು ಕೆಟ್ಟದಾಗಿ ಮಾತನಾಡುತ್ತಾರೆ; ಆಮೇಲೆ ತಿರುಚಿದ್ದಾರೆ, ದ್ವೇಷದ ರಾಜಕಾರಣ ಎಂದೆಲ್ಲ ಹೇಳುತ್ತಾರೆಂಬ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ಕೆಲವೊಬ್ಬರು ಮಾತನಾಡುತ್ತಾರೆ ನಿಜ ಆದರೆ, ಅದನ್ನು ಪ್ರಮಾಣೀಕರಿಸಿ ನೋಡಬೇಕು. ಆದರೆ, ಮುನಿರತ್ನ ವಿಚಾರದಲ್ಲಿ ಏನಿದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಇದಕ್ಕೆ ಕನ್ನಡಿ ಹಿಡಿಯುವ ಅವಶ್ಯಕತೆ ಇಲ್ಲ ಎಂದು ಸಚಿವರು ಹೇಳಿದರು.

ಮುನಿರತ್ನ ಅವರು ಮಹಿಳೆಯರ ಬಗ್ಗೆ ಆಡಿರುವ ಕೀಳು ಮಾತುಗಳನ್ನು ಯಾರೂ ಕೂಡ ಸಹಿಸಲು ಸಾಧ್ಯವಿಲ್ಲ. ಜಾತಿ, ಜಾತಿಗಳ ಮಧ್ಯೆ ಸಂಘರ್ಷ ತರುವಂತಹ ಮಾತುಗಳನ್ನು ಯಾರೂ ಕೂಡ ಆಡಬಾರದು.

–ಲಕ್ಷ್ಮೀ ಹೆಬ್ಬಾಳ್ಕರ್ ಸಚಿವೆ

ಪತ್ನಿ ಕೊಲೆ ಮಾಡಿ ಠಾಣೆಗೆ ಬಂದ ಪತಿ

ಮೈಸೂರು: ಪತ್ನಿಯನ್ನು ಪತಿಯೇ ಕೊಲೆ ಮಾಡಿ ಪೊಲೀಸರಿಗೆ ಶರಣಾಗಿರುವ ಘಟನೆ ಹುಣಸೂರಿನಲ್ಲಿ ನಡೆದಿದೆ. ಬೇರೊಂದು ಮಹಿಳೆ ಜೊತೆಗಿನ ಸಂಬಂಧ ವಿರೋಧಿಸಿದ ಹಿನ್ನೆಲೆಯಲ್ಲಿ ಕೊಲೆ ಮಾಡಿರುವ ಆರೋಪ ಕೇಳಿಬಂದಿದೆ. ಹುಣಸೂರು ತಾಲೂಕಿನ ಬಿಳಿಕೆರೆ ಹೋಬಳಿಯ ಬೆಂಕಿಪುರ ಗ್ರಾಮದ ರೋಜಾ (37) ಪತಿಯಿಂದ ಕೊಲೆಯಾದ ಮಹಿಳೆ. ಸ್ವಾಮಿನಾಯಕ ಕೊಲೆ ಮಾಡಿ ಜೈಲು ಸೇರಿರುವ ಆರೋಪಿಯಾಗಿದ್ದಾನೆ. 12 ವರ್ಷಗಳ ಹಿಂದೆ ಸ್ವಾಮಿನಾಯಕ ಹಾಗೂ ರೋಜಾ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಹಲವು ವರ್ಷಗಳ ಕಾಲ ಅನ್ಯೋನ್ಯ ಜೀವನ ಸಾಗಿಸುತ್ತಿದ್ದರು. ಆದರೆ, ಪತಿಗೆ ಅದೇ ಗ್ರಾಮದ ಮಹಿಳೆಯೊಬ್ಬಳ ಜೊತೆ ಸಂಬಂಧ ಏರ್ಪಟ್ಟಿದೆ. ಈ ವಿಚಾರ ಪತ್ನಿ ರೋಜಾಗೆ ಗಮನಕ್ಕೆ ಬಂದು ಗಲಾಟೆ ನಡೆದಿತ್ತು. ಕುಟುಂಬಸ್ಥರು ಸ್ವಾಮಿ ನಾಯಕನಿಗೆ ಒಂದೆರಡು ಬಾರಿ ಬುದ್ಧಿವಾದ ಹೇಳಿದ್ದರು. ಆದರೂ ಕೂಡ ಮಹಿಳೆಯ ಜೊತೆಗಿನ ಸಂಬಂಧ ಮುಂದುವರೆದಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಟ್ವೀಟಾಟ-ಖಾರಾ

ಸಿದ್ದರಾಮಯ್ಯ, ಮುಖ್ಯಮಂತ್ರಿ

ದಲಿತರ , ಒಕ್ಕಲಿಗರ ಮತ್ತು ಮಹಿಳೆಯರ ಘನತೆಗೆ ಚ್ಯುತಿ ತರುವ ಅನಾಗರಿಕ ಮಾತುಗಳನ್ನಾಡಿದ ಬಿಜೆಪಿ ಶಾಸಕ ಮುನಿರತ್ನರನ್ನು ಬಂಧಿಸಿದ್ದು ಪ್ರಹ್ಲಾದ ಜೋಶಿಯವರಿಗೆ ತುಂಬಾ ಸಂಕಟ ತಂದಿದೆ, ಪಾಪ. ಜೋಶಿಯವರೇ ಮುನಿರತ್ನರನ್ನು ಬಂಧಿಸದೆ ಕೈಗೆ ಲಾಲಿಪಾಪ್ ಕೊಟ್ಟು ಮುದ್ದಾಡಬೇಕಿತ್ತೇ..? ಮುನಿರತ್ನ ಪರಾರಿಯಾಗಲು ಅವಕಾಶ ಮಾಡಿಕೊಡಬೇಕಿತ್ತೇ..?



ನೀನಾ, ಬೆಂಗಳೂರು

ಈ ಶಾಸಕರ (ಮುನಿರತ್ನ) ಹುಟ್ಟಿದ್ದೇ ನಿಮ್ಮ ಗರಡಿಯಲ್ಲಿ ಅಲ್ಲವೇ..?

ಸಮಾಚಾರ ಸಣ್ಣದಲ್ಲ

ಇದು ಕ್ಲೀನ್‌ಚಿಟ್ ರಾಜ್ಯ ಸರಕಾರ

ಬೀದರ್: ನಾಗಮಂಗಲ ಗಲಭೆ ಪ್ರಕರಣದಲ್ಲಿ ಮೊದಲೇ ಕ್ಲೀನ್‌ಚಿಟ್ ನೀಡಿದ ಗೃಹ ಸಚಿವರು ಹಾಗೂ ಸರಕಾರದ ವಿರುದ್ಧ ಪರಿಷತ್ ವಿರೋಧ ಪಕ್ಷದ ನಾಯಕ ನಾರಾಯಣಸ್ವಾಮಿ ಕಿಡಿಕಾರಿದ್ದಾರೆ. ನಗರದಲ್ಲಿ ಮಾತನಾಡಿದ ಅವರು, ಪಿಎಸ್‌ಐ ಪರಶುರಾಮ ಪ್ರಕಣದಲ್ಲೂ ಗೃಹ ಸಚಿವ

ಪರಮೇಶ್ವರ ಮೊದಲೇ ಕ್ಲೀನ್‌ಚಿಟ್ ನೀಡಿದ್ದು, ಅದು ಏನು ಆಗಿಲ್ಲಾ ಆತ್ಮಹತ್ಯೆ ಅಷ್ಟೇ ಎಂದರು. ವಾಲ್ಮೀಕಿ ನಿಗಮ ಹಗರಣದಲ್ಲಿ ಕಿಂಗ್‌ಪಿನ್ ನಾಗೇಂದ್ರ ಅಂಥಾ ಆದ್ರೆ ಈ ಹೆಸರುಗಳು ಐಎಸ್ ಐಟಿಯಲ್ಲಿ ಇರಲ್ಲಾ ಎಂದು ಇಡಿಯವರು ಹೇಳುತ್ತಾರೆ. ಹೀಗಾಗಿ ಅವರ ಶಾಸಕರಿಗೆ ಹಾಗೂ ಮಂತ್ರಿಗಳಿಗೆ ಕ್ಲೀನ್‌ಚಿಟ್ ಕೊಡಲು ಎಲ್ಲಾ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಈ ಪ್ರಕರಣಕ್ಕೆ ಕೇರಳದವರ ಲಿಂಕ್ ಇದೆ ಎಂದಿದ್ದಾರೆ. ಅಲ್ಲಿ ಬಾಂಗ್ಲಾದೇಶದವರು ನೆಲಿಸಿದ್ದು, ಎಸ್‌ಡಿಪಿಐನವರ ಕಾರ್ಯಶಾಲೆಗಳು ನಡೆಯುತ್ತಿದ್ದು, ಬ್ಯಾನ್ ಮಾಡಿದ ಸಂಸ್ಥೆಗಳು ನಾಗಮಂಗಲ ಗಲಭೆ ಪ್ರಕರಣದಲ್ಲಿ ಬಂದಿದ್ದು ಹೇಗೆ? ಕಾಂಗ್ರೆಸ್ ಸರಕಾರ ಮುಂದುವರಿದರೆ ಈ ದೇಶಕ್ಕೆ ಗಂಡಾಂತರ ಗ್ಯಾರಂಟಿ ಎಂದು ತಿಳಿಸಿದ್ದಾರೆ.

ಎತ್ತಿನಗಾಡಿ ಬಿದ್ದು ಸಾವು

ಮಡಿಕೇರಿ : ಶುಂಠಿ ತುಂಬಿದ ಎತ್ತಿನ ಗಾಡಿ ಬಿದ್ದು ಬಾಲಕನೊಬ್ಬ ಮೃತಪಟ್ಟಿರುವ ಘಟನೆ ಕುಶಾಲನಗರ ಸಮೀಪ ತೊರೆನೂರು ಗ್ರಾಮದಲ್ಲಿ ನಡೆದಿದೆ.

ತೊರೆನೂರು ಗ್ರಾಮದ ಟಿ.ಆರ್.ಮಧು ಹಾಗೂ ಅನು ದಂಪತಿಯ ಮೊದಲ ಪುತ್ರ ಟಿ.ಎಂ.ತರುಣ್ (7) ಮೃತ ದುರ್ದೈವಿ. ಭಾನುವಾರ ಬೆಳಿಗ್ಗೆ ಮನೆ ಬಳಿ ಶುಂಠಿ ತುಂಬಿದ್ದ ಎತ್ತಿನ ಗಾಡಿ ಭಾರ ಹೆಚ್ಚಾಗಿ ಮಗುಚಿಕೊಂಡಿತು. ಆಗ ಪಕ್ಕದಲ್ಲೇ ಇದ್ದ ತರುಣ್ ತಲೆಗೆ ತೀವ್ರ ಪೆಟ್ಟಾಗಿ ರಕ್ತಸ್ರಾವವಾಗಿದೆ. ತಕ್ಷಣ ಬಾಲಕನನ್ನು ಕುಶಾಲನಗರ ಆಸ್ಪತ್ರೆ, ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರು ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿರುವುದಾಗಿ ತಿಳಿದು ಬಂದಿದೆ. ಕುಶಾಲನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೇಲ್ಸೇತುವೆ ಅವಘಡ: ಎಎಸ್‌ಐ ಸಾವು

ಹುಬ್ಬಳ್ಳಿ: ಇಲ್ಲಿನ ಹಳೇಕೋರ್ಟ್ ವೃತ್ತದ ಬಳಿ ನಡೆಯುತ್ತಿರುವ ಮೇಲ್ಸೇತುವೆ ಕಾಮಗಾರಿ ವೇಳೆ ತಲೆಯ ಮೇಲೆ ಕಬ್ಬಿಣದ ರಾಡ್ ಬಿದ್ದು ಗಂಭೀರ ಗಾಯಗೊಂಡು, ಕೆಎಂಸಿ-ಆರ್‌ಐ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಉಪನಗರ ಠಾಣೆ ಎಎಸ್‌ಐ ನಾಬಿರಾಜ ದಯಣ್ಣವರ (59) ಚಿಕಿತ್ಸೆಗೆ ಸ್ಪಂದಿಸದೆ



ಭಾನುವಾರ ಬೆಳಗಿನಜಾವ ಮೃತಪಟ್ಟಿದ್ದಾರೆ. ಸತ್ತೂರಿನ ರಾಜಾಜಿನಗರ ನಿವಾಸಿಯಾಗಿದ್ದ ಎಎಸ್‌ಐ ನಾಬಿರಾಜ ಅವರು ಸೆ.10ರಂದು ಬೈಕ್‌ನಲ್ಲಿ ತೆರಳುತ್ತಿದ್ದಾಗ ತಲೆಯ ಮೇಲೆ ಕಬ್ಬಿಣದ ರಾಡ್ ಬಿದ್ದಿತ್ತು. ಮೆದುಳಿಗೆ ತೀವ್ರ ಪೆಟ್ಟುಬಿದ್ದ ಪರಿಣಾಮ ಪ್ರಜ್ಞಾಹೀನ ಸ್ಥಿತಿಗೆ ತಲುಪಿದ್ದರು. ಅವರಿಗೆ ಐಸಿಯುನಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಆರೋಗ್ಯದ ಮೇಲೆ ನಿಗಾ ಇಡಲು ಐವರು ವೈದ್ಯರ ವಿಶೇಷ ತಂಡ ಸಹ ರಚಿಸಲಾಗಿತ್ತು. ಅವಘಡಕ್ಕೆ ಸಂಬಂಧಿಸಿ ಮೇಲ್ಸೇತುವೆ ಗುತ್ತಿಗೆ ಪಡೆದ ಜಂಡು ಕಂಪನಿಯ ಮೂವರು ವ್ಯವಸ್ಥಾಪಕರು ಸೇರಿ 19 ಮಂದಿ ವಿರುದ್ಧ ಉಪನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

{ **ಕೆ.ಎಸ್.ಈಶ್ವರಪ್ಪ** } ಮಾಜಿ ಡಿಸಿಎಂ

ರಾಜ್ಯ ಸರಕಾರ ಭ್ರಷ್ಟಚಾರದಲ್ಲಿ ಮುಳುಗಿದೆ. ಅದಕ್ಕೆ ವಾಲ್ಮೀಕಿ ನಿಗಮದ ಪ್ರಕರಣವೇ ಸಾಕ್ಷಿ ಎಂಬುದನ್ನು ನಾನು ತುಂಬಾ ನೊಂದು ಹೇಳುತ್ತಿದ್ದೇನೆ. ಚಂದ್ರಶೇಖರನ್ ಮೃತಪಟ್ಟಾಗ ಅವರ ಮನೆಗೆ ಸಿಎಂ ಭೇಟಿ ಕೊಡಬೇಕಿತ್ತು. ಚಂದ್ರಶೇಖರ್ ಕುಟುಂಬಕ್ಕೆ ಈ ಹಿಂದೆ ರಾಷ್ಟ್ರಭಕ್ತರ ಬಳಗದಿಂದ 3 ಲಕ್ಷ ಕೊಟ್ಟಿದ್ದೆವು. ಈಗ 5 ಲಕ್ಷ ರು. ಪರಿಹಾರದ ನೀಡಿದ್ದೇವೆ. ಸೆ.20 ಒಳಗೆ ಸರಕಾರ ಪರಿಹಾರ ಕೊಡದಿದ್ದರೆ ಜೈಲು ಭರೋ ಚಳವಳಿ ಮಾಡುತ್ತೇವೆ.

ಸಮಾಜ ಒಡೆಯುವ ದುಷ್ಟಶಕ್ತಿಗಳ ಸೋಲಿಸೋಣ

ಅನುಭವ ಮಂಟಪವೇ ಪ್ರಜಾಪ್ರಭುತ್ವದ ಸಾಂಸ್ಥಿಕ ಸಂಕೇತ | ಸಂವಿಧಾನದ ಪೀಠಿಕೆಯಲ್ಲಿ ಮಾನವೀಯ ಮೌಲ್ಯಗಳಿವೆ: ಸಿಎಂ

ಬೆಂಗಳೂರು: ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಅಂಗವಾಗಿ ಭಾನುವಾರ ರಾಜ್ಯಾದ್ಯಂತ ಬೀದರ್‌ನಿಂದ ಚಾಮರಾಜನಗರದವರೆಗೂ 31 ಜಿಲ್ಲೆಗಳಲ್ಲಿ 2,500 ಕಿ.ಮೀ. ಮಾನವ ಸರಪಳಿಯನ್ನು ನಿರ್ಮಿಸಲಾಗಿತ್ತು. ಪ್ರಜಾಪ್ರಭುತ್ವದ ಆಶಯಗಳಾದ ಸಮಾನತೆ, ಅಸ್ಪೃಶ್ಯತೆ ನಿವಾರಣೆ, ಸೌಹಾರ್ದತೆ, ಭಾವೈಕ್ಯತೆ, ಕೋಮುವಾದ ಹತ್ತಿಕ್ಕುವುದು ಸೇರಿದಂತೆ ಹಲವು ಆಶಯಗಳೊಂದಿಗೆ ನಡೆದ ಮಾನವಸರಪಳಿಯಲ್ಲಿ 25 ಲಕ್ಷಕ್ಕೂ ಹೆಚ್ಚು ಅಧಿಕ ಮಂದಿ ಭಾಗವಹಿಸಿದ್ದರು.

ಶಾಲಾ ಮಕ್ಕಳು, ಶಿಕ್ಷಕರು, ಶೈಕ್ಷಣಿಕ ಸಂಸ್ಥೆಗಳ ಎಲ್ಲರನ್ನೂ ತೊಡಗಿಸಿಕೊಳ್ಳಲಾಗಿತ್ತು. ಭಾರೀ ಉದ್ದದ ಈ ಮಾನವ ಸರಪಳಿ ನಿರ್ಮಾಣ ವಿಶ್ವದಾಖಲೆಗೆ ಸೇರ್ಪಡೆಯಾಗಿದೆ. ವರ್ಲ್ಡ್ ಬುಕ್ ಆಫ್ ರೆಕಾರ್ಡ್ ಸಂಸ್ಥೆಯ ಪ್ರತಿನಿಧಿ ಶೈಲಜಾ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ವಿಶ್ವ ದಾಖಲೆಯ ಪ್ರಮಾಣಪತ್ರವನ್ನು ವಿತರಿಸಿದರು. ಕಾರ್ಯಕ್ರಮದಲ್ಲಿ ವಿಶೇಷ ಅಂಚೆಚೀಟಿಯನ್ನು ಬಿಡುಗಡೆ ಮಾಡಲಾಯಿತು.

ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ನಡೆದ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಈ ವೇಳೆ ಪ್ರಜಾಪ್ರಭುತ್ವ ದಿನದ ರಾಯಭಾರಿ ಹರೇಕಳ ಹಾಜಪ್ಪ, ಪೌರ ಕಾರ್ಮಿಕ ತಾಯಂದಿರಾದ ನಾಗಲಕ್ಷ್ಮಿ, ಮಂಜುಳ ಹಾಗೂ ತೃತೀಯ ಲಿಂಗಿ ಪ್ರಿಯಾಂಕ ಮತ್ತು ಇಬ್ಬರು ವಿಶೇಷ ಚೇತನ ವಿದ್ಯಾರ್ಥಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಎಡ-ಬಲದಲ್ಲಿ ನಿಂತು ಪ್ರಜಾಪ್ರಭುತ್ವ ದಿನವನ್ನು ಅರ್ಥಪೂರ್ಣಗೊಳಿಸಿದರು.

ವಿಶ್ವಸಂಸ್ಥೆಯ ಭಾರತೀಯ ಪ್ರತಿನಿಧಿ ಕೆ.ಪಿ.ಅಶ್ವಿನಿಯವರಿಗೆ ಇದೇ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಂವಿಧಾನದ ಪೀಠಿಕೆಯನ್ನು ವಿತರಿಸಿದರು. ಇದರೊಂದಿಗೆ ವಿಶ್ವ ಪ್ರಜಾಪ್ರಭುತ್ವ ದಿನದ ಅಂಗವಾಗಿ 10 ಸಾವಿರ ಗಿಡಗಳನ್ನು ನೆಡುವ ಕಾರ್ಯಕ್ರಮಕ್ಕೂ ಇದೇ ವೇಳೆ ಸಿದ್ದರಾಮಯ್ಯ ಚಾಲನೆ ನೀಡಿದರು.

ಸಂವಿಧಾನದಲ್ಲಿ ಮಾನವೀಯ ಮೌಲ್ಯಗಳಿವೆ: ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಏಕತೆ ನೆಪದಲ್ಲಿ ಸಮಾಜವನ್ನು ಒಡೆಯುವ, ಮನುಷ್ಯರನ್ನು ವಿಭಜಿಸುವ ವಿಚ್ಛಿದ್ರಕಾರಕ ದುಷ್ಟ ಶಕ್ತಿಗಳನ್ನು ನಾಶ ಮಾಡಲು ಪ್ರಜಾಪ್ರಭುತ್ವವಾದಿಗಳು ಎದ್ದುನಿಲ್ಲಿ ಎಂದು ಹೇಳಿದರು.

ನಮ್ಮ ಸಂವಿಧಾನ ಎತ್ತಿ ಹಿಡಿದಿರುವ ಬಹುತ್ವವನ್ನು ನಾವು ಬದುಕಿನಲ್ಲಿ ಆಚರಿಸೋಣ. ಆ ಮೂಲಕ ಸಮಾಜ ಒಡೆಯುವ ದುಷ್ಟರ ಷಡ್ಯಂತ್ರ ಸೋಲಿಸೋಣ. ಪ್ರಜಾಪ್ರಭುತ್ವ ಗಟ್ಟಿಗೊಳಿಸೋಣ. ಬುದ್ಧ, ಬಸವಣ್ಣನ ಕಾಲದಲ್ಲೇ ನಮ್ಮಲ್ಲಿ ಪ್ರಜಾಪ್ರಭುತ್ವ, ಸಂಸದೀಯ ವ್ಯವಸ್ಥೆ ಇತ್ತು. ಅನುಭವ ಮಂಟಪ ಮೊದಲ ಪ್ರಜಾಪ್ರಭುತ್ವದ ಸಾಂಸ್ಥಿಕ ಸಂಕೇತ ಎಂದರು.

1949ರ ನವೆಂಬರ್ 25ನೇ ತಾರೀಕಿನಂದು ಬಾಬಾ ಸಾಹೇಬರು ಮಾಡಿದ ಭಾಷಣವನ್ನು ಪ್ರಸ್ತಾಪಿಸಿದ ಸಿಎಂ, ಆರ್ಥಿಕ-ಸಾಮಾಜಿಕ ಪ್ರಜಾಪ್ರಭುತ್ವ ಎಲ್ಲರಿಗೂ ಸಿಕ್ಕಾಗ ಮಾತ್ರ ರಾಜಕೀಯ ಸ್ವಾತಂತ್ರಕ್ಕೆ ಅರ್ಥ ಬರುತ್ತದೆ. ತಾರತಮ್ಯ ಭಾರತದಲ್ಲಿ ಆಚರಣೆಯಲ್ಲಿ ಇರುವವರೆಗೂ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥ ಇಲ್ಲ ಎಂದರು.

ಸಂವಿಧಾನದ ಪೀಠಿಕೆಯಲ್ಲಿ ಅತ್ಯಂತ ದೊಡ್ಡ ಮೌಲ್ಯಗಳಿವೆ. ಹೀಗಾಗಿಯೇ ಪ್ರತಿ ಶಾಲಾ ಕಾಲೇಜುಗಳಲ್ಲಿ ಇದನ್ನು ಓದಿಸುವ, ಅರ್ಥೈಸುವ, ಪಾಲಿಸುವ ಪ್ರಯತ್ನ ಮುನ್ನಡೆಸಿದ್ದೇವೆ. ನಮ್ಮ ರಾಷ್ಟ್ರಗೀತೆ ಮತ್ತು ನಮ್ಮ ನಾಡಗೀತೆಯಲ್ಲಿರುವ ಭಾರತ ಮತ್ತು ಕರ್ನಾಟಕ ನಮ್ಮದಾಗಬೇಕು. ಯಾವುದೇ ತಾರತಮ್ಯ ಇಲ್ಲದ ಶಾಂತಿಯ ತೋಟ ನಮ್ಮದಾಗಬೇಕು ಎಂದು ಹೇಳಿದರು.

ಬಿಜೆಪಿ ಮತ್ತು ಇವರ ಜೊತೆಗಿರುವ ವಿಚ್ಛಿದ್ರಕಾರಕ ಶಕ್ತಿಗಳು ಬಡವರ, ಮಧ್ಯಮ ವರ್ಗದ ವಿರೋಧಿಗಳು. ಇವರು ಬಡವರ ಪರವಾದ ಕಾರ್ಯಕ್ರಮಗಳು ಜಾರಿ ಆಗಲು ಬಿಡುವುದಿಲ್ಲ. ಆದ್ದರಿಂದ ಇವರನ್ನು ನಾವು ಸೋಲಿಸಬೇಕು. 20 ಲಕ್ಷಕ್ಕೂ ಹೆಚ್ಚು ಮಂದಿಯ ಮಾನವ ಸರಪಳಿ ರಚಿಸಿರುವುದೇ ದುಷ್ಟಶಕ್ತಿಗಳಿಗೆ ಎಚ್ಚರಿಕೆ ನೀಡಿ ಮನುಷ್ಯ ಸಮಾಜವನ್ನು ಬೆಸೆಯುವುದಾಗಿದೆ.

- **ಸಿದ್ದರಾಮಯ್ಯ** ಮುಖ್ಯಮಂತ್ರಿ

ಬೆಂಗಳೂರಿನ ವಿಧಾನಸೌಧದ ಎದುರು ಡೊಳ್ಳು ಬಾರಿಸುವ ಮೂಲಕ ಮಾನವ ಸರಪಳಿ ಅಭಿಯಾನಕ್ಕೆ ಸಿಎಂ ಸಿದ್ದರಾಮಯ್ಯ ಅವರು ಭಾನುವಾರ ಚಾಲನೆ ನೀಡಿದರು.

ಮಾನವ ಸರಪಳಿಯಲ್ಲಿ ಭಾರಿ ಸಂಖ್ಯೆಯಲ್ಲಿ ಭಾಗವಹಿಸಿದ್ದ ಸಾರ್ವಜನಿಕರು.

ಅಂತಾರಾಷ್ಟ್ರೀಯ ಪ್ರಜಾತಂತ್ರ ದಿನಾಚರಣೆಯಲ್ಲಿ ಜಾನಪದ ಕಲಾತಂಡಗಳು ಭಾಗಿ. ಫೋಟೋ: ಸುಧಾಕರ್ ದೇವರಾಜ್

ಬೆಂಗಳೂರಿನ ಮೈಸೂರು ರಸ್ತೆಯಲ್ಲಿ ವಿದ್ಯಾರ್ಥಿಗಳು ಮಾನವ ಸರಪಳಿಯಲ್ಲಿ ಪಾಲ್ಗೊಂಡರು.

ಅಸಮಾನತೆ ತೊಡೆದು ಹಾಕಬೇಕು

ಸಮಾಜದಲ್ಲಿರುವ ಅಸಮಾನತೆ ತೊಡೆದು ಹಾಕುವವರೆಗೂ ದೇಶಕ್ಕೆ ಸಿಕ್ಕ ಸ್ವಾತಂತ್ರ್ಯಕ್ಕೆ ಅರ್ಥ ಇರುವುದಿಲ್ಲ. ನಮ್ಮ ಸರಕಾರ ಸಮಾನತೆ ಸಾಧಿಸುವ ದಿಕ್ಕಿನಲ್ಲಿ, ಎಲ್ಲಾ ಜಾತಿ-ಎಲ್ಲಾ ಧರ್ಮದ ಬಡವರಿಗೆ, ಮಧ್ಯಮ ವರ್ಗದವರಿಗೆ ಶಕ್ತಿ ತುಂಬುವ ಕಾರ್ಯಕ್ರಮ ರೂಪಿಸಿ ಜಾರಿ ಮಾಡಿದ್ದೇವೆ. ಏಕತೆ ನೆಪದಲ್ಲಿ ಸಮಾಜವನ್ನು ಒಡೆಯುವ ವಿಚ್ಛಿದ್ರಕಾರಕ ಶಕ್ತಿಗಳನ್ನು ನಾಶ ಮಾಡಲು ಪ್ರಜಾಪ್ರಭುತ್ವವಾದಿಗಳು ಎದ್ದುನಿಲ್ಲಬೇಕು. ಬನ್ನಿ ಎದ್ದು ನಿಲ್ಲೋಣ. ಏಕತೆ ಭಜನೆ ಮಾಡುವ ವಿಚ್ಛಿದ್ರಕಾರಕ ದುಷ್ಟ ಶಕ್ತಿಗಳು ಸಾಮಾಜಿಕ ನ್ಯಾಯ, ಸಮಾನತೆಯ ವಿರೋಧಿಗಳು. ಇವರು ಸಮಾಜದ ಶತ್ರುಗಳು ಇವರನ್ನು ಮೆಟ್ಟಿ ನಿಲ್ಲದ ಹೊರತು ಮಹಿಳೆಯರ, ದಲಿತರ, ಹಿಂದುಳಿದವರ ಹಕ್ಕುಗಳು, ಅವಕಾಶಗಳು ಸಿಗಲು ಸಾಧ್ಯವಾಗುವುದಿಲ್ಲ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಭಾವೈಕ್ಯ, ಒಗ್ಗಟ್ಟು ಮೆರೆದ ರಾಜ್ಯದ ಜನತೆ | ಎಲ್ಲ ಜಿಲ್ಲೆಗಳಲ್ಲಿ ಅಭೂತಪೂರ್ವ ಸ್ಪಂದನೆ

ನಾಡಿನಾದ್ಯಂತ ಯಶಸ್ವಿ ಮಾನವ ಸರಪಳಿ ಅಭಿಯಾನ

113 ಕಿ.ಮೀ. ಸರಪಳಿ

ಕಲಬುರಗಿ: ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಹಿನ್ನೆಲೆಯಲ್ಲಿ ಭಾನುವಾರ ಜಿಲ್ಲೆಯಾದ್ಯಂತ 113 ಕಿ.ಮೀ. ಉದ್ದದ ಮಾನವ ಸರಪಳಿ ರಚನೆಗೆ ಕಲಬುರಗಿ ಜಿಲ್ಲೆ ಸಾಕ್ಷಿಯಾಯಿತು. ಬೆಳಗ್ಗೆ 9.30 ಗಂಟೆಗೆ ನಿಗದಿತ ರಸ್ತೆಯುದ್ದಕ್ಕೂ ಶಾಲಾ ಮಕ್ಕಳು, ಆಶಾ-ಅಂಗನವಾಡಿ ಕಾರ್ಯಕರ್ತೆ ಯರು, ಮಹಿಳಾ ಸ್ವಸಹಾಯ ಸಂಘದ ಸದಸ್ಯರು, ಕೂಲಿ ಕಾರ್ಮಿಕರು, ಸಾರ್ವಜನಿಕರು, ಅಧಿಕಾರಿ- ನೌಕರರು, ಚುನಾಯಿತ ಜನಪ್ರತಿನಿಧಿಗಳು ಪರಸ್ಪರ ಕೈ ಹಿಡಿದು ಮಾನವ ಸರಪಳಿ ರಚಿಸಿ ಪ್ರಜಾಪ್ರಭುತ್ವ ವ್ಯವಸ್ಥೆಯ ಮಹತ್ವ ವಿಶ್ವಕ್ಕೆ ಸಾರಿದರು.

ಸಂವಿಧಾನ ಎತ್ತಿಹಿಡಿದ ಜನತೆ

ಶಿರಾ: ನಾವೆಲ್ಲರೂ ಒಂದೇ ಎನ್ನುವ ಮನೋಭಾವದಿಂದ ಎಲ್ಲ ಸ್ತರಗಳ ಜನರು , ವಿದ್ಯಾರ್ಥಿಗಳು,ಚಿಕ್ಕ ಮಕ್ಕಳಿಂದ ಹಿಡಿದು ಹಿರಿಯ ನಾಗರಿಕರವರೆಗೂ ಮಾನವ ಸರಪಳಿಯಲ್ಲಿ ಭಾಗವಹಿಸುವ ಮೂಲಕ ಸಂವಿಧಾನದ ಮಹತ್ವವನ್ನು ಎತ್ತಿಹಿಡಿದಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಿ. ಪರಮೇಶ್ವರ ತಿಳಿಸಿದರು. ಪ್ರಜಾಪ್ರಭುತ್ವ ದಿನಾಚರಣೆಗೆ ತುಮಕೂರು ಜಿಲ್ಲೆಯ ಉಜ್ಜನಕುಂಟೆ ಬಳಿ ರಾ.ಹೆದ್ದಾರಿ 48ರಲ್ಲಿ ನಿರ್ಮಿಸಲಾಗಿದ್ದ 90 ಕಿ.ಮೀ. ಉದ್ದದ ಮಾನವ ಸರಪಳಿಗೆ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿ, ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮಹತ್ವವನ್ನು ದೇಶದ ಎಲ್ಲಾ ಪ್ರಜೆಗಳಿಗೂ ತಿಳಿಸುವ ಉದ್ದೇಶದಿಂದ ವಿಶ್ವದಲ್ಲಿಯೇ ಮೊದಲ ಬಾರಿಗೆ ಬೀದರ್‌ನಿಂದ ಚಾಮರಾಜನಗರ ಜಿಲ್ಲೆವರೆಗೆ 2500 ಕಿಮೀ ಉದ್ದದ ಮಾನವ ಸರಪಳಿಯನ್ನು ರಾಜ್ಯದಲ್ಲಿ ವಿಶ್ವ ದಾಖಲೆಯಾಗುವ ರೀತಿ ನಿರ್ಮಿಸಲಾಗಿದೆ. ಎಲ್ಲೆಡೆಯಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ದೇಶದ ಯಾವುದೇ ರಾಜ್ಯದಲ್ಲಿ ಇಂಥ ಪ್ರಯತ್ನ ನಡೆದಿಲ್ಲ. ಇಡೀ ದೇಶಕ್ಕೆ ನಮ್ಮ ಪ್ರಯತ್ನ ಮಾದರಿಯಾಗಲಿದೆ ಎಂದರು.

ಗಮನ ಸೆಳೆದ ಭಾರತ ನಕ್ಷೆ

ಧಾರವಾಡ: ಜಿಲ್ಲೆಯಲ್ಲಿ ವಿಶೇಷ ಹಾಗೂ ವಿಭಿನ್ನತೆ ಮೂಲಕ ಪ್ರಜಾಪ್ರಭುತ್ವ ದಿನಾಚರಣೆ ಎಲ್ಲರ ಗಮನ ಸೆಳೆಯಿತು. ಕನ್ನಡ ನಾಡು ಪ್ರತಿನಿಧಿಸುವ 1 ಕಿ.ಮೀ ಉದ್ದದ ಹಳದಿ ಕೆಂಪು ಬಟ್ಟೆ ಧ್ವಜ ಪ್ರದರ್ಶನ ಹಾಗೂ ಕೆಸಿಡಿ ಕಾಲೇಜು ಆವರಣದಲ್ಲಿ ಕೇಸರಿ, ಬಿಳಿ, ಹಸಿರು ಬಟ್ಟೆ ತೊಟ್ಟ ಮಕ್ಕಳಿಂದ ಭಾರತ ನಕ್ಷೆ ಮತ್ತು ಅದರೊಳಗೆ ಕರ್ನಾಟಕ ನಕ್ಷೆ ನಿರ್ಮಾಣ ಮಾಡಲಾಯಿತು. ನಗರದ ಜುಬ್ಲಿ ಸರ್ಕಲ್‌ನಿಂದ ಕೆಸಿಡಿ ವರೆಗಿನ ರಸ್ತೆಯಲ್ಲಿ ವಿವಿಧ ವಸತಿನಿಲಯದ ಮಕ್ಕಳಿಂದ ರಾಷ್ಟ್ರದ 30 ರಾಜ್ಯಗಳನ್ನು ಪ್ರತಿನಿಧಿಸುವ ವೇಷ ಭೂಷಣ ಪ್ರದರ್ಶನ ಮಾಡಲಾಯಿತು. ನೆಹರು, ಗಾಂಧಿ, ಅಂಬೇಡ್ಕರ, ಬೋಸ್, ಬೇಂದ್ರೆ, ಝೂನ್ಸಿ ಸೇರಿ ಅನೇಕ ರಾಷ್ಟ್ರಿಯ ನಾಯಕರ ಛದ್ಮವೇಷ ಪ್ರದರ್ಶನ ನಡೆಯಿತು.

ಸಂವಿಧಾನ ಮೌಲ್ಯ ಹೆಚ್ಚಿಸಿ

ವಿಜಯಪುರ: ವಿವಿಧತೆಯಲ್ಲಿ ಏಕತೆ ತೋರುವ ಹೆಮ್ಮೆಯ ರಾಷ್ಟ್ರ ಭಾರತವು ಅತ್ಯಂತ ಯಶಸ್ವಿನ ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಿದ ದೇಶವಾಗಿದೆ. ಸಂವಿಧಾನ ಪ್ರತಿಯೊಬ್ಬರಿಗೆ ಸಮಾನ ಅವಕಾಶ ನೀಡಿದ್ದು, ಸಂವಿಧಾನದ ಆಶಯದಂತೆ ಎಲ್ಲರೂ ನಡೆಯೋಣ ಎಂದು ಜಿಲ್ಲಾಧಿಕಾರಿ ಟಿ.ಭೂಬಾಲನ್ ಕರೆನೀಡಿದ್ದಾರೆ. ಜಿಲ್ಲೆಯ ರಾಯಚೂರು ಗಡಿಯಿಂದ ಮುದ್ದೇಬಿಹಾಳ ತಾಲೂಕಿನ ವಿರೇಶನಗರದಿಂದ ಬಾಗಲಕೋಟೆ ಜಿಲ್ಲೆಯ ಗಡಿ ಭಾಗದ ಆಲಮಟ್ಟಿಯವರೆಗಿನ ಸುಮಾರು 62 ಕಿ.ಮೀ.ವರೆಗೆ ಮಾನವ ಸರಪಳಿ ಕಾರ್ಯಕ್ರಮದಲ್ಲಿ ವಿವಿಧ ವಸತಿ ಶಾಲೆ ವಿದ್ಯಾರ್ಥಿಗಳು, ಮಹಿಳಾ ಸ್ವಸಹಾಯ ಸಂಘದ ಸದಸ್ಯರು ಭಾಗವಹಿಸಿ ಯಶಸ್ವಿಗೊಳಿಸಲಾಯಿತು. ಕೈ ಕೈ ಹಿಡಿದು ಜೈ ಹಿಂದ್, ಜೈ ಕರ್ನಾಟಕ ಘೋಷಣೆ ಕೂಗಿದರು.

ಇತಿಹಾಸ ಸೃಷ್ಟಿಗೆ ಸಾಕ್ಷಿ

ಮೈಸೂರು: ಪ್ರಭಾಪ್ರಭುತ್ವ ಗಟ್ಟಿಗೊಳ್ಳಬೇಕಾದರೆ ಮಾನವೀಯತೆ ಹಾಗೂ ಸಹಾಯ ಮಾಡುವ ಮೌಲ್ಯಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು ಎಂದು ಶಾಸಕ ತನ್ವೀರ ಸೇಠ್ ತಿಳಿಸಿದರು. ನಗರದ ಅರಮನೆ ಉತ್ತರ ದ್ವಾರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಬೃಹತ್ ಮಾನವ ಸರಪಳಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಮಾನವ ಸರಪಳಿಯಲ್ಲಿ ಪಾಲ್ಗೊಂಡವರು ಕೈ ಕೈ ಹಿಡಿದುಕೊಂಡು ತಮ್ಮ ಕೈಗಳನ್ನು ಮೇಲಕ್ಕೆ ಎತ್ತಿಹಿಡಿದು ಜೈಹಿಂದ್, ಜೈ ಕರ್ನಾಟಕ ಎಂಬ ಘೋಷಣೆಗಳನ್ನು ಕೂಗಲಾಯಿತು. ತಾಲೀಮು ಮುಗಿಸಿ ಅರಮನೆಗೆ ವಾಪಸಾಗುತ್ತಿದ್ದ ದಸರಾ ಉತ್ಸವದ 13 ಆನೆ ಗಳನ್ನು ಕೂಡ ಸಾಲಿನಲ್ಲಿ ನಿಲ್ಲಿಸಿದ್ದು ವಿಶೇಷವಾಗಿತ್ತು.

ಹಕ್ಕು ರಕ್ಷಿಸುವುದೇ ಪ್ರಜಾಪ್ರಭುತ್ವ

ಬೆಳಗಾವಿ: ವಿವಿಧತೆಯಲ್ಲಿ ಏಕತೆ ತೋರುವ ನಮ್ಮ ಹೆಮ್ಮೆಯ ರಾಷ್ಟ್ರದ ವೈವಿಧ್ಯಮಯ ಧ್ವನಿಗಳ ಅಭಿವ್ಯಕ್ತಿಗೆ ಮತ್ತು ಮೂಲಭೂತ ಹಕ್ಕುಗಳ ರಕ್ಷಣೆಗೆ ಅವಕಾಶ ನೀಡುವ ಆಡಳಿತದ ವ್ಯವಸ್ಥೆಯೇ ಪ್ರಜಾಪ್ರಭುತ್ವದ ಜೀವಾಳವಾಗಿದೆ ಎಂದು ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಅವರು ನುಡಿದರು. ರಾಮದುರ್ಗ ತಾಲೂಕಿನ ಸಾಲಹಳ್ಳಿಯಿಂದ ಕಿತ್ತೂರು ತಾಲೂಕಿನ ತೇಗೂರ ಗ್ರಾಮದವರೆಗೆ 145 ಕಿ.ಮೀ ಮಾನವ ಸರಪಳಿಯನ್ನು ನಿರ್ಮಿಸಿ ಮಾನವ ಬಂಧುತ್ವವನ್ನು ಯಶಸ್ವಿಗೊಳಿಸಲಾಗಿದೆ ಎಂದು ಜಾರಕಿಹೊಳಿ ಮೆಚ್ಚುಗೆ ವ್ಯಕ್ತಪಡಿಸಿದರು.

ಸಾಂಪ್ರದಾಯಿಕ ಉಡುಪಿನಲ್ಲಿ

ಚಾಮರಾಜನಗರ: ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಅಂಗವಾಗಿ ಜಗತ್ತಿನ ಅತಿದೊಡ್ಡ ಮಾನವ ಸರಪಳಿಗೆ ಚಾಮರಾಜನಗರ ಕೂಡ ಬೆಸೆದುಕೊಂಡಿತು. ಚಾಮರಾಜನಗರ ಮತ್ತು ಮೈಸೂರು ಗಡಿಭಾಗವಾದ ಮೂಗೂರು ಕ್ರಾಸ್‌ನಲ್ಲಿ ಆರಂಭಗೊಂಡ ಮಾನವ ಸರಪಳಿ ಚಾಮರಾಜನಗರದ ರಾಮಸಮುದ್ರದ ಅಂಬೇಡ್ಕರ್ ಪ್ರತಿಮೆ ಬಳಿ ಕೊನೆಗೊಂಡಿತು. ಶಾಲಾ-ಕಾಲೇಜಿನ ವಿದ್ಯಾರ್ಥಿಗಳು ಮಾನವ ಸರಪಳಿ ಹಾದುಹೋಗಿದ್ದ ಮಾರ್ಗದಲ್ಲಿ ಒಂದೊಂದು ರಾಜ್ಯದ ದಿರಿಸು ಧರಿಸಿ ವಿವಿಧೆತೆಯಲ್ಲಿ ಏಕತೆಯ ಸಂಸ್ಕೃತಿ ಬಿಂಬಿಸಿದರು. ಸೋಲಿಗರ ಗೊರುಕನ, ಜೇನುಕುರುಬರ ನೃತ್ಯ, ಗೊರವರ ಕುಣಿತ, ಹುಲಿ ವೇಷ, ವೀರಗಾಸೆ ತಂಡಗಳು ಗಮನ ಸೆಳೆದವು.

ಹೊಸ ಇತಿಹಾಸ ಸೃಷ್ಟಿ

ವಿಜಯನಗರ: ಜಿಲ್ಲೆಯ ಜನರು ನಮ್ಮ ಹೆಮ್ಮೆಯ ಪ್ರಜಾಪ್ರಭುತ್ವ ಬಲಪಡಿಸುವುದಕ್ಕೆ ಕೈ ಜೋಡಿಸಿದರು. ಐತಿಹಾಸಿಕ ಕಾರ್ಯಕ್ರಮದಲ್ಲಿ ಭಾಗಿಯಾಗಿ ಜಯಘೋಷ ಹಾಕಿ ಸಂಭ್ರಮಿಸಿದರು. ವಿಜಯ ನಗರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ನಡೆದ ಮಾನವ ಸರಪಳಿ ಕಾರ್ಯಕ್ರಮವು ಹೊಸ ಇತಿಹಾಸ ಸೃಷ್ಟಿಸಿತು. ಶಾಲಾ ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ತಂಡೋಪತಂಡವಾಗಿ ಆಗಮಿಸಿ ಪ್ರಜಾಪ್ರಭುತ್ವ ದಿನದ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಭಾಗಿಯಾದರು. ವಿಜಯನಗರ-ಕೊಪ್ಪಳ ಗಡಿಭಾಗದ: ರಾಷ್ಟ್ರೀಯ ಹೆದ್ದಾರಿಯಲ್ಲಿನ ಟಿ.ಬಿ.ಡ್ಯಾಂ ಮೊದಲನೇ ಸೇತುವೆ ಯಿಂದ ಭುವನಹಳ್ಳಿವರೆಗೆ 40 ಕಿ.ಮೀ ಉದ್ದ ಮಾನವ ಸರಪಳಿಯನ್ನು ನಿರ್ಮಿಸಿ ವಿಜಯನಗರ ಜಿಲ್ಲೆಯ ಜನರು ಹೊಸ ಇತಿಹಾಸ ಬರೆದರು.

ಐತಿಹಾಸಿಕ ದಾಖಲೆ

ಶಿವಮೊಗ್ಗ: ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಭಾನುವಾರ ಬೆಳಗ್ಗೆ 9ರಿಂದ 10 ಗಂಟೆಯವರೆಗೆ ಶಿವಮೊಗ್ಗ ಜಿಲ್ಲೆ ಭದ್ರಾವತಿ ತಾಲೂಕಿನ ಬಾರಂದೂರಿನಿಂದ ಶಿವಮೊಗ್ಗ ತಾಲೂಕಿನ ಗಡಿ ಗ್ರಾಮ ಮಡಿಕೆ ಚಿಲೂರುವರೆಗೆ ಮಾನವ ಸರಪಳಿ ರಚನೆ ಕಾರ್ಯಕ್ರಮ ಯಶಸ್ವಿ ಯಾಗಿ ಜರುಗಿತು. ಈ ಬೃಹತ್ ಮಾನವ ಸರಪಳಿ ನಿರ್ಮಾಣದಲ್ಲಿ ಜಿಲ್ಲೆಯ ಶಾಲಾ -ಕಾಲೇಜು ವಿದ್ಯಾರ್ಥಿಗಳು, ಸ್ಥಳೀಯ ಸಂಘ -ಸಂಸ್ಥೆಗಳ ಪ್ರತಿನಿಧಿಗಳು, ಸ್ವಸಹಾಯ ಗುಂಪುಗಳ ಮಹಿಳಾ ಸದಸ್ಯರು, ನೌಕರರು ಹಾಗೂ ಸಾರ್ವಜನಿಕರು ಸಕ್ರಿಯವಾಗಿ ಭಾಗವಹಿಸಿದ್ದರು. ಜಿಲ್ಲಾಧಿಕಾರಿ ಗಳ ಕಚೇರಿ ಆವರಣದಲ್ಲಿ ಗಣ್ಯರು ಹಾಗೂ ಸಾರ್ವಜನಿಕರು ಸಂವಿಧಾನ ಪೀಠಿಕೆಯನ್ನು ವಾಚಿಸಿದರು. ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಮಾತನಾಡಿ, ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಶಿವಮೊಗ್ಗ ಜಿಲ್ಲೆಯಲ್ಲಿ 60ಕಿ. ಮೀ. ಮಾನವ ಸರಪಳಿ ರಚನೆ ಮಾಡಿದ್ದು ಐತಿಹಾಸಿಕ ದಾಖಲೆಯಾಗಿದೆ ಎಂದು ಬಣ್ಣಿಸಿದರು.

ಪ್ರಾಣಾಪಾಯದಿಂದ ಪಾರು

ಲಕ್ಷ್ಮೇಶ್ವರ: ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಅಂಗವಾಗಿ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಹಿಂದಿರುಗುವ ವೇಳೆ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಮೇಲೆ ಹೆಜ್ಜೇನು ದಾಳಿ ಮಾಡಿದ ಘಟನೆ ತಾಲೂಕಿನ ಬಾಲೆಹೊಸೂರು ಸಮೀಪ ಭಾನುವಾರ ನಡೆದಿದೆ. ಹೆಜ್ಜೇನು ಏಕಾಏಕಿ ದಾಳಿ ಮಾಡಿದ್ದರಿಂದ ಗಲಿಬಿಲಿಗೊಂಡ ವಿದ್ಯಾರ್ಥಿಗಳು, ಶಿಕ್ಷಕರು ದಿಕ್ಕಾಪಾಲಾಗಿ ಓಡಿದರು. ಘಟನೆಯಲ್ಲಿ 15ರಿಂದ 20 ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಹೆಜ್ಜೇನು ಕಡಿದಿದ್ದು, ಹೆಚ್ಚಿನ ಗಾಯಗಳಾಗಿಲ್ಲ ಎಂದು ತಿಳಿದುಬಂದಿದೆ.

ಚನ್ನಾರೆಡ್ಡಿ ತುನ್ನೂರ ಭಾಗಿ ಹಿನ್ನೆಲೆ ಸಂಘಟನೆಗಳು ಕಿಡಿ

ಯಾದಗಿರಿ: ಪ್ರಜಾಪ್ರಭುತ್ವ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗಿಯಾದ ಪಿಎಸ್‌ಐ ಪರಶುರಾಮ್ ಸಾವಿನ ಪ್ರಕರಣದ ಎ1 ಆರೋಪಿಯೂ ಆಗಿರುವ ಯಾದಗಿರಿ ಚನ್ನಾರಡ್ಡಿ ಪಾಟೀಲ ತುನ್ನೂರ ವಿರುದ್ಧ ದಲಿತಪರ ಹಾಗೂ ಕನ್ನಡ ಸಂಘಟನೆಗಳ ಧಿಕ್ಕಾರ ಕೂಗಿ ಪ್ರತಿಭಟನೆ ನಡೆಸಿದ ಪ್ರಸಂಗ ಸಹ ನಡೆಯಿತು. ಮೊದಲಿಗೆ ಭೀಮ್ ಹಾಗೂ ಜೈ ಸಂವಿಧಾನ ಘೋಷಣೆಯನ್ನು ಹಾಕದ

ಹಿನ್ನೆಲೆಯಲ್ಲಿ ಜಿಲ್ಲಾಡಳಿತ ವಿರುದ್ಧ ಧ್ವನಿ ಎತ್ತಿದ ಜಿಲ್ಲೆಯ ದಲಿತ ಮುಖಂಡರು, ಅನಂತರ ಏಕಾಏಕಿ, ಪಿಎಸ್‌ಐ ಪರಶುರಾಮ ಸಾವಿನ ಪ್ರಕರಣದಲ್ಲಿ ಆರೋಪಿ ಸ್ಥಾನದಲ್ಲಿರುವ ಶಾಸಕ ಚನ್ನಾರಡ್ಡಿ ಪಾಟೀಲ ತುನ್ನೂರ್ ಅವರ ವಿರುದ್ಧವೂ ಧಿಕ್ಕಾರ ಕೂಗಿ ಒಬ್ಬ ಅಧಿಕಾರಿಯ ಸಾವಿನ ಪ್ರಕರಣ ಆರೋಪಿಯಾಗಿರುವರು ಸರಕಾರಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಹೇಗೆ ಸಾಧ್ಯ? ಇದು ನಿಜಕ್ಕೂ ಜಿಲ್ಲಾಡಳಿತ ವೈಫಲ್ಯ ಎಂದು ಆರೋಪಿಸಿ ಜಿಲ್ಲಾ ಉಸ್ತುವಾರಿ ಸಚಿವರಿಗೆ, ಜಿಲ್ಲಾಧಿಕಾರಿಗೆ ಮುತ್ತಿಗೆ ಹಾಕಿದರು. ಈ ವೇಳೆ ಪರಿಸ್ಥಿತಿ ಬಿಗಾಡಿಯಿಸುತ್ತಿದಂತೆ ಶಾಸಕ ತುನ್ನೂರ ಅವರು ಅಲ್ಲಿಂದ ಪೊಲೀಸ್ ಭದ್ರತೆಯೊಂದಿಗೆ ಕಾಲ್ಕಿತ್ತರು. ಇದಾದ ನಂತರ ಡಿ.ಸಿ ಸುಶೀಲಾ ಬಿ ಅವರತ್ತ ತೆರಳಿದ ಸಂಘಟನೆಗಳ ಮುಖಂಡರ, ಅವರನ್ನು ಕಾರ್ಯಕ್ರಮಕ್ಕೆ ಹೇಗೆ ಆಹ್ವಾನ ನೀಡಿದ್ದೀರಿ? ಪ್ರಕರಣದ ತನಿಖೆ ನಡೆಯುತ್ತಿರುವಾಗ ಸರಕಾರಿ ಕಾರ್ಯಕ್ರಮದಲ್ಲಿ ಭಾಗಿಯಾಗುವುದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿ, ಈ ರೀತಿ ಘಟನೆ ಮುಂದೆ ಜರುಗಿದರೆ ಜಿಲ್ಲಾಡಳಿತವೇ ಹೊಣೆ ಎಂದು ಎಚ್ಚರಿಸಿದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ಜಿಲ್ಲಾಧಿಕಾರಿಗಳು, ನಾವು ಶಿಷ್ಟಾಚಾರ ಪಾಲನೆ ಮಾಡಿದ್ದೇವೆ ಎಂದು ಹೇಳಿ ಸಮಜಾಯಿಸಿ ನೀಡಿದರು. ಆಗ ಪರಿಸ್ಥಿತಿ ತಿಳಿಯಾಯಿತು.

ವಿಶ್ವವಾಣಿ

ಸಂಪಾದಕೀಯ

ಪ್ಲಾಸ್ಟಿಕ್ ತ್ಯಾಜ್ಯಕ್ಕೆ ಮುಕ್ತಿ ಬೇಕಿದೆ

ಬ್ರಿಟನ್‌ನ ಲೀಡ್ಸ್ ವಿಶ್ವವಿದ್ಯಾಲಯ ಇತ್ತೀಚೆಗೆ ನಡೆಸಿದ ಅಧ್ಯಯನವೊಂದರ ಪ್ರಕಾರ, ಜಗತ್ತಿನಲ್ಲಿ ಅತಿ ಹೆಚ್ಚು ಪ್ಲಾಸ್ಟಿಕ್ ತ್ಯಾಜ್ಯ ಸೃಷ್ಟಿಸುತ್ತಿರುವ ದೇಶ ಭಾರತ ಎಂಬ ಕುಖ್ಯಾತಿಯನ್ನು ಪಡೆದಿದೆ. ಭಾರತದಲ್ಲಿ ಪ್ರತಿವರ್ಷ ಸೃಷ್ಟಿಯಾಗುವ ಪ್ಲಾಸ್ಟಿಕ್ ತ್ಯಾಜ್ಯವು ಸುಮಾರು 93 ಲಕ್ಷ ಟನ್. ಜಗತ್ತಿನಲ್ಲಿ ಸೃಷ್ಟಿಯಾಗುವ ಪ್ಲಾಸ್ಟಿಕ್ ತ್ಯಾಜ್ಯದ ಐದನೇ ಒಂದು ಭಾಗ ಇಲ್ಲಿ ಸೃಷ್ಟಿಯಾಗುತ್ತಿದೆ. ಪ್ರತಿ ವರ್ಷದ ಅಂಕಿಅಂಶಗಳನ್ನು ಗಮನಿಸಿದರೆ, ಪ್ಲಾಸ್ಟಿಕ್ ತ್ಯಾಜ್ಯದ ಸಮಸ್ಯೆಯು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇರುವುದು ಕಾಣಿಸುತ್ತದೆ. ಪ್ಲಾಸ್ಟಿಕ್ ತ್ಯಾಜ್ಯದ ಸಂಗ್ರಹ, ವಿಲೇವಾರಿ ಮತ್ತು ಮರುಬಳಕೆಗೆ ಹಲವು ನಿಯಮಗಳಿವೆ. ಆದರೆ ಅನುಷ್ಠಾನ ಮಾತ್ರ ಸಮರ್ಪಕವಾಗಿ ಆಗುತ್ತಿಲ್ಲ. ಬೆಂಗಳೂರಿನಲ್ಲೂ ಪ್ರತಿ ವರ್ಷ ಸುಮಾರು 4000 ಟನ್‌ನಷ್ಟು ತ್ಯಾಜ್ಯ ಶೇಖರಣೆ ಆಗುತ್ತಿದೆ. ಅದರಲ್ಲಿ ಬಹುತೇಕ ಪ್ಲಾಸ್ಟಿಕ್ ತ್ಯಾಜ್ಯಗಳು ಆಗಿವೆ. ಗಂಭೀರ ಆರೋಗ್ಯ ಸಮಸ್ಯೆಗೆ ಕಾರಣವಾಗುವ ಈ ಪ್ಲಾಸ್ಟಿಕ್ ತ್ಯಾಜ್ಯವನ್ನು ನಿಯಂತ್ರಣಕ್ಕೆ ತರುವುದು ಅಸಾಧ್ಯವೇನೋ ಎಂಬಂತಾಗಿದೆ. ರಾಜ್ಯ ಸರಕಾರ ಕೂಡ 2016ರ ಮಾರ್ಚ್ 11ರಿಂದ ಜಾರಿಗೆ ಬರುವಂತೆ ಪ್ಲಾಸ್ಟಿಕ್ ಉತ್ಪನ್ನಗಳ ತಯಾರಿಕೆ, ಸಾಗಣೆ, ಸಂಗ್ರಹ ಮತ್ತು ಮಾರಾಟವನ್ನು ನಿಷೇಧಿಸಿ ಅಧಿಸೂಚನೆ ಹೊರಡಿಸಿದೆ. ಆರಂಭದಲ್ಲಿ ಕೊಂಚ ಮಟ್ಟಿಗೆ ತಗ್ಗಿದ್ದ ಪ್ಲಾಸ್ಟಿಕ್ ಹಾವಳಿಯು ಮತ್ತೆ ತೀವ್ರಗೊಂಡಿದೆ. ರೆಸ್ಟೋರೆಂಟ್‌ಗಳು, ಹೋಟೆಲ್‌ಗಳು, ಚಿಲ್ಲರೆ ಮಳಿಗೆಗಳು, ಹೂವು, ಹಣ್ಣು, ತರಕಾರಿ ಮಾರುಕಟ್ಟೆಗಳು, ದಿನಸಿ ಅಂಗಡಿಗಳು, ಔಷಧದ ಅಂಗಡಿ, ಬೇಕರಿಗಳಲ್ಲಿ ಪ್ಲಾಸ್ಟಿಕ್ ಕೈಚೀಲಗಳ ಬಳಕೆ ಎಗ್ಗಿಲ್ಲದೆ ನಡೆಯುತ್ತಿದೆ. ತ್ಯಾಜ್ಯ ನಿರ್ವಹಣೆಯಲ್ಲಿ ಸ್ಥಳೀಯಾಡಳಿತ ಸಂಸ್ಥೆಗಳ ಪಾತ್ರ ನಿರ್ಣಾಯಕವಾಗಿದೆಯಾದರೂ ಜನರ ಸಹಭಾಗಿತ್ವವೂ ಮುಖ್ಯವಾಗಿದೆ. ನಿತ್ಯ ನಡೆಯುವ ವಿವಿಧ ಸಮಾರಂಭಗಳಲ್ಲಿ ಏಕ ಬಳಕೆ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಬೇಕಿದೆ. ಅದರ ಬದಲಾಗಿ ಅಡಿಕೆ ಪಟ್ಟೆ, ಬಾಳೆ ಎಲೆ ಹಾಗೂ ಮರು ಬಳಸಬಹುದಾದಂತಹ ಉಕ್ಕಿನ ವಸ್ತುಗಳನ್ನು ಉಪಯೋಗಿಸಬೇಕಿದೆ. ತ್ಯಾಜ್ಯ ಉತ್ಪತ್ತಿಯಾಗುವ ಸ್ಥಳದಲ್ಲಿಯೇ ಬೇರ್ಪಡಿಸಿ, ವಿಲೇವಾರಿಗೆ ಕ್ರಮವಹಿಸಬೇಕು. ಆ ಮೂಲಕ ಪ್ಲಾಸ್ಟಿಕ್ ತ್ಯಾಜ್ಯ ಮುಕ್ತ ನಗರ, ರಾಜ್ಯ, ದೇಶವನ್ನು ನಿರ್ಮಾಣ ಮಾಡಬೇಕಿದೆ.

ಸೊಂಪಾದಕೀಯ

ಮುನಿರತ್ನನ್ ಪದಗಳು

ನಮ್ಮ ರಾಜಕಾರಣಿಗಳ ಭಾಷಾ ಬಳಕೆಯ ಬಗ್ಗೆ ಯಾರಿಗೆ ಗೊತ್ತಿಲ್ಲ ಹೇಳಿ. ರಾಜಕಾರಣಿಗಳು ಮಾತನಾಡಲು ಶುರುಮಾಡಿದ ಮೇಲೆ ಸಬ್ಜೆಕ್ಟ್, ಆಬ್ಜೆಕ್ಟ್, ವರ್ಬ್ ಅನ್ನೋದೆಲ್ಲ ಕ್ಷಣಮಾತ್ರದಲ್ಲಿ ಕಳೆದುಹೋಗುವಂಥ ವಿಷಯಗಳು. ಎಲ್ಲಿಂದಲೋ ಶುರುಮಾಡಿ ಮತ್ತೆ ಎಲ್ಲೋ ಮುಗಿಸುವ ಇವರ ಈ ಕಲೆ ಇಲ್ಲಿಯವರೆಗೆ ಯಾರಿಗೂ ಅರ್ಥವಾಗಿಲ್ಲ. ಆದರೆ ಈಗ ಸುದ್ದಿಯಲ್ಲಿರುವುದು ರಾಜಕಾರಣಿಯೊಬ್ಬರ ಮಾತಿನ ಗ್ರಾಮರ್ ಅಲ್ಲ, ಬದಲಾಗಿ 'ಅಕ್ಕ ಅಮ್ಮ' ಎನ್ನುವ ಅವರ ವರಸೆ. ಹೌದು ಶಾಸಕ ಮುನಿರತ್ನ ಬಾಯಿಗೆ ಬಂದಂತೆ ಮಾತನಾಡಿದ್ದಾರೆ ಎಂಬ ಆರೋಪದ ಮೇಲೆ ಈಗ ಪೊಲೀಸರು ಅವರನ್ನು ಬಂಧಿಸಿ ವಶಕ್ಕೆ ತೆಗೆದುಕೊಂಡಿದ್ದಾರೆ. ಗುತ್ತಿಗೆದಾರರೊಬ್ಬರ ಜತೆ ನಡೆಸಿದ ಸಂಭಾಷಣೆ ಈಗ ಅವರ ಕುತ್ತಿಗೆಗೆ ಬಂದಿದೆ. ಮುನಿರತ್ನ ಅವರ ಮೇಲೆ ಈಗ ಲಂಚ ತೆಗೆದುಕೊಂಡ ಆರೋಪ, ಜೀವ ಬೆದರಿಕೆ, ಅಶ್ಲೀಲ ಮಾತುಗಳಿಂದ ನಿಂದನೆ, ಹೆಣ್ಣು ನಿಂದನೆ ಹೀಗೆ ಹಲವಾರು ಆಧಾರಗಳ ಮೇಲೆ ಕೇಸ್ ಬೀಳುತ್ತಿದೆ. ಮುನಿರತ್ನ ಮಾತಾಡುವಾಗ ಅದನ್ನು ರೆಕಾರ್ಡ್ ಮಾಡಿಕೊಂಡ ಗುತ್ತಿಗೆದಾರ ಅದನ್ನು ಆನ್‌ಲೈನ್‌ನಲ್ಲಿ ಹರಿಬಿಟ್ಟಿರುವುದರಿಂದ, ಇಲ್ಲಿವರೆಗೂ 'ರತ್ನನ್ ಪದ'ಗಳನ್ನು ಕೇಳಿ ಖುಷಿ ಪಡುತ್ತಿದ್ದ ಕನ್ನಡಿಗರು ಈಗ 'ಮುನಿರತ್ನನ್ ಪದ'ಗಳನ್ನು ಕೇಳುವಂತಾಗಿದೆ. ಹಾಗೆ ನೋಡಿದರೆ ಅದು ಕೇಳಲಿಕ್ಕೆ ಬಹಳ ಕಷ್ಟ ಎನ್ನುವಂಥ ಮಾತುಗಳು. ಯಾಕೆಂದರೆ ಇಲ್ಲಿರುವ ಅಶ್ಲೀಲತೆ ಆ ಮಟ್ಟದ್ದು. ಗುತ್ತಿಗೆದಾರನಿಗೆ ಹೆಚ್ಚು ಕಮ್ಮಿ ಆದರೆ ನೀನು ರೇಣುಕಾಸ್ವಾಮಿ ಥರ ಆಗೋಗ್ತೀಯ ಅಂತ ಬೆದರಿಕೆ ಹಾಕಿದ್ದಾರೆ ಮುನಿರತ್ನ ಎನ್ನಲಾಗಿದೆ. ಮುನಿರತ್ನ ಅವರ ಆಡಿಯೋದಲ್ಲಿರುವ ಮಾತುಗಳನ್ನು ಕೇಳಿದಾಗಲೇ ಇದು ದರ್ಶನ್ ಸ್ಟೈಲ್ ಆಫ್ ಟಾಕಿಂಗ್ ಅಂತ ಯಾರಿಗೆ ಬೇಕಾದರೂ ಸುಲಭವಾಗಿ ಗೊತ್ತಾಗುತ್ತೆ. ಇನ್ನು ದರ್ಶನ್ ಶೈಲಿಯಲ್ಲಿ ಆವಾಜ್ ಹಾಕುವುದು ಹೊಸದೇನಲ್ಲ ಬಿಡಿ. ಇನ್ನು ಮುನಿರತ್ನ ಮೇಲೆ ಈಗಷ್ಟೇ ಕೇಸು ಬಿದ್ದಿದೆ. ಆದರೆ ಈಗ ಉಳಿದಿರುವ ಕುತೂಹಲ ಎಂದರೆ, ಇಬ್ಬರೂ ಸಮಾನ ಮನಸ್ಕರು ಎಂದು ಹೇಳಿ ದರ್ಶನ್ ಮತ್ತು ಮುನಿರತ್ನ ಅವರನ್ನು ಜೈಲಿನಲ್ಲಿ ಜತೆಜತೆಗೆ ಇಡುತ್ತಾರಾ ಅನ್ನುವುದು ಮಾತ್ರ.

ಸಂಪಾದಕರ ಸದ್ಯಶೋಧನೆ

ಬೈಗುಳಗಳ ಕುರಿತು

ಜಗತ್ತಿನ ಯಾವ ಭಾಷೆಯನ್ನಾದರೂ ಕಲಿಯಲು ಸುಲಭ ಮಾರ್ಗ ಬೈಗುಳಗಳ ಮೂಲಕ ಎಂಬ ಮಾತಿದೆ. ಸಾಮಾನ್ಯವಾಗಿ ಎಲ್ಲರೂ ಮೊದಲು ಬೈಗುಳಗಳನ್ನು ಕಲಿತು, ಉಳಿದ ಪದಗಳ ಅರ್ಥಗಳನ್ನು ತಿಳಿದುಕೊಳ್ಳುತ್ತಾರಂತೆ. ಹೀಗಾಗಿ ಬೈಗುಳಗಳು ಇಲ್ಲದ ಭಾಷೆಯೇ ಇರಲಿಕ್ಕಿಲ್ಲ. ಎಲ್ಲರಿಗೂ ಬೈಗುಳಗಳ ಅರ್ಥ ಗೊತ್ತಿರುತ್ತದೆ ಎಂದೇನೂ ಇಲ್ಲ. ಅನೇಕರಿಗೆ ದರವೇಶಿ ಮತ್ತು ಬೇವರ್ಸಿ ಪದಗಳ ಅರ್ಥ ಗೊತ್ತಿರುವುದಿಲ್ಲ. ಆದರೆ ಅವು ಬೈಗುಳಗಳು ಎಂಬುದು ಗೊತ್ತು. ಹೀಗಾಗಿ ಅರ್ಥ ಗೊತ್ತಿಲ್ಲದಿದ್ದರೂ ಸಿಟ್ಟಿನಲ್ಲಿ ಆ ಪದಗಳನ್ನು ಬಳಸುತ್ತಾರೆ. ಡಾ.ರಾಜ್‌ಕುಮಾರ್ ಅವರು ಸಿಟ್ಟು ಬಂದಾಗ 'ಕತ್ತೆ ಭಡವ' ಎಂದು ಬೈಯುತ್ತಿದ್ದರಂತೆ. ಆ ಪದಕ್ಕೆ ವಿಶೇಷವಾದ ಅರ್ಥವಿಲ್ಲ. ಬೈದಂತೆಯೂ ಆಗಬೇಕು, ಆದರೆ ಅದಕ್ಕೆ ಕೆಟ್ಟ ಅರ್ಥವೂ ಇರಬಾರದು ಮತ್ತು ಮನಸ್ಸಿಗೆ ನೋವಾಗಬಾರದೆಂದು ಅವರು ಆ ಪದವನ್ನು ಬಳಸುತ್ತಿದ್ದಿರಬೇಕು. ನನ್ನ ವಿದ್ವಾಂಸ ಸ್ನೇಹಿತರೊಬ್ಬರು, ಕೋಪ ಬಂದಾಗ, 'ಹಸಿಗಿಡದ ತೊಪ್ಪಲು', 'ಒಣಗಿದ ಮರದ ತೊಗಟೆ', 'ಬಿದ್ದುಹೋದ ಮರದ ಕೊಂಬೆ', 'ಒಣಗಿದ ಮರದ ರೆಂಬೆ' ಎಂದು ಬೈಯುತ್ತಿದ್ದರು. ಅವರ ದನಿಯಿಂದ ಮಾತ್ರ ಅವರಿಗೆ ಕೋಪ ಬಂದಿದ್ದು ಗೊತ್ತಾಗುತ್ತಿತ್ತು, ಆದರೆ ಬೈಗುಳಗಳಿಂದಲ್ಲ. ಅಸಲಿಗೆ ಅವು ಬೈಗುಳಗಳೇ ಆಗಿರಲಿಲ್ಲ. ದಿವಂಗತ ಪತ್ರಕರ್ತ ಮತ್ತು 'ಪದಾರ್ಥ ಚಿಂತಾಮಣಿ' ಮೂಲಕ ಪದಗಳ ಪ್ರೀತಿ ಹುಟ್ಟಿಸಿದ ಪಾ.ವೆಂ.ಆಚಾರ್ಯರ ತಾಯಿ ಚಿಕ್ಕಂದಿನಲ್ಲಿ ನಿರ್ಗಂಟಿಕ ಎಂದು ಬೈಯುತ್ತಿದ್ದರಂತೆ. 'ಇದು ನಿಂದನೆಯ ಬೈಗುಳ ಹೌದೋ, ಅಲ್ಲವೋ ನಾನರಿಯೆ. ಆದರೆ ದಕ್ಷಿಣ ಕನ್ನಡದ ಬ್ರಾಹ್ಮಣರಲ್ಲಿ ಈ ಪದ ಬಳಕೆಯಿತ್ತು. ನಿರ್ಗಂಟಿಕ ಅಂದರೆ ದಯೆ, ಮರುಕ, ಮಮತೆ ಇಲ್ಲದ ಭಾವನಾಶೂನ್ಯ ವ್ಯಕ್ತಿ' ಎಂದು ಆಚಾರ್ಯರು ಹೇಳಿದ್ದಾರೆ. ಅಷ್ಟಕ್ಕೇ ಅವರು ಸುಮ್ಮನಾಗುವುದಿಲ್ಲ. 'ಅಮರ ಕೋಶದಲ್ಲಿ ನಿರ್ಗ್ರಂಥನ ಅಂದರೆ ಕೊಲೆ ಎಂದಿದೆ. ನಿರ್ಗಂಟಿಕ ಅದರ ಅಪಭ್ರಂಶವಾಗಿರಬಹುದೇ? ಆದರೆ ಈ ತಾತ್ಪರ್ಯ ನನಗೆ ಸಮಾಧಾನ ತರಲಿಲ್ಲ. ಆದರೆ ಈಚೆಗೆ ಜೈನ ಸಾಹಿತ್ಯವನ್ನು ಅವಲೋಕಿಸಿದಾಗ ಒಂದು ಹೊಸ ಸಮಾಧಾನಕರ ಊಹೆ ಸಾಧ್ಯವಾಯಿತು. ಜೈನರಲ್ಲಿ ನಿರ್ಗ್ರಂಥ ಎಂದರೆ ದಿಗಂಬರ ಸನ್ಯಾಸಿ. ಎಲ್ಲ ಮಮತೆಗಳನ್ನೂ ತೊರೆದು ದ್ವೇಷಗಳನ್ನು ತ್ಯಜಿಸಿ ಅಂದರೆ ಪ್ರಾಪಂಚಿಕ ಸಂಬಂಧದ ಎಲ್ಲ ಗ್ರಂಥಿಗಳನ್ನೂ ಕಡಿದು ಅವಧೂತನಾದವನು ನಿರ್ಗ್ರಂಥ ಅಥವಾ ನಿರ್ಗ್ರಂಥಿಕ. ಜೈನರ ಪ್ರಭಾವ ಬೆಳೆದು ವೈದಿಕ ಧರ್ಮವನ್ನು ಅದು ಒತ್ತುತ್ತಿದ್ದಾಗ ಜೈನ ಸಾಧು ನಿರ್ಗ್ರಂಥಿಕ, ವೈದಿಕರಲ್ಲಿ ಒಂದು ನಿಂದಾಪದವಾಗಿ ಮಮತೆ ಇಲ್ಲದವನೆಂಬ ಕೆಟ್ಟ ಅರ್ಥದಲ್ಲಿ ನಿರ್ಗಂಟಿಕನಾಗಿ ಬಳಕೆ ಪಡೆದಿರಬಹುದು. ಅದು ಜೈನರ ಮೇಲೆ ಕ್ರೋಧವನ್ನು ತೋರಿಸುವ ಒಂದು ದಾರಿ'. ಆಚಾರ್ಯರು ಇಷ್ಟಕ್ಕೆ ಸುಮ್ಮನಾಗುವುದಿಲ್ಲ. ವಿದೇಶಗಳಲ್ಲಿ, ಬೇರೆ ಧರ್ಮಗಳಲ್ಲಿ ಇರುವ ಬೈಗುಳದ ಬೆನ್ನತ್ತಿ ಹೋಗುತ್ತಾರೆ. ಇಂಗ್ಲಿಷ್ ನಿಘಂಟುಗಳಲ್ಲಿ Nazarene ಎಂಬ ಶಬ್ದ ಇದೆ. ಇದರ ಅರ್ಥ ಆದಿಮ ಕ್ರಿಸ್ತಾನುಯಾಯಿಗಳು ಎಂದು. ಕ್ರಿಸ್ತನು ನಜರೆತ್ ಪ್ರಾಂತದವನಾಗಿದ್ದುದರಿಂದ ಅವನ ಬೆಂಬಲಿಗರನ್ನು ನಜರೀನರು ಎಂದು ಕರೆಯಲಾಯಿತು. ಆದರೆ ಇದನ್ನು ಸಂಪ್ರದಾಯವಂತ ಯಹೂದ್ಯರು ತಮ್ಮ ನಡುವೆ ಹೊಸ ಧರ್ಮವನ್ನು ತಂದ ಕ್ರಿಸ್ತನ ಮೇಲೆ ನಂಜಿನಿಂದಲೇ ಪ್ರಯೋಗಿಸಿದ್ದರು. ತಮ್ಮ ಪುರಾಣಗಳ ಪ್ರಕಾರ ನಜರೆತ್ ಪ್ರಾಂತದಲ್ಲಿ ದೇವತಾಪುರುಷರು ಹುಟ್ಟುವುದಿಲ್ಲ ಎಂದಿರುವಾಗ ಈ ಕ್ರಿಸ್ತ ತಾನು ದೇವರ ಮಗ ಎಂದು ಕರೆದುಕೊಂಡದ್ದು ಅವರಿಗೆ ವಿಕೃತಿಯಾಗಿ ಕಂಡಿತು! ಹೀಗೆ ಕ್ರೈಸ್ತರಿಗೆ ತುಚ್ಛೀಕಾರಪೂರ್ವಕ ಅನ್ವಯಿಸುತ್ತಿದ್ದ ಶಬ್ದವನ್ನು ಯಹೂದ್ಯರಿಂದ ಅರಬರು ಹೆಕ್ಕಿಕೊಂಡರು. ಯುರೋಪಿನ ಕ್ರೈಸ್ತರಿಗೂ ಮುಸ್ಲಿಮ್ ಧರ್ಮ ಸ್ವೀಕರಿಸಿದ ಅರಬರಿಗೂ ಭಾರತದ ಕರಾವಳಿಯ ವ್ಯಾಪಾರಕ್ಕಾಗಿ ಜಟಾಪಟಿಯಾದಾಗ ಅರಬರು ಕ್ರೈಸ್ತರ ಮೇಲಿನ ನಂಜಿನಿಂದ ನಸರಾನಿ ಶಬ್ದವನ್ನು ನಮ್ಮ ಕರಾವಳಿಯಲ್ಲಿ ಬಿತ್ತಿರಬೇಕು. ನಾಲಾಯಕ್, ದುಷ್ಟ, ಮೂರ್ಖ ಇತ್ಯಾದಿ ಅನಿರ್ವಚನೀಯ ಅಕಲ್ಯಾಣ ಗುಣಗಳನ್ನೆಲ್ಲ ಪ್ರತಿನಿಧಿಸುವ ಶಬ್ದವಾಗಿ ಅದು ಕರಾವಳಿಯಲ್ಲಿ ಹಬ್ಬಿತು. 'ಬರೇ ನಸ್ರಾಣಿ ಮನುಷ್ಯ' ಎಂದು ಬಯ್ಯುವುದು ಕರಾವಳಿಯಲ್ಲಿ ಕೇಳಿಸುತ್ತದೆ. ಆದರೆ ನಸ್ರಾಣಿ ಅಂದರೆ ಕ್ರೈಸ್ತ ಎಂಬುದು ಮರೆತೇ ಹೋಗಿರುವುದರಿಂದ ನಿಮಗೀಗ ನಸ್ರಾಣಿ ಹಿಂದುಗಳೂ ನಸ್ರಾಣಿ ಮುಸಲ್ಮಾನರೂ ಸಿಗಬಹುದು! ಪೂರ್ವಗ್ರಹಗಳು ಬಲು ಬೇಗ ತಮ್ಮ ಮೂಲಗಳನ್ನು ಮರೆತುಬಿಡುತ್ತವೆ.

ಬಿಜೆಪಿಯಲ್ಲಿ ಬಾಲಭವನ V/S ವೃದ್ಧಾಶ್ರಮ



ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ

vveditoped@gmail.com

ರಾಜ್ಯ ಬಿಜೆಪಿಯ ಹಿರಿಯ ನಾಯಕರೊಬ್ಬರು ಕಳೆದ ವಾರ ದಿಲ್ಲಿಗೆ ಹೋಗಿದ್ದಾರೆ. ಈ ಸಂದರ್ಭದಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜಗತ್ ಪ್ರಕಾಶ್ ನಡ್ಡಾ ಅವರನ್ನು ಭೇಟಿ ಮಾಡಿದ ಅವರು ಪ್ರಸಕ್ತ ಬೆಳವಣಿಗೆಗಳ ಬಗ್ಗೆ ವಿವರಿಸಿದ್ದಾರೆ. 'ಇವತ್ತು ರಾಜ್ಯ ಬಿಜೆಪಿಯಲ್ಲಿ ಯಾವುದೂ ಸರಿ ಇಲ್ಲ. ಪಕ್ಷದ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರದೇ ಒಂದು ಬಣವಾದರೆ, ಯತ್ನಾಳ್, ಸಿ.ಟಿ.ರವಿ ಸೇರಿದಂತೆ ಹಲವು ಹಿರಿಯ ನಾಯಕರದೇ ಮತ್ತೊಂದು ಬಣವಾಗಿದೆ. ಈ ಬಣಗಳು ಮುನಿಸು ಮರೆತು ಒಂದಾಗದಿದ್ದರೆ ಪರಿಸ್ಥಿತಿ ಕಷ್ಟವಾಗಬಹುದು' ಎಂದು ಈ ನಾಯಕರು ವಿವರಿಸಿದಾಗ ನಡ್ಡಾ ಅವರು 'ನಿಮ್ಮ ಮಾತು ನಿಜ' ಎಂದಿದ್ದಾರೆ.

ಆಗ ಮಾತು ಮುಂದುವರಿಸಿದ ಈ ನಾಯಕರು, 'ದಿನ ಕಳೆದಂತೆ ಪರಿಸ್ಥಿತಿ ಎಲ್ಲಿಗೆ ತಲುಪಿದೆ ಎಂದರೆ ವಿಜಯೇಂದ್ರ ಅವರ ಬಣವನ್ನು ಇವತ್ತು ಹಿರಿಯ ನಾಯಕರು 'ಬಾಲ ಭವನ' ಅಂತ ಕರೆದರೆ, ಹಿರಿಯರ ಬಣವನ್ನು ವಿಜಯೇಂದ್ರ ಅವರ ಬೆಂಬಲಿಗರು 'ವೃದ್ಧಾಶ್ರಮ' ಅಂತ ಕರೆಯುತ್ತಿದ್ದಾರೆ. ಇದು ಹೀಗೇ ಮುಂದುವರಿದರೆ ಕಷ್ಟ' ಎಂದಾಗ ನಡ್ಡಾ ಬೇಸರ ಮಾಡಿಕೊಂಡರಂತೆ. ಹೀಗಾಗಿ ಪ್ರತಿಕ್ರಿಯಿಸಿದ ಅವರು, 'ನಾವು ವಿಜಯೇಂದ್ರ ಅವರಿಗೂ ಹೇಳಿದ್ದೇವೆ. ಯತ್ನಾಳ್ ಸೇರಿದಂತೆ ಹಿರಿಯ ನಾಯಕರಿಗೂ ಹೇಳಿದ್ದೇವೆ. ನೋಡೋಣ. ಇನ್ನೂ ಕೆಲವು ಸುತ್ತಿನ ಮಾತುಕತೆ ನಡೆಸೋಣ' ಎಂದಿದ್ದಾರೆ.

ಹಾಗೆಯೇ ಮುಂದುವರಿದು ಮಾತನಾಡಿದ ನಡ್ಡಾ, 'ಇವತ್ತು ಕರ್ನಾಟಕದ ರಾಜಕೀಯ ಪರಿಸ್ಥಿತಿಯನ್ನು ನಾವು ಎನ್‌ಕ್ಯಾಶ್ ಮಾಡಿಕೊಳ್ಳಬೇಕು ಎಂದರೆ ಮೊದಲು ಒಗ್ಗಟ್ಟಿನಿಂದಿರಬೇಕು. ಅಂದ ಹಾಗೆ, ನಮಗಿರುವ ಮಾಹಿತಿಯ ಪ್ರಕಾರ, ಸಿದ್ದರಾಮಯ್ಯ ಸಿಎಂ ಆಗಿರುವವರೆಗೆ ಸರಕಾರ ಉಳಿದಿರುತ್ತದೆ. ಯಾವಾಗ ಅವರು ಕೆಳಗಿಳಿದು ಬೇರೆಯವರು ಬರುತ್ತಾರೋ, ಆಗ ಅದು ಅಸ್ಥಿರವಾಗುತ್ತದೆ.ಹೀಗೆ ಅಸ್ಥಿರಗೊಳ್ಳುವ ಸರಕಾರ ತುಂಬ ಕಾಲ ಉಳಿಯುವುದಿಲ್ಲ. ನನಗನ್ನಿಸುವ ಪ್ರಕಾರ, ಇನ್ನೊಂದು ವರ್ಷದಲ್ಲಿ ಕರ್ನಾಟಕವು ಮಧ್ಯಂತರ ಚುನಾವಣೆಗೆ ಸಜ್ಜಾಗಬೇಕಾಗುತ್ತದೆ. ಹೀಗಾಗಿಯೇ ಬಿಜೆಪಿಯ ರಾಜ್ಯ ಘಟಕವು ಒಮ್ಮತದ ಹಳಿಯ ಮೇಲೆ ನಿಲ್ಲಲಿ ಅಂತ ನಾವು ಬಯಸುತ್ತಿರುವುದು' ಎಂದರಂತೆ.

ಫೇಲಾಯಿತಾ ಆರೆಸ್ಸೆಸ್ ಸಂಧಾನ?

ಅಂದ ಹಾಗೆ, ದಿಲ್ಲಿಯಲ್ಲಿ ನಡೆದ ಈ ಘಟನೆಯ ನಂತರ ಕರ್ನಾಟಕದ ಆರೆಸ್ಸೆಸ್ ನಾಯಕರು ಬೆಂಗಳೂರಿನ ಸದಾಶಿವನಗರದಲ್ಲಿ ಮಹತ್ವದ ಸಭೆ ನಡೆಸಿದ್ದಾರೆ. ಬಿಜೆಪಿಯ ನಾಯಕರೊಂದಿಗೆ ನಡೆಸಿದ ಈ ಸಭೆಯಲ್ಲಿ ಆರೆಸ್ಸೆಸ್ ನಾಯಕರು ಹಂಸಕ್ಷೀರ ನ್ಯಾಯ ಮಾಡಿದ್ದಾರಾದರೂ ಅದು ನಿರೀಕ್ಷಿತ ಫಲ ನೀಡಿಲ್ಲ. ಅಂದ ಹಾಗೆ, ಈ ಸಭೆಯಲ್ಲಿ ಭಾಗವಹಿಸಿದ್ದ ಬಸನಗೌಡ ಪಾಟೀಲ್ ಯತ್ನಾಳ್, ಸಿ.ಟಿ.ರವಿ ಸೇರಿದಂತೆ ಹಲವು ನಾಯಕರು ವಿಜಯೇಂದ್ರ ವಿರುದ್ಧ ಮುಗಿಬಿದ್ದಿದ್ದಾರೆ. ಈ ಪೈಕಿ ಯತ್ನಾಳ್ ಅವರು, 'ಪಕ್ಷದ ರಾಜ್ಯಾಧ್ಯಕ್ಷ ಸ್ಥಾನವನ್ನು ಯಡಿಯೂರಪ್ಪ ಅವರ ಮಗನಿಗೆ ನೀಡುವ ಮೂಲಕ ಕುಟುಂಬ ರಾಜಕಾರಣಕ್ಕೆ ಪುನಃ ಜೋತುಬಿದ್ದಂತಾಗಿದೆ. ಪರ್ಯಾಯ ನಾಯಕತ್ವವನ್ನು ಬೆಳೆಸದೆ ಯಡಿಯೂರಪ್ಪ ಅವರ ಫ್ಯಾಮಿಲಿಯನ್ನು ನೆಚ್ಚಿಕೊಂಡು ಎಷ್ಟು ಕಾಲ ಮುಂದುವರಿಯಲು ಸಾಧ್ಯ? ಈಗ ನೋಡಿದರೆ ವಿಜಯೇಂದ್ರ ತಮ್ಮದೇ ಗುಂಪು ಕಟ್ಟಿಕೊಂಡಿದ್ದಾರೆ. ಹಿರಿಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದಾರೆ' ಎಂದು ಅಬ್ಬರಿಸಿದ್ದಾರೆ.

ಈ ಮಧ್ಯೆ ಮಾತನಾಡಿದ ಸಿ.ಟಿ.ರವಿ ಅವರು, 'ಅಲ್ರೀ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರು, 'ನಿಮ್ಮಪ್ಪ ನಾವು ಹಾಕಿದ ಭಿಕ್ಷೆಯಿಂದ ಸೇಫಾಗಿದ್ದಾರೆ' ಎಂಬರ್ಥದಲ್ಲಿ ಮಾತನಾಡುತ್ತಾರೆ. ಅಧ್ಯಕ್ಷರು ಅದಕ್ಕೆ ರಿಯಾಕ್ಷನ್ ಕೊಡುವುದಿಲ್ಲ. ಇದು ಹೊಂದಾಣಿಕೆ ಅಲ್ಲವೇ? ನೀವು ಹೊಂದಾಣಿಕೆ ರಾಜಕೀಯ ಮಾಡಬೇಕು, ನಾವು ಹೋರಾಡಬೇಕು ಅಂದರೆ ಹೇಗೆ?' ಅಂತ ಗುಡುಗಿದ್ದಾರೆ. ಇನ್ನು ಬಿಜೆಪಿಯ 'ಯಂಗ್ ಟರ್ಕ್' ನಾಯಕರೊಬ್ಬರು, 'ನಾನು, ಸಿ.ಟಿ.ರವಿ, ಯತ್ನಾಳ್ ಬೆಳೆಯಲು ಸಂಘ ಕಾರಣವೇ ಹೊರತು ಕುಟುಂಬವಲ್ಲ' ಎಂದು ಚುಚ್ಚಿದ್ದಾರೆ.

ಹೀಗೆ ಯಡಿಯೂರಪ್ಪ ವಿರೋಧಿ ಕ್ಯಾಂಪಿನ ನಾಯಕರು ಗುಡುಗುತ್ತಿರುವುದನ್ನು ನೋಡಿದ ಆರೆಸ್ಸೆಸ್ ನಾಯಕರ ಪೈಕಿ ಒಬ್ಬರು, ವಿಜಯೇಂದ್ರ ಅವರಿಗೆ ಚಾರ್ಜ್ ಮಾಡಿದ್ದಾರೆ. 'ಅಧ್ಯಕ್ಷರು ಅಂದಾಕ್ಷಣ ಹಿರಿಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬಾರದು ಅಂತಲ್ಲ, ಇನ್ ಫ್ಯಾಕ್ಟ್ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವುದೇ ನಾಯಕರ ಗುಣ' ಎಂದಿದ್ದಾರೆ. ಇದರ ಬೆನ್ನಲ್ಲೇ ಯಡಿಯೂರಪ್ಪ ವಿರೋಧಿ ಕ್ಯಾಂಪಿಗೂ ಟಕ್ಕರ್ ಕೊಟ್ಟು, 'ಯಡಿಯೂರಪ್ಪ ಅವರನ್ನು ನೆಚ್ಚಿಕೊಂಡು ರಾಜಕಾರಣ ಮಾಡುತ್ತೀರಿ ಎಂಬುದಕ್ಕಿಂತ ಯಡಿಯೂರಪ್ಪ ಅವರಿಲ್ಲದಾಗ ಪಕ್ಷಕ್ಕೆ ಏನಾಯಿತು ಎಂಬುದು ಮುಖ್ಯ. 2013ರಲ್ಲಿ ಯಡಿಯೂರಪ್ಪ ಬಿಜೆಪಿ ತೊರೆದು ಕೆಜೆಪಿ ಕಟ್ಟಿದರು. ಆಗ ಪಕ್ಷವನ್ನು ಮರಳಿ ಅಧಿಕಾರಕ್ಕೆ ತರಲು ಸಾಧ್ಯವಾಯಿತೇ? ಮುಂದೆ ಮತ್ತೆ ಯಡಿಯೂರಪ್ಪ ಅವರು ಪಕ್ಷಕ್ಕೆ ಮರಳಿದ ನಂತರ ಬಿಜೆಪಿ ಅಧಿಕಾರಕ್ಕೆ ಬರುವಂತಾಯಿತು. ಹೀಗಾಗಿ ಈ ವಿಷಯದಲ್ಲಿ ಹೆಚ್ಚು ಚರ್ಚಿಸುವ ಬದಲು ಪಕ್ಷವು ಮರಳಿ ಅಧಿಕಾರಕ್ಕೆ ಬರುವುದು ಹೇಗೆ ಅಂತ ಯೋಚಿಸಬೇಕು. ಆದ್ದರಿಂದ ಎಲ್ಲರೂ ನಿಮ್ಮ ನಿಮ್ಮ ಭಿನ್ನಾಭಿಪ್ರಾಯ ಮರೆತು ಒಮ್ಮತದಿಂದ ಹೋಗಿ' ಎಂದಿದ್ದಾರೆ.

ವಿಜಯೇಂದ್ರ ಅವರಿಗೆಷ್ಟು ಮಾರ್ಕು ಗೊತ್ತಾ?

ಹೀಗೆ ಮುಂದುವರಿದ ಈ ನಾಯಕರ ಮಾತು ಮತ್ತೊಂದು ಆ್ಯಂಗಲ್ಲಿಗೆ ತಿರುಗಿದೆ. 'ನೋಡ್ರೀ, ಇವತ್ತು ವಿಜಯೇಂದ್ರ ಅವರು ಯಡಿಯೂರಪ್ಪ ಅವರ ಮಗ ಅಂತ ವರಿಷ್ಠರು ಅಧ್ಯಕ್ಷ ಸ್ಥಾನದಲ್ಲಿ ಕೂರಿಸಿಲ್ಲ. ಬದಲಿಗೆ ಯಾರನ್ನು ಅಧ್ಯಕ್ಷರನ್ನಾಗಿ ಮಾಡಬಹುದು ಅಂತ ಹಲವು ನಾಯಕರ ಇಂಟರ್‌ವ್ಯೂ ಮಾಡಿದ್ದಾರೆ. ಅದರಲ್ಲಿ ವಿಜಯೇಂದ್ರ ಅವರಿಗೆ ನೈಂಟಿ ಪ್ಲಸ್ ಮಾರ್ಕ್ಸ್ ಬಂದಿದೆ. ಬೇರೆಯವರಿಗೆ ಹೆಚ್ಚು ಮಾರ್ಕ್ಸ್ ಬಂದಿದ್ದರೆ ಅವರೇ ಅಧ್ಯಕ್ಷರಾಗುತ್ತಿದ್ದರು. ಅದರರ್ಥ ಬೇರೇನೂ ಅಲ್ಲ, ಯುವಕರಾದರೂ ರಾಜಕಾರಣದಲ್ಲಿ ವಿಜಯೇಂದ್ರ ಅವರಿಗೆ ಹೆಚ್ಚು ಅನುಭವವಿದೆ ಅಂತಲ್ಲವೇ? ಇವತ್ತು ಪಕ್ಷವನ್ನು ನಡೆಸಲು ಹಲವು ಕ್ವಾಲಿಟಿಗಳಿರಬೇಕು. ಶಕ್ತಿ ಇರಬೇಕು. ಅದು ತಮಗಿದೆ ಅಂತ ವರಿಷ್ಠರಿಗೆ ವಿಜಯೇಂದ್ರ ಕನ್ವಿನ್ಸ್ ಮಾಡಿದ್ದಾರೆ. ಅದಕ್ಕಾಗಿ ಅಧ್ಯಕ್ಷರಾಗಿದ್ದಾರೆ. ಅಂದ ಹಾಗೆ, ಕಳೆದ ವರ್ಷ ವಿಧಾನಸಭೆ ಚುನಾವಣೆ ನಡೆದಾಗ ಪ್ರಮುಖ ನಾಯಕರೆಲ್ಲರಿಗೆ ಐದಾರು ಕ್ಷೇತ್ರಗಳನ್ನು ಗೆಲ್ಲಿಸುವ ಜವಾಬ್ದಾರಿ ಕೊಡಲಾಗಿತ್ತು. ಎಷ್ಟು ಜನ ಈ ಜವಾಬ್ದಾರಿ ನಿಭಾಯಿಸಿದ್ದಾರೆ? ಹೋಗಲಿ, ಮೊನ್ನೆ ನಡೆದ ಲೋಕಸಭೆ ಚುನಾವಣೆಯಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ನಮಗೆ ಹೀನಾಯ ಸೋಲಾಯಿತು. ಆ ಭಾಗದ ನಮ್ಮ ನಾಯಕರು ಏಕೆ ಸಕ್ಸಸ್ ಆಗಲಿಲ್ಲ? ವಿಜಯಪುರ ಲೋಕಸಭಾ ಕ್ಷೇತ್ರದಲ್ಲಿ ನಮ್ಮ ಕ್ಯಾಂಡಿಡೇಟ್ ಗೆದ್ದರೂ ವಿಜಯಪುರ ವಿಧಾನಸಭಾ ಕ್ಷೇತ್ರದಲ್ಲಿ ನಮ್ಮ ಪರ್ಫಾರ್ಮೆನ್ಸ್ ಯಾಕೆ ಡಲ್ಲಾಯಿತು? ಹೀಗೇ ನೋಡುತ್ತಾ ಹೋದರೆ ಎಲ್ಲ ಕಡೆಗಳಿಂದಲೂ ತಪ್ಪುಗಳಾಗಿವೆ. ಹಾಗಂತ ಅದನ್ನೇ ಮನಸ್ಸಿನಲ್ಲಿಟ್ಟುಕೊಂಡು ಕೂತರೆ ಪಕ್ಷ ಗಟ್ಟಿಯಾಗುವುದು ಹೇಗೆ? ನಿಜ,ಪಕ್ಷದ ಅಧ್ಯಕ್ಷರಾಗಿ ವಿಜಯೇಂದ್ರ ಅವರು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದಿರುವುದು ತಪ್ಪು. ಅವರ ನಡೆಯನ್ನು ನಾವು ಒಪ್ಪುವುದಿಲ್ಲ. ಇನ್ನು ಮುಂದೆ ಅವರು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮುಂದುವರಿಯಬೇಕು. ಅದೇ ರೀತಿ, ಉಳಿದವರು ವೈಮನಸ್ಯ ಮರೆತು ಅವರಿಗೆ ಸಹಕಾರ ನೀಡಬೇಕು. ಒಂದು ವೇಳೆ, ಯಾರೇ ಆಗಲಿ ಇದನ್ನು ಉಲ್ಲಂಘಿಸಿದರೆ ಶಿಸ್ತುಕ್ರಮ ಅನಿವಾರ್ಯ' ಎಂದಿದ್ದಾರೆ.

ಯಾವಾಗ ಬಿ.ಎಲ್.ಸಂತೋಷ್ ಅವರ ಸಮ್ಮುಖದಲ್ಲಿಯೇ ಕೆಲ ನಾಯಕರು ಇಂಥ ಮಾತನಾಡಿದರೋ, ಆಗ ಯಡಿಯೂರಪ್ಪ ವಿರೋಧಿ ಕ್ಯಾಂಪಿನ ನಾಯಕರಿಗೆ ಅನುಮಾನ ಶುರುವಾಗಿದೆ. ಇದು ವಿಜಯೇಂದ್ರ ಅವರಿಗೆ ಮಾಡಿದ ಪಾಠವೋ ಅಥವಾ ನಮ್ಮ ಗಾಯಕ್ಕೆ ಮೆತ್ತಿದ ಟಿಂಕ್ಚರೋ? ಅಂತ ಕಲಮಲವಾಗಿದೆ. ಆದರೆ ಹಾಗಂತ ಬಹಿರಂಗವಾಗಿ ಹೇಳಲು ಸಾಧ್ಯವಿಲ್ಲವಲ್ಲ? ಹೀಗಾಗಿ ವಿಜಯೇಂದ್ರ ಕ್ಯಾಂಪಿನಿಂದ ಅಂತರ ಕಾಯ್ದುಕೊಂಡು ತಮ್ಮ ಹೋರಾಟ ಮುಂದುವರಿಸಲು ಅವರು ನಿರ್ಧರಿಸಿದ್ದಾರೆ. ಅರ್ಥಾತ್, ಪಕ್ಷದ ಉಭಯ ಬಣಗಳನ್ನು ಒಂದುಗೂಡಿಸುವ ಆರೆಸ್ಸೆಸ್ ಯತ್ನ ಸಫಲವಾಗಿಲ್ಲ.

ಹಿಂದುಳಿದವರಿಗೆ ಕೋಪ ಬಂದಿದೆ

ಈ ಮಧ್ಯೆ ರಾಜ್ಯ ಬಿಜೆಪಿ ಪಾಲಿಗೆ ತಲೆನೋವಾಗಿರುವ ಮತ್ತೊಂದು ಸಂಗತಿ ಎಂದರೆ ಕೋರ್ ಕಮಿಟಿ. ಈ ಕಮಿಟಿಯಲ್ಲಿ ತಮಗೆ ಪ್ರಾಮಿನೆನ್ಸು ಸಿಕ್ಕಿಲ್ಲ ಎಂಬುದು ಹಿಂದುಳಿದ ವರ್ಗಗಳ ನಾಯಕರ ಆರೋಪ. ಹೀಗಾಗಿಯೇ ಕೆಲ ದಿನಗಳ ಹಿಂದೆ ಬೆಂಗಳೂರಿನಲ್ಲಿ ಸಭೆ ಸೇರಿದ್ದ ಬಿಜೆಪಿಯ ಹಿಂದುಳಿದ ವರ್ಗಗಳ ನಾಯಕರು ಈ ಕುರಿತು ಕಿಡಿ ಕಾರಿದ್ದಾರೆ. ಪಕ್ಷಕ್ಕೆ ಒಕ್ಕಲಿಗ ಸಮುದಾಯದ ಮೇಜರ್ ಷೇರು ಸಿಗುವುದಿಲ್ಲ, ಆದರೆ ಹದಿಮೂರು ಮಂದಿ ಇರುವ ಕೋರ್ ಕಮಿಟಿಯಲ್ಲಿ ಆ ವರ್ಗದ 4 ಮಂದಿ ಇದ್ದಾರೆ. ಬಿಜೆಪಿಗೆ 75 ಪರ್ಸೆಂಟ್ ಮತ ಕೊಡುವ ಲಿಂಗಾಯತ ಸಮುದಾಯದ 3 ಮಂದಿ ಮಾತ್ರ ಇದ್ದಾರೆ. ಉಳಿದಂತೆ ಹೈಕಮಾಂಡ್‌ನ ಇಬ್ಬರನ್ನು ಹೊರತುಪಡಿಸಿದರೆ ಜೈನ, ಬ್ರಾಹ್ಮಣ ಸಮುದಾಯಗಳಿಗೂ ಕೋರ್ ಕಮಿಟಿಯಲ್ಲಿ ಆದ್ಯತೆ ಕೊಡಲಾಗಿದೆ. ಆದರೆ ಬಿಜೆಪಿಗೆ ದೊಡ್ಡ ಮಟ್ಟದ ಪವರ್ ನೀಡುತ್ತಿರುವ ಹಿಂದುಳಿದ ವರ್ಗಗಳಿಗೆ ಆದ್ಯತೆಯೇ ಇಲ್ಲ. ವಸ್ತುಸ್ಥಿತಿ ಎಂದರೆ, ಮೊನ್ನೆ ನಡೆದ ಲೋಕಸಭಾ ಚುನಾವಣೆಯಲ್ಲಿ ಹಿಂದುಳಿದ ವರ್ಗಗಳು ಬಿಜೆಪಿಗೆ ಸಾಲಿಡ್ಡು ಬೆಂಬಲ ಕೊಟ್ಟಿವೆ. ಅಂದ ಹಾಗೆ, ಇವತ್ತು ಕಾಂಗ್ರೆಸ್ಸಿನಲ್ಲಿ ಕುರುಬ ಸಮುದಾಯಕ್ಕೆ ಹೆಚ್ಚಿನ ಆದ್ಯತೆ ಸಿಗುತ್ತಿದೆ ಎಂಬ ಅಸಮಾಧಾನ ಹಿಂದುಳಿದ ವರ್ಗಗಳ ಬಹುತೇಕ ಜಾತಿಗಳಲ್ಲಿದೆ. ಇದರ ಪರಿಣಾಮವಾಗಿ ಅವು ಬಿಜೆಪಿಗೆ ಸಾಲಿಡ್ಡು ಬೆಂಬಲ ಕೊಟ್ಟಿವೆ ಎಂಬುದು ನಿಜ. ಇದು ಹೈಕಮಾಂಡ್‌ಗೂ ಗೊತ್ತಿದೆ. ಇಷ್ಟಾದರೂ ಕೋರ್ ಕಮಿಟಿಯಲ್ಲಿ ಈ ವರ್ಗಗಳ ಒಬ್ಬರಿಗೂ ಆದ್ಯತೆ ಸಿಕ್ಕಿಲ್ಲ ಅಂತ ಈ ಸಭೆಯಲ್ಲಿ ಚರ್ಚೆಯಾಗಿದೆ. ಅಷ್ಟೇ ಅಲ್ಲ, ಈ ಕುರಿತು ಮೊದಲು ರಾಜ್ಯದ ವರಿಷ್ಠರಿಗೆ ವಿವರಿಸೋಣ. ನ್ಯಾಯ ಸಿಗದಿದ್ದರೆ ದಿಲ್ಲಿಗೆ ಹೋಗೋಣ ಎಂಬ ತೀರ್ಮಾನಕ್ಕೆ ಬರಲಾಗಿದೆ.

ಲಾಸ್ಟ್ ಸಿಪ್: ಇನ್ನು ಮಂಡ್ಯದ ನಾಗಮಂಗಲದಲ್ಲಿ ಮೊನ್ನೆ ನಡೆದ ಹಿಂದು-ಮುಸ್ಲಿಂ ಗಲಭೆ ಕಾಂಗ್ರೆಸ್ ವರಿಷ್ಠರ ಚಿಂತೆಗೆ ಕಾರಣವಾಗಿದೆ. ಏಕೆಂದರೆ, ಇದುವರೆಗೆ ಪ್ರಬಲ ಒಕ್ಕಲಿಗ ಸಮುದಾಯದ ಒಂದಷ್ಟು ಮತಗಳ ಜತೆ ಅಹಿಂದ ವರ್ಗಗಳ ಸಾಲಿಡ್ಡು ಬೆಂಬಲ ಪಡೆದು ಹಳೇ ಮೈಸೂರು ಭಾಗದಲ್ಲಿ ಕಾಂಗ್ರೆಸ್ ದಡ ಸೇರುತ್ತಿತ್ತು. ಗಮನಿಸಬೇಕಾದ ಸಂಗತಿ ಎಂದರೆ ಉತ್ತರ ಕರ್ನಾಟಕದಲ್ಲಿ ಲಿಂಗಾಯತ ವರ್ಗ ಪ್ರಬಲವಾಗಿದ್ದರೂ ಕುರುಬ, ದಲಿತ, ಮುಸ್ಲಿಂ ಸಮುದಾಯಗಳು ಸಾಲಿಡ್ಡು ಶಕ್ತಿ ಹೊಂದಿವೆ. ಹೀಗಾಗಿ ಅಲ್ಲಿ ಲಿಂಗಾಯತರ ಬೆಂಬಲ ಕಡಿಮೆ ಇದ್ದರೂ ಉಳಿದ ಸಮುದಾಯಗಳ ಸಾಲಿಡ್ಡು ಬೆಂಬಲ ಕ್ರೋಡೀಕರಿಸಿ ಗೆಲ್ಲಬಹುದು. ಇತ್ತೀಚಿನ ಲೋಕಸಭಾ ಚುನಾವಣೆಯ ಫಲಿತಾಂಶವೇ ಇದಕ್ಕೆ ಸಾಕ್ಷಿ.

ಆದರೆ, ಹಳೇ ಮೈಸೂರು ಭಾಗದ ಕೆಲ ಜಿಲ್ಲೆಗಳನ್ನು ಹೊರತುಪಡಿಸಿದರೆ ಉಳಿದ ಬಹುತೇಕ ಕಡೆ ಒಕ್ಕಲಿಗರ ಪ್ರಾಬಲ್ಯ ಜಾಸ್ತಿ. ಹೀಗಾಗಿ ಒಕ್ಕಲಿಗರ ಒಂದಷ್ಟು ಮತ ಪಡೆಯದೆ ಬೇರೆ ವರ್ಗಗಳ ಮತಗಳನ್ನು ಕ್ರೋಡೀಕರಿಸಿ ಗೆಲ್ಲುವುದು ಕಷ್ಟ. ಇಂಥ ಪರಿಸ್ಥಿತಿಯಲ್ಲಿ ಹಿಂದು-ಮುಸ್ಲಿಂ ರಾಜಕಾರಣ ಶುರುವಾದರೆ ಕಾಂಗ್ರೆಸ್ಸಿಗೆ ಬರುತ್ತಿದ್ದ ಹಿಂದುಳಿದ-ದಲಿತ ವರ್ಗಗಳ ಗಣನೀಯ ಮತಗಳು ಬಿಜೆಪಿ-ಜೆಡಿಎಸ್ ಮಿತ್ರಕೂಟದತ್ತ ವಾಲುತ್ತವೆ. ಹಾಗೇನಾದರೂ ಆದರೆ ಕೈ ಬಲ ಉಡುಗುವುದು ಖಂಡಿತ ಎಂಬುದು ಕಾಂಗ್ರೆಸ್ ವರಿಷ್ಠರ ಚಿಂತೆ.

ಸಹಕಾರಿ ವಲಯದ ಪುನರುಜ್ಜೀವನದ ಪರ್ವಕಾಲ

ಸಹಕಾರಹಸ್ತ

ಶಾಜಿ ಕೆ.ವಿ.

vveditoped@gmail.com

ಅಂತಾರಾಷ್ಟ್ರೀಯ ಸಹಕಾರ ವರ್ಷ'ವಾಗಿ 2025ರ ವರ್ಷವನ್ನು ಸ್ವಾಗತಿಸಲು ಇಡೀ ವಿಶ್ವ ಸಜ್ಜಾಗುತ್ತಿರುವ ಹೊತ್ತಿನಲ್ಲಿಯೇ, ಭಾರತದ ಸಹಕಾರಿ ಕ್ಷೇತ್ರವು ರಾಷ್ಟ್ರದಾದ್ಯಂತ ಹರಡಿರುವ ಪ್ರಾಥಮಿಕ ಕೃಷಿ ಸಾಲ ಸಂಘಗಳ (ಪ್ಯಾಕ್ಸ್) ಮೂಲಕ ಹೊಸ, ಸದೃಢ ಮತ್ತು ವೇಗದ ಸಂರಚನೆಯೊಂದಿಗೆ ತನ್ನನ್ನು ತಾನು ಭದ್ರವಾದ ನೆಲೆಯಲ್ಲಿ ಕಂಡುಕೊಳ್ಳುತ್ತಿದೆ. ಆರ್ಥಿಕ ಮತ್ತು ಆಡಳಿತಾತ್ಮಕ ಸುಧಾರಣೆಗಳೊಂದಿಗೆ ಸಜ್ಜುಗೊಂಡಿರುವ ಈ 'ಪ್ಯಾಕ್ಸ್'ಗಳು, ಈಗ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸಹಕಾರದಿಂದಲೇ 'ಸಮೃದ್ಧಿ'ಯ ದೂರದೃಷ್ಟಿಯನ್ನು ಗ್ರಾಮೀಣ ಕೃಷಿಭಾರತದಲ್ಲಿ ವಾಸ್ತವಿಕವಾಗಿ ಸಾಕಾರಗೊಳಿಸಲು ಸಿದ್ಧವಾಗಿವೆ.

ಭಾರತದ ಸಹಕಾರಿ ಕ್ಷೇತ್ರವು ಭವ್ಯ ಇತಿಹಾಸವನ್ನು ಹೊಂದಿದ್ದರೂ, ಬಿಕ್ಕಟ್ಟಿನ ಸಮಯದಲ್ಲಿ ಸರಕಾರದ ಸಾಕಷ್ಟು ಬೆಂಬಲದ ಕೊರತೆ ಮತ್ತು ಅಗತ್ಯ ಸುಧಾರಣೆಗಳ ಅನುಪಸ್ಥಿತಿಯಿಂದಾಗಿ ಪೆಟ್ಟು ತಿಂದಿದೆ. ಆದರೂ ಪ್ರಧಾನಿ ಮೋದಿಯವರು ತಮ್ಮ ಎರಡನೇ ಅಧಿಕಾರಾವಧಿಯಲ್ಲಿ ಸಹಕಾರ ಸಚಿವಾಲಯವನ್ನು ಸ್ಥಾಪಿಸಿ, ತಮ್ಮ ವಿಶ್ವಾಸಾರ್ಹ ಸಹವರ್ತಿ ಅಮಿತ್ ಶಾ ಅವರಿಗೆ ಅದರ ಚುಕ್ಕಾಣಿ ವಹಿಸಿದ ನಂತರ ಬದಲಾವಣೆಯ ಗಾಳಿ ಬೀಸಲಾರಂಭಿಸಿತು.

ಅಮಿತ್ ಶಾ ಅವರು ಗುಜರಾತ್‌ನಲ್ಲಿ ನಡೆದ ಸಹಕಾರ ಚಳವಳಿಗೆ ಹೊಸರೂಪ ನೀಡುವ ಸುಧಾರಣೆಗಳನ್ನು ಕೈಗೊಂಡು ಮುಂಚೂಣಿಗೆ ತಂದು ಹೆಸರುವಾಸಿಯಾಗಿದ್ದಾರೆ. ಸಚಿವಾಲಯದ ಅಧಿಕಾರ ವಹಿಸಿಕೊಂಡ ನಂತರ ರಾಷ್ಟ್ರೀಯ ಸಹಕಾರಿ ಚಿತ್ರಣದಲ್ಲಿ ಮಹತ್ವದ ಬದಲಾವಣೆಗಳನ್ನು ತಂದು, ಇಡಿ ವಿಶ್ವವೇ ಆ ವಲಯದತ್ತ ನೋಡುವಂತೆ ಮಾಡಿದ್ದಾರೆ. ದೇಶದ ಭವಿಷ್ಯ ರೂಪಿಸುವಲ್ಲಿ ಸಹಕಾರಿ ವಲಯದ ಸಾಮರ್ಥ್ಯವೇನೆಂಬುದು ತಡವಾಗಿಯಾದರೂ ಗಮನಾರ್ಹವಾಗಿ ಅರಿವಾಗಿದೆ. ಹಣಕಾಸು ವಲಯದ ಇತ್ತೀಚಿನ ಬಜೆಟ್ ಸಮಾಲೋಚನೆಗಳಲ್ಲಿ, ಭಾರತೀಯ ರಾಷ್ಟ್ರೀಯ ಸಹಕಾರ ಒಕ್ಕೂಟವು (ಎನ್‌ಸಿಯುಐ) ಪ್ರಮುಖ ಕ್ಷೇತ್ರಗಳಲ್ಲಿ ಸೇವಾ ವಿತರಣೆಯನ್ನು ಹೆಚ್ಚಿಸಲು ಸಹಕಾರಿ ವಲಯದ ವಿಶಾಲ ಜಾಲವನ್ನು ನಿಯಂತ್ರಿಸಲು ಶಿಫಾರಸು ಮಾಡಿದೆ.

ಅಮಿತ್ ಶಾ ಅವರು ಒಬ್ಬ ಅನುಭವಿಯಾಗಿ, ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಅಡ್ಡಿಯಾಗುವ ಸಮಸ್ಯೆಗಳ ಬಗ್ಗೆ ಚೆನ್ನಾಗಿ ಅರಿತಿದ್ದಾರೆ. 'ಪ್ಯಾಕ್ಸ್'ಗಳಲ್ಲಿ ಅವರು ನಿರ್ವಹಿಸಿದ ಪ್ರಮುಖ ಕಾರ್ಯವೆಂದರೆ, ಉಪನಿಯಮಗಳಲ್ಲಿ ಬದಲಾವಣೆಗಳನ್ನು ತಂದಿದ್ದು. ಸಹಕಾರಿ ಕ್ಷೇತ್ರದ ಸಮಸ್ಯೆಗಳನ್ನು ನಿವಾರಿಸಲು ಮಾದರಿ ಉಪಕಾನೂನುಗಳನ್ನು ತರುವ ಮೂಲಕ 'ಪ್ಯಾಕ್ಸ್'ಗಳನ್ನು ಬಹೂಪಯೋಗಿ ಮಾಡಲು ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಅವುಗಳ ವ್ಯವಹಾರವನ್ನು 25ಕ್ಕೂ ಅಧಿಕ ವ್ಯಾಪಾರ ಚಟುವಟಿಕೆಗಳಿಗೆ ವಿಸ್ತರಣೆ ಮಾಡಲು ಇದು ಅವರಿಗೆ ಸಹಾಯ ಮಾಡಿದೆ. ಈಗ ಅವು ಸಾಮಾನ್ಯ ಸೇವಾಕೇಂದ್ರಗಳಾಗಿ (ಸಿಎಸ್‌ಸಿ) ಕಾರ್ಯನಿರ್ವಹಿಸುತ್ತಿದ್ದು, ಗ್ರಾಮೀಣ ಭಾರತದಲ್ಲಿ ಬ್ಯಾಂಕಿಂಗ್, ವಿಮೆ, ಆಧಾರ್ ನೋಂದಣಿ/ಪರಿಷ್ಕರಣೆ, ಆರೋಗ್ಯ ಸೇವೆಗಳು, ಪ್ಯಾನ್ ಕಾರ್ಡ್ ಮತ್ತು ಐಆರ್‌ಟಿಸಿ/ಬಸ್/ವಿಮಾನ ಟಿಕೆಟ್‌ಗಳಂಥ 300ಕ್ಕೂ ಅಧಿಕ ಇ-ಸೇವೆಗಳನ್ನು ಒದಗಿಸುತ್ತಿವೆ. ಈವರೆಗೆ 35,000ಕ್ಕೂ ಅಧಿಕ 'ಪ್ಯಾಕ್ಸ್'ಗಳು ಗ್ರಾಮೀಣ ನಾಗರಿಕರಿಗೆ ಸಿಎಸ್‌ಸಿ ಸೇವೆಗಳನ್ನು ಒದಗಿಸಲು ಆರಂಭಿಸಿವೆ. ಅಲ್ಲದೆ ಅವುಗಳನ್ನು ಈಗ ಪ್ರಧಾನಮಂತ್ರಿ ಕಿಸಾನ್ ಸಮೃದ್ಧಿ ಕೇಂದ್ರಗಳು, ಜಲಸಮಿತಿಗಳು, ಎಲ್‌ಪಿಜಿ ವಿತರಕರು, ಚಿಲ್ಲರೆ ಪೆಟ್ರೋಲ್/ಡೀಸೆಲ್ ಮಳಿಗೆಗಳು, ರೈತ ಉತ್ಪಾದಕ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುವಂತೆ ಸಕ್ರಿಯಗೊಳಿಸಲಾಗುತ್ತಿದೆ. ಗ್ರಾಮಗಳಲ್ಲಿ ಕೈಗೆಟುಕುವ ದರದಲ್ಲಿ ಗುಣಮಟ್ಟದ ಜೆನರಿಕ್ ಔಷಧಿಗಳ ವಿತರಣೆಗಾಗಿ 'ಪ್ಯಾಕ್ಸ್' ಈಗ ಪ್ರಧಾನ ಮಂತ್ರಿ ಜನೌಷಧಿ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿವೆ. ಇದರಿಂದಾಗಿ ಗ್ರಾಮೀಣ ಜನರಿಗೆ ಕೈಗೆಟುಕುವ ಬೆಲೆಯಲ್ಲಿ ಔಷಧಿಗಳು ಲಭ್ಯವಾಗುವ ಜತೆಗೆ ಮತ್ತೊಂದು ಆದಾಯದ ಮೂಲವನ್ನು ಒದಗಿಸುತ್ತವೆ. ಈ ಎಲ್ಲಾ ಪ್ರಯತ್ನಗಳು 'ಪ್ಯಾಕ್ಸ್'ಗಳ ಆದಾಯವನ್ನು ಹೆಚ್ಚಿಸುತ್ತವೆ ಮತ್ತು ಅವುಗಳನ್ನು ಆರ್ಥಿಕವಾಗಿ ಸಶಕ್ತಗೊಳಿಸುತ್ತವೆ.

ದಶಕಗಳ ಕಾಲ ದುರಾಡಳಿತದ ನಿದರ್ಶನಗಳಿಂದ ತತ್ತರಿಸಿ ಹೋಗಿದ್ದ ವಲಯದಲ್ಲಿ ಮತ್ತೆ ಜನರ ವಿಶ್ವಾಸವನ್ನು ಗಳಿಸುವುದು ಸಚಿವಾಲಯದ ಮುಂದಿನ ಮಹತ್ವದ ಕಾರ್ಯವಾಗಿದೆ. ಪಾರದರ್ಶಕತೆಯನ್ನು ಖಾತ್ರಿಪಡಿಸಿಕೊಳ್ಳಲು 63,000 'ಪ್ಯಾಕ್ಸ್'ಗಳ ಗಣಕೀಕರಣವು ನಡೆಯುತ್ತಿದೆ. ಈವರೆಗೆ 23 ಸಾವಿರಕ್ಕೂ ಅಧಿಕ 'ಪ್ಯಾಕ್ಸ್'ಗಳನ್ನು ಎಂಟರ್‌ಪ್ರೈಸ್ ರಿಸೋರ್ಸ್ ಪ್ಲಾನಿಂಗ್ (ಇಆರ್‌ಪಿ) ಸಾಫ್ಟ್‌ವೇರ್‌ನೊಂದಿಗೆ ಸಂಯೋಜಿಸಲಾಗಿದ್ದು, 'ಪ್ಯಾಕ್ಸ್'ಗಳ ಗಣಕೀಕರಣವು ಅವುಗಳನ್ನು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (ನಬಾರ್ಡ್)ನೊಂದಿಗೆ ನೇರವಾಗಿ ಸಂಯೋಜಿಸಲು ಅನುವು ಮಾಡಿಕೊಡುತ್ತದೆ. ಸಾಮಾನ್ಯ ಲೆಕ್ಕ ವ್ಯವಸ್ಥೆ (ಕಾಮನ್ ಅಕೌಂಟಿಂಗ್ ಸಿಸ್ಟಂ- ಸಿಎಎಸ್) ಮತ್ತು ನಿರ್ವಹಣಾ ಮಾಹಿತಿ ವ್ಯವಸ್ಥೆ (ಮ್ಯಾನೇಜ್‌ಮೆಂಟ್ ಇನ್ಫರ್ಮೇಷನ್ ಸಿಸ್ಟಂ- ಎಂಐಎಸ್) ಕಾರ್ಯಾಚರಣೆಗಳ ಏಕರೂಪತೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ. ಇದು 'ಪ್ಯಾಕ್ಸ್'ಗಳ ಕಾರ್ಯಾಚರಣೆಗಳಲ್ಲಿ ಸಾರ್ವಜನಿಕ ವಿಶ್ವಾಸವನ್ನು ವೃದ್ಧಿಸುತ್ತದೆ. ಸಹಕಾರಿ ಕ್ಷೇತ್ರವು ಹೊಸ ಆತ್ಮವಿಶ್ವಾಸ ಮತ್ತು ಛಲದಿಂದ ಈಗ ಸಂಘಟಿತವಾಗಿ ಕಾರ್ಯನಿರ್ವಹಿಸುತ್ತಿದ್ದು, ಹೆಚ್ಚು ಪ್ರಯೋಜನಕಾರಿಯಾಗಿದೆ.

ಸಹಕಾರಿ ಕ್ಷೇತ್ರದೊಂದಿಗೆ ಸಂಬಂಧ ಹೊಂದಿರುವ ಎಲ್ಲರಿಗೂ ಜಿಲ್ಲಾ ಸಹಕಾರಿ ಬ್ಯಾಂಕ್‌ಗಳಲ್ಲಿ ಖಾತೆಗಳನ್ನು ತೆರೆಯುವಂತೆ ಸಹಕಾರಿ ಸಚಿವ ಅಮಿತ್ ಶಾ ಕರೆನೀಡಿದ್ದಾರೆ. ಅವರ ಪ್ರಕಾರ, ಸಹಕಾರಿಗಳ ನಡುವಿನ ಸಹಕಾರವು ಸದೃಢ ಆರ್ಥಿಕ ತತ್ವವಾಗಿದ್ದು, ಇದು ಬಲವಾದ ಸಹಕಾರಿ ಕ್ಷೇತ್ರವನ್ನು ನಿರ್ಮಿಸಲು ಪ್ರಾಥಮಿಕ ಅಗತ್ಯವಾಗಿದೆ. 2024ರಲ್ಲಿ ಸಹಕಾರ ಸಚಿವಾಲಯದ ಹೊಣೆಗಾರಿಕೆಯನ್ನು ಎರಡನೇ ಬಾರಿಗೆ ವಹಿಸಿಕೊಂಡ ಅಮಿತ್ ಶಾ, ನೀತಿಗಳನ್ನು ತಳಮಟ್ಟದಲ್ಲಿ ಪರಿಣಾಮಕಾರಿಯಾಗಿ ಜಾರಿಗೊಳಿಸುವ ಮೂಲಕ ಕ್ಷೇತ್ರವನ್ನು ಬಲಪಡಿಸಲು ಸಂಕಲ್ಪ ಮಾಡಿದ್ದಾರೆ. ತಮ್ಮ ಹಿಂದಿನ ಅವಧಿಯಲ್ಲಿ ನೀತಿಯ ಚೌಕಟ್ಟನ್ನು ರಚಿಸುವ ಕಡೆಗೆ ಗಮನಹರಿಸಲಾಗಿತ್ತು ಮತ್ತು ಸದ್ಯದ ಅಧಿಕಾರಾವಧಿಯಲ್ಲಿ ಈ ನೀತಿಗಳನ್ನು ತಳಮಟ್ಟಕ್ಕೆ ಕೊಂಡೊಯ್ಯುವುದು ತಮ್ಮ ಆದ್ಯತೆಯಾಗಿದೆ ಎಂದು ಅವರು ಹೇಳಿದ್ದಾರೆ.

ಸಹಕಾರ ಸಚಿವಾಲಯವು ಕೈಗೊಂಡ ಪ್ರಮುಖ ಉಪಕ್ರಮಗಳಲ್ಲಿ, ಸಹಕಾರಿ ವಲಯದಲ್ಲಿ 'ವಿಶ್ವದ ಅತಿದೊಡ್ಡ ವಿಕೇಂದ್ರೀಕೃತ ಧಾನ್ಯ ಸಂಗ್ರಹ ಕಾರ್ಯಕ್ರಮ'ವನ್ನು ಆರಂಭಿಸಿರುವುದೂ ಒಂದು. ಇದು 'ಪ್ಯಾಕ್ಸ್' ಮಟ್ಟದಲ್ಲಿ ಧಾನ್ಯ ಸಂಗ್ರಹಣೆಗಾಗಿ ವಿಕೇಂದ್ರೀಕೃತ ಗೋದಾಮುಗಳು, ನೇಮಕ ಕೇಂದ್ರಗಳು, ಪ್ರಾಥಮಿಕ ಸಂಸ್ಕರಣಾ ಘಟಕಗಳು ಮತ್ತು ಇತರ ಕೃಷಿ ಮೂಲಸೌಕರ್ಯಗಳನ್ನು ಸೃಷ್ಟಿಸುವ ಗುರಿಯನ್ನು ಹೊಂದಿದೆ. ಸರಕಾರದ ವಿವಿಧ ಯೋಜನೆಗಳಾದ ಕೃಷಿ ಮೂಲಸೌಕರ್ಯ ನಿಧಿ (ಐಎಫ್), ಕೃಷಿ ಮಾರುಕಟ್ಟೆ ಮೂಲಸೌಕರ್ಯ (ಎಎಂಐ), ಕೃಷಿ ಯಾಂತ್ರೀಕರಣದ ಉಪಮಿಷನ್ (ಎಸ್‌ಎಂಎಎಂ), ಪ್ರಧಾನ ಮಂತ್ರಿಗಳ ಸಣ್ಣ ಆಹಾರ ಸಂಸ್ಕರಣಾ ಉದ್ಯಮಗಳ ಸಾಂಸ್ಥೀಕರಣ (ಪಿಎಂಎಫ್‌ಎಂಎಫ್) ಇತ್ಯಾದಿಗಳನ್ನು ವಿಲೀನಗೊಳಿಸಿ, ರಾಷ್ಟ್ರಕ್ಕೆ ಸದೃಢವಾದ ಶೇಖರಣಾ ಸಾಮರ್ಥ್ಯದ ಯೋಜನೆಯನ್ನು ಒದಗಿಸಲು ಇದು ಪ್ರಯತ್ನಿಸುತ್ತದೆ. ಇದು ಆಹಾರ ಧಾನ್ಯಗಳು ವ್ಯರ್ಥವಾಗುವುದನ್ನು ತಪ್ಪಿಸುತ್ತದೆ ಮತ್ತು ಸಾಗಣೆ ವೆಚ್ಚವನ್ನು ತಗ್ಗಿಸುತ್ತದೆ. ರೈತರು ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆಯನ್ನು ಪಡೆಯಲು ಅನುವು ಮಾಡಿಕೊಡುತ್ತದೆ ಹಾಗೂ 'ಪ್ಯಾಕ್ಸ್' ಮಟ್ಟದಲ್ಲಿಯೇ ವಿವಿಧ ಕೃಷಿ ಅಗತ್ಯಗಳನ್ನು ಪೂರೈಸಲಾಗುತ್ತದೆ.

'ಪ್ಯಾಕ್ಸ್'ಗಳು ಗ್ರಾಮೀಣಾಭಿವೃದ್ಧಿಯ ಬೆನ್ನೆಲುಬಾಗಿರುವುದರಿಂದ ಅವುಗಳ ಏಕೀಕರಣ ಮತ್ತು ಪುನರುಜ್ಜೀವ ಶೀಘ್ರದಲ್ಲಿಯೇ ಗ್ರಾಮೀಣ ಆರ್ಥಿಕತೆಯ ಪ್ರಗತಿಗೆ ಶಕ್ತಿ ತುಂಬುತ್ತವೆ. 'ಪ್ಯಾಕ್ಸ್' ಸಂಬಂಧಿತ ಚಟುವಟಿಕೆಗಳು ಹೆಚ್ಚಾಗುವುದರಿಂದ ಋತುಮಾನಗಳಲ್ಲಿ ಆಗುತ್ತಿದ್ದ ನಿರುದ್ಯೋಗ ನಿವಾರಣೆಯಾಗುವ ಸಾಧ್ಯತೆಯಿದೆ. ಇದರಿಂದಾಗಿ, 1 ಲಕ್ಷ 'ಪ್ಯಾಕ್ಸ್'ಗಳ ಜತೆ ನೇರವಾಗಿ ಸಂಬಂಧ ಹೊಂದಿರುವ 13 ಕೋಟಿ ರೈತರು ಲಾಭ ಪಡೆಯಲಿದ್ದಾರೆ ಮತ್ತು ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಮತ್ತು ಆದಾಯ ಸೃಷ್ಟಿಯಾಗಲಿವೆ.

(ಲೇಖಕರು ನಬಾರ್ಡ್‌ನ ಅಧ್ಯಕ್ಷರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಸೊಗಸಾದ ಲೇಖನ

ಡಾ.ಸಾಧನಶ್ರೀ ಅವರ 'ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ' ಅಂಕಣದಲ್ಲಿ ಪ್ರಕಟವಾದ ವಿರುದ್ಧ ಆಹಾರಗಳ ಬಗೆಗಿನ ಲೇಖನ (ವಿಶ್ವವಾಣಿ ಸೆ.14) ಸೊಗಸಾಗಿತ್ತು. ನಾವು ಸೇವಿಸಬೇಕಾದ ಆಹಾರ ಮತ್ತು ಸೇವನಾಕ್ರಮದ ಬಗ್ಗೆ ಅವರು ಬೆಳಕು ಚೆಲ್ಲಿ ಅತ್ಯಮೂಲ್ಯ ಅಂಶಗಳನ್ನು ಹಂಚಿಕೊಂಡಿದ್ದಾರೆ. ಇಂದಿನ ಯಾಂತ್ರಿಕ ಮತ್ತು ಗಡಿಬಿಡಿಯ ಜೀವನದಲ್ಲಿ, ಯಾವ ಆಹಾರ ಸೇವಿಸುತ್ತಿದ್ದೇವೆ ಎಂಬ ಸಾಮಾನ್ಯ ಅರಿವೇ ನಮಗಿಲ್ಲದಂತಾಗಿದೆ. ಜತೆಗೆ, ಬಾಯಿರುಚಿಯ ಚಪಲಕ್ಕೆ ಬಿದ್ದು ನಮಗರಿವಿಲ್ಲದಂತೆಯೇ ಹೆಚ್ಚೆಚ್ಚು ವಿರುದ್ಧ ಆಹಾರಗಳನ್ನು ಸೇವಿಸುತ್ತಿದ್ದೇವೆ. ಇಂಥ ಸಂದರ್ಭದಲ್ಲಿ ಡಾ. ಸಾಧನಶ್ರೀ ಅವರು ನೀಡಿದ ಮಾಹಿತಿ ಹೆಚ್ಚು ಉಪಯುಕ್ತವಾಗುತ್ತದೆ. ಅವರಿಗೂ, ಲೇಖನವನ್ನು ಪ್ರಕಟಿಸಿದ ಪತ್ರಿಕೆಗೂ ಧನ್ಯವಾದಗಳು. ಇಂಥ ಬರಹಗಳು ಪತ್ರಿಕೆಯಲ್ಲಿ ಹೆಚ್ಚೆಚ್ಚು ಮೂಡಿಬರಲಿ.

- ರಾಜು ಎಸ್.ಪಿ., ಸರಗೂರು

ಜನರ ವಿಶ್ವಾಸಕ್ಕೆ ಧಕ್ಕೆ!

ಪ್ರಧಾನಿ ನರೇಂದ್ರ ಮೋದಿಯವರು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್ ಅವರ ಮನೆಗೆ ಹೋಗಿ, ನ್ಯಾ.ಚಂದ್ರಚೂಡ್ ದಂಪತಿಯೊಡಗೂಡಿ ಗಣಪತಿಯನ್ನು ಪೂಜಿಸಿದ ಘಟನೆಯನ್ನು ನಾವು ಕಾನೂನು, ನಿಯಮ, ತರ್ಕಗಳನ್ನು ಬದಿಗಿರಿಸಿ ವಾಸ್ತವದ ನೆಲೆಯಲ್ಲಿ ವಿಶ್ಲೇಷಿಸಬೇಕು. ಪೂಜೆಯು ಖಾಸಗಿ ವಿಷಯ ಎಂಬುದನ್ನೂ, ಈ ಘಟನೆಯ ದೃಶ್ಯವು ಮಾಧ್ಯಮಗಳ ಮೂಲಕ ದೇಶಾದ್ಯಂತ ಬಿತ್ತರಗೊಂಡ ಸಂಗತಿಯನ್ನೂ ವಿಶೇಷವಾಗಿ ಪರಿಗಣಿಸಬೇಕು.

ಪ್ರಧಾನಿಯು ಸಂವಿಧಾನವನ್ನು ಹೊತ್ತ ರಥದ ಸಾರಥಿಯಾದರೆ, ನ್ಯಾಯಮೂರ್ತಿಯು ಸಂವಿಧಾನದ ರಕ್ಷಕ. ಧರ್ಮನಿರಪೇಕ್ಷ ತತ್ತ್ವವನ್ನೂ, ನಿಷ್ಪಕ್ಷಪಾತತೆಯನ್ನೂ ಮೂಲದ್ರವ್ಯವಾಗಿ ಹೊಂದಿರುವ ಭಾರತೀಯ ಸಂವಿಧಾನದ ಪಾಲಕ-ಪೋಷಕ-ರಕ್ಷಕರಾಗಿರುವ ಇವರಿಬ್ಬರೂ, ಜನಮಾನಸದಲ್ಲಿ ಯಾವುದೇ ರೀತಿಯ ಅನುಮಾನವಾಗಲೀ ದ್ವಂದ್ವವಾಗಲೀ ಉಂಟಾಗದಂಥ ರೀತಿಯಲ್ಲಿ ಪರಸ್ಪರ ಸಂಬಂಧ-ಸಂಪರ್ಕ ಹೊಂದಿರಬೇಕಾದ್ದು ಅವಶ್ಯಕ. ಮೂಲತಃ ರಾಜಕಾರಣಿಯಾಗಿದ್ದು, ನಿರ್ದಿಷ್ಟ ಧರ್ಮ-ಸಿದ್ಧಾಂತಕ್ಕೆ ಒತ್ತುನೀಡುವ ರಾಜಕೀಯ ಪಕ್ಷವೊಂದರ ನಾಯಕನ ಜತೆಯಲ್ಲಿ ಮುಖ್ಯ ನ್ಯಾಯಮೂರ್ತಿಗಳು ತಮ್ಮ ಮನೆಯಲ್ಲಿ ಹೀಗೆ ಪೂಜಾಕಾರ್ಯದಲ್ಲಿ ತೊಡಗಿಸಿಕೊಂಡಿದ್ದು ಕೋಟ್ಯಂತರ ಜನರು ನ್ಯಾಯಾಂಗದ ಮೇಲಿಟ್ಟಿರುವ ವಿಶ್ವಾಸಕ್ಕೆ ಕೊಂಚ ಧಕ್ಕೆ ತರುವುದು ನಿಶ್ಚಿತ. ಇದು ಒಳ್ಳೆಯ ಬೆಳವಣಿಗೆಯಲ್ಲ. ಮೋದಿಯವರಂಥ ಚಾಣಾಕ್ಷ ರಾಜಕಾರಣಿಯಿಂದ ಇಂಥ ನಡೆ ಅನಿರೀಕ್ಷಿತವೇನಲ್ಲ; ಆದರೆ ಮುಖ್ಯ ನ್ಯಾಯಮೂರ್ತಿಯವರ ನಡೆ ಸಖೇದಾಶ್ಚರ್ಯಕರ!

- ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಇದು ದುರಂತವೇ ಸರಿ

ಮಕ್ಕಳಿಗೆ ಮೊಬೈಲ್ ಸಂಸ್ಕಾರ- ಹೇಗೆ, ಯಾವಾಗ ಮತ್ತು ಎಷ್ಟು?' ಎಂಬ ಶೀರ್ಷಿಕೆಯ 'ಶಿಶಿರಕಾಲ' ಅಂಕಣಬರಹ (ವಿಶ್ವವಾಣಿ ಸೆ.13) ಉತ್ತಮವಾಗಿತ್ತು. ಮೊಬೈಲ್‌ನ ಒಳಿತು ಮತ್ತು ಕೆಡುಕುಗಳ ಬಗ್ಗೆ ತಿಳಿಯದವರಿಗೆ ಇದು ಕಣ್ತೆರೆಸುವಂತಿದೆ. 'ಮೊಬೈಲ್ ತಾನು ಉಳಿಸಿದ ಸಮಯವನ್ನು ತಾನೇ ಕಬಳಿಸುತ್ತದೆ' ಎಂಬ ಅಂಕಣಕಾರರ ಮಾತು ಅಕ್ಷರಶಃ ಸತ್ಯ.

ಮೊಬೈಲ್ ಅನ್ನೋದು ಶ್ರೀಮಂತರ ಮದುವೆಮನೆಯ ಬಫೆ ಊಟದಂತೆ; 20-30 ಬಗೆಯ ಅಡುಗೆಯನ್ನು ಮಾಡಿ ಇಟ್ಟಾಗ, ಮನೆಯಲ್ಲಿ ಪಥ್ಯ ಮಾಡುವವರು ಕೂಡ 'ಇಲ್ಲಿ ಎಲ್ಲವನ್ನೂ ಹಾಕಿಸಿಕೊಂಡು ತಿನ್ನಬೇಕು' ಎಂಬ ಬಯಕೆಯಿಂದ ಬಕಾಸುರರಾಗುತ್ತಾರೆ. 'ಹಿತ ಭುಕ್, ಮಿತ ಭುಕ್' ಎಂಬುದು ತಿಳಿದಿದ್ದರೂ ಆ ಸಮಯದಲ್ಲಿ ಕಂಡೂ ಕುರುಡರಾಗಿರುತ್ತಾರೆ. ಕೈಗೆ ಮೊಬೈಲ್ ಅಂಟಿಸಿಕೊಂಡವರ ಕಥೆಯೂ ಇದಕ್ಕಿಂತ ಭಿನ್ನವಾಗಿಲ್ಲ. ದಾರಿ ತಪ್ಪಿದ ಇಂಥವರಿಗೆ ಮಕ್ಕಳ ಬೇಕು-ಬೇಡಗಳ ಬಗ್ಗೆ ಜ್ಞಾನವಿರಲು ಸಾಧ್ಯವೇ? ಮೊಬೈಲ್ ಬಗ್ಗೆ ತನಗೂ ಗೊತ್ತಿಲ್ಲದ ಅನೇಕ ವಿಷಯಗಳು ನಾಲ್ಕು ವರ್ಷದ ತನ್ನ ಮಗುವಿಗೆ ಗೊತ್ತು ಅನ್ನುವ ಇಂಥವರಿಗೆ, ಅದರಿಂದಾಗುವ ಅನಾಹುತಗಳು ಅರಿವಿಗೆ ಬರುವ ಹೊತ್ತಿಗೆ ಸಮಯ ಮೀರಿರುತ್ತದೆ. ಮುಖ್ಯವಾಗಿ, ತದೇಕಚಿತ್ತದಿಂದ ಮೊಬೈಲ್ ನೋಡುವ ಮಕ್ಕಳಿಗೆ ಕಣ್ಣಿನ ದೃಷ್ಟಿಯ ಮೇಲಾಗುವ ಪರಿಣಾಮದ ಅರಿವಿರುವುದಿಲ್ಲ. ಮಾದಕ ದ್ರವ್ಯಗಳು ಮಕ್ಕಳ ದೇಹವನ್ನು ಬಲಿ ತೆಗೆದುಕೊಂಡರೆ, ಗೀಳು ಹತ್ತಿಸುವ ಮೊಬೈಲ್ ಮಕ್ಕಳ ಮನಸ್ಸಿನ ಹತೋಟಿಯನ್ನೇ ತಪ್ಪಿಸುತ್ತದೆ. ಆದರೆ ಈ ಬಗ್ಗೆ ಪೋಷಕರು ಯೋಚಿಸದಿರುವುದು ದುರಂತವೇ ಸರಿ. ಮಕ್ಕಳು ಓದುವಂಥ ಪುಸ್ತಕಗಳು ಕಾಲಕ್ರಮೇಣ ಚಿಣ್ಣರ ಮನೆಗಳಿಂದ ಮರೆಯಾಗುತ್ತಿವೆ, ಆಟಿಕೆಗಳು ಷೋಕೇಸ್ ಸೇರುತ್ತಿವೆ. ಮಕ್ಕಳ ಆಟಗಳಿಲ್ಲದ ಮೈದಾನಗಳು ಜಾತ್ರೆ ಮುಗಿದ ಬಯಲಿನಂತೆ ರೋದಿಸುತ್ತಿವೆ.

- ಜಯರಾಂ ಪಣಿಯಾಡಿ, ಬೆಂಗಳೂರು

ಭ್ರಷ್ಟ ವ್ಯವಸ್ಥೆಯ ದ್ಯೋತಕ

ತೃತೀಯ ಲಿಂಗಿಗಳು ಇತ್ತೀಚೆಗೆ ಮೈಸೂರಿನಲ್ಲಿ ಸಾರ್ವಜನಿಕ ರಸ್ತೆಯಲ್ಲಿ ಹೊಡೆದಾಡಿಕೊಂಡು ನಗ್ನಸ್ಥಿತಿಯಲ್ಲಿ ಕಾಣಿಸಿಕೊಂಡು ಜನರಿಗೆ ತೊಂದರೆ ನೀಡಿ ಅಸಹ್ಯ ತರಿಸಿದ್ದಾರೆ. ಮಾತ್ರವಲ್ಲ, ರೈಲುಗಳಲ್ಲಿ, ಟ್ರಾಫಿಕ್ ಸಿಗ್ನಲ್‌ಗಳ ಬಳಿ, ಸೀಮಂತ ಕಾರ್ಯಕ್ರಮದಿಂದ ಶುರುವಾಗಿ ಮದುವೆ, ನಾಮಕರಣ, ಗೃಹಪ್ರವೇಶದಂಥ ಸಮಾರಂಭಗಳ ವೇಳೆ ಛತ್ರಗಳಿಗೆ ನುಗ್ಗಿ ಸಂತಸದ ಸಂಭ್ರಮವನ್ನು ಇವರು ಹಾಳು ಮಾಡುತ್ತಿದ್ದಾರೆ. ಈ ಬಗ್ಗೆ ಪೊಲೀಸರಿಗೆ ದೂರು ನೀಡಿದರೂ ಯಾವುದೇ ಉಪಯೋಗವಾಗುತ್ತಿಲ್ಲ. ಹೀಗೆ ಕಿರುಕುಳ ನೀಡುವ ತೃತೀಯ ಲಿಂಗಿಗಳು 'ಹೋಗಿ ದೂರು ಕೊಡಿ, ಅವರು ನಮಗೇನೂ ಮಾಡುವುದಿಲ್ಲ' ಎಂದು ರಾಜಾರೋಷವಾಗಿ ಹೇಳುತ್ತಿರುವುದು ನಮ್ಮ ಭ್ರಷ್ಟವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ. ಲೈಂಗಿಕ ಅಲ್ಪಸಂಖ್ಯಾತರು ಎಂಬ ಹಣೆಪಟ್ಟಿ ಧರಿಸಿ, ಸಮಾಜದ ಔದಾಸೀನ್ಯ ಮತ್ತು ಮರುಕದ ನಡೆಗಳನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳುವ ಇಂಥವರ ನಡೆ ಖಂಡನೀಯ. ಸಾರ್ವಜನಿಕವಾಗಿ ಸಭ್ಯತೆಯ ಎಲ್ಲೆ ಮೀರಬಾರದು ಎಂಬ ಸೌಜನ್ಯವನ್ನೇ ಅಸ್ತ್ರವಾಗಿಸಿಕೊಂಡು, ಮರ್ಯಾದಸ್ಥರು ಅನಿವಾರ್ಯವಾಗಿ ಹಣ ಪೀಕುವಂಥ ಪರಿಸ್ಥಿತಿ ನಿರ್ಮಿಸುವ ಇವರ ನಡೆ ಅಸಹ್ಯ ಹುಟ್ಟಿಸುತ್ತದೆ. ದೈಹಿಕವಾಗಿ ಸದೃಢವಾಗಿಯೇ ಇರುವ ಇವರು ಇಂದಿನ ದಿನಮಾನದಲ್ಲಿ ದುಡಿದು ಸಂಪಾದಿಸುವ ಸೌಕರ್ಯಗಳಿರುವಾಗ, ಸಭ್ಯರನ್ನು ದೋಚುವಂಥ ಸುಲಭ ಸಂಪಾದನೆಯ ಮಾರ್ಗವನ್ನು ಬಳಸುವುದು ವಿಷಾದನೀಯ. ಕೆಲವೆಡೆಯಂತೂ ರೌಡಿ ಗಂಡಸರೇ ಸ್ತ್ರೀ ವೇಷ ಧರಿಸಿ ಬರುತ್ತಿದ್ದಾರೆ ಎಂಬ ಗುಮಾನಿಯೂ ಇದೆ. ಪೊಲೀಸ್ ಇಲಾಖೆಯು ಈ ನಿಟ್ಟಿನಲ್ಲಿ ಕಠಿಣ ಕ್ರಮಕ್ಕೆ ಮುಂದಾಗಿ ಸಾರ್ವಜನಿಕರ ಹಿತರಕ್ಷಣೆ ಮಾಡಬೇಕು.

-ಶಿವಮೊಗ್ಗ ನಾ. ದಿನೇಶ್ ಆಡಿಗ, ಮೈಸೂರು

ವಿಶಿಷ್ಟ ರಾಜಕಾರಣಿ

ಕಮ್ಯುನಿಸ್ಟ್ ಪಕ್ಷದ ಹಿರಿಯ ನಾಯಕ ಸೀತಾರಾಮ್ ಯೆಚೂರಿಯವರು ಕಾಲವಾಗಿದ್ದು ದುಃಖಕರ ಸಂಗತಿ. ಸುಮಾರು 5 ದಶಕಗಳ ಕಾಲ ತಮ್ಮ ಪಕ್ಷ ವಹಿಸಿದ ಹಲವು ಮಹತ್ವದ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಇವರು 'ಅಜಾತಶತ್ರು' ಎಂದೇ ಹೆಸರಾಗಿದ್ದರು. ಯಾವುದೇ ಹಗರಣ/ವಿವಾದಗಳಿಗೆ ಸಿಲುಕದೇ, ಪಕ್ಷದ ಧ್ಯೇಯ-ಸಿದ್ಧಾಂತಗಳಿಗೆ ಬದ್ಧರಾಗಿ ವಿಶಿಷ್ಟ ರಾಜಕಾರಣಿ ಎನಿಸಿಕೊಂಡಿದ್ದ ಯೆಚೂರಿಯವರಿಗೆ ಗೌರವಪೂರ್ವಕ ನಮನಗಳು.

- ಕೆ.ವಿ.ವಾಸು, ಮೈಸೂರು

ಭಟ್ಟರ್ ಸ್ಕಾಚ್

● ಅಮಾಸೆ ಸುಬ್ಬು, ಮೈಸೂರು
ಭಟ್ರೇ, ಮಾನವ ಸರಪಳಿ ಬೆಸೆಯಲು ಹೋಗಿ ಆ ಕಡೆ ಈ ಕಡೆ ಕೈ ಹಿಡಿದ ಹುಡುಗಿಯರು ನನ್ನನ್ನು ದ್ವಂದ್ವಕ್ಕೆ ಸಿಲುಕಿಸಿದ್ದರಲ್ಲ?
- ನಿನಗೂ ಅದೇ ಬೇಕಿತ್ತು ಬಿಡು!

● ಹರಿಓಂ ಶಾಸ್ತ್ರೀ, ಶಂಕರಪುರ
ಭಟ್ರೇ, ನಿಮ್ಮ ತಲೆಯಲ್ಲಿ ಸುಳಿಯುತ್ತಿರುವ ಯೋಚನೆ ಯಾವುದು?
- ಭಾರತ-ಬಾಂಗ್ಲಾ ಕ್ರಿಕೆಟ್ ಟೆಸ್ಟ್ ನೋಡಲು ಶೇಖ್ ಹಸೀನಾ ಬಂದರೆ ಅವರು ಯಾರನ್ನು ಸಪೋರ್ಟ್ ಮಾಡಬಹುದು ಎಂಬುದು!

● ಬೆಂ.ಮು.ಮಾರುತಿ, ಬೆಂಗಳೂರು
ಭಟ್ರೇ, ಗಣಪತಿಯನ್ನು ನಾಗಮಂಗಲ ಪೊಲೀಸರು ಬಂಧಿಸಿದ್ರಲ್ಲ?
- ಇಲಿಯನ್ನು ಬಂಧಿಸಿದ್ದಕ್ಕೆ ಪ್ರಾಣಿ ದಯಾ ಸಂಘದವರು ಕೋರ್ಟಿಗೆ ಹೋಗಬಹುದು!

● ದೀಪು, ಚಿಕ್ಕಬಾಣಾವರ
ಭಟ್ರೇ, ನಾನೊಂದು ಹೊಸ ಬಾರ್ ಓಪನ್ ಮಾಡಬೇಕೆಂದಿರುವೆ, ಏನೆಂದು ಹೆಸರಿಡಲಿ?
- 'ಕುಡಿಯೋಣು ಬಾರಾ'!

● ಎಲ್.ವಿ.ಸತೀಶ್, ಮೈಸೂರು
ಭಟ್ರೇ, ಈಗ ಯಾರೂ ಪುಸ್ತಕದೊಳಗೆ ನವಿಲುಗರಿಯನ್ನು ಇಡುವುದಿಲ್ಲವಲ್ಲ?
- ಈಗೇನಿದ್ದರೂ ಕಿವಿ ಮೇಲೆ ಹೂವಿಡುತ್ತಾರೆ!

● ವಿ.ಹೇಮಂತಕುಮಾರ, ಬೆಂಗಳೂರು
ಭಟ್ರೇ, ಮೋಸ ಮಾಡುವವರು ಮುಗ್ಧರನ್ನೇ ಆಯ್ಕೆ ಮಾಡಿಕೊಳ್ಳುತ್ತಾರಲ್ಲ?
- ಇಲ್ಲದಿದ್ದರೆ ಮೋಸ ಮಾಡುವುದಾದರೂ ಹೇಗೆ, ಹೇಮಂತು?

● ಡಾ.ಆನಂದ ಕುಲಿಗೋಡ, ಧಾರವಾಡ
ಭಟ್ರೇ, ನೀವು ನಿವೃತ್ತಿಯ ನಂತರ ಪೌರೋಹಿತ್ಯ ಕೈಗೊಳ್ಳುತ್ತೀರಾ?
- ನಿವೃತ್ತಿಯಾದರೆ ತಾನೇ ಆ ಪ್ರಶ್ನೆ ಉದ್ಭವಿಸೋದು!

● ವೇಣುಗೋಪಾಲ ಕಂಚಿತೋಟ, ಕಡೂರು
ಭಟ್ರೇ, 'ಅಕ್ಕ' ಸಮ್ಮೇಳನದಲ್ಲಿ ಆಶಯ ಭಾಷಣ ಮಾಡಲು ಅಮೆರಿಕಕ್ಕೆ ಹೋದ ನಾ.ಸೋಮೇಶ್ವರರಿಗೆ ಸಿಕ್ಕಿದ್ದು ಕೇವಲ ಎರಡು ನಿಮಿಷವಂತೆ?
- 'ಥಟ್ ಅಂತ ಭಾಷಣ ಮಾಡಿ' ಅಂತ ಹೇಳಿರಬೇಕು!

● ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ
ಭಟ್ರೇ, ಎಲ್ಲರಿಗೂ ಉದ್ಯೋಗ ಭಾಗ್ಯ ಕೊಡ್ತೇವೆ ಅಂತ ಹೇಳಿದ ಸರಕಾರ ಹೆಂಗಸರಿಗೇನು ಕೊಟ್ಟಿದೆ?
- ರೀಲ್ಸ್ ಮಾಡಿ ಬಹುಮಾನ ಗೆಲ್ಲಿ ಅಂತ ಹೇಳಿದೆಯಲ್ಲ?!

ಬಗೆಬಗೆಯ ಬಯಕೆ ಸಿರಿಯ ಕಂಡು...

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಒಂದು ಮಗುವಿನ ಮುಂದೆ ಚಿನ್ನಾಭರಣ, ಹಣ, ಮಿಠಾಯಿ, ಆಟಿಕೆಯನ್ನು ಇಟ್ಟರೆ ಮಗುವು ಆಭರಣ, ಹಣ ಬಿಟ್ಟು ಆಟಿಕೆಯನ್ನೋ, ಮಿಠಾಯಿಯನ್ನೋ ಆರಿಸಿಕೊಳ್ಳುತ್ತದೆ. ವಯಸ್ಕ ವ್ಯಕ್ತಿಯ ಮುಂದೆ ಇದೇ ವಸ್ತುಗಳನ್ನಿಟ್ಟರೆ ಆತನಿಗೆ ಹಣ ಮತ್ತು ಚಿನ್ನ ಹೆಚ್ಚು ಆಕರ್ಷಕವಾಗಿ ಕಾಣಿಸುತ್ತವೆ. ಇದೆಲ್ಲಾ ಆಯಾ ಸಂದರ್ಭದಲ್ಲಿ, ಯಾರ್ಯಾರಿಗೆ ಯಾವ್ಯಾವ ಅವಶ್ಯಕತೆ ಇರುತ್ತದೋ ಅದಕ್ಕನುಗುಣವಾಗಿ ಉಂಟಾಗುವ ಬಯಕೆಗಳು. ಮನೆಯಿಲ್ಲದವನಿಗೆ ಮನೆ, ಬಟ್ಟೆಯಿಲ್ಲದವನಿಗೆ ಬಟ್ಟೆ, ಉದ್ಯೋಗವಿಲ್ಲದವನಿಗೆ ಉದ್ಯೋಗ, ಹಸಿದವನಿಗೆ ಊಟ ಅವಶ್ಯಕವಾಗಿಯೂ, ಆಕರ್ಷಕವಾಗಿಯೂ ಕಾಣಿಸುತ್ತವೆ. ಪ್ರತಿಯೊಬ್ಬನ ದೃಷ್ಟಿಕೋನವೂ ಬಯಕೆಯೂ ಬೇರೆ ಬೇರೆಯಾಗಿರುವುದರಿಂದಲೇ ಈ ಲೋಕದಲ್ಲಿ ವಿವಿಧ ಬಗೆಯ ಜನರಿದ್ದಾರೆ. ಅದಕ್ಕೆ ತಕ್ಕಂತೆ ವೈವಿಧ್ಯಮಯ ವಸ್ತುಗಳೂ ಮಾರಾಟವಾಗುತ್ತವೆ.

ಎಲ್ಲರ ಬಯಕೆಗಳೂ ಒಂದೇ ರೀತಿಯದ್ದಾಗಿರುವುದಿಲ್ಲ. ಕ್ರೀಡಾಪಟುವಿಗೆ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಪಡೆಯಬೇಕೆಂಬ ಬಯಕೆಯಿದ್ದರೆ, ರಾಜಕಾರಣಿಗೆ ಮಂತ್ರಿಯಾಗಬೇಕು, ಮುಖ್ಯಮಂತ್ರಿಯಾಗಬೇಕು ಅಥವಾ ಪ್ರಧಾನಮಂತ್ರಿಯಾಗಬೇಕು ಎಂಬ ಬಯಕೆ ಇರುತ್ತದೆ. ಹಾಗಾದರೆ ಆಟಿಕೆಯನ್ನು ಆರಿಸಿಕೊಳ್ಳುವ ಮಗುವಿನ ಬಯಕೆ ಶಾಶ್ವತವಲ್ಲ. ಮಗುವಿದ್ದಾಗ ತಾನು ಆಡಲು ಬಯಸಿದ ಆಟಿಕೆಯನ್ನು ಪಡೆಯಲು ಅದು ಏನೆಲ್ಲ ಕಸರತ್ತು ಮಾಡುತ್ತದೆ. ಆ ಕ್ಷಣದಲ್ಲಿ ಮಗುವಿಗೆ ಅದು ಪ್ರಮುಖವಾಗಿರುತ್ತದೆ. ಕ್ರಮೇಣ ಮಗು ಬೆಳೆದು ದೊಡ್ಡದಾದಾಗ ಆಟಿಕೆಗಾಗಿ ಜಗಳಾಡುವುದು, ಹಠ ಮಾಡುವುದು ಅದಕ್ಕೆ ಮೂರ್ಖತನವೆಂದು ಅನಿಸುತ್ತದೆ. ಆಟಿಕೆಯ ಬಯಕೆ ಬದಲಾಗಿ ನಿಜವಾದ ವಸ್ತುವನ್ನು ಪಡೆಯಬೇಕೆಂಬ ಬಯಕೆ ಹೆಚ್ಚಾಗುತ್ತದೆ. ಆಟಿಕೆಯ ಕಾರಿನ ಬದಲು ಐಷಾರಾಮಿ ಕಾರು, ಹೀಗೆ. ಹೋಗಲಿ ಸ್ವಂತ ಮನೆಯಾದ ಮೇಲೆ ಅದರಲ್ಲಾದರೂ ಸಮಾಧಾನವಿದೆಯೆಂದರೆ ಹಾಗೂ ಇಲ್ಲ. ಅಲ್ಲಿಯೂ ಬಯಕೆಗಳು ಕಾಲಕಾಲಕ್ಕೆ ಬದಲಾಗುತ್ತಿರುತ್ತವೆ. ಯೌವನದಲ್ಲಿ ಮನೆ ಕಟ್ಟುವಾಗ, ಮಲಗುವ ಕೋಣೆ ಮೊದಲನೇ ಮಹಡಿಯಲ್ಲಿದ್ದರೆ ಚೆನ್ನ ಎಂದು ಅಲ್ಲಿ ನಿರ್ಮಿಸಿಕೊಂಡಿರುತ್ತೇವೆ. ವಯಸ್ಸಾದಂತೆ ಮೊಣಕಾಲು ನೋವು ಆರಂಭವಾಗಿ ಮೆಟ್ಟಿಲು ಹತ್ತುವುದು ದುಸ್ತರ ಎನಿಸಿದಾಗ, ನೆಲಮಹಡಿಯಲ್ಲಿಯೇ ಮಲಗುವ ಕೋಣೆ ಇರಬೇಕಿತ್ತು ಎನಿಸುತ್ತದೆ. ಸಾಧ್ಯವಾದರೆ ಅದನ್ನು ಬದಲಾಯಿಸಿಕೊಳ್ಳುತ್ತೇವೆ. ಎಷ್ಟೋ ಬಾರಿ, ಹಳ್ಳಿಯಲ್ಲಿದ್ದವರಿಗೆ ಪಟ್ಟಣದಲ್ಲಿ ಮನೆ ಮಾಡಿಕೊಂಡಿರಬೇಕೆಂಬ ಬಯಕೆಯಾಗುತ್ತದೆ. ಕ್ರಮೇಣ ಪಟ್ಟಣ ಬೆಳೆದು ಶಹರವಾದಾಗ, ಅಲ್ಲಿಯ ಜನಜಂಗುಳಿ, ಅತಿಯಾದ ವಾಹನಗಳು, ಶಬ್ದಮಾಲಿನ್ಯ, ವಾಯು ಮಾಲಿನ್ಯಗಳನ್ನೆಲ್ಲ ಕಂಡು ಹಳ್ಳಿಯೇ ಒಳಿತು ಅನಿಸುತ್ತದೆ. ಒಂದು ವೇಳೆ ಹಳ್ಳಿಯಲ್ಲೇ ಮನೆ ಮಾಡಿಕೊಂಡು ಉಳಿದ ನಂತರ ಅಲ್ಲಿ ಮಕ್ಕಳಿಗೋ ಮೊಮ್ಮಕ್ಕಳಿಗೋ ಬೇಕಾಗುವ ಶಿಕ್ಷಣ ವ್ಯವಸ್ಥೆ, ಸಮೀಪದಲ್ಲಿ ಆಸ್ಪತ್ರೆ ಇರದಿದ್ದರೆ, ಮೊಬೈಲ್ ನೆಟ್‌ವರ್ಕ್ ಬರದಿದ್ದರೆ, ಆಗಾಗ ವಿದ್ಯುತ್ ವ್ಯತ್ಯಯವಾಗುತ್ತಿದ್ದರೆ, ಧಾರಾವಾಹಿ ನೋಡಲು ಆಗದಿದ್ದರೆ ಏನು ಗತಿ? ಎಲ್ಲವೂ ಸರಿಯಾಗಿದ್ದು ಊರಿನ ಕೊನೆಯಲ್ಲಿರುವ ಮನೆಯಲ್ಲಿ ಚಿರತೆಯೊಂದು ಕರುವನ್ನು ಕಚ್ಚಿಕೊಂಡು ಹೋಯಿತು ಎಂದರೆ ಮತ್ತೆ ಪಟ್ಟಣವೇ ಒಳ್ಳೆಯದು, ಅಲ್ಲಿಯೇ ಹೋಗಿ ಉಳಿಯುವುದು ಒಳಿತು ಎಂಬ ಬಯಕೆ ಮೂಡಿದರೂ ಆಶ್ಚರ್ಯವಿಲ್ಲ.

ಎಷ್ಟೋ ಬಾರಿ 'ನನಗೆ ಒಂದೇ ಬಯಕೆ ಇದೆ, ಅದೊಂದು ಈಡೇರಿದರೆ ಬೇರೇನನ್ನೂ ಬಯಸುವುದಿಲ್ಲ' ಎಂದು ಹೇಳಿಕೊಳ್ಳುತ್ತೇವೆ. ಆದರೆ ಅದು ಆ ಒಂದು ಬಯಕೆ ಈಡೇರುವವರೆಗೆ ಮಾತ್ರ. ಮನುಷ್ಯನ ಮನಸ್ಸು ಚಂಚಲ, ಅದರದ್ದೇ ಆದ ಮಾದರಿಯಲ್ಲಿ, ಒಂದೆಡೆಯಿಂದ ಇನ್ನೊಂದೆಡೆಗೆ ಅಲೆದಾಡುತ್ತಲೇ ಇರುತ್ತದೆ. ಒಂದು ಆಸೆ ಮುಗಿಯುತ್ತಿದ್ದಂತೆಯೇ ನಾವು ಇನ್ನೊಂದರ ಬೆನ್ನು ಹತ್ತಿ ಓಡಲಾರಂಭಿಸುತ್ತೇವೆ. ವರ್ಷಾನುಗಟ್ಟಲೆ ಬಯಸಿದ ವಸ್ತು ಅಥವಾ ಸ್ಥಾನ ದಕ್ಕಿದಾಗ ಅದನ್ನು ಕೆಲವು ತಿಂಗಳೂ ಅನುಭವಿಸುವುದಿಲ್ಲ, ಖುಷಿ ಪಡುವುದಿಲ್ಲ. ಬಯಸಿದ್ದನ್ನು ಪಡೆದ ಸಂತೃಪ್ತಿ ಕೆಲವೇ ಕ್ಷಣಗಳದ್ದಾಗಿರುತ್ತದೆ. ಏಕೆಂದರೆ, ಬಯಸಿದ್ದನ್ನು ಪಡೆದ ಮರುಕ್ಷಣದಿಂದ ನಮ್ಮಲ್ಲಿಯೇ ಸುಪ್ತವಾಗಿ ಬಿದ್ದಿದ್ದ ಇನ್ಯಾವುದೋ ಬಯಕೆ ಚಿಗುರೊಡೆದು ಅದರ ಬೆನ್ನುಹತ್ತಿ ಓಡಲಾರಂಭಿಸುತ್ತದೆ. ಅಂದರೆ, ನಮ್ಮ ಬಯಕೆಗೆ ಕೊನೆಯೆಂಬುದೇ ಇಲ್ಲ. ನಮ್ಮ ಬಯಕೆ ಈಡೇರಲು 2 ಅಂಶಗಳು ಪ್ರಮುಖವಾಗಿರುತ್ತವೆ. ಒಂದು, ನಮ್ಮ ಮನಸ್ಥಿತಿ. ಇನ್ನೊಂದು, ನಮ್ಮ ಹೊರಗಿನ ವಾತಾವರಣ. ಆದರೆ, ಎರಡೂ ವಸ್ತುಗಳು ಸ್ಥಿರವಲ್ಲ. ಅವನ್ನು ಹತೋಟಿಯಲ್ಲಿಡುವುದು ಸಾಧ್ಯವಿಲ್ಲ. ಬಯಕೆ ಎಂಬುದು ಆ ಕ್ಷಣಕ್ಕೆ ಸಂಬಂಧಪಟ್ಟದ್ದಾದರೂ, ಅದೇ ಜೀವನದ ಮುಖ್ಯ ಉದ್ದೇಶವಾಗಿ ಮಾರ್ಪಟ್ಟರೂ ಕೆಲವೊಮ್ಮೆ ನಮ್ಮ ಬಯಕೆ ಈಡೇರುವುದಿಲ್ಲ. ಎಷ್ಟೋ ಸಲ ನಾವು ಸರಿಯಾಗಿ ಯೋಚಿಸದೆಯೇ ಯಾವುದು ಮುಖ್ಯವಲ್ಲವೋ, ಪ್ರಯೋಜನಕಾರಿಯಲ್ಲವೋ ಅಥವಾ ಅವಶ್ಯವಲ್ಲವೋ ಅದರ ಹಿಂದೆ ಓಡುತ್ತೇವೆ. ಆದರೆ ಗುರಿ ತಲುಪಿದಾಗ, 'ನಮ್ಮ ಗುರಿ ಇದಲ್ಲವಾಗಿತ್ತು' ಎಂದು ಪಶ್ಚಾತ್ತಾಪ ಪಡುವುದೂ ಇದೆ. ಇದು ದೀಪದ ಆಕರ್ಷಣೆಗೆ ಒಳಗಾಗುವ ಮಗುವಿನಂತೆ. ಮಗುವಿಗೆ ದೀಪ ಸುಂದರವಾಗಿ ಕಾಣುತ್ತದೆ. ಬೇಕೋ-ಬೇಡವೋ, ಅದನ್ನು ಹಿಡಿಯಲು ಹೋಗುತ್ತದೆ. ಕೈಸುಟ್ಟುಕೊಂಡು ಅಳುತ್ತದೆ. ಹಾಗೆಯೇ ನಾವು ದೊಡ್ಡವರಾದ ಮೇಲೂ ಎಷ್ಟೋ ಬಾರಿ ಉದ್ಯೋಗ ಮಾಡುತ್ತಾ, ಉದ್ದಿಮೆ ಆರಂಭಿಸಿ ಅಥವಾ ಇನ್ಯಾವುದೋ ನಿರ್ಣಯ ತೆಗೆದುಕೊಂಡು, ಕೆಲವು ದಿನದ ನಂತರ ನಮ್ಮ ನಿರ್ಣಯ ಸರಿಯಾಗಿರಲಿಲ್ಲ ಎನಿಸುವುದಿದೆ.

ಒಬ್ಬಾತ ಖಾಲಿ ಜಾಗದಲ್ಲಿ ಮನೆ ನಿರ್ಮಿಸಿ ಸಂತಸದಲ್ಲಿರುತ್ತಾನೆ ಅಂದುಕೊಳ್ಳಿ. ಕಾಲಕ್ರಮೇಣ ಆತನ ಮನೆಯ ಪಕ್ಕದಲ್ಲಿ ಒಂದು ಹಿಟ್ಟಿನ ಗಿರಣಿ ಆರಂಭವಾಗುತ್ತದೆ. ಇನ್ನೊಂದು ಪಕ್ಕದಲ್ಲಿ ಮೋಟಾರ್‌ಬೈಕ್ ರಿಪೇರಿಯ ಗ್ಯಾರೇಜ್ ಆರಂಭವಾಗುತ್ತದೆ. ಮನೆಯ ಮುಂದೆ ವಾಹನ ಸಂಚಾರ ಹೆಚ್ಚಾಗುತ್ತದೆ. ಎದುರು ಮನೆಯ ನಾಯಿ ಸದಾ ಬೊಗಳುತ್ತಿರುತ್ತದೆ. ಸುತ್ತಲಿನ ವಾತಾವರಣ ಬದಲಾಗಿ ಉಸಿರು ಕಟ್ಟಿದ ಅನುಭವವಾಗುತ್ತದೆ. ತಾನಿಲ್ಲಿ ಮನೆ ಕಟ್ಟಬಾರದಾಗಿತ್ತು ಎನಿಸುತ್ತದೆ. ತಾನೇ ಬಯಸಿದ ಜಾಗದಲ್ಲಿ ಕಟ್ಟಿದ ಮನೆಯಲ್ಲಿ ಆತ ಕಿರಿಕಿರಿ ಅನುಭವಿಸುತ್ತಾನೆ.

ನಮ್ಮ ಬಯಕೆಗಳನ್ನು ಪೂರೈಸಿಕೊಳ್ಳುವ ಹಂತದಲ್ಲಿ ನಾವು ನಮ್ಮ ಅಕ್ಕ ಪಕ್ಕದಲ್ಲಿ ಆಗುತ್ತಿರುವ ವಿಷಯಗಳ ಬಗ್ಗೆ ಹೆಚ್ಚಿನ ಗಮನ ಕೊಡುವುದಿಲ್ಲ, ನಮ್ಮ ಬಯಕೆಯ ಬಗ್ಗೆಯೇ ಯೋಚಿಸುತ್ತಿರುತ್ತೇವೆ. ಆಗ ನಾವು ಹಿಂದೆ ಗಳಿಸಿದ್ದಕ್ಕೆ ಯಾವುದೇ ಅರ್ಥವಿಲ್ಲದಂತಾಗುತ್ತದೆ. ಏಕೆಂದರೆ ನಮ್ಮ ಸಂಪೂರ್ಣ ಲಕ್ಷ್ಯ ಮುಂದೆ ಗಳಿಸಬೇಕಾದುದ್ದರ ಕಡೆಗೆ ಇರುತ್ತದೆಯೇ ವಿನಾ, ಹಿಂದೆ ಗಳಿಸಿದ್ದರ ಕಡೆಗೆ ಇರುವುದೇ ಇಲ್ಲ. ನಮ್ಮ ಬಯಕೆಗಳು ಪೂರ್ಣಗೊಂಡ ನಂತರ ಅದನ್ನು ಬೇಗ ಮರೆಯುತ್ತೇವೆ. ಪೂರ್ಣಗೊಳ್ಳದ ಬಯಕೆಗಳೇ ನಮ್ಮನ್ನು ಕಾಡುತ್ತಿರುತ್ತವೆ. ಅಪೂರ್ಣ ಬಯಕೆ ನಮ್ಮ ದೇಹದಲ್ಲಿನ ಒಂದು ಸಣ್ಣ ಗಾಯವಿದ್ದಂತೆ. ಅದರ ಮೇಲೇ ನಮ್ಮ ಗಮನ ಇರುತ್ತದೆಯೇ ವಿನಾ, ಆರೋಗ್ಯದಿಂದಿರುವ ದೇಹದ ಇನ್ನಿತರ ಭಾಗದ ಕಡೆಗಲ್ಲ. ಕಾಲಿನ ಒಂದು ಬೆರಳಿನಲ್ಲಿ ನೋವಾದರೂ ನಮ್ಮ ಗಮನ ಅದರ ಕಡೆಗೆ ಇರುತ್ತದೆಯೇ ವಿನಾ, ಆರೋಗ್ಯವಾಗಿರುವ ಉಳಿದ 9 ಬೆರಳುಗಳ ಕಡೆಗೂ ಅಲ್ಲ, ಎರಡು ಕಾಲಿನ ಕಡೆಗೂ ಅಲ್ಲ. ಇದನ್ನೇ ಭೌತಿಕ ಜಗತ್ತಿಗೆ ಹೋಲಿಸಿದರೆ, ಈಡೇರದ ಬಯಕೆಗಳನ್ನು ಹಿಂಬಾಲಿಸಿ, ಇದುವರೆಗೆ ಈಡೇರಿದ ವಿಷಯದ ಕಡೆಗೆ ನಾವು ಸಂಪೂರ್ಣ ಗಮನ ಹರಿಸದೆ ಮುಂದುವರಿಯುತ್ತೇವೆ. ಬೇಕಾದಷ್ಟು ಶ್ರೀಮಂತಿಕೆ ಇದ್ದರೂ, ಬೇಕಾದ ವಸ್ತುಗಳಿದ್ದರೂ, ನಮ್ಮ ಜತೆಯಲ್ಲಿ ಖುಷಿ ಕೊಡುವ ವ್ಯಕ್ತಿಗಳಿದ್ದರೂ ಅದನ್ನು ಅನುಭವಿಸುವುದಿಲ್ಲ. ಬದಲಾಗಿ ಮುಂದೆ ಗಳಿಸಬೇಕಾದುರ ಬಯಕೆಯಲ್ಲಿಯೇ ಇರುತ್ತೇವೆ.

ಈ ಪ್ರಪಂಚದಲ್ಲಿ ಪ್ರತಿಯೊಬ್ಬನೂ ತಾನು ಏನನ್ನಾದರೂ ಸಾಧಿಸಬೇಕು ಎಂದು ಬಯಸುತ್ತಾನೆ. ಆದರೆ ಎಷ್ಟೋ ಸಲ ಆ ಬಯಕೆ ಈಡೇರದೆ ನಿರಾಶನೂ ಆಗುತ್ತಾನೆ. ನಿರಂತರವಾಗಿ ಈಡೇರದ ಬಯಕೆಯ ಬಂದಿಯಾಗಿರುವುದರಿಂದ ವರ್ತಮಾನದ ಬದುಕನ್ನು ಆಸ್ವಾದಿಸದೇ ಕಳೆಯುತ್ತಾನೆ. ಇದಕ್ಕೆ ಒಂದು ಉದಾಹರಣೆ ಹೇಳಿಬಿಡುತ್ತೇನೆ. ಒಬ್ಬ ಸಂಸಾರಸ್ಥ ಬಾಡಿಗೆಯ ಮನೆಯಲ್ಲಿದ್ದಾನೆ ಎಂದುಕೊಳ್ಳಿ. ಅವನಿಗೆ ಸ್ವಂತ ಮನೆ ಕಟ್ಟಿ ಅದರಲ್ಲಿ ವಾಸ ಮಾಡಬೇಕು ಎಂಬ ಬಯಕೆಯಾಗುತ್ತದೆ, ತಪ್ಪಲ್ಲ. ಹೀಗಾಗಿ ಆತ ಒಂದು ಜಾಗ ಖರೀದಿಸಿ ಮನೆಯ ನಿರ್ಮಾಣಕ್ಕೆ ತೊಡಗುತ್ತಾನೆ. ಆ ಸಂದರ್ಭದಲ್ಲಿ ಆತ ಬೆಳಗ್ಗೆ ಬೇಗನೆ ಎದ್ದು, ಹೊಸಮನೆ ಕಟ್ಟಿಸುತ್ತಿರುವ ಜಾಗಕ್ಕೆ ಹೋಗಿ, ಅಲ್ಲಿಯ ದೇಖ-ರೇಖಿ ನೋಡಿಕೊಂಡು, ಕೆಲಸಗಾರರಿಗೆ ಆ ದಿನದ ಕೆಲಸ ಹೇಳಿ, ಬೇಕಾದ ಹಣ, ವಸ್ತುಗಳನ್ನು ಪೂರೈಸಿ, ತನ್ನ ಕೆಲಸಕ್ಕೆ ಹೋಗುತ್ತಾನೆ. ಕೆಲಸದಿಂದ ಹಿಂದಿರುವಾಗ ಪುನಃ ಮನೆ ಕಟ್ಟುತ್ತಿರುವ ಜಾಗಕ್ಕೆ ಹೋಗಿ, ಅಂದಿನ ಕೆಲಸಗಳನ್ನೆಲ್ಲ ವೀಕ್ಷಿಸಿ, ನಾಳಿನ ಕೆಲಸವನ್ನು ವಿವರಿಸಿ, ಸಾಧ್ಯವಾದರೆ ಅಂದು ಕಟ್ಟಿದ ನಾಲ್ಕು ಕಲ್ಲಿಗೆ ನೀರುಣಿಸಿ, ರಾತ್ರಿ ಮಡದಿ-ಮಕ್ಕಳು ಮಲಗಿದ ನಂತರ ಅಥವಾ ಮಲಗುವ ವೇಳೆಗೆ ಮನೆಗೆ ಹಿಂದಿರುಗುತ್ತಾನೆ. ಆತ ಕಟ್ಟುತ್ತಿರುವ ಮನೆ ತಿಂಗಳೊಪ್ಪತ್ತಿನಲ್ಲಿ ಮುಗಿದರೆ ಅಡ್ಡಿಯಿಲ್ಲ. ಕಾರಣಾಂತರಗಳಿಂದ ಇದೇ ರೀತಿ ಕೆಲವು ವರ್ಷ ಮುಂದುವರಿದರೆ? ಸಣ್ಣ ಮಕ್ಕಳು ದೊಡ್ಡವರಾಗಿ ಬೆಳೆದಿರುತ್ತಾರೆ, ಮಡದಿಗೂ ವಯಸ್ಸಾಗಿರುತ್ತದೆ, ಸ್ವತಃ ಆತನೂ ಕುಗ್ಗಿರುತ್ತಾನೆ. ಆತ ಕಟ್ಟಿಸಿದ ಸ್ವಂತ ಮನೆಗೆ ಹೋಗಿ ಉಳಿದುಕೊಳ್ಳಬಹುದು, ಆದರೆ ಈ ನಡುವೆ ಆತ ತನ್ನ ಸಂಸಾರದೊಂದಿಗೆ ಕಳೆಯಬಹುದಾದ ಮಧುರ ಕ್ಷಣಗಳಿಂದ ವಂಚಿತನಾಗಿರುತ್ತಾನೆ. ಆ ಕ್ಷಣಗಳಲ್ಲಿ ಬಹುಶಃ ಮಕ್ಕಳಿಗೆ ತಂದೆ ಕಟ್ಟಿಸುತ್ತಿರುವ ಮನೆಗಿಂತ ತಂದೆ ತಮ್ಮ ಜತೆ ಕಳೆಯಬೇಕಾಗಿದ್ದ ಸಮಯ ಹೆಚ್ಚು ಅವಶ್ಯವಾಗಿರುತ್ತದೆ. ಕೆಲವು ಸಮಯದ ನಂತರ ತಂದೆಗೂ ಹೀಗೇ ಅನಿಸಿದರೂ ಆಶ್ಚರ್ಯವಿಲ್ಲ, ಇರಲಿ. ಆತ ಆ ಮನೆಗೆ ಹೋಗಿ ಉಳಿದ ನಂತರವೂ ಸಂತೋಷವಾಗಿರುತ್ತಾನೆ ಎಂದುಕೊಳ್ಳಬೇಕಾಗಿಲ್ಲ. ಆ ಕಾಲದಲ್ಲಿ ಮಕ್ಕಳು ಬೆಳೆದು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಬೇರೆ ಊರಿಗೆ ಹೋಗಬೇಕಾಗಬಹುದು. ಮಡದಿಯ ಅವಶ್ಯಕತೆಯೂ ಬದಲಾಗಬಹುದು, ಸ್ವತಃ ಆತನ ಬಯಕೆಯೂ ಬದಲಾಗಬಹುದು. ಹಾಗಾದರೆ ಏನು ಸಾಧಿಸಿದಂತಾಯಿತು? ನಂತರ ಆತನಿಗೆ ತಾನು ಮನೆಯ ಹಿಂದೆ ಸಮಯ ವ್ಯರ್ಥ ಮಾಡುವುದಕ್ಕಿಂತ ಮಕ್ಕಳ ಜತೆಗೆ ಹೆಚ್ಚಿನ ಸಮಯವನ್ನು ಕಳೆಯಬಹುದಾಗಿತ್ತು ಎನಿಸಿದರೆ ತಪ್ಪೇನಿಲ್ಲ, ಆದರೆ ಆಗ ಅದನ್ನು ಆಲೋಚಿಸಿ ಯಾವ ಪ್ರಯೋಜನವೂ ಇಲ್ಲ.

ಮನೆ ಕಟ್ಟುವ ಬಯಕೆ ಉಂಟಾಯಿತು ಅಂದುಕೊಳ್ಳಿ ಆಗ ನಮ್ಮೆಲ್ಲಾ ಶಕ್ತಿ ಆ ಬಯಕೆಯ ಸುತ್ತಲೇ ಸುತ್ತುತ್ತಿರುತ್ತದೆ. ನಮ್ಮೆಲ್ಲಾ ವಿಚಾರಗಳೂ, ನಿರ್ಣಯಗಳೂ ಆ ಮನೆಯ ಸುತ್ತಲೇ ಇರುವುದರಿಂದ, ಜೀವನದ ಇತರ ವರ್ತಮಾನಗಳನ್ನು ಮರೆತುಬಿಡುತ್ತೇವೆ. ನಮ್ಮ ಬಯಕೆಯು ಮನದಲ್ಲಿ ಮಹತ್ವಾಕಾಂಕ್ಷೆಯನ್ನು ಮೂಡಿಸುತ್ತದೆ. ಮಹತ್ವಾಕಾಂಕ್ಷೆ ಸದಾ ಭವಿಷ್ಯತ್ತಿನಲ್ಲಿಯೇ ಇರುತ್ತದೆಯೇ ಹೊರತು ಭೂತದಲ್ಲಿಯೂ, ವರ್ತಮಾನದಲ್ಲಿಯೂ ಅಲ್ಲ. ಒಂದು ವಿಚಾರ ತಿಳಿದಿರಲಿ, ಭವಿಷ್ಯ ಯಾವತ್ತೂ ಸ್ಥಿರವಲ್ಲ. ಭವಿಷ್ಯವನ್ನು ಕಡಾಕಡಿ ಹೇಳಲು ಸಾಧ್ಯವಿಲ್ಲ. ಭವಿಷ್ಯ ಯಾವತ್ತೂ ದೂರದಲ್ಲಿರುವ ಬೆಟ್ಟದಂತೆ, ಚಲಿಸುವ ಮೋಡದಂತೆ. ನಾವೆಷ್ಟೇ ಪ್ರಯತ್ನಿಸಿದರೂ ಭವಿಷ್ಯವನ್ನು ಸ್ವಾಧೀನಪಡಿಸಿಕೊಳ್ಳಲು ಸಾಧ್ಯವೇ ಇಲ್ಲ.

ಹಾಗಾದರೆ ಬಯಕೆಗಳಿಲ್ಲದೆ ಬದುಕಲು ಸಾಧ್ಯವೇ? ಬಯಕೆಯೇ ಇಲ್ಲದ ಬದುಕು ಬೆಂಗಾಡು. ಆಸ್ಪತ್ರೆಯಲ್ಲಿ ಮಲಗಿದ ರೋಗಿಯೂ ತಾನು ಬೇಗ ಗುಣಮುಖನಾಗಿ ಮನೆಗೆ ಹೋಗಬೇಕೆಂದು ಬಯಸುತ್ತಾನೆ. ಅದೇ ಒಬ್ಬ ಮನುಷ್ಯ ತನಗೆ ರೋಗವೇ ಬರಬಾರದು, ತಾನು ಸಾಯಲೂಬಾರದು ಎಂದು ಬಯಸಿದರೆ? ಆದ್ದರಿಂದ ನಮ್ಮ ಬೇಕು ಬೇಡಗಳನ್ನು ನಿರ್ಣಯಿಸಿ ಬಯಕೆಗಳನ್ನು ಗಾಳಿಸಬೇಕು, ಸಾಣೆಸಬೇಕು. ಇನ್ನು, ಬಹಳಷ್ಟು ಜನ ತಮ್ಮ ಬಯಕೆಯ ಗುರಿ ತಲುಪುವುದೇ ಪ್ರಮುಖವೆಂದು ತಪ್ಪಾಗಿ ಭಾವಿಸುತ್ತಾರೆ. ಬಯಕೆಯ ಪರ್ವತದ ಶಿಖರ ತಲುಪುವ ತವಕದಲ್ಲಿ ಆರಂಭ ಮತ್ತು ಅಂತ್ಯದ ನಡುವಿನಲ್ಲಿರುವ ಪ್ರಯಾಣದ ದಾರಿಯೆಡೆಗೆ ಹೆಚ್ಚಿನ ಗಮನ ಹರಿಸುವುದಿಲ್ಲ. ತಲುಪುವ ಗುರಿಗಿಂತ ಪ್ರಯಾಣದ ಹಾದಿ ಇನ್ನೂ ಸೊಗಸಾಗಿರಬಾರದೇಕೆ? ದಾರಿಯುವುದಕ್ಕೂ ಸಿಗುವ ಸುಂದರ ದೃಶ್ಯ, ಮರೆಯಲಾಗದ ಅನುಭವ, ಗುರಿಗಿಂತಲೂ ವಿಶಿಷ್ಟವಾಗಿರಬಾರದೇಕೆ? ಆದ್ದರಿಂದ ಗುರಿಯೆಡೆಗೆ ತಲುಪುವಾಗ ಪ್ರಯಾಣದ ಕಡೆಗೆ ಹೆಚ್ಚು ಗಮನ ಹರಿಸಬೇಕು. ಎಷ್ಟೋ ಬಾರಿ ನಮ್ಮ ಬದುಕೇ ಸುಂದರವಾದ ಕ್ಷಣಗಳನ್ನು ನಮಗೆ ಉಡುಗೊರೆಯಾಗಿ ನೀಡುತ್ತದೆ. ಬದುಕು ಸುಂದರ ಪ್ರಯಾಣವಷ್ಟೇ ಅಲ್ಲ ಅತಿದೊಡ್ಡ ಬಹುಮಾನವೂ ಆಗುತ್ತದೆ.

ಮರುಸ್ಪಂದನ
ರವಿ ಹಂಜ್

ಇಲ್ಲ, ಇದು ಹೀಗೆಯೇ...

ನನ್ನ 'ಬಸವ ಮಂಟಪ' ಅಂಕಣದ (ವಿಶ್ವವಾಣಿ ಸೆ.11) ಕುರಿತು ಎಂ.ಎಸ್.ಜಾಮದಾರ್ ಅವರು ಬರೆದ 'ಪ್ರತಿಸ್ಪಂದನ ಪತ್ರ'ಕ್ಕೆ (ಸೆ.13) ನನ್ನ ಸ್ಪಂದನೆಯ ಸ್ಪಷ್ಟನೆಯಿದು.

- ಜೈನ ಪುರಾಣವನ್ನು ಆಧರಿಸಿ ಬಿ.ಎಲ್. ರೈಸ್ ಅವರು ಬಸವಣ್ಣ ಒಬ್ಬ ಆರಾಧ್ಯ ಎಂದು ಹೇಳಿದ್ದಾರೆ. ಆದರೆ ಇದೇ ಸತ್ಯ ಎಂದು ನಾನು ಒಪ್ಪದೆ, ಅದನ್ನು ಇತಿಹಾಸ ತಜ್ಞರು ಮಾನ್ಯ ಆಕರ ಎಂದು ಪರಿಗಣಿಸುವ ಒಂದಲ್ಲ ಎರಡು ಶಿಲಾಶಾಸನಗಳಲ್ಲಿರುವುದಕ್ಕೆ ತಾಳೆಹಾಕಿ ಪರಿಶೀಲಿಸಿ ಅದನ್ನು ಒಪ್ಪಬೇಕು ಎಂದಿದ್ದೇನೆ.
- ಬಸವಣ್ಣನು ಒಬ್ಬ ಕಮ್ಮೆ ಬ್ರಾಹ್ಮಣನಾಗಿದ್ದ ಎಂದಿದ್ದಾರೆ ಜಾಮ ದಾರರು; ಆದರೆ ಅದಕ್ಕೆ ಐತಿಹಾಸಿಕ ಮಾನ್ಯವಾಗುವ ಯಾವುದೇ ಶಿಲಾಶಾಸನದ ಪುರಾವೆಯನ್ನು ಕೊಟ್ಟಿಲ್ಲ. ಅವರ ಅಭಿಪ್ರಾಯವು ಪುರಾಣಗಳನ್ನು ಆಧರಿಸಿರಬಹುದು; ಆದರೆ ಪುರಾಣಗಳಿಗೆ ತಾಳೆಯಾಗುವ ತಕ್ಕ ಐತಿಹಾಸಿಕ ಆಧಾರಗಳು ಇದ್ದರೆ ಅವು ಒಪ್ಪಿತವೇ ಹೊರತು, ಕೇವಲ ಪುರಾಣಗಳನ್ನು ಆಧರಿಸಲಾಗದು. ಅದನ್ನು ಒಪ್ಪುವುದಾದರೆ, ಬಸವಣ್ಣನು ಆಕಾಶದಿಂದ ನೇರ ಧರೆಗಿಳಿದ 'ಶಾಪಗ್ರಸ್ತ ಗಣ' ಎಂಬುದನ್ನೂ ಮಾನ್ಯಮಾಡಬೇಕಾಗುತ್ತದೆ! ಹಾಗಾಗಿ ಈ ಅಭಿಪ್ರಾಯವನ್ನು ಜಾಮದಾರರೂ ಒಪ್ಪಲಾರರು ಎಂದುಕೊಂಡಿದ್ದೇನೆ.
- ಆರ್.ಜಿ.ಭಂಡಾರ್ಕರ್ ಆ ಒಂದು ಜಾತಿಯವರಾಗಿದ್ದರು, ಹಾಗಾಗಿ ಅವರು ಜೈನ ಪುರಾಣವನ್ನು ಜನಪ್ರಿಯಗೊಳಿಸಿದರು ಎಂಬುದು ಇಲ್ಲಿ ಅನವಶ್ಯಕ. ಬಸವಣ್ಣನೂ ಸೇರಿದಂತೆ ಬಹುಪಾಲು ಶರಣರು ಜೈನದ್ವೇಷಿಗಳು ಎಂಬುದು ಅವರ ವಚನದಲ್ಲೇ ಕಾಣಸಿ ಗುತ್ತದೆ. ಆದಕಾರಣ, ಇಂಥ ಜಾತಿಯವರು ಹೀಗೆ ಎನ್ನುವುದು ಮುಳುಗುತ್ತಿರುವವನಿಗೆ ಹುಲ್ಲು ಕಡ್ಡಿಯೂ ಆಸರೆ ಎಂಬ ನೆಪದಂತಾಗುತ್ತದೆಯೇ ಹೊರತು ಪ್ರಬಲ ಸಾಕ್ಷಿಯಾಗಿ ಅಲ್ಲ.
- ಬಸವಣ್ಣನ ಕಾಲದಲ್ಲಿ ಜಾತಿಯ ಪರಿಗಣನೆಗಳು ಅಸ್ತಿತ್ವದಲ್ಲಿ ರಲಿಲ್ಲ ಎಂದು ನಾನು ಹೇಳಿದ್ದೇನೆ ಎಂದಿದ್ದಾರೆ ಜಾಮದಾರರು. ಅದು ಅವರ ತಪ್ಪುಗ್ರಹಿಕೆ. ಹುಟ್ಟಿನಿಂದ ಜಾತಿ ಇರಲಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಇನ್ನು, ಅವರು ಮಾಡಿರುವ ಋಗ್ವೇದದ ಉಲ್ಲೇಖ ಮತ್ತು ಕೃಷ್ಣನ ಉಕ್ತಿಗಳು ಚಾತುರ್ವಣಗಳ ಕುರಿತಾಗಿವೆಯೇ ಹೊರತು ಜಾತಿಗಳ ಕುರಿತಲ್ಲ.
- ಇನ್ನು ಜಾಮದಾರರು, 'ಅರ್ಜುನವಾಡ ಶಿಲಾಶಾಸನದ ಮಾಹೇಶ್ವರ ಪದವು ಬ್ರಾಹ್ಮಣ ವಿದ್ವಾಂಸ ಎಂದಾಗುತ್ತದೆ' ಎಂದಿದ್ದಾರೆ. ಆದರೆ ಬಸವಾದಿ ಶರಣರು ಮಾಹೇಶ್ವರ ಸ್ಥಲ ಎಂಬ ಷಟ್‌ಸ್ಥಲವಲ್ಲದೆ, ಮಾಹೇಶ್ವರರು ಲಿಂಗಾಯತದ ಸಾಧಕರು ಎಂದು ಸಾಕಷ್ಟು ವಚನಗಳಲ್ಲಿ ಬಳಸಿದ್ದಾರೆಯೇ ಹೊರತು ಬ್ರಾಹ್ಮಣ ಎಂಬರ್ಥದಲ್ಲಿ ಎಲ್ಲಿಯೂ ಬಳಸಿಲ್ಲ. ಮೇಲಾಗಿ ಈ ಶಾಸನವು ಬಸವೋತ್ತರ ಕಾಲದ್ದಾದುದರಿಂದ, ಇಲ್ಲಿನ ಮಾಹೇಶ್ವರ ಪದವು ಜಂಗಮರನ್ನು ಕುರಿತೇ ಆಗಿದೆ ಮತ್ತು ಅದಕ್ಕೆ ಪೂರಕವಾಗಿ ಜಂಗಮ ಪುರುಷ ಪದವೂ ಇದೇ ಶಾಸನದಲ್ಲಿದೆ ಹಾಗೂ ಅದಕ್ಕೆ ಪೂರಕವಾಗಿ ಮುನವಳ್ಳಿ ಶಾಸನದಲ್ಲಿಯೂ ಇದೆ. ಹಾಗಾಗಿ, ಈ ಎಲ್ಲಾ ಸ್ಪಷ್ಟನೆಗಳ ಕಾರಣ, 'ಇದು ಹೀಗೆಯೇ' ಎಂದು ವಿನಮ್ರನಾಗಿ ತಿಳಿಸುತ್ತೇನೆ.

(ಲೇಖಕರು ಶಿಕಾಗೊ ನಿವಾಸಿ ಮತ್ತು ಸಾಹಿತಿ)

ಭ್ರಾತೃತ್ವದ ಗುರು ಪ್ರವಾದಿ ಮುಹಮ್ಮದರು

ಅಬ್ದುಲ್ಲಾ ಮತ್ತು ಅಮಿನಾ ದಂಪತಿಯ ಪುತ್ರರಾಗಿ ಮೆಕ್ಕಾದಲ್ಲಿ ಜನಿಸಿದ ಪ್ರವಾದಿ ಮುಹಮ್ಮದರು 63ನೇ ವಯಸ್ಸಿನಲ್ಲಿ ಇಹಲೋಕಕ್ಕೆ ವಿದಾಯ ಹೇಳಿದರು. ಇಂದು ಅವರ ಜನ್ಮದಿನ. ಬಡವರ ಮನೆಯಲ್ಲಿ ಹುಟ್ಟಿದವರೂ ಜಾಗತಿಕ ವಿದ್ವಾಂಸರಾಗಬಹುದು ಎಂಬುದಕ್ಕೆ ಇವರು ಅತಿದೊಡ್ಡ ಉದಾಹರಣೆಯಾಗಿದ್ದಾರೆ.

ಧರ್ಮದೀವಿಗೆ
ಆಮಿರ್ ಅಶ್‌ಅರೀ
vveditoped@gmail.com

ನಾಳೆ ಪ್ರಳಯವಾಗುವ ಲಕ್ಷಣವಿದ್ದರೂ ಇಂದು ವ್ಯಕ್ತಿಯೊಬ್ಬ ತನ್ನಲ್ಲಿರುವ ಸಸಿಯನ್ನು ನೆಡಬೇಕು ಎಂಬುದನ್ನು ಕಲಿಸಿರುವ ಪ್ರಕೃತಿ-ಸ್ನೇಹಿ ಅವರು. 'ನೆರೆಹೊರೆಯವರು ಹಸಿದಿರಬೇಕಾದರೆ ತನ್ನ ಹೊಟ್ಟೆ ಮಾತ್ರ ತುಂಬಿಸಿಕೊಳ್ಳುವನು ನನ್ನ ಅನುಯಾಯಿಯಾಗಲಾರ' ಎಂದು ಶಿಷ್ಯರಿಗೆ ಎಚ್ಚರಿಕೆ ಕೊಟ್ಟ ಕಾರುಣ್ಯದ ಗುರು ಅವರು. ಜನಿಸಿದ ಮಗು ಹೆಣ್ಣಾಗಿದ್ದಲ್ಲಿ ಕ್ಷಣಾರ್ಧದಲ್ಲಿ ಗುಂಡಿ ಅಗೆದು ಜೀವಂತ ಹೂತುಬಿಡುತ್ತಿದ್ದ ಅನಾಗರಿಕ ಜನಾಂಗಕ್ಕೆ, 'ಹೆಣ್ಣು ಮನೆಯ ಬೆಳಕು; ಅವಳು ಬೆಳೆದರೆ ಮನೆಯೂ ಮನಸ್ಸೂ ಪ್ರಕಾಶಗೊಳ್ಳಲು ಸಾಧ್ಯ. ಅವಳನ್ನು ಕೊಲ್ಲದಿರಿ. ಅವಳಿಗೂ ಬದುಕುವ ಸ್ವಾತಂತ್ರ್ಯವಿದೆ' ಎಂದು ಹೇಳಿ ಹಲವಾರು ಹೆಣ್ಣು ಕುಡಿಗಳ ಜೀವರಕ್ಷಿಸಿದ ಮತ್ತು ಮಹಿಳಾ ಸಬಲೀಕರಣಕ್ಕಾಗಿ ಹೋರಾಡಿದ ಸಾಮಾಜಿಕ ಚಿಂತಕ ಅವರು. ತಮ್ಮ ಮಗಳು ಫಾತಿಮಾರನ್ನು ಜಾಗತಿಕ ಮಹಿಳೆಯರಿಗೆ ಆದರ್ಶವಾಗಿ ಬೆಳೆಸಿದ ಅವರು, ತಾವು ಬೋಧಿಸಿದ ಧರ್ಮದ ಜತೆಗೆ ಸುತ್ತಮುತ್ತಲಿರುವ ಅನೇಕ ಧರ್ಮೀಯರ ಆಚಾರ-ವಿಚಾರ- ಆರಾಧನೆಗಳಿಗೆ ಭಂಗ ತಾರದೆ, ಅವರ ಧಾರ್ಮಿಕ ಕೇಂದ್ರಗಳಿಗೆ ಧಕ್ಕೆಯುಂಟುಮಾಡದೆ, ಎಲ್ಲರ ಸಂಸ್ಕಾರ ಮತ್ತು ಸಂಸ್ಕೃತಿಯನ್ನು ಗೌರವಿಸಿ, ಅನುಯಾಯಿಗಳಿಗೂ ಅದನ್ನು ಕಲಿಸಿಕೊಟ್ಟ ಸರ್ವಧರ್ಮಪ್ರೇಮಿ. ಅವರೇ ಪ್ರವಾದಿ ಮುಹಮ್ಮದರು.

'ನಾನು ಕಲಿಸಿದ ಆರಾಧನಾ ಕರ್ಮಗಳಲ್ಲಿ ನಿರತರಾಗಿ ಧರ್ಮನಿಷ್ಠರಾದರೂ, ಒಂದೊಮ್ಮೆ ಮತ್ತೊಬ್ಬರ ಧಾರ್ಮಿಕ ವಿಚಾರದಲ್ಲಿ ತೊಂದರೆಯನ್ನುಂಟುಮಾಡಿದರೆ ನೀವು ನನ್ನ ಪ್ರಭುವಿಗೂ ಮತ್ತು ನನಗೂ ಆಪ್ತರಾಗಲು ಸಾಧ್ಯವಿಲ್ಲ' ಎಂದು ತಿಳಿಹೇಳಲು ಮರೆಯದ ಈ ಧರ್ಮಪ್ರಬೋಧಕರು, ಅನ್ಯಾಯಗಳನ್ನು ಸದಾಕಾಲ ಧಾರ್ಮಿಕ ಮತ್ತು ಸಾಮಾಜಿಕ ಮೌಲ್ಯಗಳ ಮೂಲಕ ಎಚ್ಚರಿಸುತ್ತಾ, ನ್ಯಾಯದ ಪರವಿದ್ದ ಧ್ವನಿಯಾಗಿದ್ದರು. ಸಾಕಷ್ಟು ವರ್ಷಗಳ ಹಿಂದೆ ಅವರು ನೀಡಿದ ಉಪದೇಶಗಳು ಆಧುನಿಕ ಕಾಲದಲ್ಲೂ ಪ್ರಸ್ತುತವಾಗಿವೆ. ಕೊಲೆ, ದರೋಡೆ, ಅಕ್ರಮ, ಅನಾಚಾರ, ಅತ್ಯಾಚಾರ ಮತ್ತು ಭಯೋತ್ಪಾದನೆಯ ಕಡುವಿರೋಧಿಯಾಗಿದ್ದ ಪ್ರವಾದಿ ಮುಹಮ್ಮದರು, ಶಿಷ್ಯರನ್ನು ಸದಾಕಾಲ ಜಾಗೃತರನ್ನಾಗಿಡುತ್ತಿದ್ದರು. ಪ್ರವಾದಿಯವರ ನೈಜ ಅನುಯಾಯಿಗಳದ್ದು ಮೇಲೆ ಉಲ್ಲೇಖಿಸಿರುವ ಸಾಮಾಜಿಕ ತಲ್ಲಣಗಳಿಂದ ಅಜಗಜಾಂತರ ದೂರ; ಆದರೂ ಕೆಲ ಮುಖವಾಡಧಾರಿಗಳಿಂದ, ಆಷಾಢಭೂತಿಗಳಿಂದ ಆಗುತ್ತಿರುವ ಅನ್ಯಾಯಗಳು ಸಮಾಜ ಮತ್ತು ಸಮುದಾಯದ ನಡುವಿನ ಅಶಾಂತಿಗೆ ಕುಮ್ಮಕ್ಕು ನೀಡುತ್ತಿರುವುದು ಖೇದಕರ ಸಂಗತಿ. ಇವರ್‍ಯಾರೂ ಪ್ರವಾದಿಯವರ ಅನುಯಾಯಿಗಳಲ್ಲ ಎಂಬುದೇ ವಾಸ್ತವ.

ಪ್ರವಾದಿಯವರ ಧಾರ್ಮಿಕ ಮತ್ತು ಸಾಮಾಜಿಕ ಚಿಂತನೆಯಿಂದ ಪ್ರೇರಣೆಗೊಂಡು ಕರ್ಮಶಾಸ್ತ್ರ ಪಂಡಿತರಾಗಿದ್ದ ಇಮಾಂ ಶಾಫಿಯವರು ಒಮ್ಮೆ ತಮ್ಮ ಶಿಷ್ಯರಿಗೆ ಪಾಠವನ್ನು ಹೇಳಿಕೊಡುವಾಗ ತಕ್ಷಣ ಎದ್ದು ನಿಂತು, ಕೆಲ ಕ್ಷಣದ ನಂತರ ಕುಳಿತುಕೊಂಡು ಪಾಠವನ್ನು ಮುಂದುವರಿಸಿದರು. ಅವರ ಈ ವರ್ತನೆಯಿಂದ ಅಚ್ಚರಿಗೊಂಡ ಶಿಷ್ಯರು ತರಗತಿ ಮುಗಿದ ಬಳಿಕ, 'ಗುರುಗಳೇ, ವಿದ್ಯೆಯನ್ನು ಹೇಳಿಕೊಡುವ ಅಥವಾ ಕೇಳಿಸಿಕೊಳ್ಳುವ ಸಮಯದಲ್ಲಿ ಬೇರಾವುದನ್ನೂ ಮಾಡಬಾರದೆಂದು ನೀವು ಪದೇಪದೆ ಹೇಳುತ್ತಿದ್ದಿರಿ; ಆದರೆ ತರಗತಿಯ ಮಧ್ಯೆ ತಾವು ಎದ್ದು ನಿಂತಿದ್ದೇಕೆ? ಅದಕ್ಕೊಂದು ಮಹತ್ವಪೂರ್ಣ ಕಾರಣ ಇದ್ದಿರಲೇಬೇಕು, ದಯವಿಟ್ಟು ಅದನ್ನು ತಿಳಿಸುವಿರಾ?' ಎಂದು ಕೋರಿಕೊಂಡರು. ಇಮಾಂ ಶಾಫಿಯವರು ಇದಕ್ಕೆ ಉತ್ತರಿಸುತ್ತಾ, 'ತರಗತಿಯ ಸಮಯದಲ್ಲಿ ಗಮನವನ್ನು ಮತ್ತೆಲ್ಲಿಗೂ ಹರಿಸಬಾರದೆಂದು ನಾನು ನಿಮ್ಮಲ್ಲಿ ಬಹಳಷ್ಟು ಸಂದರ್ಭಗಳಲ್ಲಿ ಹೇಳಿರುವೆ; ಆದರೆ, ನಾನು ಪಾಠ ಮಾಡುವಾಗ ಒಬ್ಬರು ನಡೆದುಕೊಂಡು ಹೋಗುವುದನ್ನು ಗಮನಿಸಿದೆ...' ಎಂದರು.

ಈ ಮಾತಿಗೆ ಮತ್ತಷ್ಟು ಗೊಂದಲಗೊಂಡ ವಿದ್ಯಾರ್ಥಿಗಳು, 'ಆದರೆ ಅವರು ಹೋಗುವಾಗ ತಾವು ಎದ್ದು ನಿಂತಿದ್ದೇಕೆ? ಅವರು ಯಾರು?' ಎಂದು ಮರುಪ್ರಶ್ನಿಸಿದರು. ಆಗ ಇಮಾಂ ಶಾಫಿಯವರು, 'ಅವರು ನನ್ನ ಗುರುಗಳಲ್ಲೊಬ್ಬರು. ಅವರು ನಮ್ಮ ಮಸೀದಿಯ ಸಮೀಪದ ದೇವಸ್ಥಾನದಲ್ಲಿ ಅರ್ಚಕರಾಗಿದ್ದಾರೆ' ಎಂದು ಉತ್ತರಿಸಿದರು. 'ಆ ಸ್ವಾಮೀಜಿ ಹೇಗೆ ತಮ್ಮ ಗುರು?' ಎಂಬ ಪ್ರಶ್ನೆ ವಿದ್ಯಾರ್ಥಿಗಳಿಂದ ತೂರಿಬಂತು. ಆಗ ಇಮಾಂ ಶಾಫಿಯವರು, 'ಹೌದು, ಅವರು ನನಗೆ ಸ್ವಾಮೀಜಿ ಮಾತ್ರವಲ್ಲ, ಒಂದು ಸೂಕ್ಷ್ಮ ವಿಚಾರದ ಬಗೆಗಿನ ಸಂಶಯವನ್ನು ನಿವಾರಿಸಿ, ಅದಕ್ಕೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯನ್ನು ಕಲಿಸಿಕೊಟ್ಟು ನನ್ನ ಪಾಲಿನ ಗುರುಗಳಾಗಿದ್ದಾರೆ. ಹೀಗಾಗಿ, ತರಗತಿ ನಡೆಯುತ್ತಿರುವಾಗ ಅವರು ಹೋಗುವುದು ಗಮನಕ್ಕೆ ಬರುತ್ತಿದ್ದಂತೆ ಎದ್ದು ನಿಂತು ಗೌರವವನ್ನು ಸೂಚಿಸಿದೆ' ಎಂದರು.

ಈ ಉತ್ತರಕ್ಕೆ ತೃಪ್ತಿಯಾಗದ ಶಿಷ್ಯರು, 'ಗುರುಗಳೇ, ತಮಗೆ ತಿಳಿಯದ ಒಂದು ವಿಷಯವನ್ನು ಹೇಳಿಕೊಟ್ಟ ಕಾರಣಕ್ಕಾಗಿ ಇಷ್ಟೊಂದು ಗೌರವ ನೀಡುವ ಅಗತ್ಯವಿದೆಯೇ?' ಎಂದು ಪ್ರಶ್ನಿಸಿದಾಗ ಇಮಾಂ ಶಾಫಿಯವರು, 'ಯಾರನ್ನಾದರೂ ಗುರುವೆನ್ನಲು ಅವರ ಬಳಿ ಸುಮಾರು ವರ್ಷಗಳ ಕಾಲ ಕಲಿಯಬೇಕೆಂದೇನೂ ಇಲ್ಲ; ಕೇವಲ ಅಕ್ಷರಗಳನ್ನು ಹೇಳಿಕೊಟ್ಟಿದ್ದರೂ ಅವರನ್ನು ಗುರುವಾಗಿ ಕಂಡು, ಅವರಿಗೆ ಗೌರವವನ್ನು ಸಲ್ಲಿಸಬೇಕು. ಇಸ್ಲಾಮಿನ ಕರ್ಮಶಾಸ್ತ್ರ ಕ್ಷೇತ್ರದಲ್ಲಿ ಜಗತ್ತು ನನ್ನನ್ನು ಅನುಕರಿಸಿದರೂ, ನನಗಿದ್ದ ಸಣ್ಣ ಸಂಶಯಕ್ಕೆ ಉತ್ತರವನ್ನು ಕೊಟ್ಟ ಆ ಸ್ವಾಮೀಜಿಗೂ ನನ್ನ ಬದುಕಿನ ಆಜೀವ ಗುರುಗಳ ಸ್ಥಾನ ನೀಡಬಲ್ಲೆ. ಕಾರಣ, ಇಂಥ ಮಹತ್ವಪೂರ್ಣ ನಿರ್ಧಾರಕ್ಕೆ ಪ್ರವಾದಿ ಪೈಗಂಬರ್ ಮುಹಮ್ಮದ್ ಅವರೇ ನನಗೆ ಪ್ರೇರಣೆ' ಎಂದು ಶಿಷ್ಯರಿಗೆ ತಿಳಿಹೇಳಿದರು.

ಪ್ರವಾದಿ ಮುಹಮ್ಮದರದ್ದು ಎಲ್ಲರಿಗೂ ಆಪ್ತವೆನಿಸುವ ವ್ಯಕ್ತಿತ್ವ, ಅನುಕರಣೆಗೆ ಯೋಗ್ಯವಾದ ಚಿಂತನೆ ಮತ್ತು ಯಾರನ್ನೂ ನೋಯಿಸದ ಪ್ರವೃತ್ತಿ. ಒಮ್ಮೆ ಅವರು ಸಭೆಯಲ್ಲಿರಬೇಕಾದರೆ ವೃದ್ಧರೊಬ್ಬರು ಒಂದು ದ್ರಾಕ್ಷಿಯ ಗೊಂಚಲನ್ನು ಅವರಿಗೆ ಕಾಣಿಕೆಯಾಗಿ ತಂದರು. ಅದನ್ನು ಸ್ವೀಕರಿಸಿದ ಪ್ರವಾದಿಯವರು ಒಂದೊಂದರಂತೆ ಎಲ್ಲವನ್ನೂ ತಾವೇ ತಿಂದು ಮುಗಿಸಿದರು. ಆ ವೃದ್ಧರು ತೃಪ್ತಭಾವನೆಯೊಂದಿಗೆ, ಹೃದಯ ತುಂಬಿದ ಖುಷಿಯೊಂದಿಗೆ ಹಿಂದಿರುಗಿದರು. ಬಳಿಕ ಶಿಷ್ಯರೊಂದಿಗೆ ಮಾತಿಗಿಳಿದ ಪ್ರವಾದಿಯವರು, 'ಯಾವುದೇ ಒಂದು ತಿನಿಸನ್ನು, ಹಣ್ಣನ್ನು ಅಥವಾ ಆಹಾರವನ್ನು ಪರಸ್ಪರ ಹಂಚಿ ತಿನ್ನಬೇಕು; ಅದು ಉತ್ತಮ ಸ್ವಭಾವ ಉಳ್ಳವನ ಗುಣವಾಗಿದೆ. ಆದರೆ ಆ ವೃದ್ಧರು ತಂದ ದ್ರಾಕ್ಷಿಯನ್ನು ನಾನು ಯಾರಿಗೂ ಹಂಚದೆ ಒಬ್ಬನೇ ತಿಂದು ಮುಗಿಸಿದ್ದಕ್ಕೆ ಕಾರಣ, ಅದು ವಿಪರೀತ ಹುಳಿಯಾಗಿತ್ತು. ಅದನ್ನು ನಾನೇನಾದರೂ ನಿಮಗೆ ಹಂಚಿದ್ದಿದ್ದರೆ ನಿಮ್ಮ ಮುಖದಲ್ಲಿ ಹುಳಿಯ ಭಾವನೆ ವ್ಯಕ್ತವಾಗುತ್ತಿತ್ತು, ಅದರಿಂದಾಗಿ ಆ ವೃದ್ಧರಿಗೆ ನೋವುಂಟಾಗುತ್ತಿತ್ತು. ಇದು ನನಗೆ ಇಷ್ಟವಿರಲಿಲ್ಲ. ಹೀಗಾಗಿ ಆ ಹುಳಿದ್ರಾಕ್ಷಿಯೆಲ್ಲವನ್ನೂ ನಗುನಗುತ್ತಲೇ ತಿಂದುಮುಗಿಸಿಬಿಟ್ಟೆ' ಎಂದರು. ಹೀಗೆ ಪ್ರವಾದಿಯವರು ಪ್ರತಿಯೊಬ್ಬ ವ್ಯಕ್ತಿ ಹಾಗೂ ಪ್ರತಿಯೊಂದು ವಸ್ತು-ವಿಷಯಗಳ ಕುರಿತೂ ಸೂಕ್ಷ್ಮತೆಯನ್ನು ಹೊಂದಿದ್ದರು. ಯಾವುದೇ ಮಾಹಿತಿಯನ್ನು ತಮಗಿಂತ ಹಿರಿಯರಿಗೆ ಮುಟ್ಟಿಸಬೇಕಾದರೆ, ಅದನ್ನು ಹೇಳಿಕೊಡುವುದಕ್ಕಿಂತ ಮಾಡಿ ತೋರಿಸಿ ಮನವರಿಕೆ ಮಾಡಿಕೊಡುತ್ತಿದ್ದರು. ಕಿರಿಯರೊಂದಿಗೆ ವಿಶೇಷ ಕರುಣೆ ತೋರುತ್ತಿದ್ದರು, ಮಕ್ಕಳನ್ನು ಪ್ರೀತಿಯಿಂದ ಮುದ್ದಿಸುತ್ತಿದ್ದರು.

ಪ್ರವಾದಿ ಮುಹಮ್ಮದರ ಯಾವುದೇ ಭಾವಚಿತ್ರವಿಲ್ಲದೆ, ಕೇವಲ ಅವರು ಸಾರಿದ ಸಂದೇಶಗಳಿಂದ ಜನರು ಪ್ರಭಾವಿತರಾಗಿ ಅವರನ್ನು ಗುರುವಾಗಿ, ನಾಯಕನನ್ನಾಗಿ ಸ್ವೀಕರಿಸಿದ್ದಾರೆ. ಪ್ರವಾದಿಯವರನ್ನು ಅರಿತ ಯಾರೂ ಅವರ ಮೇಲೆ ಕಪ್ಪುಚುಕ್ಕಿಯನ್ನು ತೋರಿಸಲಿಕ್ಕಿಲ್ಲ. ಅಬ್ದುಲ್ಲಾ ಮತ್ತು ಅಮಿನಾ ದಂಪತಿಯ ಪುತ್ರರಾಗಿ ಮೆಕ್ಕಾದಲ್ಲಿ ಜನಿಸಿದ ಅವರು ತಮ್ಮ ಬದುಕಿನ 63ನೇ ವಯಸ್ಸಿನಲ್ಲಿ ಇಹಲೋಕಕ್ಕೆ ವಿದಾಯ ಹೇಳಿದರು. ಇಂದು ಅವರ ಜನ್ಮದಿನ. ಬಡವರ ಮನೆಯಲ್ಲಿ ಹುಟ್ಟಿದವರೂ ಜಾಗತಿಕ ವಿದ್ವಾಂಸರಾಗಬಹುದು ಎಂಬುದಕ್ಕೆ ಪ್ರವಾದಿ ಮುಹಮ್ಮದ್ ಪೈಗಂಬರರು ಅತಿದೊಡ್ಡ ಉದಾಹರಣೆಯಾಗಿದ್ದಾರೆ. ವ್ಯಕ್ತಿಗಿಂತ, ಆತ ಪ್ರತಿಪಾದಿಸಿದ ತತ್ವ ಮತ್ತು ಸಿದ್ಧಾಂತಕ್ಕೆ ಮೌಲ್ಯವಿದ್ದರೆ ಇಡೀ ಜಗತ್ತು ಅವರನ್ನು ಒಪ್ಪಿಕೊಳ್ಳುತ್ತದೆ ಎಂಬುದನ್ನು ಪ್ರವಾದಿಯವರು ತಮ್ಮ ಸಾಮಾಜಿಕ ಜೀವನದಲ್ಲಿ ತೋರಿಸಿಕೊಟ್ಟಿದ್ದಾರೆ. ಇದು ಎಲ್ಲರಿಗೂ ಆದರ್ಶ ಮತ್ತು ಪ್ರೇರಣೆಯಾಗಲಿ.

(ಲೇಖಕರು ಹವ್ಯಾಸಿ ಬರಹಗಾರರು)

ಕನ್ನಡದ ಈ ಅಧೋಗತಿಗೆ ಹೊಣೆ ಯಾರು?

ಕಳಕಳಿ
ಅಕ್ಷಯಕುಮಾರ ಮುದ್ದಾ
vveditoped@gmail.com

ಒಂದು ಸಮೃದ್ಧ ರಾಜ್ಯದ ಸರ್ವತೋಮುಖ ಅಭಿವೃದ್ಧಿಯಾಗಬೇಕಾದರೆ, ಅಲ್ಲಿನ ಭಾಷೆ ಅತ್ಯಂತ ಪ್ರಭಾವಶಾಲಿಯಾಗಿರಬೇಕು. ಕರ್ನಾಟಕದಲ್ಲಿ ಆಡಳಿತ ಭಾಷೆ ಕನ್ನಡ, ಆಡುವ ಭಾಷೆ ಕನ್ನಡ. ಆದರೆ ಬರೆಯುವ, ಓದುವ, ಕಲಿಯುವ ಬುನಾದಿ ಶಿಕ್ಷಣವೂ ಕನ್ನಡದ್ದೇ ಆಗಿರಬೇಕಲ್ಲವೇ? ಮಾತೃಭಾಷೆ ಎಂಬುದು ಕನಿಷ್ಠಪಕ್ಷ 5ನೇ ತರಗತಿಯವರೆಗಾದರೂ ಕಡ್ಡಾಯವಾದರೆ ಮಕ್ಕಳಿಗೆ ತಮ್ಮ ತಾಯ್ನಾಡಿನ ಭಾಷೆಯ ಅರಿವು ಮೂಡಲು ಸಾಧ್ಯ. ಏಕೆಂದರೆ, ಇಂಗ್ಲಿಷ್ ವ್ಯಾಮೋಹವಿಂದು ಪ್ರತಿಷ್ಠೆಯಾಗಿ ಪರಿಣಮಿಸಿದೆ. ಪೋಷಕರು ಎಲ್‌ಕೆಜಿ ಹಂತದಿಂದಲೇ ಆಂಗ್ಲಮಾಧ್ಯಮದ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸುತ್ತಿರುವುದರಿಂದ ಕನ್ನಡ ಶಾಲೆಗಳಿಗೆ ಮತ್ತು ಕನ್ನಡಕ್ಕೆ ಕುತ್ತು ಬಂದಿದೆ. ಗುಣಮಟ್ಟದ ಕನ್ನಡ ಕಲಿಸುವ ಶಾಲೆಗಳು ಸರಕಾರದ ಆಶ್ರಯವಿಲ್ಲದೇ ಸೊರಗಿಹೋಗಿವೆ, ಅನೇಕ ಖಾಸಗಿ ಕನ್ನಡ ಶಾಲೆಗಳು ಸಂಪೂರ್ಣವಾಗಿ ಮುಚ್ಚಿವೆ. ಅಲ್ಲಲ್ಲಿ ಒಂದಷ್ಟು ಕನ್ನಡ ಶಾಲೆಗಳು ಉಳಿದಿದ್ದರೂ ಸರಕಾರದ ಅನುದಾನ-ಸಹಾಯ-ಸಹಕಾರ ಇಲ್ಲದೆ ಅವು ಕೂಡ ಉಸಿರು ಹಿಡಿದುಕೊಂಡೇ ಬೋಧನೆ ಮಾಡುವಂತಾಗಿದೆ.

ಅತ್ಯಂತ ಪ್ರಾಚೀನ ಭಾಷೆಯಾಗಿರುವ ಕನ್ನಡವನ್ನು ಉಳಿಸಬೇಕಿರುವ ಸರಕಾರವೇ ತಾತ್ಸಾರ ಮಾಡಿದರೆ ಹೇಗೆ? ಕೇವಲ ಸರಕಾರಿ ಶಾಲೆಗಳಿಂದ ಗುಣಮಟ್ಟದ ಕನ್ನಡ ಬೋಧನೆ ಮತ್ತು ರಕ್ಷಣೆ ಸಾಧ್ಯವೇ? ಈ ಬಾಬತ್ತಿನಲ್ಲಿ ಖಾಸಗಿ ಕನ್ನಡ ಶಾಲೆಗಳು ಬೇಡವೇ? ಹೀಗಾದರೆ ಕನ್ನಡ ಉಳಿಯಲು ಸಾಧ್ಯವೇ? 1994ರಿಂದಲೂ ಕನ್ನಡ ಮಾಧ್ಯಮದ ಖಾಸಗಿ ಶಾಲೆಗಳಿಗೆ ಅನುದಾನ/ಆರ್ಥಿಕ ಸಹಾಯ ನೀಡಿಲ್ಲ, ಶಿಕ್ಷಕರ ಅನುಮೋದನೆ ನೀಡಿಲ್ಲ. ಈಗ ಕನ್ನಡದೆಡೆಗೆ ಮತ್ತು ಕನ್ನಡ ಶಾಲೆಗಳೆಡೆಗೆ ಪಾಲಕರ ಆಸಕ್ತಿಯೂ ಕಡಿಮೆಯಾಗಿರುವುದರಿಂದ ಶಾಲಾ ಶುಲ್ಕವೂ ಬರುತ್ತಿಲ್ಲ. ಹೀಗಾಗಿ ಶಾಲಾ ನಿರ್ವಹಣೆ, ಶಿಕ್ಷಕರ ವೇತನ, ವಾಹನ ಖರ್ಚುಗಳು ಹೆಚ್ಚಾಗಿವೆ; ಮೇಲೆ ಉಲ್ಲೇಖಿಸಿದಂತೆ ಖಾಸಗಿ ಕನ್ನಡ ಶಾಲೆಗಳು ಬಹುತೇಕ ಮುಚ್ಚುವ ಹಂತಕ್ಕೆ ಬಂದಿವೆ.

ಬಹಳ ವರ್ಷಗಳ ಹಿಂದೆ ಕನ್ನಡ ಶಾಲೆಗಳಲ್ಲಿ ಮೆಟ್ರಿಕ್ ಪಾಸಾದ ಶಿಕ್ಷಕರೇ ಇದ್ದರೂ, ಮಕ್ಕಳಿಗೆ ಕನ್ನಡವನ್ನು ತಪ್ಪಿಲ್ಲದೆ ಕಲಿಸುತ್ತಿದ್ದರು. ಕಾಗುಣಿತ/ಒತ್ತಕ್ಷರ, ಪತ್ರಲೇಖನ, ಪ್ರಬಂಧ ಹೀಗೆ ಶುದ್ಧಬರಹವನ್ನು ಕಲಿಸುವ ನಿಟ್ಟಿನಲ್ಲಿ ಇನ್ನಿಲ್ಲದಂತೆ ಶ್ರಮಿಸುತ್ತಿದ್ದರು, ಆಸ್ಥೆ ತೋರುತ್ತಿದ್ದರು. ಆದರೀಗ ಪರಿಸ್ಥಿತಿ ಬದಲಾಗಿದೆ. ಮಕ್ಕಳ ಮುಂದೆ ಧೈರ್ಯದಿಂದ ನಿಂತು ಪಾಠಮಾಡುವ ಸ್ಥಿತಿಯಲ್ಲಿ ಪ್ರಶಿಕ್ಷಕರಿಲ್ಲ, ಏಕೆಂದರೆ ಕನ್ನಡ ಶಾಲೆಗಳಿಗೆ ಈಗ ಸರಕಾರದ ಸಹಕಾರವಿಲ್ಲದೆ ಮುಚ್ಚಬೇಕಾಗಿರುವ ಸ್ಥಿತಿ ಬಂದಿರುವುದರಿಂದ ಅವರೆಲ್ಲರ ಸ್ಥಿತಿ ಚಿಂತಾಜನಕವಾಗಿದೆ. ಹೀಗಾಗಿ, ಪ್ರಮಾಣ ಪತ್ರಗಳು, ಅಂಕಪಟ್ಟಿಗಳಲ್ಲಿ ಅಗ್ರ ಶ್ರೇಯಾಂಕ ಪಡೆದ ಬಹುತೇಕ ಮಕ್ಕಳಿಗೆ ಕನ್ನಡವನ್ನು ತಪ್ಪಿಲ್ಲದೆ ಓದಲು ಮತ್ತು ಬರೆಯಲು ಬರುತ್ತಿಲ್ಲ. ಕನ್ನಡ ಎಂಬುದು ಬರೀ ಸಮ್ಮೇಳನದ ಭಾಷಣಗಳಿಗೆ ಸೀಮಿತವಾಗಿಬಿಟ್ಟಿದೆ. ಅಲ್ಲಿಯೂ ಕೇಳುಗರ ಸಂಖ್ಯೆ ಕಡಿಮೆ ಇರುತ್ತದೆ ಎನ್ನಿ. ಇದು ಕನ್ನಡ ಚಿತ್ರರಂಗದ ಮೇಲೂ ಕೆಟ್ಟ ಪರಿಣಾಮ ಬೀರಿ, ಒಳ್ಳೆಯ ಕನ್ನಡ ಚಿತ್ರಗಳನ್ನು ವೀಕ್ಷಿಸಲು ಕನ್ನಡಿಗರೆನಿಸಿಕೊಂಡವರೇ ಬರುತ್ತಿಲ್ಲ. ರಾಜಧಾನಿ ಬೆಂಗಳೂರಿನಲ್ಲಂತೂ ಬಹುತೇಕ ಬಡಾವಣೆಗಳಲ್ಲಿ ಮುಖಕ್ಕೆ ರಾಚುವಂತೆ ಕಾಣುವುದು ಇಂಗ್ಲಿಷ್ ಶಾಲೆಗಳೇ. ಕನ್ನಡ ಶಾಲೆಗಳು ಹೀಗೆ ಕ್ರಮೇಣ ಕಣ್ಮರೆಯಾಗುತ್ತಿದ್ದರೂ ಯಾರೂ ತಲೆ ಕೆಡಿಸಿಕೊಳ್ಳುತ್ತಿಲ್ಲ. ಹೀಗಾದರೆ ಕನ್ನಡವನ್ನು ಉಳಿಸಿ ಬೆಳೆಸುವವರು ಯಾರು?

ಸರಕಾರಿ ವ್ಯವಸ್ಥೆಯ ಅಧೀನದಲ್ಲೇ ಇರುವ ಕೆಪಿಎಸ್‌ಸಿಯವರು ನಡೆಸಿದ ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆಪತ್ರಿಕೆಗಳಲ್ಲಿ ಕಂಡು ಬಂದ ತಪ್ಪುಗಳು ಮತ್ತು ಅಧ್ವಾನಗಳ ಬಗ್ಗೆ ಈಗ ಮತ್ತೊಮ್ಮೆ ಬಿಡಿಸಿ ಹೇಳಬೇಕಿಲ್ಲ. ಪದವಿ ಗಳಿಸಿ ಡಿ.ಎಡ್, ಬಿ.ಎಡ್ ಪ್ರಶಿಕ್ಷಣ ಪಡೆದು ಶಿಕ್ಷಕರಾಗಲು ಹೊರಟವರಿಗೆ ಅರ್ಹತಾ ಪರೀಕ್ಷೆ ನಡೆಸಿದರೆ ಸಾಕಷ್ಟು ಮಂದಿ ಉತ್ತೀರ್ಣರಾಗುವಲ್ಲೂ ವಿಫಲರಾಗುತ್ತಿದ್ದಾರೆ. ಕನ್ನಡ ಭಾಷೆಯಲ್ಲಿ ತಪ್ಪಿಲ್ಲದೆ ಮತ್ತು ಕ್ರಮಬದ್ಧವಾಗಿ ಅರ್ಜಿ ಬರೆಯುವುದಕ್ಕೂ ಬಾರದಂಥ ಪ್ರಶಿಕ್ಷಕರು ಬಹಳಷ್ಟು ಕಡೆಗಳಲ್ಲಿ ಇರುವುದು ದುರದೃಷ್ಟಕರ. ಇಂಥವರನ್ನೇ ಪ್ರಮಾಣಪತ್ರಗಳ ಆಧಾರದ ಮೇಲೆ ರಾಜ್ಯದ ಸಾಕಷ್ಟು ಸರಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಅತಿಥಿ ಶಿಕ್ಷಕರನ್ನಾಗಿ ನಿಯೋಜಿಸಿ ಮಕ್ಕಳಿಗೆ ಬೋಧಿಸಲಾಗುತ್ತಿದೆ. ಇಂಥ ಪರಿಪಾಠದಿಂದ ಗುಣಮಟ್ಟದ ಶಿಕ್ಷಣ ದಕ್ಕುವುದು ಸಾಧ್ಯವೇ? ಹೀಗಾದಲ್ಲಿ ಮಾತೃಭಾಷೆ ಉಳಿದೀತೇ? ಇದರ ಕೆಟ್ಟ ಪರಿಣಾಮವು ಸಮಾಜದ ಹಲವು ರಂಗಗಳ ಮೇಲೂ ಆಗುತ್ತಿರುವುದನ್ನು ತಳ್ಳಿಹಾಕಲಾಗದು.

ವಿದ್ಯಾರ್ಥಿಗಳಿಗೆ ಬಾಲ್ಯದಲ್ಲಿ ಮಾತೃಭಾಷೆಯನ್ನು ಸಮರ್ಥವಾಗಿ ಕಲಿಸಿದರೆ ಮಾತ್ರವೇ ಅವರು ಉಳಿದ ಭಾಷೆಗಳನ್ನು ಪರಿಣಾಮಕಾರಿಯಾಗಿ ಕಲಿಯಲು ಸಾಧ್ಯ. ಕಾರಣ, ಬುನಾದಿ ಭದ್ರವಾಗಿದ್ದರೆ ಮಾತ್ರವೇ ಕಟ್ಟಡವು ದೀರ್ಘಾವಧಿಯವರೆಗೆ ನಿಲ್ಲುತ್ತದೆ. ಹಾಗೆಯೇ ಮಗುವಿಗೆ ಬುನಾದಿ ಶಿಕ್ಷಣವು (1ರಿಂದ 5ನೇ ತರಗತಿವರೆಗೆ) ಮಾತೃಭಾಷೆಯಲ್ಲೇ ಸಿಗಬೇಕು. ಆಗ ಮಾತ್ರವೇ ಮಕ್ಕಳಲ್ಲಿ ಮಾತೃಭಾಷೆಯ ಬಗೆಗಿನ ಸಮರ್ಥ ಅರಿವು, ಅಭಿಮಾನ, ಸ್ವಾಭಿಮಾನ ಮೂಡಿ ಬೆಳೆಯುತ್ತವೆ. ನಮ್ಮ ನೆರೆರಾಜ್ಯಗಳಾದ ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಕೇರಳ, ತಮಿಳುನಾಡುಗಳಲ್ಲಿ ಅಲ್ಲಿನ ಮಾತೃಭಾಷೆಯ ಕಲಿಕೆಗೆ ಸರಕಾರದಿಂದ ಸಹಾಯ, ಅನುದಾನ ಮತ್ತು ಉತ್ತೇಜನ ಆರಂಭದಿಂದಲೇ ದೊರೆಯುತ್ತಿದೆ. ನಮ್ಮಲ್ಲೂ ಈ ಮಾದರಿಯ ಅನುಸರಣೆ ಆಗಬೇಕಲ್ಲವೇ?

ಆಳುಗ ಸರಕಾರದ ತಪ್ಪು ನಿರ್ಧಾರಗಳನ್ನು ಎತ್ತಿ ತೋರಿಸಲು ಸಮರ್ಥವಾದ ವಿರೋಧ ಪಕ್ಷ ಇರಬೇಕಾಗುತ್ತದೆ. ಕನ್ನಡ ಭಾಷೆ ಮತ್ತು ಕನ್ನಡ ಶಾಲೆಗಳಿಗೆ ಸಂಬಂಧಿಸಿದ ಇಂಥ ನಿರ್ಧಾರಗಳಿಗೂ ಈ ಮಾತು ಅನ್ವಯ. 2014ರಲ್ಲಿ ಕನ್ನಡ ಮಾಧ್ಯಮದ ಅನೇಕ ಶಾಲೆಗಳಿಗಿದ್ದ ಅನುಮತಿಗಳನ್ನು ವಾಪಸ್ ಪಡೆದು, ಅವುಗಳ ಬದಲಾಗಿ ಆಂಗ್ಲಮಾಧ್ಯಮಕ್ಕೆ ಅನುಮತಿ ನೀಡುವ ಮೂಲಕ ಮಾತೃಭಾಷಾ ಶಿಕ್ಷಣಕ್ಕೆ ಕೊಳ್ಳಿ ಇಡಲಾಯಿತು. ಸರಕಾರದ ಈ ತಪ್ಪು ನಿರ್ಧಾರವನ್ನು ಕನ್ನಡ ಪರ ಸಂಘಟನೆಗಳು ವಿರೋಧಿಸಿದ್ದು ಕಮ್ಮಿ ಎನ್ನಬೇಕು. ಈಗ ಸರಕಾರಿ ಶಾಲೆಗಳಲ್ಲಿಯೂ 'ಕರ್ನಾಟಕ ಪಬ್ಲಿಕ್ ಶಾಲೆ' ಎಂಬ ಹೆಸರಿನಲ್ಲಿ ಆಂಗ್ಲಮಾಧ್ಯಮದ ಶಾಲೆಗಳನ್ನು ತೆರೆಯಲಾಗುತ್ತಿದೆ. ಹೀಗಾದರೆ ನಮ್ಮ ಕನ್ನಡ ಭಾಷೆ ಮತ್ತು ಕನ್ನಡ ಶಾಲೆಗಳು ಉಳಿಯಲು ಸಾಧ್ಯವೇ?

'ತಾಯಿಯ ಮೊಲೆಹಾಲೇ ವಿಷವಾಗಿ ಕೊಂದರೆ ಇನ್ನಾರಿಗೆ ದೂರಲಿ?' ಎಂಬರ್ಥದಲ್ಲಿ ಬಸವಣ್ಣನವರು ತಮ್ಮ ವಚನವೊಂದರಲ್ಲಿ ಪ್ರಶ್ನಿಸಿದ್ದಾರೆ. ಈಗ ಕರ್ನಾಟಕದಲ್ಲಿ ಅಂಥ ದಯನೀಯ ಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಯಾರು ಹೊಣೆ? ಈ ದುಸ್ಥಿತಿಯನ್ನು ಸರಿಪಡಿಸುವ ನಿಟ್ಟಿನಲ್ಲಿ ನಮ್ಮ ಸರಕಾರ ಆಸಕ್ತಿ ತೋರಲಿ.

(ಲೇಖಕರು ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 131

ಸಮಾಚಾರ ಸಣ್ಣದಲ್ಲ

ಕರಾಚಿಯಲ್ಲಿ ಮತ್ತೆ ಮಂಕಿ ಪಾಕ್ಸ್ ಪತ್ತೆ

ಕರಾಚಿ: ಪಾಕಿಸ್ತಾನದ ಕರಾಚಿಯ ಜಿನ್ನಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶಂಕಿತ ಮಂಕಿ ಪಾಕ್ಸ್ ಸೋಂಕಿನ ಮತ್ತೊಂದು ಪ್ರಕರಣ

ಪತ್ತೆಯಾಗಿದೆ. ಜಿದ್ದಾದಿಂದ ಬಂದ ವ್ಯಕ್ತಿಯಲ್ಲಿ ಮಂಕಿ ಪಾಕ್ಸ್ ಕಾಯಿಲೆ ಲಕ್ಷಣ ಪತ್ತೆಯಾದವು. ಬಳಿಕ ವ್ಯಕ್ತಿಯನ್ನು ಹೆಚ್ಚುವರಿ ಪರೀಕ್ಷೆ ಮತ್ತು ಆರೈಕೆಗಾಗಿ ಸಿಂಧ್ ಪ್ರಾಂತ್ಯದ ಸರಕಾರಿ ಆಸ್ಪತ್ರೆಗೆ ಕರೆದೊಯ್ದು ಪ್ರತ್ಯೇಕ ವಾರ್ಡ್‌ನಲ್ಲಿರಿಸಲಾಗಿದೆ. ಇದೇ ವಾರದ ಆರಂಭದಲ್ಲಿ ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ಮಂಕಿ ಪಾಕ್ಸ್‌ನ 5ನೇ ಪ್ರಕರಣ ವರದಿಯಾಗಿತ್ತು. 33 ವರ್ಷದ ಸಂತ್ರಸ್ತ ಖೈಬರ್ ಪಖ್ತುಂಖ್ವಾ ಪೇಶಾವರ ನಿವಾಸಿ ಸೆ.7ರಂದು ಸೌದಿ ಅರೇಬಿಯಾದಿಂದ ಹಿಂದಿರುಗಿದ್ದ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ.

ಮದ್ಯ ನಿಷೇಧ ರದ್ದು; ಪ್ರ.ಕಿಶೋರ್ ಭರವಸೆ

ಪಟನಾ: ಜನ್ ಸೂರಜ್ ಪಕ್ಷ ಬಿಹಾರದಲ್ಲಿ ಅಧಿಕಾರಕ್ಕೆ ಬರುತ್ತಿದ್ದಂತೆಯೇ 'ಮದ್ಯ ನಿಷೇಧ' ನೀತಿ ರದ್ದು ಮಾಡುತ್ತದೆ ಪಕ್ಷದ ಅಧ್ಯಕ್ಷ, ಚುನಾವಣಾ ತಂತ್ರಗಾರಿಕೆ ನಿಪುಣ ಪ್ರಶಾಂತ್ ಕಿಶೋರ್ ಭಾನುವಾರ ಹೇಳಿದ್ದಾರೆ. ಅಕ್ಟೋಬರ್‌ನಲ್ಲಿ 'ಜನ್ ಸೂರಜ್ ಪಕ್ಷ' ಅಧಿಕೃತ ಚಾಲನೆ ಪಡೆಯಲಿದೆ ಎಂದರು. ಪಕ್ಷ ಚುನಾವಣೆಗಾಗಿ ಪ್ರತ್ಯೇಕ ಸಿದ್ಧತೆ ಮಾಡಿಕೊಳ್ಳುವ ಅಗತ್ಯವಿಲ್ಲ. 2 ವರ್ಷಗಳಿಂದ ಅದೇ ದಿಕ್ಕಿನಲ್ಲಿ ತಯಾರಿ ನಡೆಸಿದ್ದೇವೆ ಎಂದರು. ಖ್ಯಾತ ಸಾಮಾಜಿಕ ಹೋರಾಟಗಾರ ಜಯಪ್ರಕಾಶ್ ನಾರಾಯಣ್ ಅವರ ನೇತೃತ್ವದ ಮದ್ಯಪಾನ ನಿಷೇಧ ಹೋರಾಟ ದೊಡ್ಡ ಸುದ್ದಿಯಾಗಿತ್ತು. ಸಮಾಜ ಸೇವಕ ಮತ್ತು ಖ್ಯಾತ ಗಾಂಧಿವಾದಿ ಮತ್ತು ಪರಿಸರವಾದಿ ಮನೋಹರ್ ಮಾನವ್ ಈ ಹೋರಾಟಕ್ಕೆ ಸಾಥ್ ನೀಡಿದ್ದರು. ಬಳಿಕ 2016ರ ಏ.1ರಿಂದ ಬಿಹಾರದಲ್ಲಿ ಮದ್ಯಪಾನ ನಿಷೇಧ ಜಾರಿಯಲ್ಲಿದೆ.

ಪ್ರಧಾನಿ ಹುದ್ದೆ ಅವಕಾಶ ನಿರಾಕರಿಸಿದ್ದೆ

ನಾಗಪುರ: ಪ್ರಧಾನಿ ಹುದ್ದೆಗೆ ನಾನು ಸ್ಪರ್ಧೆ ಮಾಡುವುದಾದರೆ ತಾವು ಬೆಂಬಲಿಸುವುದಾಗಿ ಲೋಕಸಭಾ ಚುನಾವಣೆ ವೇಳೆ ರಾಜಕೀಯ ನಾಯಕರೊಬ್ಬರು ಭರವಸೆ ನೀಡಿದ್ದರು. ಆದ ರೆ, ಪ್ರಧಾನಿ ಹುದ್ದೆ ನನ್ನ

ಗುರಿಯಲ್ಲವೆಂದು ಹೇಳಿದ್ದಾಗಿ ಕೇಂದ್ರ ಸಚಿವ ನಿತಿನ್ ಗಡ್ಕರಿ ನೆನಪಿಸಿಕೊಂಡಿದ್ದಾರೆ. ಮಹಾರಾಷ್ಟ್ರದ ನಾಗಪುರದಲ್ಲಿ ಪತ್ರಿಕೋದ್ಯಮ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾನುವಾರ ಮಾತನಾಡಿದ ಗಡ್ಕರಿ, ಹಾಗೆ ಹೇಳಿದ್ದವರನ್ನು ಪ್ರಶ್ನಿಸಿದೆ. ನೀವೇಕೆ ನನ್ನನ್ನು ಬೆಂಬಲಿಸುವಿರಿ? ನಾನೇಕೆ ನಿಮ್ಮ ಬೆಂಬಲ ಪಡೆಯಬೇಕು? ಎಂದು ಪ್ರಶ್ನಿಸಿದೆ. ಅಲ್ಲದೇ, ನನ್ನದೇ ಆದ ನಂಬಿಕೆಗಳಿವೆ, ಅವೇ ನನಗೆ ಮುಖ್ಯ. ಸಂಘಟನೆಗೆ ನಿಷ್ಠನಾಗಿದ್ದೇನೆ. ಯಾವುದೇ ಹುದ್ದೆಗಾಗಿ ಸಿದ್ಧಾಂತಗಳಲ್ಲಿ ರಾಜಿ ಮಾಡಿಕೊಳ್ಳಲ್ಲ ಎಂದು ಹೇಳಿ ಕಳುಹಿಸಿದೆ ಎಂದು ಹೇಳಿದರು.

ಮೀರತ್ ಕಟ್ಟಡ ಕುಸಿತಕ್ಕೆ 10 ಬಲಿ

ಮೀರತ್: ಉತ್ತರ ಪ್ರದೇಶದ ಮೀರತ್‌ನ ಝಾಕೀರ್ ನಗರದಲ್ಲಿ 3 ಅಂತಸ್ತುಗಳ ಕಟ್ಟಡ ಶನಿವಾರ ಕುಸಿದಿದ್ದು, ಒಂದೂವರೆ ವರ್ಷದ ಮಗು ಸೇರಿದಂತೆ 10 ಮಂದಿ ಸಾವನ್ನಪ್ಪಿದ್ದಾರೆ. ಅವಶೇಷಗಳಡಿ 15ಕ್ಕೂ ಅಧಿಕ ಮಂದಿ ಸಿಲುಕಿದ್ದು, 6 ವರ್ಷದ ಬಾಲಕಿ ಸೇರಿ ನಾಲ್ವರನ್ನು ಎನ್‌ಡಿಆರ್‌ಎಫ್ ಮತ್ತು ಅಗ್ನಿಶಾಮಕದಳ ಸಿಬ್ಬಂದಿ ರಕ್ಷಿಸಿದರು.

ವಾಮಾಚಾರ ಶಂಕೆ; ಐವರ ಕೊಚ್ಚಿ ಕೊಲೆ

ರಾಯಪುರ: ಛತ್ತೀಸ್‌ಗಢದ ಸುಕ್ಮಾ ಜಿಲ್ಲೆಯಲ್ಲಿ ಕುಟುಂಬವೊಂದು ವಾಮಾಚಾರ ನಡೆಸುತ್ತಿದೆ ಎಂಬ ಶಂಕೆಯ ಮೇರೆಗೆ ಗ್ರಾಮದ ಜನರು ಭಾನುವಾರ ದಾಳಿ ನಡೆಸಿ ಕುಟುಂಬದ ಐವರನ್ನು ಕೊಚ್ಚಿ ಕೊಂದಿದ್ದಾರೆ. ನಡೆದಿದೆ. ಬಳಿಕ ಗ್ರಾಮಸ್ಥರು ಪೊಲೀಸರಿಗೆ ಶರಣಾಗಿದ್ದಾರೆ. ಕೊಂಟಾದ ಎಕ್ತಾಲ್ ಗ್ರಾಮದಲ್ಲಿ ಘಟನೆ ನಡೆದಿದೆ. ಗ್ರಾಮದಲ್ಲಿ ಕೆಲ ಮಕ್ಕಳಲ್ಲಿ ಪದೇ ಪದೇ ಆರೋಗ್ಯ ಸಮಸ್ಯೆ ಕಂಡು ಬರುತ್ತಿತ್ತು. ಕೆಲ ಮಕ್ಕಳು ಸಾವಿಗೀಡಾದವು. ಇದಕ್ಕೆಲ್ಲ ಗ್ರಾಮದ ಒಂದು ಕುಟುಂಬದ ವಾಮಾಚಾರವೇ ಕಾರಣ ಎಂದು ಸಿಟ್ಟಿಗೆದ್ದ ಗ್ರಾಮಸ್ಥರು ಮನೆಗೆ ನುಗ್ಗಿ ಐವರನ್ನೂ ಕೊಡಲಿಯಿಂದ ಕೊಚ್ಚಿ ಕೊಲೆ ಮಾಡಿದರು. ಮೌಸಮ್ ಕನ್ನಾ (60), ಮೌಸಮ್ ಬುಚ್ಚಾ(34), ಮೌಸಮ್ ಬಿರಿ, ಕಾರಕಾರ್ ಲಚ್ಚಿ(43), ಮೌಸಮ್ ಆಜೋರ್ (32) ಮೃತರು.

{ಜಗದೀಪ್ ಧನಕರ್} ಉಪ ರಾಷ್ಟ್ರಪತಿ

ಸಂವಿಧಾನಿಕ ಹುದ್ದೆಯಲ್ಲಿರುವ ವ್ಯಕ್ತಿಯು(ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ) ವಿದೇಶಿ ನೆಲದಲ್ಲಿ ನಿಂತು ಭಾರತದಲ್ಲಿನ ಮೀಸಲು ಸೌಲಭ್ಯ ಅಂತ್ಯವಾಗಬೇಕು ಎಂದಿರುವುದು ಸರಿಯೇ? ಮೀಸಲು ಕುರಿತ ಪೂರ್ವಾಗ್ರಹ ಧೋರಣೆ ಹೊಸ ಪೀಳಿಗೆಗೂ ವ್ಯಾಪಿಸಿತಿದೆ. ಇದೂ ಕೂಡಾ ಸಂವಿಧಾನ ವಿರೋಧಿಯಾಗ ಹಳೆಯದೇ ಮನಸ್ಥಿತಿ.



ಆದಷ್ಟು ಬೇಗ ದೆಹಲಿ ಚುನಾವಣೆ ನಡೆಯಲಿ: ಅರವಿಂದ್ ಕೇಜ್ರಿವಾಲ್ ಬೇಡಿಕೆ

ಸಿಎಂ ಹುದ್ದೆಗೆ 2 ದಿನದಲ್ಲಿ ರಾಜೀನಾಮೆ

ದೆಹಲಿ: ಆಮ್ ಆದ್ಮಿ ಪಕ್ಷದ (ಎಎಪಿ) ನಾಯಕ, ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಮುಂದಿನ 48 ಗಂಟೆಗಳಲ್ಲಿ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಭಾನುವಾರ ಘೋಷಿಸಿದ್ದಾರೆ.

ವಿವಾದಿತ ಅಬಕಾರಿ ನೀತಿ ಪ್ರಕರಣದಲ್ಲಿನ ಅಕ್ರಮ ಹಣ ವರ್ಗಾವಣೆ ಮತ್ತು ಭ್ರಷ್ಟಾಚಾರ ಆರೋಪದಡಿ ಒಟ್ಟು 6 ತಿಂಗಳ

ಕಾಲ ಜೈಲಿನಲ್ಲಿದ್ದ, ತಿಹಾರ್ ಸೆರೆಮನೆಯಿಂದಲೇ ದೆಹಲಿ ಆಡಳಿತ ನಡೆಸಿದ ಅರವಿಂದ್ ಕೇಜ್ರಿ ವಾಲ್ ಸುಪ್ರೀಂ ಕೋರ್ಟ್‌ನಿಂದ ಷರತ್ತುಬದ್ಧ ಜಾಮೀನು ಪಡೆದು ಸೆ.13ರಂದು ಜೈಲಿನಿಂದ ಬಿಡುಗಡೆಯಾಗಿದ್ದರು. ಆ ಬಳಿಕ ಪಕ್ಷದ ಕಾರ್ಯಕರ್ತರನ್ನುದ್ದೇಶಿಸಿ ಭಾನುವಾರ ಮಾಡಿದ ಮೊದಲ ಭಾಷಣದಲ್ಲಿ 'ಸಿಎಂ ಸ್ಥಾನಕ್ಕೆ ಇನ್ನೆರಡು ದಿನದಲ್ಲಿ ರಾಜೀನಾಮೆ ನೀಡುವೆ' ಎಂದು ಪ್ರಕಟಿಸಿದರು.ಮಂಗಳವಾರ ಶಾಸಕಾಂಗ ಪಕ್ಷದ ಸಭೆ ನಡೆಯಲಿದೆ. ಅಲ್ಲಿ ನೂತನ ಮುಖ್ಯಮಂತ್ರಿ ಆಯ್ಕೆ ಮಾಡಲಾಗುವುದು. ಆ ಬಳಿಕ ರಾಜೀನಾಮೆ ಸಲ್ಲಿಸುವೆ. ಜನತೆ ತೀರ್ಪು ನೀಡುವವರೆಗೂ ನಾನು ಮುಖ್ಯಮಂತ್ರಿ ಕುರ್ಚಿಯಲ್ಲಿ ಕುಳಿತುಕೊಳ್ಳುವುದಿಲ್ಲ ಎಂದರು.

ರಾಜೀನಾಮೆ ನಿರ್ಧಾರವೇಕೆ?: ಸುಪ್ರೀಂ ಕೋರ್ಟ್ ಮಧ್ಯಂತರ ಜಾಮೀನು ನೀಡಿದ್ದರೂ ಮುಖ್ಯಮಂತ್ರಿ ಕಚೇರಿ ಪ್ರವೇಶಿಸದಂತೆ, ಆಡಳಿತದಲ್ಲಿ ಪ್ರಮುಖ ನಿರ್ಧಾ ರಗಳನ್ನು ಕೈಗೊಳ್ಳದಂತೆ ತಡೆ ನೀಡಿರುವುದೇ ರಾಜೀನಾಮೆ ನಿರ್ಧಾರಕ್ಕೆ ಕಾರಣ ಎನ್ನಲಾಗಿದೆ.

ಬೇಗ ಚುನಾವಣೆ: ದೆಹಲಿ ಚುನಾವಣೆಗೆ 2025ರ ಫೆಬ್ರುವರಿವರೆಗೂ ಅವಕಾಶವಿದೆ. ಆದರೆ, ಅಲ್ಲಿಯವರೆಗೂ ಕಾಯುವುದು ಬೇಡ. ಮಹಾರಾಷ್ಟ್ರ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಸುವಾಗಲೇ ದೆಹಲಿಯಲ್ಲೂ ಚುನಾವಣೆ ನಡೆಸುವಂತೆ ಕೇಂದ್ರ ಚುನಾವಣಾ ಆಯೋಗಕ್ಕೆ ಕೇಜ್ರಿವಾಲ್ ಇದೇ ವೇಳೆ ಮನವಿ ಮಾಡಿದರು. ಪ್ರತಿ ಮನೆ, ಬೀದಿಗೆ ಹೋಗುತ್ತೇನೆ, ಜನರಿಂದ ಉತ್ತಮ ತೀರ್ಪು ಪಡೆದು ಸಿಎಂ ಹುದ್ದೆ ಅಲಂಕರಿಸುತ್ತೇನೆ ಎಂದರು. ಪತ್ನಿ ಸುನೀತಾ, ಸಚಿವೆ ಆತಿಷಿ, ಮಾಜಿ ಡಿಸಿಎಂ ಮನೀಷ್ ಸಿಸೋಡಿಯ ಜತೆಗಿದ್ದರು.

ಸಿಎಂ ರೇಸ್‌ನಲ್ಲಿ ಸುನೀತಾ, ಆತಿಷಿ, ಗೋಪಾಲ್ ರೈ

ಮುಂದಿನ ಮುಖ್ಯಮಂತ್ರಿ ಯಾರಾಗುವರು ಎಂಬ ಪ್ರಶ್ನೆಗೆ ಕೇಜ್ರಿವಾಲ್ ಪತ್ನಿ ಸುನೀತಾ ಅವರ ಹೆಸರು ಕೇಳಿಬರುತ್ತಿದೆ. ಸುನೀತಾ ಅವರೂ ಕೇಜ್ರಿವಾಲ್ ಅವರಂತೆ ಯೇ ಭಾರತೀಯ ರೆವಿನ್ಯೂ ಆಫೀಸರ್ ಆಗಿದ್ದವರು. ಸರಕಾರ ಹೇಗೆ ಕೆಲಸ ಮಾಡುತ್ತದೆ, ಆಡಳಿತ ವ್ಯವಸ್ಥೆ ಹೇಗಿರುತ್ತದೆ ಎಂಬುದು ಅವರಿಗೂ ಗೊತ್ತಿದೆ. ಅಲ್ಲದೇ, ಕೇಜ್ರಿವಾಲ್ ಅವರು ಜೈಲಿನಲ್ಲಿದ್ದಾಗ ಸುನೀತಾ ಅವರು ಲೋಕಸಭಾ ಚುನಾವಣೆಯಲ್ಲಿ ದೆಹಲಿ, ಗುಜರಾತ್, ಹರಿಯಾಣದಲ್ಲಿ ಉತ್ತಮವಾಗಿಯೇ ಚುನಾವಣಾ ಪ್ರಚಾರ ನಡೆಸಿದ್ದಾರೆ. ಹಾಗಾಗಿ ಅವರೇ ಮುಂದಿನ ಸಿಎಂ ಆಗಲಿ ಎಂಬುದು ನಮ್ಮ ಆಶಯ ಎಂದು ಎಎಪಿ ನಾಯಕರೊಬ್ಬರು ಹೇಳಿದ್ದಾರೆ. ಅಲ್ಲದೇ, ಕೇಜ್ರಿವಾಲ್ ಅವರ ಮೆಚ್ಚಿನ ಸಚಿವ ಸಂಪುಟ ಸಹೋದ್ಯೋಗಿಗಳಾದ ಆತಿಷಿ ಹಾಗೂ ಗೋಪಾಲ್ ರೈ ಕೂಡಾ ಸಿಎಂ ಸ್ಥಾನದ ಸ್ಪರ್ಧೆಯಲ್ಲಿದ್ದಾರೆ. ದೆಹಲಿ ಸಿಎಂ ಸ್ಥಾನಕ್ಕೆ ಆತಿಷಿ ಅವರೇ ಸೂಕ್ತ. ಸದ್ಯ ಅವರು 14 ಇಲಾಖೆಗಳ ಹೊಣೆ ಹೊತ್ತು ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ. ಅಲ್ಲದೇ, ಕೇಜ್ರಿವಾಲ್ ಅವರು ಸೆರೆಮನೆಯಲ್ಲಿದ್ದಾಗ, ಸರಕಾರ ಮತ್ತು ಪಕ್ಷ ಎರಡನ್ನೂ ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಅವರೇ ಸಿಎಂ ಸ್ಥಾನಕ್ಕೆ ಸಮರ್ಥರು ಎಂದು ಎಎಪಿ ಮುಖಂಡರೊಬ್ಬರು ಅಭಿಪ್ರಾಯಪಟ್ಟರು. ಎಎಪಿ ದೆಹಲಿ ಘಟಕ ಅಧ್ಯಕ್ಷರೂ ಆಗಿರುವ ಸಚಿವ ಗೋಪಾಲ್ ರೈ ಬಗೆಗೂ ಪಕ್ಷದಲ್ಲಿ ಕೆಲವರ ಒಲವಿದೆ.

ಯಾವ ಕೇಸ್ ಹಾಕಿದರೂ ರಾಜೀನಾಮೆ ಕೊಡದಿರಿ

ಬಂಧನಕ್ಕೆ ಒಳಗಾದರೂ ಪ್ರಜಾಪ್ರಭುತ್ವ ಉಳಿಸುವ ಉದ್ದೇಶದಿಂದ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿರಲಿಲ್ಲ ಎಂದು ಹೇಳಿರುವ ಅರವಿಂದ ಕೇಜ್ರಿವಾಲ್, ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿರುದ್ಧವೂ ಪ್ರಕರಣ ದಾಖಲಾಗಿರುವುದನ್ನು ಉಲ್ಲೇಖಿಸಿದರು. ಬಿಜೆಪಿ ಹೊರತಾದ ಪಕ್ಷಗಳವರಿಗೆ ಮನವಿ ಮಾಡುವೆ. ಬಿಜೆಪಿಯವರು ನಿಮ್ಮ ವಿರುದ್ಧ ಯಾವುದೇ ಪ್ರಕರಣ ದಾಖಲಿಸಿದರೂ ರಾಜೀನಾಮೆ ನೀಡಬೇಡಿ. ಕಾನೂನು ಹೋರಾಟ ನಡೆಸಿ ಎಂದು ಕರೆ ನೀಡಿದ್ದಾರೆ. ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಗಿಂತಲೂ ಈಗಿನ ಅಧಿಕ ಮಟ್ಟದ ಸರ್ವಾಧಿಕಾರಿ ಆಡಳಿತ. ಕೇಂದ್ರ ಸರಕಾರ ಏನೇ ಪಿತೂರಿ ಮಾಡಿದರೂ ನಮ್ಮ ಸಂಕಲ್ಪ ಮುರಿಯಲು ಸಾಧ್ಯವಿಲ್ಲ, ರಾಷ್ಟ್ರಕ್ಕಾಗಿ ನಮ್ಮ ಹೋರಾಟ ಮುಂದುವರಿಯಲಿದೆ ಎಂದು ಕೇಜ್ರಿವಾಲ್ ಗುಡುಗಿದರು. ಇದೇ ವೇಳೆ ಜೈಲಿನ ಕಹಿ ಘಟನೆಗಳನ್ನು ನೆನೆದು ಕೇಜ್ರಿವಾಲ್ ನೋವು ತೋಡಿಕೊಂಡರು.

2 ದಿನ ತಡವೇಕೆ?: ಕಾಂಗ್ರೆಸ್

ದೆಹಲಿ: ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ರಾಜೀನಾಮೆ ನಿರ್ಧಾರ ಸ್ವಾಗತಾರ್ಹ. ಆದರೆ, ರಾಜೀನಾಮೆ ಪತ್ರ ಸಲ್ಲಿಸಲು 2 ದಿನಗಳ ವಿಳಂಬವೇಕೆ?

ಎಂದು ಕಾಂಗ್ರೆಸ್ ಪ್ರಶ್ನಿಸಿದೆ. ಸುದ್ದಿಸಂಸ್ಥೆ ಜತೆ ಮಾತನಾಡಿದ ದೆಹಲಿ ಕಾಂಗ್ರೆಸ್ ಅಧ್ಯಕ್ಷ ದೇವೇಂದ್ರ ಯಾದವ್, ಕೇಜ್ರಿವಾಲ್ ನಿರ್ಧಾರ ಸ್ವಾಗತಿಸುವೆ. ತಡವಾದರೂ ಒಳ್ಳೆಯ ನಿರ್ಧಾರ. ಆದರೆ, 2 ದಿನ ಏಕೆ ಕಾಯುವಂತೆ ಮಾಡುತ್ತಿದ್ದಾರೆ ಎಂಬುದೇ ಅರ್ಥವಾಗುತ್ತಿಲ್ಲ. ಕೂಡಲೇ ರಾಜೀನಾಮೆ ನೀಡಿ. ಉತ್ತಮ ಆಡಳಿತ ನಮ್ಮ ಒತ್ತಾಯ ಎಂದರು. ದೆಹಲಿ ಜನರೆ ಸಮಸ್ಯೆ ಎದುರಿಸುತ್ತಿದ್ದಾಗ ಎರಡು ಅಥವಾ ಐದು ತಿಂಗಳ ಹಿಂದೆಯೇ ಈ ನಿರ್ಧಾರ ತೆಗೆದುಕೊಂಡಿದ್ದರೆ ಹೆಚ್ಚು ಸಂತೋಷವಾಗುತ್ತಿತ್ತು ಎಂದರು.

ಸೋನಿಯಾ ಅನುಕರಣೆ: ಬಿಜೆಪಿ

ದೆಹಲಿ: ಎರಡು ದಿನದಲ್ಲಿ ರಾಜೀನಾಮೆ ನೀಡುವೆ ಎಂಬ ಅರವಿಂದ್ ಕೇಜ್ರಿವಾಲ್ ಹೇಳಿಕೆಯನ್ನು ಬಿಜೆಪಿ ರಾಷ್ಟ್ರೀಯ ವಕ್ತಾರ ಪ್ರದೀಪ್ ಭಂಡಾರಿ ಟೀಕಿಸಿದ್ದಾರೆ. ಇದೆಲ್ಲಾ ಜನರು ಮತ್ತು ಮಾಧ್ಯಮಗಳ ಗಮನ ಸೆಳೆಯುವ

ಪಿಆರ್ ಸ್ಟಂಟ್ ಎಂದು ಕಿಡಿಕಾರಿದ್ದಾರೆ. ಜನರ ದೃಷ್ಟಿಯಲ್ಲಿ ತಾವೊಬ್ಬ ಭ್ರಷ್ಟ ಎಂದಾಗಿರುವುದು ಕೇಜ್ರಿವಾಲ್‌ಗೂ ಅರಿವಾಗಿದೆ. ಆಮ್ ಆದ್ಮಿ ಪಕ್ಷವು ಭ್ರಷ್ಟ ಪಕ್ಷ ಎಂದೇ ಗುರುತಿಸಲ್ಪಟ್ಟಿದೆ. ಕೇಜ್ರಿ ವಾಲ್ ತಮ್ಮ ಇಮೇಜ್ ಮರುಸ್ಥಾಪಿಸಲು ಸರ್ಕಸ್ ನಡೆಸಿದ್ದಾರೆ. ಕೇಜ್ರಿವಾಲ್ ತಂತ್ರ ಸೋನಿಯಾ ಗಾಂಧಿ ಮಾದರಿಯನ್ನು ಹೋಲುತ್ತದೆ ಎಂದು ಭಂಡಾಗಿ ಅಣಕವಾಡಿದರು. ಕಾಂಗ್ರೆಸ್ ನಾಯಕಿ ಸೋನಿಯಾ ಡಮ್ಮಿ ನಾಯಕನ ಮೂಲಕ ಸರಕಾರ ನಿಯಂತ್ರಿಸಿದ್ದರು. ಕೇಜ್ರಿವಾಲ್ ಕೂಡಾ ಅದೇ ಮಾದರಿ ಮುಂದುವರಿಸಲು ಬಯಸಿದ್ದಾರೆ. ಅದು ಸ್ಪಷ್ಟ ಎಂದು ವ್ಯಂಗ್ಯವಾಡಿದರು. ದೆಹಲಿಯಲ್ಲಿ ಆಮ್ ಆದ್ಮಿ ಪಕ್ಷಕ್ಕೆ ಜನಬೆಂಬಲ ಕ್ಷೀಣಿಸುತ್ತಿದೆ. ಚುನಾವಣೆ ಯಲ್ಲಿ ಸೋಲಲಿದೆ. ಅದನ್ನು ಕೇಜ್ರಿವಾಲ್ ಕೂಡಾ ಅರ್ಥ ಮಾಡಿಕೊಂಡಿದ್ದಾರೆ. ಹಾಗಾಗಿ ಬೇರೊಬ್ಬರನ್ನು ಬಲಿಪಶು ಮಾಡಲು ಅವರು ಬಯಸಿದ್ದಾರೆ ಎಂದು ವಿಶ್ಲೇಷಿಸಿದರು. ಬಿಜೆಪಿ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನ್ವಾಲಾ ಅವರೂ ಕೇಜ್ರಿವಾಲ್ ನಡೆಯನ್ನು 'ಭಾವನಾತ್ಮಕ ನಾಟಕ' ಎಂದು ಟೀಕಿಸಿದ್ದಾರೆ.

5 ವರ್ಷದಿಂದ ದೆಹಲಿಯಲ್ಲಿ ವಿವಿಧ ದೇಶಗಳ ನಕಲಿ ವೀಸಾ ತಯಾರಿಕೆ

5,000 ನಕಲಿ ವೀಸಾ, 300 ಕೋ.ವಂಚನೆ: 6 ಸೆರೆ

ದೆಹಲಿ: ವಿದೇಶದಲ್ಲಿ ಕೆಲಸ ಹುಡುಕುವ ಭರದಲ್ಲಿ ಸಿಕ್ಕ ಸಿಕ್ಕ ಏಜೆಂಟ್‌ರ ಬಳಿ ಹೋಗುವ ಮುನ್ನ, ಸುಲಭವಾಗಿ ವೀಸಾ ಪಡೆಯಲೆತ್ನಿಸುವ ಮುನ್ನ ದೆಹಲಿಯ ಈ ಗ್ಯಾಂಗ್ ಬಗ್ಗೆ ತಿಳಿಯಲೇ ಬೇಕು.

ಕಳೆದ 5 ವರ್ಷಗಳಿಂದ 5 ಸಾವಿರಕ್ಕೂ ಅಧಿಕ ನಕಲಿ ವೀಸಾ ತಯಾರಿಸಿ 300 ಕೋಟಿ ರು. ಗಳಿಸಿದ ವಂಚಕರ ದೊಡ್ಡ ಜಾಲವನ್ನು ಭೇದಿಸಿರುವ ದೆಹಲಿ ಪೊಲೀಸರು, 6 ಮಂದಿಯನ್ನು ಬಂಧಿಸಿದ್ದಾರೆ. ಬಂಧಿತರಿಂದ 16 ನೇಪಾಳಿ ಪಾಸ್‌ಪೋರ್ಟ್, 2 ಭಾರತೀಯ ಪಾಸ್‌ಪೋರ್ಟ್, 30 ವೀಸಾ ಸ್ಟಿಕರ್‌ಗಳು ಮತ್ತು 23 ವೀಸಾ ಸ್ಟ್ಯಾಂಪ್, ಡೈ ಮಶಿನ್, ಪ್ರಿಂಟರ್, ಲ್ಯಾಮಿನೇಟಿಂಗ್ ಶೀಟ್ಸ್, ಲ್ಯಾಪ್‌ಟಾಪ್ ಸೇರಿ ನಕಲಿ ವೀಸಾ ತಯಾರಿಸಲು ಬಳಸುತ್ತಿದ್ದ ಹತ್ತಾರು ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಐಜಿಐ ವಿಮಾನ ನಿಲ್ದಾಣದ ಉಪ ಪೊಲೀಸ್ ಆಯುಕ್ತೆ ಉಷಾ ರಂಗ್ರಾಣಿ ಮಾಹಿತಿ ಪ್ರಕಾರ, ಈ ವಂಚಕರ ಗುಂಪು ಪ್ರತಿ ತಿಂಗಳೂ ಕನಿಷ್ಠ 30ರಿಂದ ಗರಿಷ್ಠ 60 ನಕಲಿ ವೀಸಾ ತಯಾರಿಸಿ ಪ್ರತಿ ವೀಸಾಗೆ 8–10 ಲಕ್ಷ ಹಣ ಪಡೆಯುತ್ತಿತ್ತು. ಸ್ಥಳೀಯ ಏಜೆಂಟ್ ಜಾಲ ರಚಿಸಿಕೊಂಡಿದ್ದ ವಂಚಕರು ವಿದೇಶದಲ್ಲಿ ಕೆಲಸ ಅರಸಿ ಮಾಹಿತಿ ಕೇಳಲು ಬರುವ ಯುವಕರನ್ನು ಸುಲಭವಾಗಿ ವಂಚನೆಯ ಜಾಲಕ್ಕೆ ಬೀಳಿಸುತ್ತಿದ್ದರು. ಟೆಲಿಗ್ರಾಂ, ಇನ್ಸ್ಟಾಗ್ರಾಂ, ಫೇಸ್‌ಬುಕ್ ಮೂಲಕವೂ ಗ್ರಾಹಕರನ್ನು ಸೆಳೆಯುತ್ತಿದ್ದರು.

ವಂಚಕರ ಸುಳಿವು ಸಿಕ್ಕಿದ್ದು ಹೀಗೆ

ಸೆ.2ರಂದು ಹರಿಯಾಣದ ಸಂದೀಪ್ ಎಂಬ ವ್ಯಕ್ತಿ ನಕಲಿ ಸ್ವೀಡಿಷ್ ವೀಸಾ ಮೂಲಕ ಇಟಲಿಗೆ ಹಾರಲು ದೆಹಲಿ ವಿಮಾನ ನಿಲ್ದಾಣಕ್ಕೆ ಬಂದಾಗ ತಪಾಸಣೆ ವೇಳೆ ಸಿಕ್ಕಿಬಿದ್ದ. ವಿಚಾರಣೆಗೊಳಪಡಿಸಿದಾಗ ಬಹಳಷ್ಟು ಜನರು ಇಂಥದೇ ವೀಸಾ ಪಡೆದು ವಿದೇಶಕ್ಕೆ ಹೋಗಿರುವ ಬಗ್ಗೆ ಮಾಹಿತಿ ನೀಡಿದ. ಆಸಿಫ್ ಅಲಿ ಎಂಬ ಏಜೆಂಟ್ 10 ಲಕ್ಷ ರು.ಗೆ ವೀಸಾ ನೀಡುತ್ತಾನೆಂದ. ಪೊಲೀಸರು ಆಸಿಫ್ ಅಲಿಯನ್ನು ಬಂಧಿಸಿ ಆತ ನೀಡಿದ ಮಾಹಿತಿ ಆಧರಿಸಿ ಮತ್ತೆ 4 ಜನರನ್ನು ಬಂಧಿಸಿದರು. ದೆಹಲಿಯ ತಿಲಕ್ ನಗರದ ಕಾರ್ಖಾನೆಯಲ್ಲಿ ವಿವಿಧ ದೇಶಗಳ ನಕಲಿ ವೀಸಾ ತಯಾರಾಗುವ ಬಗ್ಗೆ ಆರೋಪಿಗಳು ಬಾಯಿಬಿಟ್ಟರು. ಮನೋಜ್ ಮೊಂಗಾ ಎಂಬ ಗ್ರಾಫಿಕ್ ಡಿಸೈನರ್(ಡಿಪ್ಲೊಮ) ವೀಸಾಕ್ಕೆ ಬೇಕಾದ ಡಿಸೈನ್ ತಯಾರಿಸಿಕೊಡುತ್ತಿದ್ದ ಎಂಬುದು ತಿಳಿದುಬಂದಿದೆ.

ಜಮ್ಶೆಡ್‌ಪುರದಲ್ಲಿ ಪ್ರಧಾನಿ ನಮೋ ವಾಗ್ದಾಳಿ

ಜೆಎಂಎಂ ಪಕ್ಷಕ್ಕೆ ಕಾಂಗ್ರೆಸ್‌ನ ಭೂತ ಹೊಕ್ಕಿದೆ: ಮೋದಿ ಟೀಕೆ

ಜಮ್ಶೆಡ್‌ಪುರ: ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ಪಕ್ಷದೊಳಗೆ ಕಾಂಗ್ರೆ ಸ್‌ನ ಭೂತ ಹೊಕ್ಕಿದೆ. ಓಲೈಕೆ, ತುಷ್ಟೀಕರಣ ವೇ ಜೆಎಂಎಂ ಪ್ರಮುಖ ಅಜೆಂಡಾ ಆಗಿದೆ. ಹಾಗಾಗಿಯೇ ಜಾರ್ಖಂಡ್ ರಾಜ್ಯದಲ್ಲಿ ಅಕ್ರಮ ನುಸುಳುಕೋರರ ಸಮಸ್ಯೆ ತೀವ್ರವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ವಾಗ್ದಾಳಿ ನಡೆಸಿದರು.

ಜಮ್ಶೆಡ್‌ಪುರದಲ್ಲಿ ಭಾನುವಾರ ಚುನಾವಣಾ ರ‍್ಯಾಲಿ ನಡೆಸಿದ ಮೋದಿ, ಜೆಎಂಎಂ ಪಕ್ಷ ಬಾಂಗ್ಲಾದೇಶಿ ಮುಸ್ಲಿಮರು ಮತ್ತು ರೋಹಿಂಗ್ಯಾಗಳ ಬೆಂಬಲಕ್ಕೆ ನಿಂತಿದೆ. ಅಕ್ರಮ ನುಸುಳುಕೋರರು ಹಾಗೂ ಉಗ್ರಗಾಮಿಗಳು ಜೆಎಂಎಂ ಮೇಲೆ ಹಕ್ಕು ಚಲಾಯಿಸುತ್ತಿದ್ದಾರೆ ಎಂದು ಟೀಕಿಸಿದರು.

ಸಂತಲ್ ಪರಗಣಾ ಪ್ರದೇಶದಲ್ಲಿ ಆದಿವಾಸಿಗಳ ಸಂಖ್ಯೆ ಗಣನೀಯ ಇಳಿಕೆಯಾಗಿದೆ. ಅವರ ಹಕ್ಕಿನ ಭೂಮಿಯನ್ನು ಅಕ್ರಮ ನುಸುಳುಕೋರರು ಕಸಿದುಕೊಂಡಿದ್ದಾರೆ. ಗ್ರಾಮ ಪಂಚಾಯತ್‌ಗಳಲ್ಲಿಯೂ ನುಸುಳುಕೋರರು ಅಧಿಕಾರ ಹಿಡಿಯುತ್ತಿದ್ದಾರೆ. ಹೆಣ್ಣುಮಕ್ಕಳ ಮೇಲಿನ ಅಪರಾಧ ಪ್ರಕರಣ ಹೆಚ್ಚುತ್ತಿವೆ. ನುಸುಳುಕೋರರಿಂದ ಜಾರ್ಖಂಡ್‌ನ ಪ್ರತಿಯೊಬ್ಬ ಪ್ರಜೆಯೂ ಭಯ ಪೀಡಿತನಾಗಿದ್ದಾನೆ ಎಂದು ಕಳವಳ ವ್ಯಕ್ತಪಡಿಸಿದರು.

ಜೆಎಂಎಂ, ಕಾಂಗ್ರೆಸ್, ಆರ್‌ಜೆಡಿ ಪಕ್ಷಗಳು ಜಾರ್ಖಂಡ್ ಶತ್ರುಗಳು. ಜಾರ್ಖಂಡ್ ರಾಜ್ಯ ರಚನೆಯಾಗಿದ್ದಕ್ಕೆ ಸಿಟ್ಟಾಗಿದ್ದ ಆರ್‌ಜೆಡಿ ಪಕ್ಷ, ಈಗಲೂ ಅದಕ್ಕೆ ಪ್ರತಿಕಾರ ತೆಗೆದುಕೊಳ್ಳುತ್ತಿದೆ. ಕಾಂಗ್ರೆಸ್ ಇಡೀ ರಾಜ್ಯವನ್ನು ದ್ವೇಷಿಸುತ್ತದೆ. ಆದಿವಾಸಿಗಳ ಮತಗಳ ಮೂಲಕ ಅಧಿಕಾರಕ್ಕೆ ಬಂದ ಜೆಎಂಎಂ ಆದಿವಾಸಿಗಳ ಭೂಮಿ ಕಸಿಯುತ್ತಿರುವವರಿಗೆ ಬೆಂಗಾವಲಾಗಿ ನಿಂತು ದುಷ್ಟ ರಾಜಕಾರಣ ಮಾಡುತ್ತಿದೆ.

-ನರೇಂದ್ರ ಮೋದಿ ಪ್ರಧಾನಿ

ಮಾಜಿ ಪ್ರಾಂಶುಪಾಲ, ಪೊಲೀಸ್ ಅಧಿಕಾರಿ 2 ದಿನ ಕಸ್ಟಡಿಗೆ

ಸಾಕ್ಷ್ಯ ನಾಶ ಹಿಂದೆ ದೊಡ್ಡ ಸಂಚು

ಕೋಲ್ಕತ್ತ: ನಗರದ ಸರಕಾರಿ ಆರ್‌ಜಿ ಕರ್ ವೈದ್ಯಕೀಯ ಕಾಲೇಜು–ಆಸ್ಪತ್ರೆಯ ಕಿರಿಯ ವೈದ್ಯೆ ಹತ್ಯೆ ಪ್ರಕರಣದಲ್ಲಿ ಸಾಕ್ಷ್ಯ ನಾಶ, ಪೊಲೀಸರಿಗೆ ಮಾಹಿತಿ ನೀಡಲು ವಿಳಂಬ ಆರೋಪದಡಿ ಮಾಜಿ ಪ್ರಾಂಶುಪಾಲ ಡಾ. ಸಂದೀಪ್ ಘೋಷ್ ಹಾಗೂ ಎಫ್‌ಐಆರ್ ದಾಖಲಿಸಲು ವಿಳಂಬ ಮಾಡಿದ ತಾಲಾ ಪೊಲೀಸ್ ಠಾಣೆ ಅಧಿಕಾರಿ ಅಭಿಜಿತ್ ಮೊಂಡಲ್‌ರನ್ನು ಪ್ರಕರಣದ ತನಿಖೆ ದಾರಿ ತಪ್ಪಿಸಲು ಸಾಕ್ಷ್ಯ ನಾಶ ಆರೋಪದಡಿ ಕೇಂದ್ರ ತನಿಖಾ ದಳ(ಸಿಬಿಐ) ಬಂಧಿಸಿದೆ.

ಇಬ್ಬರೂ ಆರೋಪಿಗಳನ್ನು ಭಾನುವಾರ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಧೀಶರು ಇಬ್ಬರನ್ನೂ ಹೆಚ್ಚಿನ ವಿಚಾರಣೆಗಾಗಿ ಸಿಬಿಐ ವಶಕ್ಕೆ 2 ದಿನಗಳ ಕಾಲ ಒಪ್ಪಿಸಿದ್ದಾರೆ.

ಕಿರಿಯ ವೈದ್ಯೆ ಮೃತದೇಹ ಪತ್ತೆಯಾದ 14 ಗಂಟೆಗಳ ಬಳಿಕ ಎಫ್‌ಐಆರ್ ದಾಖಲಾಗಿದೆ. ಸಂದೀಪ್ ಘೋಷ್ ಹಾಗೂ ಅಧಿಕಾರಿ ದೂರವಾಣಿಯಲ್ಲಿ ನಡೆಸಿದ ಮಾತುಕತೆಯ ವಿವರಗಳು ನಮ್ಮ ಬಳಿ ಇವೆ ಎಂದ ಸಿಬಿಐ, ಈ ಕೃತ್ಯದ ಹಿಂದೆ ದೊಡ್ಡ ಸಂಚಿದೆ. ಹೀಗಾಗಿ ಇಬ್ಬರನ್ನೂ ಹೆಚ್ಚಿನ ತನಿಖೆಗೆ ಒಳಪಡಿಸಬೇಕಿದೆ ಎಂದು ಸಿಬಿಐ ಹೇಳಿದ ಬಳಿಕ ನ್ಯಾಯಾಧೀಶರು ಸೆ.17ರವರೆಗೆ ಇಬ್ಬರನ್ನೂ ಸಿಬಿಐ ಕಸ್ಟಡಿಗೆ ಒಪ್ಪಿಸಿ ಆದೇಶಿಸಿದರು.

ಅತ್ಯಾಚಾರ–ಕೊಲೆ ಪ್ರಕರಣದಲ್ಲಿ ತಕ್ಷಣ ಎಫ್‌ಐಆರ್ ದಾಖಲಿಸುವುದು ಪೊಲೀಸ್ ಠಾಣಾಧಿಕಾರಿ ಜವಾಬ್ದಾರಿ. ಆದರೆ 14 ಗಂಟೆ ಬಳಿಕ ಎಫ್‌ಐಆರ್ ದಾಖಲಾಗಿದೆ. ಇದು ಗಂಭೀರ ಕರ್ತವ್ಯಲೋಪ. ಘಟನೆಯನ್ನು ಆತ್ಮಹತ್ಯೆ ಎಂದು ಬಿಂಬಿಸುವ ಯತ್ನವೂ ನಡೆದಿದ್ದು, ಠಾಣಾಧಿಕಾರಿಯೂ ಸಂಚಿನಲ್ಲಿ ಭಾಗಿಯಾಗಿರುವ ಶಂಕೆ ಇದೆ ಎಂದು ಸಿಬಿಐ ವಾದಿಸಿದೆ. ಇನ್‌ಸ್ಪೆಕ್ಟರ್ ಅಭಿಜಿತ್ ಮೊಂಡಲ್ ಕೊಲೆಯಲ್ಲಿ ಭಾಗಿಯಾಗದೇ ಇರಬಹುದು. ಆದರೆ ಪ್ರಕರಣ ಮುಚ್ಚಿ ಹಾಕುವ ಯತ್ನದ ಭಾಗವಾಗಿದ್ದಾರೆ ಎಂದು ಸಿಬಿಐ ಆರೋಪಿಸಿದೆ.

ಅಭಿಜಿತ್ ಮೊಂಡಲ್ ಪರ ವಕೀಲರು, ಕರ್ತವ್ಯಲೋಪವಾಗಿದ್ದರೆ ಇಲಾಖೆಯಿಂದ ವಿಚಾರಣೆ ನಡೆಸಬಹುದಿತ್ತು ಎಂದು ವಾದ ಮಂಡಿಸಿದರು. ಆದರೆ, ಕೋರ್ಟ್ ಅದನ್ನು ಪರಿಗಣಿಸಲಿಲ್ಲ.

ಗಾಂಧಿ, ನೆಲ್ಸನ್ ಮಂಡೆಲಾಗೆ ಹೋಲಿಕೆ

ಮುಷ್ತಾಕ್ ಬುಖಾರಿ ಕಣಕ್ಕಿಳಿಸಿದ ಬಿಜೆಪಿ

ಶ್ರೀನಗರ: ಜಮ್ಮು–ಕಾಶ್ಮೀರ ವಿಧಾನಸಭಾ ಚುನಾವಣೆ ಹಿನ್ನೆಲೆ ಸೂರನ್‌ಕೋಟ್ ಕ್ಷೇತ್ರದಿಂದ ಮಾಜಿ ಸಚಿವ ಸೈಯ್ಯದ್ ಮುಷ್ತಾಕ್ ಬುಖಾರಿ ಯನ್ನು(75) ಬಿಜೆಪಿ ಕಣಕ್ಕಿಳಿಸಿದೆ. ಅಲ್ಲದೇ, ಬುಖಾರಿ ಅವರನ್ನು ಗಾಂಧಿ, ನೆಲ್ಸನ್ ಮಂಡೇಲಾಗೆ ಹೋಲಿಸಿ ಬಿಜೆಪಿ ಪ್ರಚಾರ

ಆರಂಭಿಸಿದೆ. ಸೆ.25ರಂದು 2ನೇ ಹಂತದ ಚುನಾವಣೆಯಲ್ಲಿ ಸೂರನ್‌ಕೋಟ್ ಕ್ಷೇತ್ರಕ್ಕೆ ಮತದಾನ ನಡೆಯಲಿದೆ.

ಪಹಾರಿ ಸಮುದಾಯಕ್ಕೆ ಸ್ವಾತಂತ್ರ್ಯ ತಂದು ಕೊಡು ವಲ್ಲಿ ಮುಷ್ಕಾಕ್ ಬುಖಾರಿ ಪಾತ್ರವನ್ನು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚೌಗ್ ಶ್ಲಾಘಿಸಿದ್ದಾರೆ. ಗಾಂಧಿ, ನೆಲ್ಸನ್ ಮಂಡೇಲಾ ಕೆಲಸಗ ಳನ್ನು ಮರೆಯಲು ಸಾಧ್ಯವಿಲ್ಲ. ಅದೇ ರೀತಿ ಪಹರಿ ಸಮುದಾಯಕ್ಕೆ ಸ್ವಾತಂತ್ರ್ಯ ಸಿಗುವಂತೆ ಮಾಡುವಲ್ಲಿ ಮುಷ್ತಾಕ್ ಬುಖಾರಿ ಕೊಡುಗೆ ಮರೆಯಲಾಗದು ಎಂದರು. ಬುಖಾರಿ 2 ಬಾರಿ ಪೂಂಚ್ ಜಿಲ್ಲೆಯ ಸೂರನ್‌ಕೋಟ್ ಕ್ಷೇತ್ರದಿಂದ ಶಾಸಕರಾಗಿದ್ದಾರೆ. 4 ದಶಕ ಕಾಲ ನ್ಯಾಷನಲ್ ಕಾನ್ಫರೆನ್ಸ್ ಪಕ್ಷದಲ್ಲಿದ್ದ ಬುಖಾರಿ, ಪಹಾರಿ ಸಮುದಾಯಕ್ಕೆ ಎಸ್‌ಟಿ ಮೀಸಲು ವಿಚಾರದಲ್ಲಿ ಫಾರೂಕ್ ಅಬ್ದುಲ್ಲಾ ಜತೆ ಭಿನ್ನಾಭಿಪ್ರಾಯ ಮೂಡಿದ್ದರಿಮದ ಪಕ್ಷ ತೊರೆದರು. ಬಳಿಕ ಫೆ.15ರಂದು ಬಿಜೆಪಿ ಸೇರಿದರು. ಬುಖಾರಿ ಕೋರಿಕೆಯಂತೆ ಬಜೆಟ್ ಅಧಿವೇಶನದಲ್ಲಿ ಕೇಂದ್ರ ಸರಕಾರ, ಪಹಾರಿ, ಪದ್ದಾರಿ, ಕೊಲಿಸ್, ಗದ್ದಾ ಬ್ರಾಹ್ಮಣರಿಗೆ ಮೀಸಲು ಸೌಲಭ್ಯ ಘೋಷಿಸಿತು.

660 ಕೋಟಿ ರು. ಯೋಜನೆಗಳಿಗೆ ಚಾಲನೆ

ಮೊದಲ ವಂದೇ ಮೆಟ್ರೋಗೆ ಇಂದು ಮೋದಿ ಹಸಿರು ನಿಶಾನೆ

ದೆಹಲಿ: ದೇಶದ ಮೊದಲ 'ವಂದೇ ಮೆಟ್ರೋ' ರೈಲು ಸೇವೆ ಗುಜರಾತ್ ರಾಜ್ಯದಲ್ಲಿ ಸೋಮವಾರ ಆರಂಭಗೊಳ್ಳಲಿದೆ.

ಪಶ್ಚಿಮ ರೈಲ್ವೆಯ ಅಹಮದಾಬಾದ್ ವಿಭಾಗ ಆರಂಭಿಸಲಿರುವ 'ವಂದೇ ಮೆಟ್ರೋ' ಸೇವೆಗೆ ಗುಜರಾತ್ ರಾಜ್ಯದಲ್ಲಿ ಎರಡು ದಿನಗಳ ಪ್ರವಾಸ

ಕೈಗೊಳ್ಳಲಿರುವ ಪ್ರಧಾನಿ ನರೇಂದ್ರ ಮೋದಿ ಸೋಮವಾರ ಹಸಿರು ನಿಶಾನೆ ತೋರಲಿದ್ದಾರೆ.

ಶರವೇಗ, ಕಡಿಮೆ ನಿಲುಗಡೆ, ಸುಖಾಸೀನ ಬೋಗಿಗಳಿಗೆ ಹೆಸರಾಗಿರುವ 'ವಂದೇ ಭಾರತ್' ರೈಲುಗಳ ವಿಭಾಗದಿಂದ ದೇಶದ ಮೊದಲ ವಂದೇ ಮೆಟ್ರೊ ಸೇವೆ ಆರಂಭಗೊಳ್ಳಲಿದೆ. ವಂದೇ ಮೆಟ್ರೋ ಕಚ್ ಜಿಲ್ಲೆಯ ಭುಜ್‌ನಿಂದ ಅಹಮದಾಬಾದ್ ನಡುವೆ 360 ಕಿ.ಮೀ.ಗಳನ್ನು 5 ಗಂಟೆ 45 ನಿಮಿಷಗಳಲ್ಲಿ ಕ್ರಮಿಸಲಿದೆ. ಗರಿಷ್ಠ 110 ಕಿಮೀ ವೇಗದಲ್ಲಿ ಚಲಿಸುತ್ತದೆ. ವಾರದಲ್ಲಿ 6 ದಿನ ಕಾರ್ಯನಿರ್ವಹಿಸುತ್ತದೆ. 1,150 ಆಸನ ಒಳಗೊಂಡಿದೆ. ಟಿಕೆಟ್ ದರ 430 ರು.(ಜಿಎಸ್‌ಟಿ ಬಿಟ್ಟು). ಇದೇ ವೇಳೆ ಗುಜರಾತ್ ರಾಜ್ಯಕ್ಕೆ ಸಂಬಂಧಿಸಿದ 660 ಕೋಟಿ ರು.ಗಳ ವಿವಿಧ ಅಭಿವೃದ್ಧಿ ಯೋಜನೆಗಳಿಗೂ ಪ್ರಧಾನಿ ಶಂಕು ಸ್ಥಾಪನೆ ನೆರವೇರಿಸಲಿದ್ದಾರೆ. 46 ಸಾವಿರ ಫಲಾನುಭವಿಗಳ ನೂತನ ಗೃಹ ಪ್ರವೇಶ ಕಾರ್ಯಕ್ರಮದಲ್ಲೂ ಭಾಗಿಯಾಗಲಿರುವ ಮೋದಿ, 'ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾಮೀಣ)'ಯ 20 ಸಾವಿರ ಫಲಾನುಭವಿಗಳಿಗೆ ಮಂಜೂರು ಪತ್ರ ವಿತರಿಸುವರು. ರಾಂಚಿಯಲ್ಲಿ ಜಾರ್ಖಂಡ್, ಒಡಿಶಾ, ಬಿಹಾರ ಮತ್ತು ಉತ್ತರ ಪ್ರದೇಶ ರಾಜ್ಯಗಳನ್ನು ಸಂಪರ್ಕಿಸುವ 6 ವಂದೇ ಭಾರತ್ ರೈಲುಗಳಿಗೆ ಪ್ರಧಾನಿ ಭಾನುವಾರ ಚಾಲನೆ ನೀಡಿದರು.

ಹರಿಯಾಣ ಸಿಎಂ ಸ್ಥಾನಕ್ಕೆ ಅನಿಲ್ ವಿಜ್ ಬೇಡಿಕೆ

ಚಂಡಿಗಢ: ಹರಿಯಾಣ ವಿಧಾನಸಭೆ ಚುನಾವಣೆಯಲ್ಲಿ ಗೆದ್ದು ಮೂರನೇ ಬಾರಿಯೂ ಅಧಿಕಾರ ಹಿಡಿಯುವ ವಿಶ್ವಾಸದಲ್ಲಿರುವ

ಬಿಜೆಪಿ, ಹಾಲಿ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಅವರನ್ನೇ ಮುಂದುವರಿಸುವುದಾಗಿ ಘೋಷಿಸಿದೆ.

ಸಿಎಂ ಹುದ್ದೆಗೆ ಸೈನಿ ಹೆಸರು ಅಂತಿಮಗೊಂಡಿದ್ದರೂ ಪಕ್ಷದ ಹಿರಿಯ ನಾಯಕ, 6 ಬಾರಿಯ ಶಾಸಕ ಅನಿಲ್ ವಿಜ್, ಮುಖ್ಯಮಂತ್ರಿ ಸ್ಥಾನಕ್ಕೇರಲು ಇಚ್ಛೆ ವ್ಯಕ್ತಪಡಿಸಿದ್ದಾರೆ. ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ ಸಿಎಂ ಸ್ಥಾನ ತಮಗೇ ನೀಡಬೇಕು ಎಂದು ಅನಿಲ್ ವಿಜ್ ಪಕ್ಷದ ಮುಂದೆ ಭಾನುವಾರ ಬೇಡಿಕೆ ಇಟ್ಟಿದ್ದಾರೆ. ಚುನಾವಣೆ ಹೊತ್ತಲ್ಲೇ ಶಿಸ್ತಿನ ಪಕ್ಷ ಬಿಜೆಪಿಯಲ್ಲಿ ಸಿಎಂ ಅಭ್ಯರ್ಥಿ ವಿಚಾರದಲ್ಲಿ ಭಿನ್ನ ರಾಗ ಮೂಡಿರುವುದು ವರಿಷ್ಠರಿಗೆ ಶಿರೋಬಾಧೆ ತರಿಸಿದೆ. ಮಾಧ್ಯಮದ ಜತೆಗಿನ ಮಾತುಕತೆ ವೇಳೆ ಭಾನುವಾರ ಸಿಎಂ ಸ್ಥಾನಕ್ಕೆ ತಾವೂ ಆಕಾಂಕ್ಷಿ ಎಂದು ಹೇಳಿಕೊಂಡಿರುವ ಅನಿಲ್ ವಿಜ್, 'ಇಲ್ಲಿಯವರೆಗೂ ಪಕ್ಷದ ಬಳಿ ಏನನ್ನೂ ಕೇಳಿಲ್ಲ. ತಾನು ಬಿಜೆಪಿ ಹಿರಿಯ ನಾಯಕ. ಸಿಎಂ ಸ್ಥಾನ ತಮಗೇ ನೀಡುವುದು ಸೂಕ್ತ' ಎಂದು ಹೇಳಿದ್ದಾರೆ. ಸಿಎಂ ಸ್ಥಾನಕ್ಕೇರಿದರೆ ಹರಿಯಾಣ ರಾಜ್ಯದ ಚಿತ್ರಣವನ್ನು ಪೂರ್ಣ ಬದಲಿಸುವ ಕನಸನ್ನೂ ಹಂಚಿಕೊಂಡಿದ್ದಾರೆ. ಈ ಮೊದಲು ಅನಿಲ್, ಬಿಜೆಪಿ ತಮ್ಮನ್ನು ಕಡೆಗಣಿಸುತ್ತಿದೆ ಎಂದು ಮೇ ತಿಂಗಳಲ್ಲಿ ಬೇಸರ ವ್ಯಕ್ತಪಡಿಸಿದ್ದರು.

ಒಸಾಮಾ ಬಿನ್ ಲಾಡೆನ್ ಪುತ್ರ ಹಂಝಾ ಜೀವಂತ

ಕಾಬೂಲ್: 9/11 ಅಮೆರಿಕ ದಾಳಿ ಸಂಚಿನ ಸೂತ್ರದಾರ, ಅಲ್ ಖೈದಾ ಉಗ್ರ ಸಂಘಟನೆ ಸಂಸ್ಥಾಪಕನಾಗಿದ್ದ ಉಗ್ರ ಒಸಾಮಾ ಬಿನ್ ಲಾಡೆನ್‌ನ ಪುತ್ರ ಹಂಝಾ ಬಿನ್ ಲಾಡೆನ್ ಜೀವಂತ ಇದ್ದಾನೆ



ಎಂದು ವರದಿಯಾಗಿದೆ.

ಹಂಝಾ ಆಫ್ಘಾನಿಸ್ತಾನದಲ್ಲಿ ಅಲ್ ಖೈದಾ ಸಂಘಟನೆಯನ್ನು ಮರು ಸಂಘಟಿಸಿ ಮುನ್ನಡೆಸುತ್ತಿದ್ದಾನೆ. ಹಂಝಾ ಜತೆಗೆ ಕಿರಿಯ ಸೋದರ ಅಬ್ದುಲ್ಲಾ ಬಿನ್ ಲಾಡೆನ್ ಸಹ ಇದ್ದಾನೆ. ಇಬ್ಬರೂ ತಂದೆ ಒಸಾಮಾ ಸಾವಿಗೆ ಪ್ರತಿಕಾರ ತೀರಿಸಿಕೊಳ್ಳುವುದಾಗಿಯೂ ಶಪಥ ತೊಟ್ಟಿದ್ದಾರೆ ಎಂದು ಗುಪ್ತಚರ ಮಾಹಿತಿ ಆಧರಿಸಿ ಮಾಧ್ಯಮಗಳಲ್ಲಿ ವರದಿಯಾಗಿದೆ. ಹಂಝಾ ಮತ್ತು ಸೋದರರ ಚಟುವಟಿಕೆಗಳ ಬಗ್ಗೆ ಆಫ್ಘಾನಿಸ್ತಾನದಲ್ಲಿ ಸದ್ಯ ಆಡಳಿತ ನಡೆಸುತ್ತಿರುವ ತಾಲಿಬಾನ್ ಸಂಘಟನೆಯ ವಿರೋಧಿ ಪಾಳಯ 'ದಿ ನ್ಯಾಷನಲ್ ಮೊಬಲೈಸೇಷನ್ ಫ್ರಂಟ್'(ಎನ್‌ಎಂಎಫ್) ಕೂಡಾ ವರದಿ ಪ್ರಕಟಿಸಿದೆ. ಅಲ್‌ಖೈದಾ ಭಯೋತ್ಪಾದಕ ಸಂಘಟನೆಯ ಯುವರಾಜನಂತಿರುವ ಹಂಝಾ, ಅಫ್ಘಾನಿಸ್ತಾನದ ಉತ್ತರ ಭಾಗದಲ್ಲಿ ಅಡಗಿದ್ದಾನೆ. 450 ಸ್ನಿಪರ್‌ಗಳು(ಗುರಿಕಾರರು) ಸದಾ ಕಾವಲು ಕಾಯುತ್ತಿದ್ದು, ಈ ಇಬ್ಬರೂ ಸೋದರರಿಗೆ ಭದ್ರತೆ ಒದಗಿಸಿದ್ದಾರೆ ಎಂದೂ ವರದಿಯಲ್ಲಿ ಹೇಳಲಾಗಿದೆ.

ಅಮೆರಿಕ ಯೋಧರು ಯುದ್ಧ ಭೂಮಿಯಲ್ಲಿಲ್ಲ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷೀಯ ಚುನಾವಣೆ ಪ್ರಚಾರದಲ್ಲಿ ತೊಡಗಿರುವ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್, ಚರ್ಚೆಯೊಂದರಲ್ಲಿ ನೀಡಿದ ಹೇಳಿಕೆಗೆ ಈಗ ತೀವ್ರ ಮುಜುಗರ ಪಡುವಂತಾಗಿದೆ.

ಕಮಲಾ ಮಾತಿಗೆ ಯೋಧರ ತೀಕ್ಷ್ಣ ಪ್ರತಿಕ್ರಿಯೆ

'ಅಮೆರಿಕದದ ಒಬ್ಬ ಯೋಧನೂ ಸದ್ಯ ಯಾವುದೇ ಯುದ್ಧಭೂಮಿಯಲ್ಲಿ ನಿಯೋಜನೆಗೊಂಡಿಲ್ಲ' ಎಂದು ಡೆಮಾಕ್ರೆಟಿಕ್ ಪಕ್ಷದ ಅಭ್ಯರ್ಥಿ ಕಮಲಾ ಹ್ಯಾರಿಸ್ ಹೇಳಿದ್ದರು. ರಿಪಬ್ಲಿಕನ್ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಹಾಗೂ ಕಮಲಾ ಹ್ಯಾರಿಸ್ ನಡುವೆ ನಡೆದ ಚುನಾವಣಾ ಚರ್ಚಾಗೋಷ್ಠಿಯಲ್ಲಿ ಈ ತಪ್ಪು ಹೇಳಿಕೆ ನೀಡಿದ್ದರು. ಈ ಮಾತಿಗೆ ಸದ್ಯ ವಿವಿಧ ದೇಶಗಳಲ್ಲಿ ಯುದ್ಧಭೂಮಿಯಲ್ಲಿ ಇರುವ ಯೋಧರಿಂದಲೇ ಆಕ್ರೋಶ ವ್ಯಕ್ತವಾಗಿದೆ.

ಯುದ್ಧ ಪೀಡಿತ ಹಲವು ರಾಷ್ಟ್ರಗಳಲ್ಲಿ ಅಮೆರಿಕ ಯೋಧರು ನಿಯೋಜನೆಗೊಂಡಿದ್ದಾರೆ. ಆದರೆ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಸುಳ್ಳು ಮಾಹಿತಿ ಹಂಚಿಕೊಂಡಿದ್ದಾರೆ. ಅದನ್ನು ಪ್ರಶ್ನಿಸುವಂತೆ ಅಮೆರಿಕದ ಯೋಧರದ್ದು ಎನ್ನಲಾದ ವಿಡಿಯೋ ವೈರಲ್ ಆಗಿದೆ. ಅದರಲ್ಲಿ ಯೋಧರು 'ಹಾಗಿದ್ದರೆ ನಾವೆಲ್ಲ ಈಗ ಎಲ್ಲಿದ್ದೇವೆ?' ಎಂದು ಪ್ರಶ್ನಿಸಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪೂಂಚ್: ಉಗ್ರರ ಜತೆ ಭದ್ರತಾ ಪಡೆ ಚಕಮಕಿ

ಪೂಂಚ್: ಜಮ್ಮು–ಕಾಶ್ಮೀರದ ಪೂಂಚ್ ಜಿಲ್ಲೆಯಲ್ಲಿ ಉಗ್ರರು ಅಡಗಿರುವ ಮಾಹಿತಿ ಮೇರೆಗೆ ಭದ್ರತಾ ಪಡೆಗಳು ಶೋಧ ನಡೆಸಿದ್ದಾಗ, ಉಗ್ರರು ಮತ್ತು

ಭದ್ರತಾ ಪಡೆಗಳ ನಡುವೆ ಗುಂಡಿನ ಚಕಮಕಿ ನಡೆದಿದೆ.

ಪೂಂಚ್ ಜಿಲ್ಲೆಯ ಪಠಣತೀರ್ ಗ್ರಾಮದಲ್ಲಿ ಭಾನುವಾರ ಬೆಳಗ್ಗೆ ಭದ್ರ ತಾ ಪಡೆಗಳು ಅಡಗಿದ್ದ ಉಗ್ರರಿಗಾಗಿ ಶೋಧ ನಡೆಸಿದ್ದಾಗ, ಉಗ್ರರು ಮರೆಯಿಂದ ಗುಂಡು ಹಾರಿಸಿದರು. ಪ್ರತಿಯಾಗಿ ಭದ್ರತಾ ಪಡೆ ಯೋಧರು ಚಕಮಕಿ ಆರಂಭಿಸಿದರು.

ಉಗ್ರಗಾಮಿ ಸಂಘಟನೆಯ ಉನ್ನತ ಕಮಾಂಡರ್ ಸೇರಿದಂತೆ ಮೂವರು ಉಗ್ರರು ಗ್ರಾಮದಲ್ಲಿ ಅಡಗಿದ್ದಾರೆಂಬ ಮಾಹಿತಿ ಲಭ್ಯವಾಗಿದ್ದು, ಭದ್ರತಾ ಪಡೆಗಳು ಗ್ರಾಮವನ್ನು ಸುತ್ತುವರಿದಿವೆ. ಶನಿವಾರವಷ್ಟೇ ಬಾರಾಮುಲ್ಲಾದಲ್ಲಿ ಮೂವರು ಉಗ್ರ ರನ್ನು ಭದ್ರತಾ ಪಡೆಗಳು ಕೊಂದುಹಾಕಿದ್ದು, ಭಾನುವಾರ ಪೂಂಚ್‌ನಲ್ಲಿ ಕಾರ್ಯಾಚರಣೆ ಆರಂಭವಾಗಿದೆ.

ಸಮಾಚಾರ ಸಣ್ಣದಲ್ಲ

ಪೋಷಣಾ ಮಾಸಾಚರಣೆ ಕಾರ್ಯಕ್ರಮ

ಮುದಗಲ್: ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ ರಾಯಚೂರು,ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಾರ್ಯಾಲಯ ಲಿಂಗಸುಗೂರ ವತಿಯಿಂದ ಪಟ್ಟಣ ಸಮೀಪದ ಸಜ್ಜಲಗುಡ್ಡ ಗ್ರಾಮದಲ್ಲಿ ಪೋಷಣಾ ಮಾಸಾಚರಣೆ ಕಾರ್ಯ ಕ್ರಮ ಜರುಗಿತು. ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ರಾಜೇಶ್ವರಿ ರವರು ಜ್ಯೋತಿ ಬೆಳಗುವ ಮೂಲಕ ಪೋಷಣಾ ಮಾಸಾಚರಣೆ ಕಾರ್ಯಕ್ರಮ ಉದ್ಘಾಟನೆ ಮಾಡಿದರು.ಪೋಷಣಾ ಬೀ ಪಡಾಯಿ ಬಿ,ಪೌಷ್ಟಿಕ ಆಹಾರ ತಾಯಿ ಹೆಸರಿನಲ್ಲಿ ಸಸಿ ನೆಡುವ ಅಭಿಯಾನ ಸೇರಿದಂತೆ ಇಲಾಖೆ ವಿವಿಧ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಲಾಗಿತು. ಈ ಸಂದರ್ಭದಲ್ಲಿ ಸಜ್ಜಲಗುಡ್ಡ ವಲಯ ಅಂಗನವಾಡಿ ಮೇಲ್ವಿಚಾರಕಿ ಸೌಮ್ಯ, ಹಾಗೂ ಮೇಲ್ವಿಚಾರಕಿಯರಾದ ಅನುಸೂಯ, ಲಕ್ಷ್ಮಿ ಹಿರೇಮನಿ, ಶ್ರೀಶಕ್ತಿ ಗುಂಪಿನ ಮೇಲ್ವಿಚಾರಕಿ ಶರಣಮ್ಮ ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಸೇರಿದಂತೆ ಆರೋಗ್ಯ ಇಲಾಖೆ ಸಿಬ್ಬಂದಿಗಳು ಸಜ್ಜಲಗುಡ್ಡ ಗ್ರಾಮ ಹಿರಿಯ ಭಾಗವಹಿಸಿದ್ದರು.

ಉತ್ತಮ ಶಿಕ್ಷಕರಾಗಿ ರಾಘವೇಂದ್ರ ಆಯ್ಕೆ

ಸಿಂಧನೂರು: ತಾಲೂಕಿನ ಗೋನವಾರ ಗ್ರಾಮದ ರಾಘವೇಂದ್ರರಾವ್ ಹಿರಿಯ ಪ್ರಾಥಮಿಕ ಶಾಲೆಯ ಹುಸೇನಪ್ಪ ನಾಯಕ ರವರು ಸಿಂಧನೂರು ತಾಲೂಕು ಉತ್ತಮ ಶಿಕ್ಷಕರಾಗಿ ತಾಲೂಕು ಖಾಸಗಿ ಶಿಕ್ಷಕರ ಸಂಘದಿಂದ ಆಯ್ಕೆಯಾಗಿದ್ದಾರೆ.ಕಳೆದ ಹತ್ತು ವರ್ಷಗಳಿಂದ ರಾಘವೇಂದ್ರ ಶಾಲೆಯಲ್ಲಿ ಊರಿನ ಹಾಗೂ ಶಾಲೆಯ ಅಚ್ಚುಮೆಚ್ಚಿನ ಶಿಕ್ಷಕರಾಗಿದ್ದಾರೆ ಅದಕ್ಕೆ ಅವರನ್ನು ಗುರುತಿಸಿ ತಾಲೂಕಿನ ಉತ್ತಮ ಶಿಕ್ಷಕರಾಗಿ ಆಯ್ಕೆಯಾಗಿದ್ದಾರೆ. ಗೋನವಾರ ಗ್ರಾಮದ ಹೆಮ್ಮೆಯ ಕೀರ್ತಿ ಅದರಿಂದ ಗ್ರಾಮದ ಯುವಕರು ಗುರು ಹಿರಿಯರಿಂದ ಅಭಿನಂದನೆಗಳು ಸಲ್ಲಿಸಿದ್ದಾರೆ.

ಕಾಂಪೌಡ್ ನಿರ್ಮಾಣ ಅವ್ಯವಹಾರ

ಕೊಪ್ಪಳ: ನಗರದ ಹಿರೇಸಿಂಧೋಗಿ ರಸ್ತೆಯಲ್ಲಿನ ಭಾರತ್ ಸೌಟ್ಸ್ ಆ್ಯಂಡ್ ಗೈಡ್ಸ್ ನ ತರಬೇತಿ ಕೇಂದ್ರದ ತಡೆಗೋಡೆ ನಿರ್ಮಾಣದಲ್ಲಿ ಅವ್ಯವಹಾರ ನಡೆದಿದೆ ಎಂದು ಸಾಮಾಜಿಕ ಕಾರ್ಯಕರ್ತ ಕುಬೇರ ಮಜ್ಜಿಗಿ ಆರೋಪಿಸಿದ್ದಾರೆ.

ಸುಮಾರು 25 ಲಕ್ಷ ರು. ವೆಚ್ಚದಲ್ಲಿ ತರಬೇತಿ ಕೇಂದ್ರದ ಕಾಂಪೌಂಡ್ ನಿರ್ಮಾಣ ಮಾಡಲಾಗಿದೆ. ಆದರೆ, ಸರಕಾರದ ನಿಯಮದಂತೆ ಯಾವುದೇ ಟೆಂಡರ್ ಕರೆದಿಲ್ಲ. ಬದಲಾಗಿ ಮುಖ್ಯ ಶಿಕ್ಷಕರೊಬ್ಬರು ಕಾಮಗಾರಿ ನಿರ್ವಹಿಸಿ, ಅರೆಬರೆ ಕೆಲಸ ಮಾಡಿದ್ದಾರೆ. ಕಾಂಪೌಂಡ್ ನಿರ್ಮಾಣ ಮಾಡುವಾಗ ವೈಜ್ಞಾನಿಕವಾಗಿ ಅಡಿಪಾಯ ಹಾಕಿಲ್ಲ, ಗುಣಮಟ್ಟದ ಸಿಮೆಂಟ್ ಬಳಕೆ ಮಾಡಿಲ್ಲ. ಇದರಿಂದ ನಿರ್ಮಾಣ ಮಾಡಿರುವ ಕಾಂಪೌಂಡ್ ಕೆಲ ದಿನದಲ್ಲೇ ನೆಲಕ್ಕೆ ಉರುಳುವ ಹಂತ ತಲುಪಿದೆ. ಕೇವಲ 10 ಲಕ್ಷ ರೂ. ನಲ್ಲಿ ಕೆಲಸ ಮುಗಿಸಿ, ಸುಮಾರು 15 ಲಕ್ಷ ರೂ. ಅವ್ಯವಹಾರ ಮಾಡಿದ್ದಾರೆ ಎಂದು ಭಾರತ್ ಸೌಟ್ಸ್ ಆ್ಯಂಡ್ ಗೈಡ್ಸ್ ನ ತರಬೇತಿ ಕೇಂದ್ರದ ಕಾರ್ಯದರ್ಶಿಗೆ ಬರೆದ ಪತ್ರದಲ್ಲಿ ಆರೋಪಿಸಿದ್ದಾರೆ. ಸರಕಾರದ ನಿಯಮದಂತೆ 5 ಲಕ್ಷ ರೂ. ಮೇಲ್ಪಟ್ಟ ಯಾವುದೇ ಕಾಮಗಾರಿ ನಿರ್ವಹಿಸಲು ಟೆಂಡರ್ ಕರೆಯಬೇಕು. ಟೆಂಡರ್ ನಲ್ಲಿ ಭಾಗವಹಿಸಿದವರು, ಎಸ್ಟಿಮೇಟ್ ನಂತೆ ಕೆಲಸ ಮಾಡಬೇಕು. ಆದರೆ, ಎಲ್ಲ ನಿಯಮ ಗಾಳಿಗೆ ತೂರಿ ಕಾಮಗಾರಿ ನಿರ್ವಹಣೆ ಮಾಡಿದ್ದಾರೆ. ಕೂಡಲೇ ಈ ಬಗ್ಗೆ ತನಿಖೆ ಮಾಡಬೇಕು. ಅವ್ಯವಹಾರದ ಹಣ ವಸೂಲಿ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ಅಂಬೇಡ್ಕರ್ ಪುತ್ಥಳಿ: ನಿರ್ಲಕ್ಷ್ಯ ಖಂಡನೆ

ರಾಯಚೂರು: ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ ಅವರ ಪುತ್ಥಳಿ ಸುತ್ತ ಮುತ್ತಲಿನ ಗೋಡೆ ಮತ್ತು ಟೈಲ್ಸ್ ಕುಸಿದು ಸಂಪೂರ್ಣ ಶೀತಲ ಗೊಡಿರುವುದರಿಂದ ದಲಿತ ಪರ ಸಂಘಟನೆ ಒಕ್ಕೂಟದ ವತಿಯಿಂದ ಪೌರಾಯುಕ್ತರ ನಿರ್ಲಕ್ಷ್ಯ ಧೋರಣೆಯನ್ನು ಖಂಡಿಸಿ ಅಂಬೇಡ್ಕರ ಅವರ ವೃತ್ತದಲ್ಲಿ ಬೃಹತ್ ಪ್ರತಿ ಭಟನೆ ಮಾಡಲಾಗಿತ್ತು. ಪ್ರತಿಭಟನ ನಿರತ ಸ್ಥಳಕ್ಕೆ ನಗರಸಭೆ ಸದಸ್ಯರಾದ ಜಯಣ್ಣನ ವರು ಮತ್ತು ನಗರಸಭೆ ಅಧ್ಯಕ್ಷರಾದ ಮಾಡಿಗಿರಿ ನರಸಿಂಹರವರು ನಗರ ಸಭೆ ಉಪಾಧ್ಯ ಕ್ಷರಾದ ಸಾಜಿತ್ ಸಮೀರ ಸ್ಥಳಕ್ಕೆ ಭೇಟಿಕೊಟ್ಟು ಶೀತ ಲಗೊಂಡಿರ್ತಕ್ಕಂತ ಟೈಲ್ಸ್ ಮತ್ತು ಗೋಡೆ ಪುನ ಹೊಸದಾಗಿ ನಿರ್ಮಿಸು ವುದಾಗಿ ಭರವಸೆಯನ್ನು ಕೊಟ್ಟರುತ್ತಾರೆ. ಈ ಸಂದರ್ಭದಲ್ಲಿ ಅಂಬೇಡ್ಕರ ಸೇನಾ ಜಿಲ್ಲಾಧ್ಯಕ್ಷ ವಿಶ್ವನಾಥ್ ಪಟ್ಟಿ, ಮಾದಿಗ ದಂಡೋರ ರಾಜ್ಯಾಧ್ಯಕ್ಷ ನರಸಪ್ಪ ದಂಡೋರ, ಈರಣ್ಣ, ಹೇಮ ರಾಜ್ ಕೈಹಾಳ, ನರಸಿಂಹಲು ನೆಲಹಾಳ, ಎಸ್ ರಾಜು ಹರಿಜನ ವಾಡ, ಮಹೇಶ್ ಕುಮಾರ್, ಕುಮಾ ರಸ್ವಾಮಿ, ಚಂದ್ರು ಎಕ್ಲಾಸ್ ಪುರ, ಕೆ ಸಂತೋಷ್ ಉಪಸ್ಥಿತರಿದ್ದರು.

{ಮಧು ಬಂಗಾರಪ್ಪ } ಸಚಿವ

ವಿಶ್ವದಲ್ಲಿಯೇ ಅತ್ಯಂತ ದೊಡ್ಡ ಸಂವಿಧಾನ ಹೊಂದಿರುವ ದೇಶ ನಮ್ಮದು ಸಂವಿಧಾನದ ಮೌಲ್ಯ ಗಳನ್ನು ಎತ್ತಿಹಿಡಿದು ಸಾಕಾರಗೊಳಿಸಬೇಕಾದುದು ಹಾಗೂ ಸಂವಿಧಾನ ದತ್ತವಾಗಿರುವ ಹಕ್ಕುಗಳನ್ನು ಬಳಸಿಕೊಳ್ಳುವಂತೆ ಯೇ ಕರ್ತವ್ಯಗಳನ್ನು ಮರೆಯಬಾರದು.



ಆರೋಪಿತ ಶಿಕ್ಷಕನ ರಕ್ಷಣೆಗೆ ಯತ್ನ? ರಾಜೀ ಸಂಧಾನಕ್ಕೆ ಮುಂದಾಗಿರುವ ಶಾಲಾ ಮುಖ್ಯ ಶಿಕ್ಷಕ?

ಲೈಂಗಿಕ ಕಿರುಕುಳ: ಮುಚ್ಚಿ ಹಾಕಲು ಹುನ್ನಾರ!

ಕಾರಟಗಿ: ತಾಲೂಕಿನ ಉಳೇನೂರು ಗ್ರಾಮದ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿನಿಗೆ ಲೈಗಿಂಕ ಕಿರುಕುಳ ನೀಡಿದ ಘಟನೆಯನ್ನು ವ್ಯವಸ್ಥಿತವಾಗಿ ಮುಚ್ಚಿಹಾಕಲು ಹುನ್ನಾರ ನಡೆಸಿರುವ ಬಗ್ಗೆ ಉನ್ನತ ಮೂಲಗಳಿಂದ ಮಾಹಿತಿ ಲಭ್ಯವಾಗಿದೆ. ರಾಜೀ ಸಂಧಾನದ ಮೂಲಕ ಘಟನೆಗೆ ತಿಲಾಂಜಲಿ ಇಡಲು ಖುದ್ದು ಶಾಲೆ ಮುಖ್ಯ ಶಿಕ್ಷಕರೇ ಮುಂದಾಗಿದ್ದಾರೆ ಎನ್ನಲಾಗಿದೆ.

ಪೊಲೀಸ್ ಠಾಣೆಗೆ ತೆರಳಿ 2024ಸೆ. 14ರ ಮಧ್ಯ ರಾತ್ರಿ 10.50ಕ್ಕೆ ಪೊಲೀಸ್ ಠಾಣೆಗೆ ತೆರಳಿ ಸ್ಪಷ್ಟನೆ ನೀಡಿದ್ದಾರೆ. ಸ್ಪಷ್ಟಣೆಯಲ್ಲಿ ಸೆ. 14 ರಂದು ಡಿಡಿಪಿಐ ನನಗೆ ವಾಟ್ಸ್ ಆ್ಯಪ್ ಸಂದೇಶ ಕಳುಹಿಸಿ, ವಿದ್ಯಾರ್ಥಿನಿಗೆ ಶಿಕ್ಷಕ ಲೈಂಗಿಕ ಕಿರುಕುಳ ನೀಡಿದ ಘಟನೆ ಬಗ್ಗೆ ಪರಿಶೀಲನೆ ನಡೆಸಲು ಸೂಚಿಸಿದರು. ಅದೇ ದಿನದಂದು ಗಂಗಾವತಿ ಬಿಇಒ ಅವರು ದೂರವಾಣಿ ಕರೆ ಮಾಡಿ ಘಟನೆ ಬಗ್ಗೆ ತಿಳಿಸುವಂತೆ ಸೂಚಿಸಿದರು ಎಂದು ಉಲ್ಲೇಖ ಮಾಡಿದ್ದಾರೆ. ಇದಾದ ಬಳಿಕ ಘಟನೆ ಸಂಬಂಧ ವಿದ್ಯಾರ್ಥಿನಿ ಹಾಗೂ ಅವರ ತಂದೆ, ತಾಯಿಯನ್ನು ಶಾಲೆಗೆ ಕರೆಯಿಸಿ ವಿಚಾರಿಸಿದಾಗ ಆ ರೀತಿಯ ಘಟನೆಗಳು ನಡೆದಿಲ್ಲ ಎಂದು ಲಿಖಿತವಾಗಿ ಮಾಹಿತಿ ನೀಡಿರುತ್ತಾರೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಮುಂದುವರೆದು ಶಿಕ್ಷಕ ರಾಜು ಆತ್ಮಕೂರುಗೆ

ನೋಟೀಸ್ ನೀಡಿದ್ದು, ಆ ರೀತಿ ಯಾವುದೇ ಘಟನೆ ನಡೆದಿಲ್ಲ ಎಂದು ಉತ್ತರಿಸಿದ್ದಾರೆ. ಹೀಗಾಗಿ ದೂರು ಸತ್ಯಕ್ಕೆ ದೂರವಾಗಿದೆ ಎಂದು ಕಾರಟಗಿ ಪೊಲೀಸ್ ಠಾಣೆಗೆ ಸಲ್ಲಿಕೆಯಾದ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಮೇಲಿನ ಉಲ್ಲೇಖಗಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಠಾಣೆಗೆ ಸಲ್ಲಿಕೆ ಮಾಡಿಲ್ಲ. ಅಲ್ಲದೇ, ವಿದ್ಯಾರ್ಥಿನಿ ಆ ರೀತಿ ಯಾವ ಘಟನೆ ನಡೆದಿಲ್ಲ ಎಂದು ಈವರಗೆ ಲಿಖಿತ ಪತ್ರಕ್ಕೆ ಸಹಿಯನ್ನೇ ಮಾಡಿಲ್ಲ ಎನ್ನುವ ಮಾಹಿತಿ ದೊರೆತಿದೆ.

ಪರಿಸ್ಥಿತಿ ಇಷ್ಟೊಂದು ಗಂಭೀರತೆಯಿಂದ ಕೂಡಿದ್ದರು. ಈವರೆಗೆ ವಿದ್ಯಾರ್ಥಿನಿ ಜತೆಗೆ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಕೊಪ್ಪಳ ಶಿಕ್ಷಣ ಇಲಾಖೆ ಡಿಡಿಪಿಐ ಭೇಟಿ ನೀಡಿಲ್ಲ. ಹೇಗಾದರೂ ಮಾಡಿ, ಘಟನೆಯನ್ನು ಮುಚ್ಚಿಹಾಕುವ ನಿಟ್ಟಿನಲ್ಲಿಯೇ ತಯಾರಿ ನಡೆಸಲಾಗುತ್ತಿದೆ ಎಂದು ಬಲ್ಲ ಮೂಲಗಳು ಮಾಹಿತಿ ನೀಡಿವೆ.

> ನಾನೇ ಖುದ್ದು ಶಾಲೆಗೆ ಭೇಟಿ ನೀಡಿ ಪರಿಶೀಲನೆ ಮಾಡುತ್ತೇನೆ. ಏನೇ ತಪ್ಪುಗಳಾಗಿದ್ದರೆ ನಾನು ಸಂಪೂರ್ಣ ವರದಿಯನ್ನು ಶಿಕ್ಷಣ ಇಲಾಖೆಗೆ ನೀಡುತ್ತೇನೆ. ಯಾರೇ ತಪ್ಪು ಮಾಡಿದ್ದರೂ ಅವರ ವಿರುದ್ಧ ಕ್ರಮ ಆಗಲಿದೆ.
>
> – ವೆಂಕಟೇಶ, ಬಿಇಒ, ಗಂಗಾವತಿ

ಸುಳ್ಳು ಮಾಹಿತಿ ನೀಡಿದ್ದರೆ ಕೇಸ್ ದಾಖಲಿಸಲಿ!

ವಿದ್ಯಾರ್ಥಿನಿಗೆ ಶಾಲೆಯ ಶಿಕ್ಷಕನೊಬ್ಬ ಲೈಂಗಿಕ ಕಿರುಕುಳ ನೀಡಿದ ಸಂಬಂಧ ಅನೇಕ ದೂರವಾಣಿ ಕರೆ ಹೋಗಿವೆ. ಈ ಹಿನ್ನೆಲೆ ಬಿಇಒಗೆ ಘಟನೆ ಸಂಬಂಧ ಮಾಹಿತಿ ನೀಡಲು ಸೂಚಿಸಿದ್ದಾರೆ. ನಿಜವಾಗಿಯೂ ಶಾಲಾ ಶಿಕ್ಷಕ ತಪ್ಪೇ ಮಾಡಿಲ್ಲ ಎಂದಾದರೆ ಹಾಗೂ ವಿದ್ಯಾರ್ಥಿನಿ ಯಾವುದೇ ಲೈಂಗಿಕ ಕಿರುಕುಳ ಅನುಭವಿಸಿಲ್ಲ ಎನ್ನುವುದಾದರೆ ವಿದ್ಯಾರ್ಥಿನಿ ಜೀವನದ ಜೊತೆಗೆ ಸುಳ್ಳು ಸುದ್ದಿ ಹಬ್ಬಿಸಿ ಚಲ್ಲಟವಾಡುತ್ತಿರುವ ವ್ಯಕ್ತಿಗಳ ವಿರುದ್ಧ ಕಾನೂನು ರೀತಿಯ ಕ್ರಮಗಳಾಗಬೇಕು. ಈ ರೀತಿಯ ಸುಳ್ಳು ಸುದ್ದಿ ಹಬ್ಬಿಸಿರುವ ವ್ಯಕ್ತಿಗಳ ವಿರುದ್ಧ ಠಾಣೆಯಲ್ಲಿ ಕೇಸ್ ದಾಖಲಾಗಬೇಕು. ಅಂದಾಗ ಮಾತ್ರ ಮತ್ತೊಬ್ಬರು ಇಂಥ ನೀಚ ಕೆಲಸಕ್ಕೆ ಹಿಂದೇಟು ಹಾಕುತ್ತಾರೆ. ಶಿಕ್ಷಣ ಇಲಾಖೆ ಮಾಹಿತಿ ನೀಡಿದ ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಿಸದೇ ಹಾಗೇ ಬಿಟ್ಟರೇ ವಿದ್ಯಾರ್ಥಿನಿ ಲೈಂಗಿಕ ಕಿರುಕುಳ ಅನುಭವಿಸಿರುವುದಕ್ಕೆ ಪರೋಕ್ಷವಾಗಿ ಶಿಕ್ಷಣ ಇಲಾಖೆ ಒಪ್ಪಿಕೊಂಡಂತೆ ಆಗುತ್ತದೆ. ಈ ವಿಚಾರವನ್ನು ಶಿಕ್ಷಣ ಇಲಾಖೆ ಗಂಭೀರವಾಗಿ ಇನ್ನಾದರೂ ಪರಿಗಣಿಸಬೇಕಿದೆ.

ಪೊಲೀಸ್ ಇಲಾಖೆ ಹೇಗೆ ರಿಸೀವ್ ಕೊಟ್ಟಿತು?

ಉಳೇನೂರು ಗ್ರಾಮದ ಸರಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಸಂಬಂಧ ಕಾರಟಗಿ ಠಾಣೆಯಲ್ಲಿ ಯಾವುದೇ ಪ್ರಕರಣ ದಾಖಲಾಗಿಲ್ಲ. ಹೀಗಿದ್ದಾಗ ಉಳೇನೂರು ಘಟನೆಗೆ ಸಂಬಂಧಿಸಿ ದಂತೆ ಕಾರಟಗಿ ಠಾಣೆಗೆ ಉಳೇನೂರು ಗ್ರಾಮದ ಸರಕಾರಿ ಶಾಲಾ ಮುಖ್ಯಶಿಕ್ಷಕ ಮಾಹಿತಿ ನೀಡಿ ಹೇಗೆ ರೀಸಿವ್ಡ್ ಪಡೆದರು?, ಠಾಣೆಯ ಅಧಿಕಾರಿ ಗಳು ಹೇಗೆ ರೀಸಿವ್ಡ್ ನೀಡಿದರು ಎಂಬ ಬಗ್ಗೆ ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಪ್ರಕರಣ ದಾಖಲಾಗದೇ ಠಾಣೆ ಯಾವ ರೀತಿಯಲ್ಲಿ ಯಾರಿಂದ ಸ್ಪಷ್ಟಣೆ ಪಡೆಯುತ್ತದೆ. ಕಾನೂನಿನಲ್ಲಿ ಇದಕ್ಕೆ ಅವಕಾಶವಿದೆಯೇ? ಅಷ್ಟಕ್ಕೂ ಠಾಣೆಗೆ ಸ್ಪಷ್ಟಣೆ ನೀಡುವ ಅವಶ್ಯಕತೆ ಮುಖ್ಯಶಿಕ್ಷಕನಿಗೆ ಏನಿತ್ತು? ಎಂಬ ಬಗ್ಗೆ ಕಾರಟಗಿ ಠಾಣೆಯ ಅಧಿಕಾರಿ ಹಾಗೂ ಮುಖ್ಯ ಶಿಕ್ಷಕರೇ ತಿಳಿಸಬೇಕಿದೆ.

ವಿಕಾಸ ಬ್ಯಾಂಕ್ ಶಾಖೆ ಆರಂಭ

ಕುಕನೂರ ಪಟ್ಟಣದ ಐಬಿಯಲ್ಲಿ ರವಿವಾರ ದಿವಸ ವಿಕಾಸ ಬ್ಯಾಂಕಿನಿಂದ ಸುದ್ದಿಗೋಷ್ಠಿ ನಡೆಯಿತು.

ಕುಕನೂರ: ಬೆಳ್ಳಿ ಹಬ್ಬದ ಸಂಭ್ರಮದಲ್ಲಿರುವ ವಿಕಾಸ ಬ್ಯಾಂಕ್ ತನ್ನ 27 ವರ್ಷಗಳ ಸಹಕಾರಿ ಯಾತ್ರೆಯಲ್ಲಿರುವ ಪಟ್ಟಣದಲ್ಲಿ ತನ್ನ 18ನೇ ಶಾಖೆ ಆರಂಭಿಸುತ್ತಿದೆ ಎಂದು ಅಧ್ಯಕ್ಷ ವಿಶ್ವನಾಥ ಹಿರೇಮಠ ಹೇಳಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿ ನಡೆಸಿ ಭಾನು ವಾರ ಮಾತನಾಡಿದರು. ಬ್ಯಾಂಕ್ ಅನೇಕ ವಿನೂತನ ವಿಚಾರ– ಚಿಂತನೆಗಳಿಗೆ ಮುನ್ನು ಡಿ ಬರೆದಿದೆ. ಕಳೆದ 1979ರಲ್ಲಿ ವಿಕಾಸ ಯುವಕ ಮಂಡಲ ಎಂಬ ಸಮಾಜಮುಖಿ ಸಂಘಟನೆಯ ಮೂಲಕ ಪ್ರಾರಂಭವಾದ ನಮ್ಮ ಸಾಮಾಜಿಕ ಕಾರ್ಯ ಮುಂದೆ 1997 ರಲ್ಲಿ ವಿಕಾಸ ಕೋ ಆಪರೇಟಿವ್ ಬ್ಯಾಂಕ್ ಸ್ಥಾಪನೆಗೆ ಕಾರಣವಾಯಿತು. ಮೊದಲ ದಿನದಿಂದಲೇ ಸಂಪೂರ್ಣ ಗಣಕೃತ ಹಾಗೂ ಅವಾನಿಯಂತ್ರಕ ಬ್ಯಾಂಕ್ ಆಗಿ ಕಾರ್ಯ ಪ್ರಾರಂಭಿಸಿದೆ. ಮುಂದೆ ಅಂದಿನ ಮಾರು ಕಟ್ಟೆಯ ಅವಶ್ಯಕತೆಗೆ ತಕ್ಕಂತೆ ವರ್ಷದ 365 ದಿನವೂ ರಜೆ ರಗಿತವಾಗಿ ಸೇವೆ ನೀಡಿದೆ. ಬೆಳಗ್ಗೆ 8 ಗಂಟೆಯಿಂದ ರಾತ್ರಿ 8ರ ವರೆಗೆ ಗ್ರಾಹಕರಿಗೆ ನಿರಂತರ ಸೇವೆ ಸೌಲಭ್ಯ ಪ್ರಾರಂ ಭಿಸಿತು ಎಂದು ಮಾಹಿತಿ ನೀಡಿದರು. ವಿಕಾಸ ಬ್ಯಾಂಕ್ ವರ್ಷದ ಎಲ್ಲ ದಿನಗಳಲ್ಲೂ ರಜೆ ರಹಿತ ಬ್ಯಾಂಕ್ ಸೇವೆ ನೀಡುವ ದೇಶದ ಏಕೈಕ ಬ್ಯಾಂಕ್ ಎನ್ನುವುದಾಗಿದೆ. ರಜಾ ದಿನ ಗಳಲ್ಲಿ ಲಾಕರ್ ಸೌಲಭ್ಯ, ಸಾಲ ಸೌಲಭ್ಯ ಸೇರಿದಂತೆ ಎಲ್ಲ ಬ್ಯಾಂಕ್ ಸೇವೆ ಲಭ್ಯವಿ ರಲಿವೆ. ತಂತ್ರಜ್ಞಾನದ ಬಳಕೆಯಲ್ಲೂ ಕೂಡ ಸದಾ ಮುಂಚೂಣಿಯಲ್ಲಿರುವ ವಿಕಾಸ ಬ್ಯಾಂಕ್ ಇತರೆ ಮುಖ್ಯ ವಾಹಿನಿ ಬ್ಯಾಂಕ್ ಗೆ ಕಡಿಮೆ ಇಲ್ಲದಂತೆ ಬ್ಯಾಂಕ್ ಸೌಲಭ್ಯ ಒದಗಿ ಸುತ್ತೇವೆ ಎಂದು ತಿಳಿಸಿದರು. ವ್ಯವಸ್ಥಾಪಕ ನಿರ್ದೇಶಕ ಪ್ರಸನ್ನ ಹಿರೇಮಠ, ಎಂ. ವೆಂಕಟೇಶ, ರಮೇಶ ಪುರೋಹಿತ ಇದ್ದರು.

ಎಸಿ ವರ್ಗಾವಣೆ ಹಿಂಪಡೆಯಲು ಒತ್ತಾಯ

ಮಸ್ಕಿ: ಅವಧಿಗೂ ಪೂರ್ವ ಹಠಾತ್ತನೆ ವರ್ಗಾವಣೆ ಮಾಡಿಲಾದ ರಾಯಚೂರು ಕೆಎಎಸ್ ಅಧಿಕಾರಿ ಮಹಿ ಬೂಬಿ ಅವರ ವರ್ಗಾವಣೆಯನ್ನು ಹಿಂಪಡೆಯಬೇಕೆಂ ದು ಒತ್ತಾಯಿಸಿ ಇಲ್ಲಿನ ವಿವಿಧ ಪ್ರಗತಿಪರ ಸಂಘಟನೆಗಳ ಒಕ್ಕೂಟ ತಹಸೀಲ್ದಾರರ ಮಲ್ಲಪ್ಪ ಯರಗೋಳ ಮುಖಾಂತರ ಸಿಎಂಗೆ ಮನವಿ ಸಲ್ಲಿಸಿದರು.

ಪಟ್ಟಣದ ಹಳೇಬಸ್ ನಿಲ್ದಾಣದಲ್ಲಿ ಜಮಾವಣೆಗೊಂಡ ವಿವಿಧ ಪ್ರಗತಿಪರ ಸಂಘಟನೆಗಳ ಮುಖಂಡರು ಕೆಲಕಾಲ ರಸ್ತೆಸಂಚಾರ ತಡೆದು ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನೆ ಮಾಡಿದರು. ಈ ವೇಳೆ ವಿವಿಧ ಪ್ರಗತಿಪರ ಸಂಘಟನೆಗಳ ಅಧ್ಯಕ್ಷ ಮಾರುತಿ ಜಿನ್ನಾಪೂರ ಮಾತನಾಡಿ ಕಳೆದ 9 ತಿಂಗಳ ಹಿಂದೆ ರಾಯಚೂರಿಗೆ ವರ್ಗಾವಣೆಯಾಗಿ ಬಂದ ಕೆಎಎಸ್ ಅಧಿಕಾರಿ ಮಹಿಬೂಬಿ ಅವರನ್ನು ಅವಧಿ ಪೂರ್ವವಾಗಿ ಹಠಾತ್ತನೆ ವರ್ಗಾವಣೆ ಮಾಡಿದ ಸರಕಾರದ ಕ್ರಮವನ್ನು ತೀವ್ರವಾಗಿ ಖಂಡಿಸುತ್ತೇನೆ. ಈ ಅಧಿಕಾರಿಯ ವರ್ಗಾವಣೆಗೆ ಯಾವುದೇ ಸಾರ್ವಜನಿಕರ, ಸಂಘಟನೆಗಳ, ಸಮುದಾಯಗಳ ಒತ್ತಾಯ ಇರುವುದಿಲ್ಲ. ಅಲ್ಲದೇ ಆಡಳಿತ ಹಾಗೂ ಸಾರ್ವಜನಿಕ ಸೇವೆಗೆ ಸಂಬಂಧಿಸಿದ ಯಾವುದೇ ಆರೋಪಗಳು ಕೇಳಿಬಂದಿಲ್ಲ. ಕೇವಲ 8–9 ತಿಂಗಳಲ್ಲಿ ಅತ್ಯಂತ ಕರ್ತವ್ಯ ಪ್ರಜ್ಞೆ ಮೆರೆದು, ದಕ್ಷ ಅಧಿಕಾರಿ ಎಂದು ಜನಸಾಮಾನ್ಯರ ನಡುವೆ ಹೆಸರು ಮಾಡಿದ್ದಾರೆ. ಅತ್ಯಂತ ಹಿಂದುಳಿದ ತಾಲೂಕು ಎಂದು ಕರೆಸಿಕೊಂಡ ದೇವದುರ್ಗ ತಾಲೂಕಿನವರಾದ ಕಡುಬಡತನದ ನಡುವೆ ಕೆಎಎಸ್

ಮುಖಂಡರು ವರ್ಗಾವಣೆಯನ್ನು ಹಿಂಪಡೆಯಬೇಕೆಂದು ರಸ್ತೆತಡೆ ನಡೆಸಿ, ತಹಸೀಲ್ದಾರ ಮಲ್ಲಪ್ಪ ಯರಗೋಳರಿಗೆ ಮನವಿ ಸಲ್ಲಿಸಿದರು.

ತೇರ್ಗಡೆ ಹೊಂದಿ ಅನೇಕ ಭೂ ಪ್ರಕರಣಗಳನ್ನು ತ್ವರಿತಗತಿಯಲ್ಲಿ ಇತ್ಯರ್ಥ ಮಾಡಿದ ದಕ್ಷ ಅಧಿಕಾರಿಯನ್ನು ಈ ಜಿಲ್ಲೆಯಿಂದ ತತಕ್ಷಣ ವರ್ಗಾವಣೆ ಮಾಡುವುದು ಎಷ್ಟು ಸರಿ? ಸರಕಾರಕ್ಕೆ ವಿವೇಚನೆ ಬೇಡವೇ? ಎಂದು ಆಕ್ರೋಷ ಹೊರಹಾಕಿದರು.

ಇದೇ ಸಂದರ್ಭದಲ್ಲಿ ವಿವಿಧ ಪ್ರಗತಿಪರ ಮುಖಂಡರಾದ ಸಂತೋಷ ಹಿರೇದಿನ್ನಿ, ಬಸವರಾಜ ಕೊಠಾರಿ, ಮಲ್ಲಪ್ಪ ಗೋನಾಳ, ವೆಂಕಟೇಶ ಚಿಲ್ಕಾರಾಗಿ, ಹುಲಗಪ್ಪ ಹಸಮಕಲ್, ಅಮರೇಶ ಹಿರೇದಿನ್ನಿ, ಕಿರಣ ಮುರಾರಿ, ಮಹಿಬೂಬ್ ಕುಷ್ಟಗಿ, ಚಂದಾಸಾಬ್, ಅಮರೇಶ ಪಾಮಕಕಲ್ಲೂರು, ಮಾಳಪ್ಪ ಹೂವಿನಭಾವಿ, ಮೌಲಪ್ಪ ಪಾಮನಕಲ್ಲೂರು, ಆದಯ್ಯ ಸ್ವಾಮಿ, ರಾಮಣ್ಣ ನಾಯಕ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಸಾಮಾನ್ಯ ಜನರಿಗೆ ಬಲ ತುಂಬುವ ಪ್ರಜಾತಂತ್ರ

ರಾಯಚೂರು: ಪ್ರಜಾಪ್ರಭುತ್ವವು ಜನಸಾಮಾನ್ಯರಿಗೆ ಬಲ ತುಂಬುವ ವ್ಯವಸ್ಥೆಯಾಗಿದೆ. ಸಾರ್ವಜನಿಕರಿಗೆ ಪ್ರಜಾಪ್ರಭುತ್ವ ಬಗ್ಗೆ ಜಾಗೃತ ಮೂಡಿಸುವ ಸಲುವಾಗಿ ಈ ಮಾನವ ಸರಪಳಿ ಕಾರ್ಯಕ್ರಮ ಜರುಗಿದ್ದು, ಡಾ.ಬಿ.ಆರ್.ಅಂಬೇಡ್ಕರ್ ನೀಡಿದ ಸಂವಿಧಾನದ ಆಶಯದಂತೆ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವ ಸಂಕಲ್ಪ ಮಾಡಬೇಕು ಎಂದು ದೇವದುರ್ಗ ಕ್ಷೇತ್ರದ ಶಾಸಕರಾದ ಕರಿಯಮ್ಮ ಜಿ.ನಾಯಕ ಅವರು ಹೇಳಿದರು.

ಅವರು ಜಿಲ್ಲೆಯ ದೇವದುರ್ಗ ತಾಲೂಕಿನ ಗೂಗಲ್ ಗ್ರಾಮದ ಅಲ್ಲಮಪ್ರಭು ದೇವಸ್ಥಾನದ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆ ಹಾಗೂ ಗ್ರಾಮೀಣಾಭಿ ವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವದ ದಿನಾಚರಣೆ ಅಂಗವಾಗಿ ಮಾನವ ಸರಪಳಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಮಾತನಾಡಿದರು.

ದೇಶಕ್ಕೆ ಅರ್ಥಪೂರ್ಣವಾದ ಸಂವಿಧಾನವನ್ನು ಡಾ.ಬಿ.ಆರ್.ಅಂಬೇಡ್ಕರ್ ನೀಡಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆ ಗಟ್ಟಿಗೊಳಿಸಿ, ಇದರ ಆಶೆ ಪೂರೈಸುವ ನಿಟ್ಟಿನಲ್ಲಿ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಆಚರಿಸಲಾಗುತ್ತಿದೆ. ಕರ್ನಾಟಕ ರಾಜ್ಯದಲ್ಲಿ 2500ಕಿ. ಮೀ ವರೆಗೆ ಮಾನವ ಸರಪಳಿ ಮಾಡಿ, ಪ್ರಜಾಪ್ರಭುತ್ವದ ವ್ಯವಸ್ಥೆ ಗಟ್ಟಿಗೊಳಿಸಲು ಅದರ ತತ್ವ, ವಿಚಾರಗಳನ್ನು ಜನತೆಗೆ ಮುಟ್ಟಿಸುವ ಕಾರ್ಯ ಮಾಡಿದೆ ಎಂದರು.

ಈ ವೇಳೆ ಜಿಲ್ಲಾಧಿಕಾರಿ ನಿತೀಶ್ ಕೆ., ಅವರು ಮಾತನಾಡಿ, ಪ್ರಜಾಪ್ರಭುತ್ವದ ಮೌಲ್ಯಗಳಾದ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವವನ್ನು ಸಾರುವ ಉದ್ದೇಶದಿಂದ ರಾಜ್ಯಾದ್ಯಂತ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಸಂವಿಧಾನದ ಹಕ್ಕುಗಳನ್ನು ಎಲ್ಲರಿಗೂ ದೊರಕಬೇಕು. ವಿಶ್ವದಲ್ಲೇ ವಿಶಿಷ್ಟ ಸಂವಿಧಾನವನ್ನು ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ನಮಗೆ ನೀಡಿದ್ದಾರೆ.

ಇದೇ ಸಂದರ್ಭದಲ್ಲಿ ದೇವದುರ್ಗ ಎ.ಪಿ.ಎಮ್.ಸಿ ಅಧ್ಯಕ್ಷರಾದ ಆದನಗೌಡ ಬುಂಕಲದೊಡ್ಡಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ತುಕರಾಮ್ ಪಾಂಡ್ವೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಮ್ .ಪುಟ್ಟಮಾದಯ್ಯ, ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ, ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ಡಾ.ಟಿ.ರೋಣ, ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಮಹಿಬೂಬ್ ಜಿಲಾನಿ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಚಿದಾನಂದ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು, ದೇವದುರ್ಗ ತಹಸೀಲ್ದಾರ್ ಚನ್ನಮಲ್ಲಪ್ಪ ಘಂಟಿ, ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರಾದ ರಾಜೇಂದ್ರ ಜಲ್ದಾರ್, ದೇವದುರ್ಗ ಕ್ಷೇತ್ರ ಶಿಕ್ಷಣಾಧಿಕಾರಿ ಸುಖದೇವ, ಕಾರ್ಮಿಕ ಇಲಾಖೆ ಅಧಿಕಾರಿ ಭಾರತಿ, ಸಿಡಾಕ್ ಜಂಟಿ ನಿರ್ದೇಶಕರಾದ ಜಿ.ಯು.ಹುಡೇದ್ ಸೇರಿದಂತೆ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಶಾಲಾ ಕಾಲೇಜ್ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವದ ದಿನಾಚರಣೆ ಅಂಗವಾಗಿ ಮಾನವ ಸರಪಳಿ ಕಾರ್ಯಕ್ರಮ ಆಚರಿಸಲಾಯಿತು.

109ಕಿ.ಮೀ ಉದ್ದದ ಮಾನವ ಸರಪಳಿ

ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಬೀದರನಿಂದ ಚಾಮರಾಜನಗರದವರೆಗೆ ರಾಜ್ಯದ 31ಜಿಲ್ಲೆಗಳನ್ನು ಒಳಗೊಂಡಿರುವ ಅತಿ ಉದ್ದದ ಮಾನವ ಸರಪಳಿಯನ್ನು ಜಿಲ್ಲೆಯ ದೇವದುರ್ಗ ತಾಲೂಕಿನ ಗೂಗಲ್ ನಿಂದ ಕೊಪ್ಪರ, ಗುಂಡುಗುರ್ತಿ, ದೇವದುರ್ಗ, ಕರಿಗುಡ್ಡ, ಅಮರಾಪೂರ ಕ್ರಾಸ್, ಜಾಲಹಳ್ಳಿ, ಚಿಂಚೋಡಿ, ಬುಂಕಲದೊಡ್ಡಿ, ತಿಂಥಣಿ ಬ್ರಿಡ್ಜ್ ನಿಂದ ಲಿಂಗಸೂಗೂರು ತಾಲೂಕಿನ ಗುರುಗುಂಟಾ, ಲಿಂಗಸೂಗೂರು, ಈಚನಾಳ ತಾಂಡಾ, ಈಚನನಾಳ, ಸುಂಕನಾಳ ಮೂಲಕ ರೋಡಲಬಂಡಾದವರೆಗೂ ಜಾಗೃತಿ ಜಾಥವನ್ನು ಹಮ್ಮಿಕೊಳ್ಳಲಾಗಿದೆ.

ಲಿಂಗಸೂಗೂರು ಪಟ್ಟಣದ ವಾರ್ಡ್ ನಂಬರ್ 11 ರಲ್ಲಿ ಶ್ರೀ ಪಾಲಕಮ್ಮ ದೇವಿ ಗಜಾನನ ಮಂಡಳಿ ಪಿಂಚಿನಪೂರ್ ವತಿಯಿಂದ 5 ನೇ ವರ್ಷದ ಗಣೇಶ ಪ್ರತಿಷ್ಠಾಪನೆ ಮಾಡಿ ಯಶಸ್ವಿಗೊಳಿಸಿದ . ಸಾಗರ್ ಸಿಂಗ್, ಕೇಶವ್, ಪ್ರೀತಮ್, ಸುಭಾಸಿಂಗ್, ಮನೋಜ್ ರೆಡ್ಡಿ, ಸಂದೀಪ್,ಯುವಕರಿಗೆ ಸಮಿತಿ ವತಿಯಿಂದ ಸನ್ಮಾನಿಸಲಾಯಿತು.

ಶಿಕ್ಷಕರಿಗೆ ಬೀಳ್ಕೊಡುಗೆ ಸಮಾರಂಭ

ಮಾನ್ವಿ: ಸರಕಾರಿ ಪ್ರೌಢ ಶಾಲೆ ಮದ್ಲಾಪುರಿನಲ್ಲಿ ಶಿಕ್ಷಕರ ವರ್ಗಾವಣೆಯಾದ ದೈಹಿಕ ಶಿಕ್ಷಣ ಶಿಕ್ಷಕ ಮೌನೇಶ್ ಪೋತ್ನಾಳ್ ಮತ್ತು ಆಂಗ್ಲ ಶಿಕ್ಷಕಿ ಲಕ್ಷ್ಮಮ್ಮ ಅವರಿಗೆ ಶಾಲೆಯವತಿಂದ ಬೀಳ್ಕೊಡುಗೆ ಸಮಾರಂಭ ಮಾಡಿ ಸನ್ಮಾನಿಸಿ ಗುಣಗಾನ ಮಾಡಿ ಗೌರವದ ಆತಿಥ್ಯ ಮಾಡಲಾಯಿತು.

ವಂದೇ ಮಾತರಂ ಸಂಘದ ಅಧ್ಯಕ್ಷ ಮಹಿಬೂಬ್ ಮದ್ಲಾಪುರ ಮಾತನಾಡಿ,ಮೌನೇಶ್ ಪೋತ್ನಾಳ್ ಅವರ ದೇಶಭಕ್ತಿ, ಕ್ರಿಯಾಶೀಲತೆ ಎರೋಬಿಕ್ಸ್, ಯೋಗ, ರಾಷ್ಟ್ರಧ್ವಜ ಕಟ್ಟುವ ತರಬೇತಿ, ಬಾಂಡ್ ವಾದನ, ತಮಟೆ ಕಲೆ, ನಾಟಕ ಶೈಲಿ, ಸಕಲಕ ಲಾವಭರಾಗಿ ಪ್ರತಿಭೆಯೊಂದಿದ್ದು ಎರಡು ಬಾರಿ ಅಪಘಾತವಾದರೂ ಎದೆಗುಂದದೆ ಪ್ರಾಮಾಣಿಕ ಸೇವೆ ಮಾಡಿ ಕರ್ತವ್ಯ ಮೆರೆದ ಗುರುಗಳಾ ವೈಖರಿ ಮೆರೆದ ವ್ಯಕ್ತತ್ವ. ಹಾಗೇಯೇ ಲಕ್ಷ್ಮಮ್ಮ ಮೇಡಂ ಅವರು ನಮ್ಮೂರಿನ ಆಂಗ್ಲಮಾ ಧ್ಯಮದ ಸಮಸ್ಯೆ ನೀಗಿಸುತ್ತಾ ಹಲವಾರ ಸಂಘ ಸಂಸ್ಥೆಗಳಲ್ಲಿ ತೊಡಗಿದವರಾಗಿದ್ದರು, ಗ್ರಾಮೀಣ ಪ್ರೌಢ ಮಕ್ಕಳಿಗೆ ಆಂಗ್ಲ ಭಾಷೆ ಒಂದು ಕಂಟಕ ಅದನ್ನು ಪ್ರೀತಿಯಿಂದ ಮಕ್ಕಳಿಗೆ ಪಾಠ ಮಾಡಿ,ಕಲಿಸಿ ಮಕ್ಕಳಿಗೆ ಆಂಗ್ಲ ನಾಟಕ, ವಿಶೇಷ ಇಂಗ್ಲೀಷ್ ಕೊಠಡಿ ರೂಪಿಸಿ ತಮ್ಮದೇಯಾದ ಛಾಪು ಮೂಡಿಸಿದ್ದಾರೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಈ ಸಂಧರ್ಭದಲ್ಲಿ ಮುಖ್ಯ ಗುರುಗಳಾದ ಯುನೂಸ್ ಬಾಬು, ನಿವೃತ್ತ ಮುಖ್ಯ ಗುರುಗಳು ಯೂಸೂಫ್, ಸಂಧೀಪ್, ಶ್ರೀಕಾಂತ್, ಕೃಷ್ಣಪ್ಪ, ಸುಭಾಷ್, ಮೇಘನಾ, ಎಸ್.ಡಿ.ಎಂ.ಸಿ ಅಧ್ಯಕ್ಷ ಚನ್ನಯ್ಯ ಸ್ವಾಮಿ ಮತ್ತು ಸದಸ್ಯರು ಇನ್ನಿತರ ಶಿಕ್ಷಕರು ಮತ್ತು ಮಕ್ಕಳ ಇದ್ದರು.

ಬೊಗಳುವ ಜನರಿಗೆ ಉತ್ತರಿಸುವ ಅಗತ್ಯ ಇಲ್ಲ

ಕೊಪ್ಪಳ: ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಮಾತಿಗೆ ಯಾರೂ ಬೆಲೆ ಕೊಡುವ ಅಗತ್ಯವಿಲ್ಲ. ಬಿಜೆಪಿಗರು ಕೆಲವರನ್ನು ನಾಯಿಯಂತೆ ಬೊಗುಳುವುದಕ್ಕೆ ಇಟ್ಟುಕೊಂಡಿದ್ದಾರೆ. ಅದಕ್ಕೆ ಏನೂ ಮಾಡಲು

ಆಗುವುದಿಲ್ಲ ಎಂದು ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಟೀಕಿಸಿದರು. ನಗರ ದಲ್ಲಿ ಅಬಕಾರಿ ಸಚಿವ ಆರ್. ಬಿ. ತಿಮ್ಮಾ ಪುರ ಅವರು, ನಮ್ಮ ಮನೆಯಲ್ಲಿ ಚಾಕು ಇರೋದು ಈರಳ್ಳಿ ಕುಯ್ಯಲು ಅಲ್ಲ ಎಂಬ ಶಾಸಕ ಬಸನಗೌಡ ಪಾಟೀಲಗ್ ಯತ್ನಾಳ ಹೇಳಿಕೆ ಪ್ರತಿಕ್ರಿಯಿಸಿದರು. ಕೆಲವರು ಆಡುವ ಮಾತಿಗೆ ಬೆಲೆ ಇಲ್ಲ ಎಂದು ಪರೋಕ್ಷವಾಗಿ ಟೀಕಿಸಿದರು. ಸಿಎಂ ಹುದ್ದೆ ಉದ್ಭವ ಆಗುವುದಲ್ಲ. ಅದು ಸಿಎಲ್ ಪಿ ಸಭೆಯಲ್ಲಿ ನಿರ್ಧಾರವಾಗು ತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಗುಡಿಸಲಿನಲ್ಲಿ ಇದ್ದವನಿಗೂ ಸಿಎಂ ಆಗುವ ಅವಕಾಶ ಇದೆ. ಸಿಎಂ ಆಗೋ ಯೋಗ್ಯತೆ ಎಲ್ಲರಿಗೂ ಇದೆ. ಆದರೆ, ಕುರ್ಚಿ ಖಾಲಿ ಇಲ್ಲ. ರಾಹುಲ್ ಗಾಂಧಿ ಹೇಳಿಕೆ ತಿರುಚಲು ಒಂದು ವರ್ಗವೇ ಇದೆ. ಕಾನೂನು ಎಲ್ಲರಿಗೂ ಒಂದೇ. ಅದು ಮುನಿರತ್ನಗೂ ಒಂದೇ. ಸಿಎಂಗೂ ಒಂದೇ ಎಂದರು. ಪ್ರೀಮಿಯಂ ಬ್ರ್ಯಾಂಡ್ ಮದ್ಯದ ಮೇಲಿನ ದರ ಕಡಿಮೆ ಮಾಡಿದ್ದೇವೆ. ಬಿಯರ್ ಮೇಲೆ ಸ್ವಲ್ಪ ಹೆಚ್ಚು ಮಾಡಿದ್ದೇವೆ. ಇಡೀ ದೇಶದಲ್ಲಿ ನಮ್ಮ ರಾಜ್ಯದಲ್ಲಿ ಚೀಪ್ ಲಿಕ್ಕರ್ ಕಡಿಮೆಯಿದೆ. ಮದ್ಯ ಮಾರಾಟಕ್ಕೆ ಟಾರ್ಗೆಟ್ ರೀಚ್ ಆಗಿಲ್ಲ ಎಂದು ಯಾವುದೇ ಅಂಗಡಿ ಬಂದ್ ಮಾಡಿಲ್ಲ ಎಂದರು.

ಡಿಸಿಗೆ ಕ್ಷೇತ್ರಾಭಿವೃದ್ಧಿ ಪ್ರಸ್ತಾವನೆ ಸಲ್ಲಿಕೆ

ಮಸ್ಕಿ: ರಾಯಚೂರಿನ ಜಿಲ್ಲಾಧಿಕಾರಿ ಅವರಿಗೆ ಶಾಸಕ ಹಾಗೂ ಖಾದಿ ಮತ್ತು ಗ್ರಾಮೋದ್ಯೋಗ ನಿಗಮ ಮಂಡಳಿ ಅಧ್ಯಕ್ಷ ಆರ್.ಬಸನಗೌಡ ತುರವಿಹಾಳ ಅವರು ಶನಿವಾರ ಬೇಟಿ ಆಗಿ ಕ್ಷೇತ್ರದ ಅಭಿವೃದ್ಧಿ ಕುರಿತು ಸುದೀರ್ಘವಾಗಿ ಚರ್ಚಿಸಿದರು.

ಜಿಲ್ಲೆಯ ಜಿಲ್ಲಾಧಿಕಾರಿ ಕಚೇರಿಗೆ ಶನಿವಾರ ಬೇಟಿ ನೀಡಿ ಕ್ಷೇತ್ರದ ಜನರ ಹಿತ ದೃಷ್ಟಿಯಿಂದ ವಿವಿಧ ಕಾಮಗಾರಿಗಳ ವಿಷಯದ ಪ್ರಸ್ತಾವನೆ ಮಾಡಿದರು. ಇಂದಿರಾ ಕ್ಯಾಂಟೀನ್ ಪ್ರಾರಂಭಿಸುವು ದು, ತಹಸೀಲ್ದಾರ್ ಕಚೇರಿ ಹೊರ ಗುತ್ತಿಗೆ ಸಿಬ್ಬಂದಿ ತೆಗೆದಕೊಳ್ಳುವುದು. ಪಾಮನಕೆ ಲ್ಲೂರಿನಲ್ಲಿ 110ಕೆಬಿ ಹಾಲಾಪುರ ಗ್ರಾಮ ದಲ್ಲಿ 112ಕೆಬಿ ಜೆಸ್ಕಾಂ ಉಪ ವಿಭಾಗ ಕಚೇರಿ ಪ್ರಾರಂಭಿಸುವುದು. ಬಳಗಾನೂರ ಪಟ್ಟಣದಲ್ಲಿ ರೈತ ಸಂಪರ್ಕ ಕೇಂದ್ರ, ನಾಡ ಕಚೇರಿ, ಪೊಲೀಸ್ ಕ್ವಾಟ್ರಾಸ್ ಸಿಎ ಸೈಟ್, ಮಸ್ಕಿ ತಾಲೂಕ ಕ್ರೀಡಾಂಗಣ, ಬಳಗಾನೂರು ಪಿಯು ಕಾಲೇಜು ಕಟ್ಟಡ ಸಂತೆಕಲ್ಲೂರ ಮತ್ತು ಮೆದಿಕಿನಾಳ ಗ್ರಾಮದಲ್ಲಿ ನಾಡಕಚೇರಿ ರಚಿಸುವ ಪ್ರಸ್ತಾವನೆ. ಹಾಲಾಪುರ ನಾಡ ಕಚೇರಿಗೆ ಸ್ಥಳ ನಿಯೋಜನೆ ಮಾಡಿಸುವುದು. ಮಸ್ಕಿ ತಾಲೂಕು ಕೇಂದ್ರವಾಗಿದ್ದರು ಇದುವರೆಗೂ ಸಮುದಾಯ ಆರೋಗ್ಯ ಕೇಂದ್ರ ಇಲ್ಲದೆ ಇರುವುದು ಸಾರ್ವಜನಿಕರಿಗೆ ತೊಂದರೆಯಾಗಿದ್ದು ಇದಕ್ಕೆ ಕಾರಣ ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಪ್ರಾಥಮಿಕ ಆರೋಗ್ಯ ಕೇಂದ್ರದ ಜಾಗದ ತಕರಾರು ಇತ್ಯಾರ್ಥ ಪಡಿಸುವ ಸೇರಿದಂತೆ ಕೆಲ ವಿಷಯಗಳ ಕುರಿತು ಚರ್ಚೆ ನಡೆಸಿದರು. ಈ ಸಂದರ್ಭದಲ್ಲಿ ಮುಖಂಡ ಅಪ್ಪಾಜಿಗೌಡ ಕಾರ್ಲಕುಂಟಿ, ಅಭಿಜೀತ ಪಾಟೀಲ ಸೇರಿದಂತೆ ಇನ್ನಿತರಿದ್ದರು.

ಮಸ್ಕಿಯ ಶಾಸಕ ಆರ್.ಬಸನಗೌಡ ತುರವಿಹಾಳ ಅವರು ಜಿಲ್ಲಾಧಿಕಾರಿ ನಿತೀಶ ಅವರನ್ನು ಭೇಟಿಯಾಗಿ ಮಸ್ಕಿ ಕ್ಷೇತ್ರದ ಅಭಿವೃದ್ಧಿ ಕುರಿತು ಚರ್ಚಿಸುತ್ತಿರುವುದು

2 ಸಾಲಿನ ಸಾಹಿತ್ಯ ಜೀವನಕ್ಕೆ ಪಾಠ

ಮಾನ್ವಿ : ಸಾಹಿತ್ಯದ ಆರಂಭಿಕ ಹಂತವಾಗಿ ಈ ದ್ವಿಪದಿಗಳು ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತವೆ ಎರಡೇ ಎರಡು ಸಾಲಿನಲ್ಲಿ ಮೂಡಿಬರುವ ಈ ಸಾಲುಗಳು ಮನುಷ್ಯನ ಜೀವನಕ್ಕೆ ದೊಡ್ಡ ಪಾಠವನ್ನು ಕಲಿಸುತ್ತವೆ ಈ ದ್ವಿಪದಿಗಳಿಂದ ರಾಮಾಯಣ, ಕಬೀರ ಸಾಹಿತ್ಯ ಕೂಡ ಮೂಡಿ ಬಂದಿದೆ ಎಂದು ಜಿಲ್ಲೆಯ ಹಿರಿಯ ಸಾಹಿತಿ ವೀರಹನುಮಾನ್ ಹೇಳಿದರು. ಪಟ್ಟಣದ ನಮ್ಮ ಮಾನವಿ ಪದವಿ ಪೂರ್ವ ಕಾಲೇಜಿನಲ್ಲಿ ತಾಲೂಕ ಕನ್ನಡ ಸಾಹಿತ್ಯ ಪರಿಷತ್ತ, ಬನಶಂಕರಿ ಪ್ರಕಾಶನ, ನಮ್ಮ ಮಾನವಿ ಪದವಿ ಪೂರ್ವ ಕಾಲೇಜು ಸಂಯುಕ್ತಾಶ್ರದಯಲ್ಲಿ ಸಾಹಿತಿ ರಮೇಶ ಬಾಬು ಯಾಳಗಿಯವ ಅರಿವಿನ ಗುರು ಕೃತಿಯನ್ನು ಲೋಕಾರ್ಪಣೆ ಮಾಡಿ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಮಾತಾನಾಡಿದರು. ರಮೇಶ ಬಾಬು ಯಾಳಗಿಯವರ ಸರಳ ಸ್ವಾಭಾವಿಕ ಜೀವನದ ಕುರಿತು ಕೊಂಡಾಡಿದರು, ಈ ಪ್ರಕೃಗೆ ದೊಡ್ಡ ರೋಗಿಯಾಗಿದ್ದಾನೆ ಉಳಿದ ಜೀವಿ ಜಂತುಗಳು ತಮ್ಮ ತಮ್ಮ ಕೆಲಸವನ್ನು ಬಹಳ ಅಚ್ಚುಕಟ್ಟಾಗಿ ಮಾಡುತ್ತವೆ ಆದರೆ ಮನುಷ್ಯ ಮಾತ್ರ ಅದಕ್ಕೆ ತದ್ವಿರುದ್ಧವಾಗಿ ನಡೆದುಕೊಂಡು ಪ್ರಕೃತಿ ವಿನಾಶಕ್ಕೆ ಮುಂದಾಗುತ್ತಾನೆ. ಎಚ್ ಶರ್ಫುದ್ದೀನ್, ರವಿಕುಮಾರ ಪಾಟೀಲ್, ಎಚ್ ಮೌನೇಶಗೌಡ,ಎಸ್ ಎಸ್ ಪಾಟೀಲ ಮಾತಾನಾಡಿದರು, ಪರಮಪೂಜ್ಯ ಶ್ರೀ ಮ,ಘ,ಚ ಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಆಶೀರ್ವಾಚನ ನೀಡಿದರು ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಗಣ್ಯರು ಇದ್ದರು.

ನಾ ಕಂಡಂತೆ ಸರ್ ಎಂ.ವಿ

ಇಂದು ಎಂಜಿನಿಯರ್ಸ್ ಡೇ

ವಿಶ್ವವಾಣಿ
ವಿಶ್ವಾಸವೇ ವಿಶ್ವ
16.09.2024 ಸೋಮವಾರ
vishwavani.news

ಸೆ.15ರ ಇಂಜಿನಿಯರ್‌ಗಳ ದಿನದಂದು ಭಾರತ ರತ್ನ ಸರ್.ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ ನೂರಾರು ಓದುಗರು ಹಂಚಿಕೊಂಡ ಅನಿಸಿಕೆಗಳಲ್ಲಿ ಕೆಲವೊಂದು ಇಲ್ಲಿವೆ. ಭಾಗವಹಿಸಿದ ಎಲ್ಲರಿಗೂ ಶುಭಾಶಯಗಳು.

ಪಿ.ಎಸ್.ಸತೀಶ್
ಬೆಂಗಳೂರು

ಒಬ್ಬ ವ್ಯಕ್ತಿ ಇಷ್ಟೆಲ್ಲ ಮಾಡಲು ಸಾಧ್ಯವೇ?

ಎಂಜಿನಿಯರಿಂಗ್ ಪದವಿ ಪಡೆಯುವುದು ಬೇರೆ ಹಾಗು ಒಳ್ಳೆಯ ಎಂಜಿನಿಯರ್ ಆಗುವುದು ಬೇರೆ. ಜೀವನ ಪೂರ್ತಿ ದುಡಿದರೂ ಎಂಜಿನಿಯರಿಂಗ್ ಕಲಿಕೆ ಮುಗಿಯಿತ್ತೆಂದು ಹೇಳಲಾಗುವುದಿಲ್ಲ. ವಿಶ್ವೇಶ್ವರಯ್ಯನವರು ಜೀವಮಾನ ಪೂರ್ತಿ ಶ್ರೇಷ್ಠ ಎಂಜನಿಯರಾಗಿ ಬದುಕಿ ನಮಗೆಲ್ಲ ಮೇಲ್ಪಂಕ್ತಿ ಆಗಿದ್ದಾರೆ. ಅವರು ತಮ್ಮ ಜೀವನದಲ್ಲಿ ಮಾಡಿದ ನೂರಾರು ಕೆಲಸವನ್ನು ನೋಡಿದಾಗ ಒಬ್ಬ ವ್ಯಕ್ತಿ ಇಷ್ಟೆಲ್ಲ ಮಾಡಲು ಸಾಧ್ಯವೇ ಎನಿಸುತ್ತದೆ.

ಸಿ.ಆರ್.ಚಂದ್ರಶೇಖರ
ಸಿವಿಲ್ ಎಂಜಿನಿಯರ್

ಮಕ್ಕಳಿಗೆ ಇವರ ಚರಿತ್ರೆ ಸ್ಫೂರ್ತಿದಾಯಕ

ನಮ್ಮ ನಾಡು ಎಂದೆಂದೂ ಮರೆಯಲಾಗದ ಪ್ರಾತಃಸ್ಮರಣೀಯರಾದ ಭಾರತ ರತ್ನ ಸರ್.ವಿ.ರವರು ನನ್ನ ಬದುಕಿಗೆ ಆದರ್ಶಪ್ರಾಯರು. ನಾನೂ ಒಬ್ಬ ಸಿವಿಲ್ ಎಂಜಿನಿಯರ್ ಎಂದು ಹೇಳಿಕೊಳ್ಳಲು ಹೆಮ್ಮೆ ಪಡುತ್ತೇನೆ. ಇವರ ಬದುಕು, ಸಾಧನೆಗಳೇ ನನಗೆ ಸ್ಪೂರ್ತಿ ಆಗಿದ್ದವು. ಪ್ರಸ್ತುತ ಸಾಮಾಜಿಕ ವ್ಯವಸ್ಥೆಯಲ್ಲಿ ಮಕ್ಕಳಿಗೆ ಸರ್.ಎಂ.ವಿ ರವರಂತಹವರ ಜೀವನ ಚರಿತ್ರೆಗಳು ಎಂದೆಂದೂ ಸ್ಪೂರ್ತಿದಾಯಕ.

ಶ್ರೀಶೈಲನ್ ಕೆ.
ನಿವೃತ್ತ ಬ್ಯಾಂಕ್ ಅಧಿಕಾರಿ

ಅರ್ಧ ಒಬ್ಬಟ್ಟು ತಿಂದಿದ್ದರು!

ಇನ್ನೊಂದು ಉದಾಹರಣೆ ಒಮ್ಮೆ ಡಿವಿಜಿಯವರು ಸರ್ ಎಂ.ವಿರನ್ನು ಊಟಕ್ಕೆ ಕರೆದಿದ್ದರಂತೆ. ಅವರಿಗೆ ಒಬ್ಬಟ್ಟು ತುಂಬಾ ಇಷ್ಟವೆಂದು ಒಬ್ಬಟ್ಟು ಅಡುಗೆ ಮಾಡಿಸಿದರಂತೆ. ಊಟಕ್ಕೆ ಕೂತವರು ಅರ್ಧ ಒಬ್ಬಟ್ಟು ಮಾತ್ರ ಹಾಕಿಸಿಕೊಂಡರಂತೆ ಅದಕ್ಕೆ ಡಿವಿಜಿಯವರು 'ನೀವು ಈ ರೀತಿ ತಿಂದರೆ ನಾ ಹೇಗೆ ತಿನ್ನುವುದು' ಎಂದು ಕೇಳಿದರಂತೆ. ನೀವು ಅಷ್ಟು ಕಮ್ಮಿ ತಿಂದರೆ ಹೇಗೆ ಎಂದು ಅದಕ್ಕೆ ಸರ್ ಎಂ.ವಿ, ನಾ ತಿನ್ನುವುದಿಷ್ಟೇ ನೀವು ಸರಿಯಾಗಿ ಮಾಡಿ ಎಂದರಂತೆ.



ಗೀತಾಂಜಲಿ ಎನ್. ಎಮ್
ಸೋಮವಾರಪೇಟೆ

ಜಗತ್ತನ್ನು ಸುಂದರಗೊಳಿಸುವ ವಿನ್ಯಾಸಕಾರರು

ಜಾಣ್ಮೆ, ಚಾಣಾಕ್ಷತೆ, ಕೌಶಲ್ಯ ಮತ್ತು ಸೃಜನಶೀಲತೆಯ ಸಂಗಮವೇ ಎಂಜಿನಿಯರ್‌ಗಳು. ನಾವೀನ್ಯತೆಯೊಂದಿಗೆ; ಕಲ್ಪನೆಗಳಿಗೆ ಚಿತ್ತಾಕರ್ಷಕಗೊಳಿಸುವಂತ ವಾಸ್ತವದ ರೂಪ ಕೊಡುವ ಚತುರರು ಹಾಗೂ ತಂತ್ರಜ್ಞಾನದ ಮೂಲಕ ಜಗತ್ತನ್ನೇ ಸಂಕುಚಿತಗೊಳಿಸಿ, ಕುಳಿತಲ್ಲೇ ವಿಶ್ವರೂಪ ದರ್ಶನ ಮಾಡಿಸುವ ಮಾಂತ್ರಿಕರು. ನವ ನವೀನ ವಿನ್ಯಾಸಗಳೊಂದಿಗೆ ಜಗತ್ತನ್ನು ಸುಂದರಗೊಳಿಸುವ ವಿನ್ಯಾಸಕಾರರು ನಮ್ಮ ಹೆಮ್ಮೆಯ ಎಂಜಿನಿಯರಗಳು!

ಜಿ.ಎಚ್. ಸಂಕಪ್ಪ
ಚನ್ನಗಿರಿ

ಕಷ್ಟವನ್ನು ಜಯಿಸಿ ಯುಗಶಿಲ್ಪಿಯಾದರು

ಬಡತನ, ಕುಟುಂಬ ಕಷ್ಟಗಳನ್ನೂ ಜಯಿಸಿ ಸಾಮಾಜ ಸೇವೆಯ ಎಲ್ಲ ಕ್ಷೇತ್ರಗಳಲ್ಲಿ ಶಾಶ್ವತ ಸಾಧನೆಗೈದ 'ತಾಂತ್ರಿಕ ಶಿಲ್ಪಿ' ಯಾದವರಿದ್ದರೆ ಅದು ಎಂ.ವಿಶ್ವೇಶ್ವರಯ್ಯನವರು ಮಾತ್ರ! ಕೃಷಿ ನೀರಾವರಿಗೆ ಅಣೆಕಟ್ಟು-ಸೇತುವೆ, ರಾಜ್ಯಕ್ಕೆ ಕಾರ್ಖಾನೆಗಳು, ಮೈಸೂರು ವಿಶ್ವವಿದ್ಯಾಲಯ, ತಾಂತ್ರಿಕ ವಿಶ್ವವಿದ್ಯಾಲಯ, ಕನ್ನಡ ಸಾಹಿತ್ಯ ಪರಿಷತ್ ರಚನೆ, ನೂರಾರು ಕೊಡುಗೆಗಳ ನಿರ್ಮಾತೃ. ದಿವಾನರಾಗಿ 'ಭಾರತರತ್ನ'ರಾದರು.

ಶರಣು. ಎಂ. ಬಿ
ಕಲಬುರಗಿ

ಬಡತನ ಮೆಟ್ಟಿ, ಕರ್ಮಯೋಗಿಯಾದರು

ನಮ್ಮ ನಾಡಿನ ಮಹತ್ವದ ಚಿಂತಕರು, ಪ್ರೇರಕ ಶಕ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಕಾರಣಕರ್ತರು ವಿಶ್ವೇಶ್ವರಯ್ಯನವರು ಶಿಸ್ತು ,ಶ್ರದ್ಧೆ, ಪ್ರಾಮಾಣಿಕತೆ, ಸಮಯ ಪ್ರಜ್ಞೆ ಎಂದರೇನೆ ವಿಶ್ವೇಶ್ವರಯ್ಯನವರು. ಬಡತನವನ್ನು ಮೆಟ್ಟಿನಿಂತು, ಕರ್ಮಯೋಗಿಯಂತೆ ಬಾಳಿದವರು. ಯಾವುದೇ ಕೆಲಸ ಕೀಳಲ್ಲ ನಿನ್ನ ಕೆಲಸ ಈ ರಸ್ತೆಯ ಈ ಭಾಗವನ್ನು ಗುಡಿಸುವುದಾಗಿದ್ದರೆ ಜಗತ್ತಿನ ಅತ್ಯಂತ ಸ್ವಚ್ಛ ರಸ್ತೆಯಾಗುವಂತೆ ಗುಡಿಸು ಎಂದು ಶ್ರದ್ಧೆಯ ಮಹತ್ವ ತಿಳಿಸಿದವರು.

ಅರವಿಂದ ಕುಲಕರ್ಣಿ
ನಿವೃತ್ತ ಪ್ರಾಚಾರ್ಯರು,
ಇನ್ಸ್ಟಿಟ್ಯೂಷನ್ ಆಫ್ ಎಂಜನಿಯರ್ಸ್

ಎಥಿಕಲ್ ಅಭಿಯಾಂತ್ರಿಕತೆ; ದೂರದೃಷ್ಟಿ

ಇಂದು ವಿಶ್ವೇಶ್ವರಯ್ಯ ಅಂಥಹ ವರನ್ನು ಯಾವದೇ ಸರ್ಕಾರಿ ಇಲಾಖೆ ಗಳಲ್ಲಿ ನೋಡಲು ಸಾಧ್ಯವಿಲ್ಲ ಅಂತ ನೆನಪಿಸಿಕೊಳ್ಳಬೇಕು. ಸಿಕ್ಕರೆ ಖಾಸಗಿ ಕ್ಷೇತ್ರದಲ್ಲಿ ಹುಡುಕಬೇಕು. ಅವರ **ethical** ಅಭಿಯಾಂತ್ರಿಕತೆ, ಬ್ಯಾಂಕು, ಸಾಹಿತ್ಯ ಪರಿಷತ್, ವಿಶ್ವವಿದ್ಯಾಲಯ ಮನರಂಜನೆ ಕ್ಲಬ್‌ಗಳು ಒಂದೇ ಎರಡೇ ಅವರ ದೂರದೃಷ್ಟಿ ವಿಚಾರ ಮಾಡುವ ಎಂಜನಿಯರ್‌ಗಳು ಇಂದು ಹುಡುಕಿ ನೋಡಿದರೂ ಸಿಗುವದಿಲ್ಲ.

ಜಯವಂತ ಕಾಮತ್
ಐಕಾಲ್ಟೆಕ್ ಇನ್ನೋವೇಷನ್ಸ್

2 ಮೇಣದಬತ್ತಿಯ ನಿಷ್ಠಾವಂತ

ಸರ್ ಎಂ.ವಿಶ್ವೇಶ್ವರಯ್ಯ ಅಂದಾಗ ನಮಗೆ ಥಟ್ಟಂತ ನೆನಪಾಗುವುದು ಎರಡು ಮೇಣದ ಬತ್ತಿಗಳು. ಒಂದು ಸ್ವಂತ ಕೆಲಸಕ್ಕೆ, ಮತ್ತೊಂದು ಸರಕಾರಿ ಕೆಲಸ ಮಾಡುವಾಗ ಉಪಯೋಗಿಸುತ್ತಿದ್ದರು. ಎಷ್ಟೊಂದು ಪ್ರಾಮಾಣಿಕತೆ ಮತ್ತು ಕಾರ್ಯ ನಿಷ್ಠೆ! ನನ್ನ ಸಂಸ್ಥೆಯ ಸಮಾಲೋಚನಾ ಕೊಠಡಿಗೆ ಅವರ ಹೆಸರನ್ನು ಇಡಲಾಗಿದೆ, ಇದರಿಂದ ಅವರು ನಮಗೆ ಪ್ರಾತಃ ಸ್ಮರಣೀಯರು.

ಕೆರೆಮನೆ ರಾಮಚಂದ್ರ ಭಟ್ಟ
ಗೋಕರ್ಣ

ಇತಿಹಾಸ ನಿರ್ಮಿಸಿದ ಕರ್ಮಯೋಗಿ

ಕೆಲವರ ವ್ಯಕ್ತಿತ್ವ ನಿರ್ಮಾಣಕ್ಕೆ ಇತಿಹಾಸ ಕಾರಣವಾದರೆ ಇನ್ನು ಕೆಲವರು ತಮ್ಮವ್ಯಕ್ತಿತ್ವದಿಂದ ಇತಿಹಾಸ ನಿರ್ಮಿಸುತ್ತಾರೆ. ಹಾಗೆ ಇತಿಹಾಸ ನಿರ್ಮಿಸಿದವರೇ ಕರ್ಮಯೋಗಿಗಳು. ಅವರು ಸರ್. ಎಂ.ವಿಶ್ವೇಶ್ವರಯ್ಯನವರು. ನೀನು ಮೂವತ್ತು ವರ್ಷ ಕಾಲವೂ ಜೀವಿಸಲಾರೆ ಅಲ್ಪಾಯು ಎಂದು ಗೇಲಿಮಾಡುತ್ತಿದ್ದ ಉಪಾಧ್ಯಾಯರ ಮಾತನ್ನು ಸುಳ್ಳಾಗಿಸಿ 102ವರ್ಷಗಳ ಕಾಲ, ಆರೋಗ್ಯವಂತನಾಗಿಯೇ ಕೀರ್ತಿಯ ಮೂಟೆಯನ್ನು ಹೊತ್ತಿದ್ದರು.

ಸುರೇಂದ್ರ ಪೈ,
ಶಿಕ್ಷಕರು ಭಟ್ಕಳ

ಅಪರೂಪದ ಮಾಣಿಕ್ಯ ಸರ್ ಎಂ.ವಿ

ತಮ್ಮ ಶಿಸ್ತು, ಮುಂದಾಲೋಚನೆ, ಸ್ವಾಭಿಮಾನಿ ಜೀವನ ಹಾಗೂ ರಾಜ್ಯ-ರಾಷ್ಟ್ರದ ಅಭಿವೃದ್ಧಿಗೆ ಕೃಷಿಯಿಂದ ಹಿಡಿದು ಕೈಗಾರಿಕೆಯ ತನಕ, ಶಿಕ್ಷಣದಿಂದ ಹಿಡಿದು ಸಾಹಿತ್ಯದವರೆಗೂ ಆಡು ಮುಟ್ಟದ ಸೋಪ್ಪಿಲ್ಲ ಎಂಬ ಮಾತಿನಂತೆ ತಮ್ಮ ದಿವಾನ ಅವಧಿಯಲ್ಲಿ ಮೈಸೂರು ರಾಜ್ಯವನ್ನು ಸುವರ್ಣಯುಗಕ್ಕೆ ಕೊಂಡೊಯ್ದ ಮೇರು ವ್ಯಕ್ತಿತ್ವದ ವ್ಯಕ್ತಿ ಸರ್. ಎಂ. ವಿಶ್ವೇಶ್ವರಯ್ಯ. ಸದಾ ಜನ ಮಾನಸದಲ್ಲಿ ಉಳಿಯುವ ಎಂಜಿನಿಯರಿಂಗ್ ಕ್ಷೇತ್ರದ ಕ್ರಾಂತಿಯ ಹರಿಕಾರ.

ಶೀಲಾ ಅರಕಲಗೂಡು

ಸರ್ ಎಂ. ವಿ ಎಂಬ ಐಕಾನ್

ಕೆಲ ವ್ಯಕ್ತಿತ್ವಗಳೇ ಹಾಗೆ. ಶತ ಶತಮಾನಗಳು ಉರುಳಿದರೂ, ಸಾರ್ವಕಾಲಿಕ ಸತ್ಯದಂತೆ, ಸರ್ವರಿಗೂ ಮಾದರಿಯಾಗುವಂತೆ ಲೋಕಹಿತಕ್ಕಾಗಿ ಕೆಲಸ ಮಾಡುತ್ತಾ ಬದುಕಿ ಬಿಡುತ್ತಾರೆ. ಅಂತಹ ಮಹಾನ್ ಚೇತನರಲ್ಲಿ ಭಾರತರತ್ನ ಸರ್. ಎಂ. ವಿಶ್ವೇಶ್ವರಯ್ಯನವರು ಒಬ್ಬರು. ಒಬ್ಬ ಅಭಿಯಂತರರು ಹೀಗೂ ಇರಬಹುದೇ? ಎಂದು ಅಚ್ಚರಿ ಮೂಡಿಸುವಂತಹ ಬದುಕು ಇವರದು. ವಿಶ್ವೇಶ್ವರಯ್ಯನವರಿಗೆ ವಿಶ್ವವೇ ತಲೆಬಾಗುತ್ತದೆ.

ಶಿಲ್ಪ ಭರತ್
ಶಿಕ್ಷಕಿ ಕನಕಪುರ

ಬೆಳೆಗೆ ನೀರು ಕಲ್ಪಿಸಿದ ಭಗೀರಥ

ಕಾವೇರಿ ಜಲಾನಯನ ಪ್ರದೇಶದ ಅನ್ನದಾತರಿಗೆ ಕೃಷಿ ಚಟುವಟಿಕೆ ಮಾಡಲು ಕೃಷ್ಣರಾಜಸಾಗರ ಅಣೆಕಟ್ಟನ್ನು ನಿರ್ಮಿಸಿ ನೀರು ಕಲ್ಪಿಸಿದ ಭಗೀರಥ ಸರ್ ಎಂ. ವಿ ರವರು. ಮಂಡ್ಯ, ಮೈಸೂರು ಭಾಗದ ಅನ್ನದಾತರ ನಿಜ ದೈವ ಇವರು. ವಿಶ್ವೇಶ್ವರಯ್ಯರವರಲ್ಲಿದಂತಹ ಪ್ರಾಮಾಣಿಕತೆ, ದೂರದೃಷ್ಟಿಯಂತಹ ಆದರ್ಶ ಗುಣಗಳನ್ನು ನಾವೆಲ್ಲರೂ ರೂಢಿಸಿಕೊಳ್ಳಬೇಕು. 'ಅನ್ನದಾತರಿಗೆ ನೆರಳಾಗಬೇಕು'.

ಪ್ರಕಾಶ ವಿ. ಕುಲಕರ್ಣಿ
ಗೌರಿಬಿದನೂರು

ಮೊದಲ ವಿಮಾನ ಕಾರ್ಖಾನೆಯಲ್ಲಿ ಪಾತ್ರ

ಸರ್ ಎಂ.ವಿಶ್ವೇಶ್ವರಯ್ಯ ಅವರು 1955 ರಲ್ಲಿ ಭಾರತ ರತ್ನ ಪ್ರಶಸ್ತಿ ಪಡೆದ ಮೊದಲ ಎಂಜಿನಿಯರ್, ಆಧುನಿಕ ಮೈಸೂರಿನ ವಾಸ್ತುಶಿಲ್ಪಿ, ಉತ್ತಮ ಆಡಳಿತಗಾರ, ಶಿಕ್ಷಣ ತಜ್ಞ, ಈ ರೀತಿಯಾಗಿ ರಾಷ್ಟ್ರದ ಅಭಿವೃದ್ಧಿಗೆ ಕೊಡುಗೆ ನೀಡಿ, ಮೈಸೂರು ರಾಜ್ಯದಲ್ಲಿ ಜವಳಿ, ಉಕ್ಕು, ಸಿಮೆಂಟ್ ಉದ್ಯಮವನ್ನು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಅವರು ಭಾರತದ ಮೊದಲ ವಿಮಾನ ಕಾರ್ಖಾನೆಯನ್ನು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಪೂಜಾ.ಕೆ
ಶಿಕ್ಷಕಿ

ಕರ್ಮಯೋಗಿಯ ಕಾಯಕಕ್ಕೆ ನನ್ನ ನಮನ

ಕರ್ಮಯೋಗಿಯಂತೆ 102 ವರ್ಷಗಳ ಕಾಲ ಬಾಳಿದ ಭಾರತ ರತ್ನ ವಿಶ್ವೇಶ್ವರಯ್ಯನವರು ಜೀವಿತಕಾಲದಲ್ಲಿಯೇ ದಂತಕತೆಯಾದವರು. ಯಾವುದೇ ಕೆಲಸ ಕೀಳಲ್ಲ-ನಿನ್ನ ಕೆಲಸ ರಸ್ತೆಯ ಭಾಗವನ್ನು ಗುಡಿಸುವುದಾದರೆ ಜಗತ್ತಿನ ಅತ್ಯಂತ ಸ್ವಚ್ಛ ರಸ್ತೆಯಾಗುವಂತೆ ಗುಡಿಸು ಹೀಗೆ ನಮ್ಮ ಕಾಯಕದಲ್ಲಿ ಗಮನವಿಟ್ಟು ನಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನೆರವೇರಿಸಬೇಕು ವಿಶ್ವೇಶ್ವರಯ್ಯನವರಂತೆ ನಮ್ಮ ಜೀವನ ಶೈಲಿಯನ್ನು ಬದಲಿಸಿಕೊಳ್ಳಬೇಕು.

ಶಿವಲೀಲಾ ಹುಣಸಗಿ
ಕವಯತ್ರಿ, ಯಲ್ಲಾಪುರ

ನದಿಗಳ ಸದ್ಬಳಕೆಗೆ ಚಿಂತಿಸಿದ ಮೊದಲಿಗ

ಒಬ್ಬ ವ್ಯಕ್ತಿ ಶಕ್ತಿಯಾಗಿ ಬೆಳೆಯಬೇಕೆಂದರೆ,ಆತನಲ್ಲಿ ಸ್ವಯಂ ಇಚ್ಛಾಶಕ್ತಿ ಜಾಗೃತವಾಗಿರಬೇಕು.ಅಂತಹ ಸಾಧಕರ ಸಾಲಿನಲ್ಲಿ ಅಚ್ಚಳಿಯದ ಎಂಜಿನಿಯರ್ ಕ್ಷೇತ್ರದ ಮಹಾನ್ ಪ್ರತಿಭೆ, ಭಾರತದ ಅದ್ವಿತೀಯ ಮೇಧಾವಿ, ಭಾರತ ರತ್ನ, ಆಧುನಿಕ ಕರ್ನಾಟಕದ ಶಿಲ್ಪಿ, ಮೋಕ್ಷಗುಂಡಂ ವಿಶ್ವೇಶ್ವರಯ್ಯ ಎಂಜಿನಿಯರಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿ, ದೇಶದ ನದಿಗಳ ಸದ್ಬಳಕೆ ಬಗ್ಗೆ ಚಿಂತಿಸಿದ ಮೊದಲಿಗ.

ಶ್ರುತಿ ರಿಗ್ರೆಟ್ ಅಯ್ಯರ್
ಅಮೆರಿಕ

ಏಳಿಗೆಗಾಗಿ ಸಮರ್ಪಿಸಿಕೊಂಡಿದ್ದರು

ಸರ್ ಎಂ.ವಿಶ್ವೇಶ್ವರಯ್ಯ ಅವರು ಆಧುನಿಕ ಯುಗದ ಸೃಷ್ಟಿಕರ್ತರು. ಅವರದು ಶಿಸ್ತಿನ ಜೀವನ, ಅಪಾರ ಬುದ್ಧಿಶಕ್ತಿ, 'ಅಧಿಕಾರ ತಮಗಾಗಿ ಅಲ್ಲ, ಜನಕ್ಕಾಗಿ' ಎಂದು ನಡೆದುಕೊಂಡವರು. ಸಮಯ-ಪಾಲನೆ, ಪ್ರಾಮಾಣಿಕತೆಗೆ ಹೆಸರು ಪಡೆದುಕೊಂಡವರು. ದೇಶದ ಏಳಿಗೆಗಾಗಿ ತಮ್ಮನ್ನು ತಾವೇ ಸಮರ್ಪಿಸಿಕೊಂಡಿದ್ದರು. ದಿವಾನವಾದರೂ ಅಂಹಕಾರವಿಲ್ಲದ ಆತ್ಮಗೌರವ ಹೊಂದಿದ್ದರು.

ಈಶ್ವರ್‌ರಾಜ್
ಸಹಾಯಕ ಪ್ರಾಧ್ಯಾಪಕರು

ಓಸ್ಮಾನ್, ಹಿಮಾಯತ್‌ನ ನಿರ್ಮಾಣ

1908ರಲ್ಲಿ ಅತ್ಯಂತ ಕೆಟ್ಟ ಪ್ರವಾಹ ಏರಿ ಬಂದು, ಹೈದರಾಬಾದಿಗೆ ಎಲ್ಲಿಲ್ಲದ ಹಾನಿಯಾಯಿತು. ವಿದೇಶ ಪ್ರವಾಸದಲ್ಲಿದ್ದ ವಿಶ್ವೇಶ್ವರಯ್ಯ ಅವರಿಗೆ ಹೈದರಾಬಾದಿನ ನಿಜಾಮರಿಂದ ತುರ್ತು ಕರೆ ಹೋಯಿತು. ತಮ್ಮ ವಿದೇಶ ಯಾತ್ರೆಯನ್ನು ಪೂರ್ಣಗೊಳಿಸದೆಯೇ ಹಿಂದಿರುಗಿ ಬಂದ ವಿಶ್ವೇಶ್ವರಯ್ಯ ಅವರು, ಅಂದಿನ ಹೈದರಾಬಾದನ್ನು ಪ್ರವಾಹದಿಂದ ರಕ್ಷಿಸಲು ಯೋಜನೆಗಳನ್ನು ತಯಾರಿಸಿಕೊಟ್ಟರು.

ಕೃಷ್ಣ ಕುಮಾರ ಎ
ಕೋಲಾರ

ಕಾರ್ಯ -ಧಕ್ಷತೆಗೆ ಉದಾಹರಣೆ ಅವರು

ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಹೆಸರು ಸಮರ್ಪಕ ನಿರ್ವಹಣೆ, ದಕ್ಷತೆ, ನಿಸ್ವಾರ್ಥತೆ ಹಾಗು ಆತ್ಮ ವಿಶ್ವಾಸದ ಪ್ರತೀಕವಾಗಿದೆ. ತನ್ನ ಮಾತೃಭೂಮಿ ಬೇರೆ ಯಾವ ದೇಶಕ್ಕೂ ಕಡಿಮೆ ಇಲ್ಲದಂತೆ ಮಾಡಲು ಒಂದು ತಪಸ್ಸಿನಂತೆ ಕಾರ್ಯೋನ್ಮುಖರಾಗುತ್ತಿದ್ದರು ಅದಕ್ಕಾಗಿ ಅವರು ತಮ್ಮ ಇಳಿವಯಸ್ಸನ್ನು ಲೆಕ್ಕಿಸುತ್ತಿರಲಿಲ್ಲ ದೇಶ ಪ್ರಥಮ ಎಂಬುದೇ ಅವರ ಉತ್ಕಟ ಆಕಾಂಕ್ಷೆಯಾಗಿತ್ತು. ದಕ್ಷತೆ ಮತ್ತು ಸಮರ್ಥರು ಎಂಬುದಕ್ಕೆ ಸಾಕ್ಷಿಯಾಗಿದೆ.

ವಿನಾಯಕ ಭಟ್

ನಿಜವಾದ ವಿಶ್ವಮಾನವ ಸರ್ ಎಂ ವಿ

ಅಂದಿನ ಬ್ರಿಟಿಷ್ ಆಡಳಿತದಲ್ಲಿದ್ದ ಯೆಮೆನ್ ದೇಶದ ಏಡನ್ ನಗರದ ಕುಡಿಯುವ ನೀರಿನ ಯೋಜನೆಯನ್ನು ರೂಪಿಸಿಕೊಟ್ಟಿದ್ದು ಸರ್ ಎಂ.ವಿ. ಕರ್ನಾಟಕದ ಹೊರಗಿನ ಅವರದೇ ಕೊಡುಗೆಗಳಾದ ಪುಣೆಯ ಅಣೆಕಟ್ಟಿನ ನವ ವಿನ್ಯಾಸ, ಹೈದರಾಬಾದಿನ ಅಂದಿನ ದಿನಗಳ ಪ್ರವಾಹ ನಿರ್ವಹಣೆ ಮಾಡಿ ನಗರವನ್ನು ರಕ್ಷಿಸಿಕೊಟ್ಟಿದ್ದು. ತಮ್ಮ ತಾಂತ್ರಿಕ ನೈಪುಣ್ಯತೆಯಿಂದ ವಿವಿಧ ಜನೋಪಯೋಗಿ ಯೋಜನೆಗಳನ್ನ ರೂಪಿಸಿ ಅವುಗಳನ್ನು ಸಮಾಜಕ್ಕೆ ಧಾರೆ ಎರೆದಿದ್ದರು.

ಭರತ್ ಕುಮಾರ್ ಟಿ.ಎ
ಶಿಕ್ಷಕರು

ನಮಗೆ ಆದರ್ಶವಾಗಲಿ

ಪ್ರಸ್ತುತ ಸಮಾಜದಲ್ಲಿರುವ ಭ್ರಷ್ಟಾಚಾರ, ಮೋಸ, ಅನ್ಯಾಯ, ಅಪ್ರಾಮಾಣಿಕತೆ, ಸೋಮಾರಿತನದಂತಹ ದುರ್ಗುಣಗಳು ದೂರವಾಗಿ ಸುಂದರ, ನ್ಯಾಯಯುತ, ಮೌಲ್ಯಯುತ ಸಮಾಜ ನಿರ್ಮಾಣವಾಗಬೇಕಾದರೆ ಎಲ್ಲರೂ ವಿಶ್ವೇಶ್ವರಯ್ಯ ರವರಲ್ಲಿದ್ದಂತಹ ಸಮಯಪ್ರಜ್ಞೆ, ಪ್ರಾಮಾಣಿಕತೆ, ಕರ್ತವ್ಯನಿಷ್ಠೆಯಂತಹ ಮೌಲ್ಯಯುತ ಗುಣಗಳನ್ನು ಅನುಸರಿಸುವುದು ತುಂಬಾ ಮುಖ್ಯ. ಸರ್ ಎಂ.ವಿರನ್ನು ಸ್ಫೂರ್ತಿಯಾಗಿ ಪಡೆದು ಅನುಸರಿಸೋಣ.

ಧ್ರುವನ್ ಕುಮಾರ್ ಎಂ.ಎಂ

ಒಡೆಯರ ಆಲೋಚನೆ ಕಾರ್ಯಕ್ಕೆ

ನವೆಂಬರ್ 1909 ರಲ್ಲಿ, ದಿವಾನ್ ವಿಪಿ ಮಾಧವ ರಾವ್ ಅವರ ಆಹ್ವಾನದ ಮೇರೆಗೆ, ವಿಶ್ವೇಶ್ವರಯ್ಯ ಮೈಸೂರು ರಾಜ್ಯದ ಮುಖ್ಯ ಎಂಜಿನಿಯರ್ ಆಗಿ ಸೇರಿ. ಮೈಸೂರಿನ ಕೆಆರ್‌ಎಸ್ ಅಣೆಕಟ್ಟಿನ ಮುಖ್ಯ ಎಂಜಿನಿಯರ್ ಆಗಿ ಆದರು. ನಮ್ಮ ರಾಜ್ಯದ ಕೈಗಾರಿಕಾ ವಲಯದ ನಿರ್ಮಾತೃ ಸರ್.ಎಂ.ವಿ, 1912 ರಿಂದ1918 ರ ವರೆಗೆ ದಿವಾನರಾಗಿದ್ದ ಸಮಯದಲ್ಲಿ ಒಡೆಯರ ಮುಂದಾಲೋಚನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಶಸ್ವಿಯಾದರು.

ನಾಗರಾಜ್ ಮಲ್ಕಿ ಒಡೆಯರ್
ಹೂವಿನಹಡಗಲಿ ವಿಜಯನಗರ

ನೆಮ್ಮದಿಯ ಜೀವನಕ್ಕೆ ಅನುವು

ಸರ್ ಎಂ.ವಿ ಕನ್ನಂಬಾಡಿ ಕಟ್ಟದಿದ್ದರೆ ಬಂಗಾರ ಬೆಳೆವ ಈ ನಾಡು ಆಗುತ್ತಿತ್ತೆ ಈ ಬೀಡು ಎಂಬ, ಡಾ. ರಾಜ ಕುಮಾರ್ ಹಾಡಿನ ಅರ್ಥದಂತೆ, ಎಂಜಿನಿಯರ್‌ಗಳು ಇಲ್ಲದೆ ಹೋದರೆ, ದೊಡ್ಡ ದೊಡ್ಡ ಅಣೆಕಟ್ಟುಗಳು ನಿರ್ಮಾಣಗೊಳ್ಳುತ್ತಿ ರಲಿಲ್ಲ, ರೈತರಿಗೆ ನೀರಾವರಿ ಸೌಲಭ್ಯ ಸಿಗುತ್ತಿರಲಿಲ್ಲ, ಎಷ್ಟೋ ಎಂಜಿನಿಯರ್‌ಗಳ ಪರಿಶ್ರಮವೇ, ನಮ್ಮ ನಾಡಿನ ಭಾಗದ ರೈತರು ಕೃಷಿಕರು, ನೆಮ್ಮದಿ ಯಿಂದ ಜೀವಿಸಲು ಅನುವು ಮಾಡಿಕೊಟ್ಟಿರುವುದು ಸೌಭಾಗ್ಯವೇ ಸರಿ.

ರಾಕೇಶ ಆಲಬಾಳ
ರಾಜ್ಯಶಾಸ್ತ್ರವಿದ್ಯಾರ್ಥಿ

ಭಾರತ ರತ್ನ ಪಡೆದ ಮೊದಲನೇ ಕನ್ನಡಿಗ

ನಾವು ಜೀವಿಸುವುದಕ್ಕಾಗಿ ಸಂಪಾದಿಸಬೇಕೆ ಹೊರತು, ಸಂಪಾದನೆಯೇ ಜೀವನವಾಗಬಾರದು ಎಂಬುದು ವಿಶ್ವೇಶ್ವರಯ್ಯನವರ ಧ್ಯೇಯವಾಗಿತ್ತು. ಆಧುನಿಕ ಮೈಸೂರಿನ ಶಿಲ್ಪಿ ಎಂದು ಪರಿಗಣಿಸಲ್ಪಟ್ಟ ಇವರು ಕೈಗಾರಿಕರಣ ಇಲ್ಲವೇ ವಿನಾಶ ಎಂಬ ಘೋಷಣೆ ನೀಡಿದ್ದಾರೆ. ವಿಶ್ವೇಶ್ವರಯ್ಯನವರು ಭಾರತ ರತ್ನ ಪಡೆದ ಮೊದಲ ಕನ್ನಡಿಗರೆಂಬುದು ನಮಗೆಲ್ಲ ಹೆಮ್ಮೆಯ ವಿಷಯವಾಗಿದೆ. ಇವರ ವ್ಯಕ್ತಿತ್ವ ಮಾದರಿಯಾಗಿ ಹೊರಹೊಮ್ಮಿದೆ.

ಪವನ್
ಬೀದರ್ ವಿಶ್ವವಿದ್ಯಾಲಯ

ಅವರ ನಾಯಕತ್ವಕ್ಕೆ ವ್ಯಾಪಕ ಗೌರವ

ಅವರು ಕೃಷ್ಣ ರಾಜ ಸಾಗರ ಅಣೆಕಟ್ಟು ಮತ್ತು ಹೈದರಾಬಾದ್ ನಗರಕ್ಕೆ ಪ್ರವಾಹ ಸಂರಕ್ಷಣಾ ವ್ಯವಸ್ಥೆಯಂತಹ ಪ್ರಮುಖ ಯೋಜನೆಗಳನ್ನು ವಿನ್ಯಾಸಗೊಳಿಸಲು ಮತ್ತು ಕಾರ್ಯಗತಗೊಳಿಸಲು ಪ್ರಮುಖ ಪಾತ್ರ ವಹಿಸಿದ್ದರು. ಅವರ ಪರಂಪರೆಯು ಭಾರತದ ಎಂಜಿನಿಯರಿಂಗ್ ಅಭ್ಯಾಸಗಳನ್ನು ಆಧುನೀಕರಿಸುವಲ್ಲಿ ಅವರ ಪ್ರವರ್ತಕ ಪ್ರಯತ್ನಗಳು ಮತ್ತು ಶಿಕ್ಷಣ ಮತ್ತು ಸಾರ್ವಜನಿಕ ಸೇವೆಗೆ ಅವರ ಅಚಲ ಬದ್ಧತೆಯನ್ನು ಒಳಗೊಂಡಿದೆ.

ಭೀಮಾಶಂಕರ ದಾದೆಲಿ
ಹಳಿಸಗರ ಶಹಾಪುರ

ಮಹಾನ್ ಸಾಧಕ

'ಕೈಗಾರಿಕೀಕರಣ ಇಲ್ಲವೆ ವಿನಾಶ' ಎಂಬುದು ಸರ್. ಎಂ. ವಿಶ್ವೇಶ್ವರಯ್ಯನವರ ಪ್ರಸಿದ್ಧ ಘೋಷಣೆಯಾಗಿತ್ತು. ಇವರ ಅವಧಿಯಲ್ಲಿ ಅನೇಕ ಕೈಗಾರಿಕೆಗಳನ್ನು ಆರಂಭಿಸಲಾಯಿತು.ಉ.ದಾ: ಭದ್ರಾವತಿ ಕಬ್ಬಿಣದ ಕಾರ್ಖಾನೆ, ಮೈಸೂರಿನಲ್ಲಿ ಗಂಧದ ಎಣ್ಣೆ ಕಾರ್ಖಾನೆ. ಬೆಂಗಳೂರಿನಲ್ಲಿ ಸಾಬೂನು ಕಾರ್ಖಾನೆ ಅಷ್ಟೇ ಅಲ್ಲದೆ ಇವರ ಅವಧಿಯಲ್ಲಿ ಸಣ್ಣ ಕೈಗಾರಿಕೆಗಳು ಅಭಿವೃದ್ಧಿಗೊಂಡವು.

ಮಲ್ಲನಗೌಡ ಪಾಟೀಲ
ರಾಮದುರ್ಗ

ಜಗತ್ಪ್ರಸಿದ್ಧ ಎಂಜಿನಿಯರ್

ಅವರು ಭಾರತದಲ್ಲಿ ಅನೇಕ ಆರ್ಥಿಕ ಅಭಿವೃದ್ಧಿ ಯೋಜನೆಗಳನ್ನು ನಿರ್ಮಾಣ ಮಾಡಿದ್ದಾರೆ . ಅವುಗಳಲ್ಲಿ ಮೈಸೂರಿನಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಿರುವ ಕೃಷ್ಣ ರಾಜ ಸಾಗರ ಅಣೆಕಟ್ಟು ಮುಖ್ಯವಾದದ್ದು. ಇದರಿಂದಾಗಿ ಮೈಸೂರು ಹಾಗೂ ಸುತ್ತಮುತ್ತಲಿನ ಲಕ್ಷಾಂತರ ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ದೊರಕಿದೆ. ಪ್ರತಿ ವರ್ಷ ಸೆಪ್ಟೆಂಬರ್ 15 ರಂದು ರಾಷ್ಟ್ರೀಯ ಎಂಜಿನಿಯರ್ ದಿನವನ್ನಾಗಿ ಆಚರಿಸಲಾಗುತ್ತಿದೆ.

ಭಗವಂತರಾಯ
ತುಮಕೂರು

ಯೋಜಿಸಿರಿ ಇಲ್ಲವೆ ಸಾಯಿರಿ

ಸೆಪ್ಟೆಂಬರ್ 15-1861ರಲ್ಲಿ ಚಿಕ್ಕಬಳ್ಳಾಪುರದ ಮುದ್ದೇನಹಳ್ಳಿಯಲ್ಲಿ ಶ್ರೀನಿವಾಸಶಾಸ್ತ್ರಿ ವೆಂಕಟಲಕ್ಷ್ಮಮ್ಮನವರ ಮಗನಾಗಿ ಜನಸಿದರು. (ಬಿರುದುಗಳು)ಆಧುನಿಕ ಮೈಸೂರು ಸಂಸ್ಥಾನದ ಭಾಗ್ಯಶಿಲ್ಪಿ,ಭಾರತದ ಯೋಜನಬ್ರಹ್ಮ. (ಘೋಷಣೆಗಳು)ಯೋಜಿಸಿರಿ ಇಲ್ಲವೆ ಸಾಯಿರಿ. 1913 ಮೈಸೂರು ಬ್ಯಾಂಕ್, 1915 ಕನ್ನಡ ಸಾಹಿತ್ಯ ಪರಿಷತ್ತು, 1923ರಲ್ಲಿ ಭದ್ರಾವತಿಯ ಉಕ್ಕು ಕಬ್ಬಿನ ಕಾರ್ಖಾನೆ1916ರಲ್ಲಿ ಮೈಸೂರು ವಿಶ್ವವಿದ್ಯಾಲಯ ಸ್ಥಾಪಿಸಿದರು.

ಕರ್ನಲ್ ಮಹೇಶ್ ಹೊಸಮನಿ
(ವಿಶ್ರಾಂತ)

ನಮೋ ಮೋಕ್ಷಗುಂಡಂ

ಚಿಕ್ಕಬಳ್ಳಾಪುರದ ಮುದ್ದೇನಹಳ್ಳಿಯಲಿ ಜನಿಸಿದಿರಿ
ಹದಿನೈದರಲೇ ಪಿತೃವನು ಕಳೆದುಕೊಂಡಿರಿ
ಬಡತನದ ಬೇಗೆಯಲಿ ಬೆಂದು ಮಿಂದಿರಿ
ಮಾತೆಯ ವಾತ್ಸಲ್ಯದಲೇ ನೀವ್ಬೆಳೆದಿರಿ
ಸಂಸ್ಕಾರದ ಮೊದಲಪಾಠವಾಯ್ತು ಮನೆಯಲಿ
ಓದಿನ ಆರಂಭ ಸರಕಾರಿ ಶಾಲೆಯಲಿ
ಹೈಸ್ಕೂಲು, ಕಾಲೇಜು ಓದು ಬೆಂಗಳೂರಲಿ
ಇಂಜಿನೀಯರಾದಿರಿ ದೂರದ ಪುಣೆಯಲಿ
ಬಹುಮುಖ ಪ್ರತಿಭೆಯ ಗಣಿ ನೀವು
ಪಂಡಿತ , ಸಮಾಜ ಸುಧಾರಕ ದಿವಾನ ನೀವು
ಸರಳ ಸಜ್ಜನಿಕೆ ಶಿಸ್ತಿನ ಸಿಪಾಯಿ ನೀವು
ಆಚಾರ ವಿಚಾರಗಳ ಅಮೋಘ ಮೇಳ ನೀವು
ನಿಮ್ಮ ಸಾಧನೆಗಳಾಗಿವೆ ನಮಗೆ ಮೈಲಿಗಲ್ಲು
ದೇಶವಿದೇಶಗಳಲೂ ನಿಮ್ಮ ಕೀರುತಿ
ಹೈದ್ರಾಬಾದಿನಲೂ ನಿಮ್ಮ ಸುಕೃತಿ
ಜಗದ್ವಿಖ್ಯಾತ ಕನ್ನಂಬಾಡಿ ನಿಮ್ಮ ಮೇರುಕೃತಿ
ನಿಮ್ಮ ಜನುಮದಿನವಿಂದು ದೇಶದಿ
ಇಂಜಿನೀಯರ್ಸ ಡೇ
ಎಲ್ಲರಿಗೂ ಸ್ಪೂರ್ತಿ ನೀಡುತಲಿದೆ
ಶತಾಯುಷಿಯೇ. ಭಾರತರತ್ನವೇ ನೀವ್ನಮಗೆ ಪ್ರೇರಣೆ
ಮೋಕ್ಷ ಪಡೆದ ನಿಮಗೆ ನೂರೊಂದು ನಮನ.

ಪ್ರದೀಪ್ ಗೊಳಸಂಗಿ
ವಿಶ್ವೇಶ್ವರಯ್ಯ ಮ್ಯೂಸಿಯಂ ಬೆಂಗಳೂರು

ಪ್ರಾಮಾಣಿಕ ಮತ್ತು ನಿಸ್ವಾರ್ಥ ಜೀವನ

ವಿಶ್ವೇಶ್ವರಯ್ಯನವರು ದಿವಾನ್ ಪದವಿಗೆ ರಾಜೀನಾಮೆ ಕೊಟ್ಟು ಬರುವಾಗ ಸರಕಾರಿ ಕಾರು ಬಿಟ್ಟು ಸ್ವಂತ ಕಾರಿನಲ್ಲೇ ಬಂದರಂತೆ, ಮೈಸೂರಿನ ಒಡೆಯರು ಸರಕಾರಿ ಕಾರಿನಲ್ಲೇ ಹೋಗಿ ಅಂದರಂತೆ, ಆದರೆ ವಿಶ್ವೇಶ್ವರಯ್ಯ ನವರು ಸರಕಾರಿ ಹುದ್ದೆ ಇದ್ದಾಗ ಮಾತ್ರ ಸರಕಾರದ ವಸ್ತುಗಳನ್ನು ಬಳಸಬೇಕು, ಅಧಿಕಾರದಲ್ಲಿ ಇದ್ದಾಗ ಸ್ವಂತಕ್ಕೆ ಏನನ್ನು ಬಲ್ಲಾಸಲಿಲ್ಲವಂತೆ. ಅಂತಹ ಪ್ರಾಮಾಣಿಕ, ನಿಸ್ವಾರ್ಥ ಜೀವನವೇ ಅವರು ಉನ್ನತ ಸ್ಥಾನಕ್ಕೆ ಹೋಗಿದ್ದಾರೆ.

ಡಿ. ಎನ್. ಸುಬ್ಬುಕೃಷ್ಣ

ಬೆಂಗಳೂರಿನ ಅಭಿವೃದ್ಧಿಗೆ ಕಾರಣಿಭೂತರು

ಭಾರತ ರತ್ನ ಸರ್. ಎಂ.ವಿ, ಹೆಸರೇ ರೋಮಾಂಚಕ. ಶತಾಯುಷ್ಯದ ಜೀವನದ ಸಾಧನೆಗಳಲಿ ಏರಿದ್ದು ಗೌರಿಶಂಕರ ಶಿಖರ. ನಾಡು ಪಡೆದಂತ ಯುಗ ಪುರುಷರಲಿ ಒಬ್ಬರು. ಹಳೆಯ ಮೈಸೂರು ಪ್ರಾಂತ್ಯದ, ವಿಶೇಷವಾಗಿ ಬೆಂಗಳೂರಿನ ಸರ್ವತೋ ಮುಖ ಅಭಿವೃದ್ಧಿಗೆ ಕಾರಣಿಭೂತರಲೊಬ್ಬರು. ತಂತ್ರಜ್ಞರಾಗಿ, ಆಡಳಿತಗಾರರಾಗಿ, ಸ್ವಾಭಿಮಾನದ ಜೀವನ ನಡೆಸಿದವರು. ಇಂದಿನ ಕಾಲದಲ್ಲಿ ಕಟ್ಟು ಕಥೆಯೇನೊ ಎನ್ನುವಷ್ಟು, ನೈತಿಕತೆಯ ರಸ್ತೆಯ ಪಥಿಕರು.

ಮನಸ್ವಿ, ಬಿ. ಎಂ.
ತೀರ್ಥಹಳ್ಳಿ, ಶಿವಮೊಗ್ಗ

ಶಿವಮೊಗ್ಗಕ್ಕೆ ಭಾರೀ ಕೊಡುಗೆ

ವಿಶ್ವಮಾನವ ಕುವೆಂಪುನವರ ಊರಿನವಳಾದ ನನಗೆ ಸರ್. ಎಂ.ವಿ.ನವರು ನಮ್ಮ ಜಿಲ್ಲೆಗೆ ನೀಡಿದ ಕೊಡುಗೆಗಳೆ ಪ್ರೇರಣೆ. ಅವರು ನಿರ್ಮಿಸಿದ ತುಂಗಾನದಿಯ ಸೇತುವೆ ಹಲವಾರು ಪೀಳಿಗೆಗಳಿಂದ ಸುತ್ತಮುತ್ತಲಿನ ಹಳ್ಳಿಗಳಿಗೆ ವಿದ್ಯಾಭ್ಯಾಸ, ಆರೋಗ್ಯ, ಸಾರಿಗೆ ಸಂಪರ್ಕ, ವ್ಯಾಪಾರ ವಹಿವಾಟು ಹೀಗೆ ಬಹಳ ಉಪಯೋಗಕಾರವಾಗಿದೆ ಉಕ್ಕಿನ ಕಾರ್ಖಾನೆಯಿಂದ ಉತ್ಪನ್ನಗಳ ಜೊತೆಗೆ ಹಲವರಿಗೆ ಉದ್ಯೋಗಾವಕಾಶ ಲಭಿಸಿದೆ.

ವಿದ್ಯಾಶ್ರೀ ಉಮೇಶ್ವರ ಮರಗಾಲ
ಹಿರೇಬೂದನೂರ, ಸವದತ್ತಿ

ಅಂತರ್‌ದೃಷ್ಟಿಯಿಂದ ದೇಶದ ಅಭಿವೃದ್ಧಿ

'ಕೈಗಾರೀಕರಣ ಇಲ್ಲವೇ ವಿನಾಶ' ಎಂದು ಹೇಳಿದ ಭಾರತದ ಶ್ರೇಷ್ಠ ಎಂಜಿನಿಯರ್ ಸರ್ ಎಂ.ವಿಶ್ವೇಶ್ವರಯ್ಯ. ತಮ್ಮ ಎಂಜಿನಿಯರಿಂಗ್ ಸಾಮರ್ಥ್ಯ ಹಾಗೂ ಅಂತರ್‌ದೃಷ್ಟಿಯಿಂದ ದೇಶದ ಬಹುತೇಕ ಭಾಗದಲ್ಲಿ ಅಭಿವೃದ್ಧಿ ಸಾಧಿಸಲು ಸಹಕರಿಸಿದವರು. ಹುಟ್ಟುಹಬ್ಬವನ್ನು ಭಾರತದಲ್ಲಿ ಮಾತ್ರವಲ್ಲ ಆಸ್ಟ್ರೇಲಿಯಾ ಹಾಗೂ ತಾಂಜಾನಿಯಾದಲ್ಲಿಯೂ ಆಚರಿಸುವುದು ನಮಗೆ ಹೆಮ್ಮೆ.

ರಮೇಶ್ ಚವ್ಹಾಣ್
ಚಿಂಚೋಳಿ ಕಲಬುರಗಿ

ಕೈಗಾರಿಕೆ ವಲಯದ ನಿರ್ಮಾತೃ

ಅವರ ಸೇವೆಗಳಿಗೆ ಸದಾ ಕೃತಜ್ಞರಾಗುತ್ತೇವೆ ನಮ್ಮ ರಾಜ್ಯದ ಕೈಗಾರಿಕೆ ವಲಯದ ನಿರ್ಮಾತೃ ಸರ್ ಎಂ.ವಿಶ್ವೇಶ್ವರಯ್ಯ, ನಾಲ್ವಡಿ ಕೃಷ್ಣರಾಜ ಒಡೆಯರ ಮುಂದಾಲೋಚನೆಗಳನ್ನು ಕಾರ್ಯರೂಪಕ್ಕೆ ಇಳಿಸಿದರು ಕೈಗಾರಿಕೆಗಳನ್ನು ಸಾಧಿಸಿದೆ. ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವುದು ಸಾಧ್ಯವಿಲ್ಲ, 1923ರಲ್ಲಿ ಭದ್ರಾವತಿ ಕಾರ್ಖಾನೆ, 1916 ರಲ್ಲಿ ಬ್ಯಾಂಕ್ ಆಫ್ ಮೈಸೂರ್ ಮೂಲಕ ಜನಪರ ಯೋಜನೆಗೆ ಮಹತ್ವ ನೀಡಿದ್ದಾರೆ.

ಬೆಸಗರಹಳ್ಳಿ ರವಿ ಪ್ರಸಾದ್,
ಎಲ್ಐಸಿ ಡಿಒ ಮೈಸೂರು

ಪ್ರತಿಯೊಬ್ಬರ ಮನೆಯಲ್ಲೂ ಫೋಟೋ

ಭಾಗ್ಯಶಿಲ್ಪಿ ಸರ್ ಎಂ.ವಿಶ್ವೇಶ್ವರಯ್ಯ ಅವರು ಕನ್ನಡ ನಾಡಿನ ನಮ್ಮ ಕಾವೇರಿಯನು ಹರಿಯಲು ಬಿಟ್ಟು ವಿಶ್ವೇಶ್ವರಯ್ಯ ಶ್ರಮಪಡದಿದ್ದರೆ ಕನ್ನಂಬಾಡಿಯ ಕಟ್ಟದಿದ್ದರೆ ಬಂಗಾರ ಬೆಳೆವ ಹೊನ್ನಡು ಆಗುತ್ತಿತ್ತೆ? ಈ ನಾಡು ಕನ್ನಡ ಸಿರಿನಾಡು ಅವರ ಬಗ್ಗೆ ತುಂಬಾ ಅರ್ಥಗರ್ಭಿತವಾದ ಹಾಡು. ನಮ್ಮ ಮರಾಜರಾದ ನಾಲ್ವಡಿ ಕೃಷ್ಣ ರಾಜ ಒಡೆಯರ್ ಅವರು ವಿಶ್ವೇಶ್ವರಯ್ಯ ನವರ ಬಗ್ಗೆ ಅಪಾರವಾದ ನಂಬಿಕೆ, ಕನ್ನಂಬಾಡಿ ಕಟ್ಟೆ ಕಟ್ಟಲು ಅನುಮತಿ ನೀಡಿ ಯಶಸ್ವಿಯಾಗಿದ್ದರು.

ಸಮಾಚಾರ ಸಣ್ಣದಲ್ಲ

ಬಳ್ಳಾರಿ ಮಹಾನಗರ ಪಾಲಿಕೆ: ಅರ್ಜಿ ವಿಸ್ತರಣೆ

ಬಳ್ಳಾರಿ: ಬಳ್ಳಾರಿ ಮಹಾನಗರ ಪಾಲಿಕೆಯ ಪ್ರತಿಯೊಂದು ವಾರ್ಡ್ಗಳಿಗೆ (ಒಟ್ಟು 39 ವಾರ್ಡ್ ಗಳಿಗೆ) ವಾರ್ಡ್ ಸಮಿತಿ ರಚಿಸುವ ಕುರಿತು ಆಸಕ್ತ ಸಂಘ ಸಂಸ್ಥೆಗಳ ಪ್ರತಿನಿಧಿ ಮತ್ತು ಸಾರ್ವಜನಿಕರಿಂದ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಲು ಸೆ.30ರ ವರೆಗೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಿಸಲಾಗಿದೆ. 39 ವಾರ್ಡ್ ಗಳಿಗೆ ಪೂರ್ಣ ಪ್ರಮಾಣದಲ್ಲಿ ಅರ್ಜಿಗಳು ಸ್ವೀಕೃತವಾಗದೆ ಇರುವುದರಿಂದ, ಪಾಲಿಕೆಯ ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಲಾಗಿದ್ದು, ಪುನ: ಅರ್ಜಿ ಆಹ್ವಾನಿಸಲಾಗಿದೆ. ವಾರ್ಡ್ ಸಮಿತಿ ಸದಸ್ಯರನ್ನಾಗಿ ಆಯ್ಕೆಯಾಗಲು ಆಸಕ್ತ ಸಂಘ ಸಂಸ್ಥೆಯ ಪ್ರತಿನಿಧಿ ಮತ್ತು ಸಾರ್ವಜನಿಕರು ಪಾಲಿಕೆಯ ಕಚೇರಿಗೆ ಅರ್ಜಿ ಸಲ್ಲಿಸಬೇಕು. ಅವಧಿ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ನಗರದ ಗಾಂಧಿನಗರದಲ್ಲಿನ ಮಹಾನಗರ ಪಾಲಿಕೆಯ ವಲಯ ಕಚೇರಿ-1 ಅಥವಾ ವೆಬ್‌ಸೈಟ್ ಸಂಪರ್ಕಿಸಬಹುದು ಎಂದು ಪಾಲಿಕೆ ಪ್ರಕಟಣೆ ತಿಳಿಸಿದೆ.

ಅಂಗನವಾಡಿ ಹುದ್ದೆಗೆ ಅರ್ಜಿ

ಹೊಸಪೇಟೆ: ಶಿಶು ಅಭಿವೃದ್ಧಿ ಯೋಜನೆಯಡಿ ಹೂವಿನಹಡಗಲಿ ವ್ಯಾಪ್ತಿಯಲ್ಲಿ ಖಾಲಿ ಇರುವ 1 ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಅಕ್ಟೋಬರ್ 6 ಕೊನೆಯದಿನವಾಗಿದ್ದು, ವೆಬ್‌ಸೈಟ್ ವಿಳಾಸದ ಮೂಲಕ ಅರ್ಹ ಮಹಿಳಾ ಹಾಗೂ ಲಿಂಗತ್ವ ಅಲ್ಪ ಸಂಖ್ಯಾತ ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ ಹೂವಿನಹಡಗಲಿಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ಯೋಜನೆಗಳಡಿ ಅರ್ಜಿ ಆಹ್ವಾನ

ಹೊಸಪೇಟೆ: ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಹಾಗೂ ಇದರ ಆಧೀನದಲ್ಲಿ ಬರುವ ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮಗಳಿಂದ 2024-25ನೇ ಸಾಲಿನಲ್ಲಿ ಸ್ವಯಂ ಉದ್ಯೋಗ ನೇರಸಾಲ ಯೋಜನೆ, ಉದ್ಯಮ ಅಭಿವೃದ್ಧಿ ಯೋಜನೆ, ಮೈಕ್ರೋ ಕ್ರೆಡಿಟ್ ಪ್ರೇರಣಾ ಯೋಜನೆ (ಮಹಿಳಾ ಸ್ವ-ಸಹಾಯ ಗುಂಪುಗಳಿಗೆ), ಸ್ವಾವಲಂಬಿ ಸಾರಥಿ ಯೋಜನೆ, ಗಂಗಾ ಕಲ್ಯಾಣ ಯೋಜನೆ, ಭೂ ಒಡೆತನ ಯೋಜನೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಸೇವಾ ಸಿಂಧು, ಗ್ರಾಮ ಒನ್, ಕರ್ನಾಟಕ ಒನ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಅಕ್ಟೋಬರ್ 10 ಕೊನೆಯ ದಿನವಾಗಿದ್ದು, ವೆಬ್‌ಸೈಟ್ ಪೋರ್ಟಲ್ ವಿಳಾಸ ದಲ್ಲಿ ಅರ್ಜಿ ಸಲ್ಲಿಸಬಹುದು ಎಂದು ನಿಗಮದ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಬಳ್ಳಾರಿ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುಆರ್‌ಡಬ್ಲ್ಯು ಹುದ್ದೆಗೆ ಅರ್ಜಿ ಆಹ್ವಾನ

ಹೊಸಪೇಟೆ: ವಿಶೇಷಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ 2024-25ನೇ ಸಾಲಿನ ಕೂಡ್ಲಿಗಿ ತಾಲೂಕು ಮತ್ತು ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಗ್ರಾಮೀಣ ಪುನರ್ವಸತಿ ಯೋಜನೆಯಡಿ ಹಗರಿಬೊಮ್ಮನಹಳ್ಳಿ ಪುರಸಭೆಯಲ್ಲಿ ಮತ್ತು ಕೂಡ್ಲಿಗಿ ಪಟ್ಟಣ ಪಂಚಾಯತಿಯಲ್ಲಿ ಖಾಲಿ ಇರುವ ತಲಾ ಒಂದು ನಗರ ಪುನರ್ವಸತಿ ಕಾರ್ಯಕರ್ತರ ಹುದ್ದೆಗಳಿಗೆ ವಿಶೇಷಚೇತನರಿಂದ ಅರ್ಜಿ ಆಹ್ವಾನಿಸಲಾಗಿದೆ. ವಿಶೇಷಚೇತನರು ಅವಶ್ಯಕ ದಾಖಲೆಗಳೊಂದಿಗೆ ನಿಗದಿತ ಅರ್ಜಿಯ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು. ಅಭ್ಯರ್ಥಿಗಳು ಹುದ್ದೆಗೆ ಸಂಬಂಧಿಸಿದಂತೆ ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿರಬೇಕು. ಹೆಚ್ಚಿನ ಮಾಹಿತಿಗಾಗಿ ಹಗರಿಬೊಮ್ಮನಹಳ್ಳಿ ತಾಲೂಕಿನ ಎಮ್‌ಆರ್ ಡಬ್ಲ್ಯು ಲಕ್ಷ್ಮಣ ಮೊ: 9741185924, ಕೂಡ್ಲಿಗಿ ತಾಲ್ಲೂಕಿನ ಎಮ್‌ಆರ್‌ಡಬ್ಲ್ಯು ಚೌಡೇಶ ಬಿ.ಎಚ್. ಮೊ: 8217626361 ಹಾಗೂ ಜಿಲ್ಲಾ ವಿಶೇಷಚೇತನರ ಕಲ್ಯಾಣಾಧಿಕಾರಿಗಳು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಕಾರ್ಯಾಲಯ, ತಾಲ್ಲೂಕು ಪಂಚಾಯತಿ ಆವರಣ, ಸಂಡೂರು ರಸ್ತೆ, ಹೊಸಪೇಟೆ, ಇವರನ್ನು ಕಚೇರಿಯ ಸಮಯದಲ್ಲಿ ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಂಬಿಕೆ ಜಗದಂಬಿಕೆ
ಗುರು
ಪ್ರತಿ ಗುರುವಾರ

{ಶಿವರಾಜ ತಂಗಡಗಿ} ಸಚಿವ

ಗಣೇಶನನ್ನು ಬಂಧಿಸಲಾಗಿದೆ ಎಂಬ ಪ್ರಧಾನಿ ನರೇಂದ್ರ ಮೋದಿ ಹೇಳಿಕೆ ತೀರಾ ಬಾಲಿಶವಾಗಿದೆ. ಪ್ರಧಾನಿಯಾಗಿ ಈ ರೀತಿ ಮಾತನಾಡುವುದು ಸೌಜನ್ಯವಲ್ಲ. ಪೊಲೀಸ್ ವ್ಯಾನ್‌ನಲ್ಲಿ ಇಟ್ಟರೆ ಬಂಧನ ಮಾಡಿದಂತೆಯೇ? ಮೋದಿ ಅವರ ಬಗ್ಗೆ ದೇಶದ ಜನರಿಗೆ ಗೊತ್ತಾಗಿದೆ. ಅದಕ್ಕೆ ಈ ರೀತಿ ಮಾತನಾಡುತ್ತಿದ್ದಾರೆ.

ಟಿಬಿ ಡ್ಯಾಂನಿಂದ ಚಾಲನೆ | ಜನಸ್ತೋಮದಿಂದ ಭಾರತ ಮಾತಾಕಿ ಜೈ ಘೋಷಣೆ | ಪ್ರಜಾಪ್ರಭುತ್ವಕ್ಕಾಗಿ ಕೈ ಜೋಡಿಸಿದ ಜನತೆ

ಮಾನವ ಸರಪಳಿಗೆ ಮೊಳಗಿದ ಕನ್ನಡಾಂಬೆ ಜೈ

ಹೊಸಪೇಟೆ: ವಿಜಯನಗರ ಜಿಲ್ಲೆಯ ಜನರು ನಮ್ಮ ಹೆಮ್ಮೆಯ ಪ್ರಜಾಪ್ರಭುತ್ವ ಬಲಪಡಿಸುವುದಕ್ಕೆ ಕೈ ಜೋಡಿಸಿದರು. ಐತಿಹಾಸಿಕ ಕಾರ್ಯಕ್ರಮದಲ್ಲಿ ಭಾಗಿಯಾಗಿ ಜಯಘೋಷ ಹಾಕಿ ಸಂಭ್ರಮಿಸಿದರು.

ವಿಜಯನಗರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ವಿಜಯನಗರ ಜಿಲ್ಲೆಯಲ್ಲಿ ನಡೆದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಮಾನವ ಸರಪಳಿ ಕಾರ್ಯಕ್ರಮವು ಹೊಸ ಇತಿಹಾಸ ಸೃಷ್ಟಿಸಿತು.

ಶಾಲಾ ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ತಂಡೋಪತಂಡವಾಗಿ ಆಗಮಿಸಿ ಪ್ರಜಾಪ್ರಭುತ್ವ ದಿನದ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಭಾಗಿಯಾದರು. ಪ್ರಜಾಪ್ರಭುತ್ವ ವ್ಯವಸ್ಥೆ ಬಲಪಡಿಸುವ ಕಾರ್ಯಕ್ರಮಕ್ಕೆ ಕೈಜೋಡಿಸಿದರು.

ವಿಜಯನಗರ-ಕೊಪ್ಪಳ ಗಡಿಭಾಗದ: ರಾಷ್ಟ್ರೀಯ ಹೆದ್ದಾರಿಯಲ್ಲಿನ ಟಿ.ಬಿ.ಡ್ಯಾಂ ಮೊದಲನೇ ಸೇತುವೆಯಿಂದ ಭುವನಹಳ್ಳಿವರೆಗೆ ಸುಮಾರು 40 ಕಿ.ಮೀ ಉದ್ದ ಮಾನವ ಸರಪಳಿಯನ್ನು ನಿರ್ಮಿಸಿ ವಿಜಯನಗರ ಜಿಲ್ಲೆಯ ಜನರು ಹೊಸ ಇತಿಹಾಸ ಬರೆದರು.

ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ನಿರಂತರ ಸಭೆ ನಡೆಸಿ ಅಧಿಕಾರಿಗಳ ತಂಡ ರಚಿಸಿ ಅಚ್ಚುಕಟ್ಟಾಗಿ ಆಯೋಜನೆ ಮಾಡಿದ್ದ ಐತಿಹಾಸಿಕ ಮಾನವ ಸರಪಳಿಯಲ್ಲಿ ಜಿಲ್ಲೆಯ ಜನ ಪ್ರತಿನಿಧಿಗಳು, ಗಣ್ಯರು, ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು, ಎಲ್ಲಾ ಸಂಘ ಸಂಸ್ಥೆಗಳು ಪ್ರತಿನಿಧಿಗಳು, ಕಾರ್ಮಿಕರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಿದರು. ಸಂವಿಧಾನ ಪೀಠಿಕೆ ವಾಚನ: ಹೊಸಪೇಟೆ ನಗರದ ಡಾ. ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಿತು.

ಇದೆ ವೇಳೆ, ಸಂವಿಧಾನ ಪೀಠಿಕೆಯ ವಾಚನ ಕಾರ್ಯಕ್ರಮಕ್ಕೆ ಡಾ.ಬಿ. ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಿ, ಸಸಿಗೆ ನೀರು ಹಾಕುವ ಮೂಲಕ ಶಾಸಕ ಎಚ್.ಆರ್.ಗವಿಯಪ್ಪ ಚಾಲನೆ ನೀಡಿ ಮಾತನಾಡಿ, ಜನಾಡಳಿತ ಜಾರಿಗೊಳಿಸಿದ ಪ್ರಜಾಪ್ರಭುತ್ವವು ಅತ್ಯಂತ ದೊಡ್ಡ ಶಕ್ತಿಯಾಗಿದೆ ಎಂದು ತಿಳಿಸಿದರು.

ವಿಜಯನಗರ ಜಿಲ್ಲೆಯಲ್ಲಿ ನಡೆದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪೂಜೆ ಸಲದಲಿಸಲಾಯಿತು.

ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ದೇಶದಲ್ಲಿ ಬ್ರಿಟೀಷ್ ರ ಹಾಗೂ ರಾಜರ ಆಡಳಿತವಿತ್ತು. ಆದರೆ ಜನರ ಆಡಳಿತವಿರಲಿಲ್ಲ. ಪ್ರಜಾಪ್ರಭುತ್ವದಿಂದಲೇ ನಮಗೆ ಜನಾಡಳಿತ ಸಾಧ್ಯವಾಗಿದೆ. ಸಂವಿಧಾನದಿಂದಾಗಿ ನಮಗೆ ಮಹತ್ವದ ಹಕ್ಕುಗಳು ದೊರೆತಿವೆ. ನಮ್ಮ ಹಕ್ಕಗಳನ್ನು ರಕ್ಷಣೆ ಮಾಡಿಕೊಳ್ಳುವುದರ ಜೊತೆಗೆ ಅವುಗಳನ್ನು ಉಳಿಸಿಕೊಳ್ಳಬೇಕು. ಪ್ರಜಾಪ್ರಭುತ್ವವು ಅತ್ಯಂತ ದೊಡ್ಡ ಶಕ್ತಿಯಾಗಿದ್ದು, ಅದನ್ನು ಯಾರು ಬಿಟ್ಟುಕೊಡಬಾರದು ಎಂದು ತಿಳಿಸಿದರು.

2500 ಕಿ.ಮೀ ಉದ್ದದ ಬೃಹತ್ ಮಾನವ ಸರಪಳಿ ಕಾರ್ಯಕ್ರಮಕ್ಕಾಗಿ ಲಕ್ಷಾಂತರ ಜನರು ಹೆಸರು ನೋಂದಾಯಿಸಿಕೊಂಡಿದ್ದಾರೆ. ವಿಜಯನಗರ ಜಿಲ್ಲೆಯಲ್ಲಿ ಸಹ ಸಾವಿರಾರು ಸಂಖ್ಯೆಯಲ್ಲಿ ಜನರು ನೋಂದಣಿ ಮಾಡಿಕೊಂಡಿದ್ದಾರೆ ಎಂದು ತಿಳಿಸಿದರು.

ಶಾಲಾ-ಕಾಲೇಜು ಮಕ್ಕಳು, ಸಾರ್ವಜನಿಕರು, ಜನಪ್ರತಿನಿಧಿಗಳು, ಸಂಘ ಸಂಸ್ಥೆಗಳು ಸೇರಿದಂತೆ ಸಾವಿರಾರು ಸಂಖ್ಯೆಯಲ್ಲಿ ಜನರು ಟಿಬಿ ಡ್ಯಾಂ ನ ಮೊದಲ ಸೇತುವೆಯಿಂದ

ಭುವನಹಳ್ಳಿವರೆಗೆ ಮಾನವ ಸರಪಳಿಯಲ್ಲಿ ಪಾಲ್ಗೊಂಡಿದ್ದಾರೆ ಎಂದು ಹೇಳಿದರು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಮಾತಾ ಮಂಜಮ್ಮ ಜೋಗತಿ ಅವರು ಮಾತನಾಡಿ, ರಾಜ್ಯದಲ್ಲಿ ಸುಮಾರು 2500 ಕಿ.ಮೀ ಮಾನವ ಸರಪಳಿ ನಿರ್ಮಾಣ ಕಾರ್ಯಕ್ರಮವು ಮಹತ್ತರವಾದುದಾಗಿದೆ.

ಈ ಕಾರ್ಯಕ್ರಮಕ್ಕೆ ದಾರಿಯುದ್ದಕ್ಕೂ ಶಾಲಾ-ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ಮಾನವ ಸರಪಳಿ ಸಾಲಿನಲಿ ನಿಂತಿರುವುದನ್ನು ಕಂಡು ಸಂತಸವಾಯಿತು ಎಂದು ತಿಳಿಸಿದರು.

ಗಮನ ಸೆಳೆದ ಗಾಂಧಿ, ಅಂಬೇಡ್ಕರ್ ವೇಷಧಾರಿ ಮಕ್ಕಳು

ಕಾರ್ಯಕ್ರಮದಲ್ಲಿ ರಾಷ್ಟ್ರಪಿತ ಮಹಾತ್ಮಾ ಗಾಂಧಿ ಹಾಗೂ ಸಂವಿಧಾನ ಶಿಲ್ಪಿ ಭಾರತ ರತ್ನ ಡಾ ಬಿ. ಆರ್.ಅಂಬೇಡ್ಕರ್ ಅವರ ವೇಷ ಧರಿಸಿದ ಮಕ್ಕಳು ಎಲ್ಲರ ಗಮನ ಸೆಳೆದರು.

ಎಲ್ಲರಿಗೂ ಸಮಾನವಾಗಿ ಬದುಕುವ ಸ್ವಾತಂತ್ರ್ಯದ ಹಕ್ಕನ್ನು ಸಂವಿಧಾನ ನೀಡಿದೆ ಎಂದರು. ನಮಗೆ ಬೇಕಾದ ಮುಖ್ಯಮಂತ್ರಿಗಳು, ಶಾಸಕರು, ಸಂಸದರು ಸೇರಿದಂತೆ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಳ್ಳುವ ಮಹತ್ವದ ಮತದಾನದ ಹಕ್ಕು ಸಂವಿಧಾನ, ಪ್ರಜಾಪ್ರಭುತ್ವದ ಮೂಲಕ ನಮಗೆ ದಕ್ಕಿದೆ .

- ಎಚ್.ಆರ್.ಗವಿಯಪ್ಪ , ಶಾಸಕ

ಸಾರ್ವಜನಿಕರಿಗೆ ವಿಶೇಷವಾಗಿ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಪ್ರಜಾಪ್ರಭುತ್ವದ ಬಗ್ಗೆ ಅರಿವು ಮೂಡಿಸುವ ಸಲುವಾಗಿ ರಾಜ್ಯ ಸರ್ಕಾರವು ಬೀದರ್ ಜಿಲ್ಲೆಯ ಬಸವಕಲ್ಯಾಣದಿಂದ ಚಾಮರಾಜನಗರದವರೆಗೆ ಮಾನವ ಸರಪಳಿ ಕಾರ್ಯಕ್ರಮ ರೂಪಿಸಿದೆ.

- ಎಂ.ಎಸ್.ದಿವಾಕರ್, ಜಿಲ್ಲಾಧಿಕಾರಿ

ವಿಜಯನಗರ ಜಿಲ್ಲೆಯಲ್ಲಿ ನಡೆದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಮಾನವ ಸರಪಳಿ ಕಾರ್ಯಕ್ರಮ ಆಚರಿಸಲಾಯಿತು.

ಇದು ಸ್ಪೂರ್ತಿದಾಯಕ ಕಾರ್ಯಕ್ರಮ: ನಮ್ಮ ಸಂವಿಧಾನ, ನಮ್ಮ ಹಕ್ಕು, ನಮ್ಮ ಪ್ರಜಾಪ್ರಭುತ್ವ ಎಂಬ ಭಾವನೆ ಎಲ್ಲರಲ್ಲಿಯೂ ಮೂಡಬೇಕು ಎಂದು ತಿಳಿಸಿದರು. ಎಲ್ಲರು ಸಮಾನರಾಗಿ ಬಾಳಬೇಕು ಎನ್ನುವಂತಹ ಸಂದೇಶ ನೀಡಿದ ಸಂವಿಧಾನದ ನಿರ್ಮಾತೃ ಡಾ ಬಿ.ಆರ್.ಅಂಬೇಡ್ಕರ್ ಅವರನ್ನು ನಾವೆಲ್ಲರೂ ಈ ಹೊತ್ತು ಸ್ಮರಿಸೋಣ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂವಿಧಾನದ ಪೀಠಿಕೆಯನ್ನು ಬೋಧಿಸಲಾಯಿತು. ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಮಂಜುನಾಥ ಎಚ್.ಎಸ್ ಪ್ರಾಸ್ತಾವಿಕ ಮಾತನಾಡಿದರು.

ಈ ಸಂದರ್ಭದಲ್ಲಿ ಹೊಸಪೇಟೆಯ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎಚ್.ಎನ್.ಎಫ್ ಮಹಮದ್ ಇಮಾಮ್ ನಿಯಾಜಿ, ಜಿಲ್ಲಾ ಪಂಚಾಯಿತಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೋಂಗ್ಜಾಯ್ ಮಹಮದ್ ಅಲಿ ಅಕ್ರಂ ಶಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿ ಬಾಬು ಬಿ.ಎಲ್., ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಹಲವು ಗಣ್ಯರು, ಜನಪ್ರತಿನಿಧಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಹೊಸಪೇಟೆ ನಗರದ ಡಾ ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ನಂದಿ ಕೋಲು, ಹಗಲು ವೇಷ, ಡೊಳ್ಳು ಕುಣಿತ ಸೇರಿದಂತೆ ವಿವಿಧ ಕಲಾತಂಡಗಳು ಪಾಲ್ಗೊಂಡು ಹಬ್ಬದ ವಾತಾವರಣ ಸೃಷ್ಟಿಸಿದ್ದವು. ಸಂವಿಧಾನದ ಪೀಠಿಕೆ ಓದುವ ಕಾರ್ಯಕ್ರಮದಲ್ಲಿ ಶಾಲಾ-ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು, ಜನಪ್ರತಿನಿಧಿಗಳು, ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಮತ್ತಿತರರು ಭಾಗಿಯಾಗಿದ್ದರು.

ಉತ್ತಂಗಿ ಶಾಲೆ ಜಿಲ್ಲಾ ಮಟ್ಟಕ್ಕೆ ಆಯ್ಕೆ

ಹೂವಿನಹಡಗಲಿ ತಾಲೂಕಿನ ಉತ್ತಂಗಿ ಶ್ರೀ ಶಿವಶಂಕರ ಸ್ವಾಮಿ ಸರಕಾರಿ ಪ್ರೌಢಶಾಲೆಯ ಬಾಲಕಿಯರು ವಾಲಿಬಾಲ್ ಪಂದ್ಯಾವಳಿಯಲ್ಲಿ ತಾಲೂಕು ಮಟ್ಟದಲ್ಲಿ ಗೆಲುವು ಸಾಧಿಸಿ ಸತತ ಮೂರನೇ ಬಾರಿಗೆ ಜಿಲ್ಲಾ ಮಟ್ಟಕ್ಕೆ ಆಯ್ಕೆ ಆಗಿದ್ದಾರೆ.

ಹೂವಿನಹಡಗಲಿ: ತಾಲೂಕಿನ ಉತ್ತಂಗಿ ಶ್ರೀ ಶಿವಶಂಕರ ಸ್ವಾಮಿ ಸರಕಾರಿ ಪ್ರೌಢಶಾಲೆಯ ಬಾಲಕಿಯರು ವಾಲಿಬಾಲ್ ಪಂದ್ಯಾವಳಿಯಲ್ಲಿ ತಾಲೂಕು ಮಟ್ಟದಲ್ಲಿ ಗೆಲುವು ಸಾಧಿಸಿ ಸತತ ಮೂರನೇ ಬಾರಿಗೆ ಜಿಲ್ಲಾ ಮಟ್ಟಕ್ಕೆ ಆಯ್ಕೆ ಆಗಿದ್ದಾರೆ.

ಪ್ರಸಕ್ತ ಸಾಲಿನ ಪ್ರೌಢಶಾಲಾ ಕ್ರೀಡಾಕೂಟದ ವಾಲಿಬಾಲ್ ಪಂದ್ಯಾವಳಿ ಪಟ್ಟಣದ ಜಿ ಪಿ ಜಿ ತಾಲೂಕು ಕ್ರೀಡಾಂಗಣದಲ್ಲಿ ಜರುಗಿದವು. ಫೈನಲ್ ಪಂದ್ಯದಲ್ಲಿ ಉತ್ತಂಗಿ ಸರಕಾರಿ ಪ್ರೌಢಶಾಲೆ ಬಾಲಕಿಯರ ತಂಡ ಗಿರಿಯಾಪುರ ಮತ ಮೊರಾರ್ಜಿ ದೇಸಾಯಿ ವಸತಿ ಪ್ರೌಢಶಾಲೆಯ ಬಾಲಕಿಯರನ್ನು 2-0 ಎರಡು ಸೆಟ್ ನೇರವಾಗಿ ಪರಾಭವಗೊಳಿಸಿ ಜಿಲ್ಲಾ ಮಟ್ಟಕ್ಕೆ ಅರ್ಹತೆ ಗಳಿಸಿದರು.

ಸತತ ಮೂರನೇ ಬಾರಿಗೆ ತಾಲೂಕು ಮಟ್ಟದಲ್ಲಿ ವಿಜೇತರಾಗಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿನಿಯರ ಸಾಧನೆಗೆ ಮುಖ್ಯ ಗುರು ಮಂಜುನಾಥ ದೈಹಿಕ ಶಿಕ್ಷಕರಾದ ನಾಗರಾಜ ಎಸ್ ಡಿ ಎಂ ಸಿ ಅಧ್ಯಕ್ಷರು, ಪದಾಧಿಕಾರಿಗಳು, ಶಾಲೆಯ ಶಿಕ್ಷಕರಾದ ಮಲ್ಲನಗೌಡ, ಕೊಟ್ರೇಶ್, ಗುರುಬಸವರಾಜ, ಬಸವರಾಜ, ಶಾರದಾ, ಕುಸುಮ ಹಾಗೂ ಕ್ರೀಡಾ ಪ್ರೇಮಿಗಳು ಅಭಿನಂದಿಸಿದರು.

ಕಲಾಕೃತಿ ಪ್ರದರ್ಶನದ ಕ್ಯಾಟ್‌ಲಾಗ್ ಬಿಡುಗಡೆ

ಸಂಡೂರು: ಪಟ್ಟಣದ ಎಲ್.ಬಿ. ಕಾಲೋನಿಯ ಕಾಳೆಯವರ ನಿವಾಸದಲ್ಲಿ ಫೋಕ್ ಫ್ಲೇರ್ ಕೆ.ವಿ. ಕಾಳೆಯವರ ಕಲಾಕೃತಿಗಳ ಪ್ರದರ್ಶನದ ಕ್ಯಾಟಲಾಗ್ ಬಿಡುಗಡೆ ಸಮಾರಂಭ ನಡೆಯಿತು.

ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ನಾಗನಗೌಡ ಬಿ. ಚಿತ್ರಕಲಾ ಕ್ಯಾಟಲಾಗ್ ಬಿಡುಗಡೆಗೊಳಿಸಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಕಲೆ ಮತ್ತು ಕಲಾಕಾರರು ವಿರಳ. ಆದರೆ ಸಂಡೂರಿನ ಸೌಂದರ್ಯ ಕಲ್ಪನೆಯನ್ನು ಚಿತ್ರಕಲೆಯ ಮೂಲಕ ಜೀವಕಳೆಯನ್ನು ಕೆ.ವಿ. ಕಾಳೆಯವರು ತುಂಬಿದ್ದಾರೆ ಎಂದರು.

ಹಿಂದಿನ ಕಾಲದ ಜನರ ಜೀವನ ಶೈಲಿ ಹಾಗೂ ಆಧುನಿಕ ಜಗತ್ತಿನ ಜನರ ಜೀವನ ಶೈಲಿ ಹಾಗೂ ಜೋಗತಿಯರ ಆಭರಣದೊಂದಿಗೆ ಚಿತ್ರಿಕರಣ, ಕಾಡು ಸಿದ್ದರ ಕೊರಳೊಳಗೆ ಶಂಕು, ಕೈಯೊಳಗೆ ಘಂಟೆಯಿಡಿದಿರುವ ಚಿತ್ರ, ಭೂ ತಾಯಿಯ ಉಳಿಮೆಯ ಶಕ್ತಿಯನ್ನು ಹೊಂದಿರುವ ಬಸವನ ಚಿತ್ರ, ವೀರಗಾಸೆಯರ ಚಿತ್ರ ಕುಟ್ಟುವ, ಬೀಸುವ, ಗ್ರಾಮೀಣ ಸೊಗಡನ್ನು ಅತ್ಯಂತ ಸುಂದರ ಮತ್ತು ರಮಣಿಯವಾಗಿ ಚಿತ್ರಿಸಿದ್ದಾರೆ. ಇಂತಹ ಚಿತ್ರಗಳಿರುವ ಕ್ಯಾಟ್‌ಲಾಗ್ ಬಿಡುಗಡೆ ಮಾಡುವುದು ನನ್ನ ಪುಣ್ಯ ಎಂದು ಸಂತಸ ವ್ಯಕ್ತಪಡಿಸಿದರು.

ಕೆ.ವಿ. ಕಾಳೆಯವರು ಪ್ರಾಸ್ತಾವಿಕವಾಗಿ ಮಾತನಾಡಿ, 16ನೇ ಚಿತ್ರಕಲಾ ಪ್ರದರ್ಶನ ಬಿಡುಗಡೆ ಮಾಡುತ್ತಿರುವುದು ನನ್ನಗೆ ತುಂಬಾ ಸಂತೋಷವೆನುಸುತ್ತದೆ. ಕ್ಯಾಟ್‌ಲಾಗ್ ಬಿಡುಗಡೆ ಸಮಾರಂಭವನ್ನು ನಮ್ಮ ತಂದೆಯ ಅನುಮತಿಯೊಂದಿಗೆ ಇಂದು ಮಾಡುತ್ತಿರುವುದು ನನ್ನ ಭಾಗ್ಯ ಫೋಕ್ ಫ್ಲೇರ್ ಚಿತ್ರಗಳನ್ನೊಳಗೊಂಡ ಈ ನನ್ನ ಪುಸ್ತಕವು ಮುಂಬೈಯ ಜಾಹಂಗೀರ್ ಗ್ಯಾಲರಿಯಲ್ಲಿ ಪ್ರದರ್ಶನವಾಗುತ್ತಿದೆ. ಇದು ನಮ್ಮ ದೇಶದ ಪ್ರತಿಷ್ಠಿತ ಗ್ಯಾಲರಿಯಾಗಿದೆ ಇದರಲ್ಲಿ ನಾನು ಚಿತ್ರಿಸಿರುವಂತಹ ಚಿತ್ರಗಳು ಪ್ರದರ್ಶನವಾಗುತ್ತಿರುವುದು ನನ್ನ ಭಾಗ್ಯ ಎಂದರು. ವಿ.ಆರ್. ಮಸೂತಿಯವರು ಮಾತನಾಡಿ, ಕಲೆ ಯಾರಪ್ಪನ ಸೊತ್ತಲ್ಲ, ಕಲೆಯೂ ಕಾಳೆ ಕುಟುಂಬಕ್ಕೆ ವರವಾಗಿದೆ ಕಾಳೆಯವರು ಚಿತ್ರಿಸಿರುವಂತಹ ಚಿತ್ರಗಳು ಜಗತ್ ಪ್ರಸಿದ್ಧಿಯನ್ನು ಪಡೆಯಲಿ ಎಂದು ಹೇಳಿದರು.

.ಈ ಸಂದರ್ಭದಲ್ಲಿ ವಿ.ಟಿ. ಕಾಳೆ ಮತ್ತು ಕುಟುಂಬಸ್ಥರು, ಶಿಗ್ಗಾವಿ, ಹಿರಿಯ ವಕೀಲ ಗುಡೇಕೋಟೆ ನಾಗರಾಜ, ಅಂಕಮನಾಳ್ ಮಯೂರ್, ವಿರೇಶ್, ಕಲಾಭಿಮಾನಿಗಳು ಉಪಸ್ಥಿತರಿದ್ದರು.

ಎಲ್.ಬಿ. ಕಾಲೋನಿಯ ಕಾಳೆಯವರ ನಿವಾಸದಲ್ಲಿ ಫೋಕ್ ಫ್ಲೇರ್ ಕೆ.ವಿ. ಕಾಳೆಯವರ ಕಲಾಕೃತಿಗಳ ಪ್ರದರ್ಶನದ ಕ್ಯಾಟಲಾಗ್ ಬಿಡುಗಡೆ ಮಾಡಿದರು.

ಕಾಳೆಯವರು ಬಿಡಿಸಿರುವಂತಹ ಪ್ರತಿಯೊಂದು ಚಿತ್ರಗಳು ಗ್ರಾಮೀಣ ಜೀವನ ಶೈಲಿಯನ್ನೊಳಗೊಂಡ ಹಾಗೂ ಸಂಡೂರು ಸುತ್ತ-ಮುತ್ತಲಿನ ವೈಭವವನ್ನು ಅತೀ ಸೂಕ್ಷ್ಮವಾಗಿ ವೈಭಾವಿಕರಿಸುವುದರ ಮೂಲಕ ಚಿತ್ರಕಲೆಗೆ ಜೀವ ಬಂದಾಂತಾಗಿದೆ.

- ನಾಗನಗೌಡ, ತಾಲೂಕು ಅಧ್ಯಕ್ಷ

ಸಧೃಢ ಪ್ರಜಾಪ್ರಭುತ್ವವೇ ಭಾರತದ ಹೆಗ್ಗಳಿಕೆ

ಸಂಡೂರು: ವಿಶ್ವದಲ್ಲಿನ 196 ರಾಷ್ಟ್ರಗಳಲ್ಲಿ ಭಾರತವು ಸದೃಢ ಪ್ರಜಾಪ್ರಭುತ್ವವನ್ನು ಹೊಂದಿದ್ದು ಹೆಮ್ಮೆಯ ಸಂಗತಿಯಾಗಿದೆ ಎಂದು ಸಂಸದ ಈ.ತುಕಾರಾಂ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಸಂಡೂರು ತಾಲೂಕಿನ ಬನ್ನಿಹಟ್ಟಿ ಗ್ರಾಮದ ಸರಕಾರಿ ಪ್ರೌಢ ಶಾಲೆಯ ಆವರಣದಲ್ಲಿ ಆಯೋಜಿಸಲಾಗಿದ್ದ ಬೃಹತ್ ಮಾನವ ಸರಪಳಿ ನಿರ್ಮಾಣದ ವೇದಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯಲ್ಲಿ ಪ್ರತಿಯೊಬ್ಬರೂ ಸಹೃದಯದಿಂದ ಪಾಲ್ಗೊಂಡಿದ್ದು ಸಂತಸ ತಂದಿದೆ, ಈ ಸಂದರ್ಭದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು. ಬಳ್ಳಾರಿ ವಲಯ ಪೊಲೀಸ್ ಮಹಾ ನಿರೀಕ್ಷಕ ಲೋಕೇಶ್ ಕುಮಾರ್ ಮಾತನಾಡಿ, ಭಾರತ ದೇಶವು ಅತ್ಯಂತ ದೊಡ್ಡ ಸಂವಿಧಾನ ಹೊಂದಿದ್ದು, ಈ ದಿನ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯನ್ನು ಸಂಭ್ರಮವಾಗಿಗೆ ಆಚರಿಸಲಾಗುತ್ತಿದೆ ಎಂದರು. ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಮಾತನಾಡಿ, ಸ್ವಾತ್ಯಂತ್ರ್ಯದ ಸತ್ಯತೆ ಹಾಗೂ ಸಂವಿಧಾನದ ಮೌಲ್ಯಗಳನ್ನು ಜನ ಸಾಮಾನ್ಯರು ಅರಿಯಬೇಕಿದೆ ಎಂದರು.

ಜಿಲ್ಲಾ ಪಂಚಾಯಿತಿ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನ ಆಚರಿಸಲಾಯಿತು.

ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಮಲ್ಲಿಕಾರ್ಜುನ.ಬಿ ಪ್ರಾಸ್ತಾವಿಕವಾಗಿ ಮಾತನಾಡಿ, ರಾಜ್ಯ ಸರ್ಕಾರವು ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ಅಂಗವಾಗಿ ಬೀದರ್‌ನಿಂದ ಚಾಮರಾಜನಗರದವರೆಗೆ ವಿದ್ಯಾರ್ಥಿಗಳೂ ಸೇರಿದಂತೆ 25 ಲಕ್ಷಕ್ಕೂ ಹೆಚ್ಚಿನ ನಾಗರೀಕರೊಂದಿಗೆ ಒಟ್ಟು 2,500 ಕಿ.ಮಿ ಉದ್ದದ ಬೃಹತ್ ಮಾನವ ಸರಪಳಿ ನಿರ್ಮಾಣದ ಜೊತೆಗೆ 10 ಲಕ್ಷ ಸಸಿಗಳನ್ನು ನೆಟ್ಟು ವಿನೂತನ ಹೆಜ್ಜೆಯಿಟ್ಟಿದೆ ಎಂದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭರಾಣಿ ವಿ.ಜೆ, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ಸ್ಥಳೀಯ ಚುನಾಯಿತ ಪ್ರತಿನಿಧಿಗಳು ಸೇರಿದಂತೆ ವಿವಿಧ ಇಲಾಖೆಯ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು, ಸಿಬ್ಬಂದಿ, ಸಂಘಟನೆಯ ಪದಾಧಿಕಾರಿಗಳು, ಎನ್‌ಜಿಓ ಸಂಸ್ಥೆಯ ನೌಕರರು, ಸಾರ್ವಜನಿಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸಂವಿಧಾನ ಮೌಲ್ಯ ಮತ್ತು ಆಶಯಗಳನ್ನು ಎತ್ತಿ ಹಿಡಿಯುವ ನಿಟ್ಟಿನಲ್ಲಿ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ಅಂಗವಾಗಿ ಬೃಹತ್ ಮಾನವ ಸರಪಳಿ ಆಯೋಜಿಸಲಾಗಿದೆ. ಮುಂಬರುವ ಪೀಳಿಗೆಯ ಉತ್ತಮ ಭವಿಷ್ಯ ನಿರ್ಮಾಣಕ್ಕೆ ಸಹಕಾರಿಯಾಗಲಿದೆ.

-ಈ.ತುಕಾರಾಂ, ಸಂಸದ

ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಜಿಲ್ಲೆಯಲ್ಲಿ ಏರ್ಪಡಿಸಲಾದ ಬೃಹತ್ ಮಾನವ ಸರಪಳಿ ನಿರ್ಮಾಣದಲ್ಲಿ ವಿದ್ಯಾರ್ಥಿಗಳು, ಸಾವಜನಿಕರು, ಸೇರಿದಂತೆ ವಿವಿಧ ಸಂಘ ಸಂಸ್ಥೆಗಳು ಹಾಗೂ ವಿವಿಧ ಇಲಾಖೆಗಳ ಸಿಬ್ಬಂದಿಯವರು ಭ್ರಾತೃತ್ವ, ಸಮಾನತೆ, ಏಕತೆ ಮತ್ತು ಮುಕ್ತ ಭಾವದಿಂದ ಪ್ರತಿಯೊಬ್ಬರೂ ಪಾಲ್ಗೊಂಡು ದೇಶಪ್ರೇಮ ಮೆರೆದಿದ್ದಾರೆ.

- ಪ್ರಶಾಂತ್ ಕುಮಾರ್ ಮಿಶ್ರಾ,, ಜಿಲ್ಲಾಧಿಕಾರಿ

ವಿಜಯಕುಮಾರ್ ತನಿಖೆ ಎದುರಿಸಲಿ

ಹೂವಿನಹಡಗಲಿ : ಪಟ್ಟಣದ ಕಿತ್ತೂರು ರಾಣ ಚನ್ನಮ್ಮ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಪಿ.ವಿಶ್ವನಾಥ ಅವರು ಸಹಕಾರಿಯ ಹಣ ದುರ್ಬಳಕೆ ಮಾಡಿಕೊಂಡಿದ್ದು, ಕೂಡಲೇ ಅವರು ರಾಜೀನಾಮೆ ನೀಡಿ ತನಿಖೆ ಎದುರಿಸಲಿ ಎಂದು ಮಾಜಿ ಶಾಸಕ ನಂದಿಹಳ್ಳಿ ಹಾಲಪ್ಪ ಹೇಳಿದರು. ಪಟ್ಟಣದ ಪತ್ರಿಕಾ ಭವನದಲ್ಲಿ ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು,

ಸಹಕಾರಿಯಿಂದ 1 ಕೋಟಿ ರೂ ಆವರ್ತ ನಿಧಿ ಸಂಗ್ರಹಿಸಿ, ಪಂಚಮಸಾಲಿ ಸಮಾಜದ ವಿದ್ಯಾರ್ಥಿಗಳಿಗಾಗಿ ಹಾಸ್ಟೆಲ್ ತೆರೆಯುವ ಚಿಂತನೆಮಾಡಲಾಗಿತ್ತು, ಈ ಹಿಂದೆ ಸೊಸೈಟಿಗೆ ನೇಮಕಗೊಂಡ ಏಳು ಸಿಬ್ಬಂದಿಯಿಂದ ಸಹಕಾರಿಯ ಬೆಳವಣಿಗೆಗಾಗಿ 19 ಲಕ್ಷ ರು ದೇಣಿಗೆ ಪಡೆದು, ಹಣವನ್ನು ಅವರ್ಶ ನಿಧಿಯಲ್ಲಿಡಲು ತೀರ್ಮಾನಿಸಲಾಗಿತ್ತು. ಆದರೆ, ಅಧ್ಯಕ್ಷರು ಹಣವನ್ನು ಸ್ವಂತಕ್ಕೆ ಬಳಸಿಕೊಂಡಿದ್ದಾರೆ ಎಂದು ಆರೋಪಿಸಿದರು.

ಆಡಳಿತ ಮಂಡಳಿ ಅನುಮತಿ ಇಲ್ಲದೇ ತಮ್ಮದೇ ನಿವೇಶನವನ್ನು ಸಹಕಾರಿ ಹೆಸರಿಗೆ ಖರೀದಿಸಿದ್ದಾರೆ. ಗ್ರಾಹಕರ, ಷೇರುದಾರರ ಸಹಕಾರ, ಸಿಬ್ಬಂದಿಯ ಶ್ರಮದಿಂದ ಸಂಸ್ಥೆ ಉತ್ತಮವಾಗಿದೆ.

ವಿದ್ಯಾರ್ಥಿ ಜೀವನದಲ್ಲಿ ಶಿಕ್ಷಕನ ಪಾತ್ರ ಅಪಾರ

ಸಂಡೂರು: ತಂದೆ ತಾಯಿಗಳು ಮಗುವಿಗೆ ಜನ್ಮವನ್ನು ಕೊಟ್ಟರೆ ಆ ಮಗುವಿಗೆ ಶಿಕ್ಷಣದ ಮೂಲಕ ಸಂಸ್ಕಾರಯುತ ಜೀವನವನ್ನು ರೂಪಿಸಿಕೊಳ್ಳುವ ಶಕ್ತಿಯನ್ನು ಕೊಡುವ ಏಕೈಕ ವ್ಯಕ್ತಿಯೆಂದರೆ ಶಿಕ್ಷಕನಿಲ್ಲದಿದ್ದಾರೆ ಶಿಕ್ಷಣವಿಲ್ಲದ ನಮ್ಮ ಬಾಳು ನಶ್ವರ ಅದಕ್ಕಾಗಿ ಅಜ್ಞಾನದ ಕತ್ತಲನ್ನು ತೊಡೆದು ಶಿಕ್ಷಣವೆಂಬ ಸುಜ್ಞಾನದ ಬೆಳಕಿನ ಜ್ಯೋತಿಯನ್ನು ನಮ್ಮ ಬಾಳಿನಲ್ಲಿ ಮೂಡಿಸುವವರೆಂದರೆ ಶಿಕ್ಷಕರು ಎಂದು ಶ್ರೀಶೈಲೇಶ್ವರ ವಿದ್ಯಾಕೇಂದ್ರದ ಆಡಳಿತಾಧಿಕಾರಿ ಕುಮಾರ ಎಸ್ ನಾನಾವಟೆ ತಿಳಿಸಿದರು. ಪಟ್ಟಣದ ಶ್ರೀಶೈಲೇಶ್ವರ ವಿದ್ಯಾಕೇಂದ್ರದಲ್ಲಿ ಲಕ್ಷ್ಮೀ ಎಸ್ ನಾನಾವಟೆ ಶಿಕ್ಷಣ ಮಹಾವಿದ್ಯಾಲಯದ ಪ್ರಾಶಿಕ್ಷಣಾರ್ಥಿಗಳು ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆವಹಿಸಿ ಮಾತನಾಡಿದರು. ಒಬ್ಬ ಕಲಾವಿದ ನಿರ್ಜೀವ ವಸ್ತುಗಳ ಮೇಲೆ ತಮ್ಮ ಕಲಾ ಮಹಿಮೆಯನ್ನು ತೋರಿಸಿದರೆ ಒಬ್ಬ ಶಿಕ್ಷಕ ಸಜೀವವೆಂಬ ಮುದ್ದು ಮಕ್ಕಳ ಮೇಲೆ ತನ್ನ ಬೋಧನೆಯ ಕಲೆಯಿಂದ ಸರ್ವತೋಮುಖ ಅಭಿವೃದ್ಧಿಯನ್ನು ಹೊಂದಿದ ಸಮರ್ಥ ನಾಗರೀಕ ಮೂರ್ತಿಯನ್ನಾಗಿ ಮಾಡುವ ಶಕ್ತಿ ಶಿಕ್ಷಕನಲ್ಲಿದೆ ಎಲ್ಲಿ ಸುಶಿಕ್ಷಿತರಿರುತ್ತಾರೋ ಆ ಸಮಾಜ ಅಭಿವೃದ್ಧಿಯನ್ನು ಹೊಂದಲು ಸಾಧ್ಯ ಅದಕ್ಕಾಗಿ ಶಿಕ್ಷಕರನ್ನು ಸಮಾಜದ ನಿರ್ಮಾಪಕರೆಂದು ಕರೆಯುತ್ತಾರೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಚಾರ್ಯ ದೇವರಾಜ್ ಯು ಹಾಗೂ ಸಿಬ್ಬಂದಿ ವರ್ಗದವರು ಹಾಗೂ ಶ್ರೀಶೈಲೇಶ್ವರ ವಿದ್ಯಾಕೇಂದ್ರ ಎಲ್ಲಾ ಬೊಧಕ ಹಾಗೂ ಬೋಧಕೇತರ ವರ್ಗದವರು ಉಪಸ್ಥಿತರಿದ್ದರು.

ಹೊಸಪೇಟೆ ಭಾರತೀಯ ಜನತಾ ಪಾರ್ಟಿ ವಿಜಯನಗರ ವಿಧಾನಸಭಾ ಕ್ಷೇತ್ರ ಹೊಸಪೇಟೆ ಬಿಜೆಪಿ ಮಂಡಲದಿಂದ ನಗರಸಭೆಗೆ ನೂತನವಾಗಿ ಆಯ್ಕೆಯಾದ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಸನ್ಮಾನಿಸಲಾಯಿತು. ಸ್ಥಳೀಯ ಪಟೇಲ್ ನಗರದ ಬಿಜೆಪಿ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ನೂತನವಾಗಿ ಅಧ್ಯಕ್ಷರಾಗಿ ಆಯ್ಕೆಯಾದ ರೂಪೇಶ್ ಕುಮಾರ್ ಹಾಗೂ ಉಪಾಧ್ಯಕ್ಷರಾಗಿ ಆಯ್ಕೆಯಾದ ರಮೇಶ್ ಗುಪ್ತಾ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಪಕ್ಷದ ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಪಾಟೀಲ್, ರಾಜ್ಯ ಯುವಮೋರ್ಚಾ ಕೋಶಾಧ್ಯಕ್ಷ ಸಿದ್ಧಾರ್ಥ್ ಸಿಂಗ್, ಮಂಡಲ ಅಧ್ಯಕ್ಷ ಶಂಕರ್ ಮೇಟಿ, ರಾಜ್ಯ ಬಿಜೆಪಿ ವಕ್ತಾರ ಅಶ್ವತ್ಥನಾರಾಯಣ, ಮುಖಂಡರಾದ ಅಶೋಕ್ ಜೀರೇ, ಅಯ್ಯಳ್ಳಿ ತಿಮ್ಮಪ್ಪ, ಸಾಲಿಸಿದ್ಧಯ್ಯ ಸ್ವಾಮಿ, ಟಿಂಕರ್ ರಫೀಕ್, ಕೆ.ಎಸ್.ರಾಘವೇಂದ್ರ , ಮನೋಹರ್ ಗುಪ್ತ, ಬಸವರಾಜ ನಲತ್ವಾಡ್ , ಭಾರತಿ ಪಾಟೀಲ್, ಪ್ರಿಯಾಂಕ ಜೈನ್ ಇತರರಿದ್ದರು.

ಕಲ್ಯಾಣ ಕರ್ನಾಟಕ ಉತ್ಸವ ನಾಳೆ

ಹೊಸಪೇಟೆ: ಸೆಪ್ಟೆಂಬರ್ 17ರಂದು ನಡೆಯುವ ಕಲ್ಯಾಣ ಕರ್ನಾಟಕ ಉತ್ಸವವನ್ನು ಅಚ್ಚುಕಟ್ಟಾಗಿ ಆಯೋಜಿಸಲು ಎಲ್ಲಾ ಅಧಿಕಾರಿಗಳು ಶ್ರಮಿಸುವಂತೆ ಅಪರ ಜಿಲ್ಲಾಧಿಕಾರಿಗಳಾದ ಇ.ಬಾಲಕೃಷ್ಣಪ್ಪ ಸೂಚನೆ ನೀಡಿದರು. ಕಲ್ಯಾಣ ಕರ್ನಾಟಕ ಉತ್ಸವ ಹಿನ್ನೆಲೆಯಲ್ಲಿ ತಮ್ಮ ಕಚೇರಿಯ ಸಭಾಂಗಣದಲ್ಲಿ ಗೂಗಲ್ ಮೀಟ್ ಮೂಲಕ ಅಧಿಕಾರಿಗಳೊಂದಿಗೆ ಸಭೆಯ ಸಭೆ ನಡೆಸಿ ಮಾತನಾಡಿದರು. ಕಲ್ಯಾಣ ಕರ್ನಾಟಕ ಉತ್ಸವವು ಹೊಸಪೇಟೆಯ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಈ ಕಾರ್ಯಕ್ರಮದಲ್ಲಿ ಎಲ್ಲ ಇಲಾಖೆಗಳ ಅಧಿಕಾರಿಗಳು ತಮ್ಮ ಸಿಬ್ಬಂದಿಯೊಂದಿಗೆ ಕಡ್ಡಾಯ ಪಾಲ್ಗೊಳ್ಳಬೇಕು. ಅಧಿಕಾರಿಗಳು ತಮಗೆ ವಹಿಸಿದ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು. ಕಾರ್ಯಕ್ರಮದ ಆಹ್ವಾನ ಪತ್ರಿಕೆಗಳನ್ನು ಶಿಷ್ಟಾಚಾರದಂತೆ ಗಣ್ಯರಿಗೆ ವಿರಣೆಗೆ ಕ್ರಮವಹಿಸಿ. ಕಲ್ಯಾಣ ಕರ್ನಾಟಕ ಉತ್ಸವದ ನಿಮಿತ್ತ ಜಿಲ್ಲಾ ಕ್ರೀಡಾಂಗಣ, ಜಿಲ್ಲಾಡಳಿತ ಭವನ ಹಾಗೂ ನಗರದ ಪ್ರಮುಖ ವೃತ್ತಗಳಲ್ಲಿ ಸ್ವಚ್ಚತೆ ಮತ್ತು ವಿದ್ಯುತ್ ದೀಪಾಲಂಕಾರ ಮಾಡಲು ಕ್ರಮ ವಹಿಸಬೇಕು. ಕಾರ್ಯ ಕ್ರಮದಲ್ಲಿ ಅತಿಥಿಗಳು ಮತ್ತು ಗಣ್ಯ ವ್ಯಕ್ತಿಗಳು ಮತ್ತು ಪತ್ರಕರ್ತರಿಗೆ ಕೂಡಲು ಸರಿಯಾದ ಆಸನದ ವ್ಯವಸ್ಥೆ ಮಾಡಬೇಕು. ಪಂಥ ಸಂಚಲನದಲ್ಲಿ ಪಾಲ್ಗೊಳ್ಳುವ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಕುಡಿಯುವ ನೀರು, ಅಲ್ಪೋಪಹಾರ ವ್ಯವಸ್ಥೆಯನ್ನು ಮಾಡಬೇಕು. ಒಟ್ಟಾರೆ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆಯನ್ನು ಅರ್ಥ ಪೂರ್ಣವಾಗಿ ಆಚರಿಸಲು ಎಲ್ಲರೂ ಸಹಕರಿಸಬೇಕು ಎಂದು ಹೇಳಿದರು.

ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ
16.09.2024 ಸೋಮವಾರ
vishwavani.news

ದಿನ ದರ್ಶಿಕೆ

ಭಾದ್ರಪದ ಮಾಸ, ಶುಕ್ಲ ಪಕ್ಷ, ತ್ರಯೋದಶಿ ತಿಥಿ, ಧನಿಷ್ಠಾ ನಕ್ಷತ್ರ, ಸುಕರ್ಮ ಯೋಗ, ತೈತಿಲ ನಕ್ಷತ್ರ, 1946 ಕ್ರೋಧಿನಾಮ ಸಂವತ್ಸರ, 2081 ವಿಕ್ರಮನಾಮ ಸಂವತ್ಸರ, ದ್ರಿಕ್ ಋತು ಶರದ್, ದ್ರಿಕ್ ಆಯನ ದಕ್ಷಿಣಾಯನ

ಮನೆಮದ್ದು

ತಾಜಾ ಕೊತ್ತಂಬರಿ ಸೊಪ್ಪನ್ನು ಸಣ್ಣದಾಗಿ ಕತ್ತರಿಸಿ, ನೀರಿಗೆ ಹಾಕಿ ಹತ್ತು ನಿಮಿಷ ಕುದಿಸಿ ನಂತರ ಆರಿಸಿ, ಸೋಸಿ, ಫ್ರಿಜ್‌ನಲ್ಲಿಡಿ. ನಿತ್ಯ ಒಂದು ಲೋಟ ಕೊತ್ತಂಬರಿ ಪೇಯವನ್ನು ರಾತ್ರಿ ಮಲಗುವ ಮುನ್ನ ಸೇವಿಸಿದರೆ, ಮೂತ್ರ ವಿಸರ್ಜನೆಯ ವೇಳೆಗೆ ದೇಹದಲ್ಲಿನ ಅನಪೇಕ್ಷಿತ ಲವಣಗಳು ಹಾಗೂ ಸಂಗ್ರಹಿತ ಅಶುದ್ಧಗಳು ಹೊರಹೋಗುವುದು.

ಸೌಂದರ್ಯ ಸೂತ್ರ

ಜೇನುತುಪ್ಪ ಆಂಟಿಬ್ಯಾಕ್ಟೀರಿಯಲ್ ಮತ್ತು ಆರ್ದ್ರಕ ಗುಣಲಕ್ಷಣ ಹೊಂದಿದೆ. ಇದು ಚರ್ಮದ ಗಾಯ, ಕಲೆ ಗುಣಪಡಿಸುತ್ತದೆ. ಮೊಡವೆಗಳ ಮೇಲೆ ನೇರವಾಗಿ ಜೇನುತುಪ್ಪ ಹಚ್ಚಿ, 15 ನಿಮಿಷ ಬಿಟ್ಟು ನಂತರ ಬೆಚ್ಚಗಿನ ನೀರಿನಿಂದ ತೊಳೆಯಿರಿ. ಇದರಿಂದ ಮೊಡವೆ ಕಲೆಗಳು ನಿವಾರಣೆಯಾಗುತ್ತದೆ.

ದಿನ ಭವಿಷ್ಯ

ಮೇಷ: ಇಂದು ಗಣನೀಯ ಪ್ರಮಾಣದ ಹಣವನ್ನು ಸಹ ಹೊಂದಿರುತ್ತೀರಿ ಮತ್ತು ಅದರೊಂದಿಗೆ ಮನಸ್ಸಿನ ಶಾಂತಿ ಇರುತ್ತದೆ.

ವೃಷಭ: ಫಿಟ್ ಆಗಿ ಮತ್ತು ಚೆನ್ನಾಗಿರಿಸಿಕೊಳ್ಳಲು ಹೆಚ್ಚಿನ ಕ್ಯಾಲೊರಿಯ ಆಹಾರವನ್ನು ತಪ್ಪಿಸಿ, ಕಡಿಮೆ ಕ್ಯಾಲೋರಿಯ ಆಹಾರವನ್ನೇ ರೂಢಿಸಿಕೊಳ್ಳಿ

ಮಿಥುನ: ರಕ್ತದೊತ್ತಡ ರೊಗಿಗಳು ಸ್ವಲ್ಪ ಜಾಗ್ರತೆಯಿಂದಿರಿ. ಹೊಸ ಆರ್ಥಿಕ ಒಪ್ಪಂದ ಕುದುರಿಸಲಾಗುತ್ತದೆ ಮತ್ತು ಹೊಸ ಹಣ ಬರುತ್ತದೆ.

ಕಟಕ: ಅನಗತ್ಯ ಆಲೋಚ ನೆಗಳು ಮನಸ್ಸನ್ನು ಆಕ್ರಮಿಸಿಕೊಳ್ಳಲು ಬಿಡಬೇಡಿ. ಶಾಂತವಾಗಿ ಮತ್ತು ಒತ್ತಡ ಮುಕ್ತ ವಾಗಲು ಪ್ರಯತ್ನಿಸಿ.

ಸಿಂಹ: ಆರೋಗ್ಯ ದೃಷ್ಟಿಯಿಂದ ಉತ್ತಮವಾದ ದಿನ. ಹರ್ಷಚಿತ್ತದ ಮನಸ್ಸು ಟಾನಿಕ್ ನೀಡುತ್ತದೆ ಮತ್ತು ಆತ್ಮವಿಶ್ವಾಸ ತರುತ್ತದೆ.

ಕನ್ಯಾ: ಹೇರಳ ಶಕ್ತಿಯನ್ನು ಹೊಂದಿರುತ್ತೀರಿ - ಆದರೆ ಕೆಲಸದ ಒತ್ತಡ ನಿಮ್ಮನ್ನು ಉದ್ವಿಗ್ನಗೊಳಿಸುವಂತೆ ತೊರುತ್ತದೆ. ಇಂದು ಆರ್ಥಿಕ ಲಾಭವಿದೆ.

ತುಲಾ: ಇಂದು ವಿಶ್ವಾಸ ಬೆಳೆಯುತ್ತದೆ ಮತ್ತು ಪ್ರಗತಿ ನಿಶ್ಚಿತವಾಗಿದೆ. ಮನೆಯ ಸದಸ್ಯರನ್ನು ಸುತ್ತಾಡಲು ಕರೆದು ಕೊಂಡು ಹೋಗಬಹುದು

ವೃಶ್ಚಿಕ: ಕ್ರೀಡೆಗಳು ಮತ್ತು ಇತರ ಹೊರಾಂಗಣ ಚಟುವಟಿಕೆಗಳಲ್ಲಿ ಭಾಗವಹಿಕೆ ಕಳೆದುಕೊಂಡ ಚೈತನ್ಯವನ್ನು ಸಂಗ್ರಹಿಸಲು ಸಹಾಯ ಮಾಡುತ್ತದೆ.

ಧನು: ಸೃಜನಶೀಲ ಕೆಲಸ ಶಾಂತವಾಗಿರಿಸುತ್ತವೆ. ಹಣವನ್ನು ಅನೇಕ ವಿಷಯಗಳಿಗೆ ಖರ್ಚು ಮಾಡಬಹುದು.

ಮಕರ: ವಿಶ್ರಾಂತಿ ತೆಗೆದುಕೊಳ್ಳುತ್ತಿರದಿದ್ದಲ್ಲಿ, ತುಂಬಾ ದಣಿವಾದಂತೆನಿಸುತ್ತದೆ. ತಾಯಿಯ ಬದಿಯಿಂದ ಇಂದು ಹಣಕಾಸಿನ ಲಾಭವಿದೆ.

ಕುಂಭ: ದೈಹಿಕ ಲಾಭ, ಮಾನಸಿಕ ದೃಢತೆಗಾಗಿ ಧ್ಯಾನ-ಯೊಗ ಪ್ರಾರಂಭಿಸಿ. ಹೊರಗೆ ಹೋಗುವಾಗ ಹಿರಿಯರ ಆಶೀರ್ವಾದವನ್ನು ತೆಗೆದುಕೊಳ್ಳಿ

ಮೀನ: ಮಾದಕವಸ್ತುವಿನ ಅವಲಂಬನೆ ಹೆಚ್ಚುವ ಸಾಧ್ಯತೆ. ಸಕಾರಾತ್ಮಕತೆಯೊಂದಿಗೆ ಮನೆಯಿಂದ ಹೊರಬರುತ್ತೀರಿ

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ



- 1946: ಮುಸ್ಲಿಮೇತರರನ್ನು ಕೊಲ್ಲುವ ಡೈರೆಕ್ಟ್ ಆ್ಯಕ್ಷನ್ ಡೇ ಅನ್ನು ಮುಸ್ಲಿಂ ಲೀಗ್‌ನಿಂದ ಜಾರಿಗೊಳಿಸಲಾಯಿತು.
- 2018: ಭಾರತದ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ತೀರಿಕೊಂಡ ದಿನ
- 1886: ಕಾಳಿಮಾತೆಯ ಅನುಗ್ರಹ ಪಡೆದಿದ್ದ ರಾಮಕೃಷ್ಣ ಪರಮ ಹಂಸರು ದೇಹಾಂತ್ಯವಾದ ದಿನ

ಚಿತ್ರಸ್ಫೂರ್ತಿ



ಚಿತ್ರಕೃಪೆ: ಸುಧಾಕರ್ ದೇವರಾಜ್

ನನ್ನ ಪ್ರೀತಿಯ ಪುಗ್ಗ
ನೀನು ಹಾರುವಾಗ ಹಿಗ್ಗ
ನೀನಿದ್ದಲ್ಲೇ ಇರುತ್ತೆ ಸಗ್ಗ!

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

- ಮೊರಾಕೊ ಯಾವ ಪ್ರದೇಶದಲ್ಲಿ ಕಂಡುಬರುತ್ತದೆ?

- ಎ. ಯುರೋಪ್.
- ಬಿ. ಉತ್ತರ ಆಫ್ರಿಕಾ.
- ಸಿ. ಆಸ್ಟ್ರೇಲಿಯಾ.
- ಡಿ. ಉತ್ತರ ಅಮೆರಿಕ.

ಉತ್ತರ: ಬಿ. ಉತ್ತರ ಆಫ್ರಿಕಾ.

ಮಾಹಿತಿ

ಮೊರಾಕೊ, ಉತ್ತರ ಆಫ್ರಿಕಾದ ದೇಶ, ಅಟ್ಲಾಂಟಿಕ್ ಸಾಗರ ಮತ್ತು ಮೆಡಿಟರೇನಿಯನ್ ಸಮುದ್ರದ ಗಡಿಯಾಗಿದೆ. 2022 ರ ಮೊರಾಕೊ ದೇಶದ ಹವಾಮಾನ ಮತ್ತು ಅಭಿವೃದ್ಧಿ ವರದಿಯ ಪ್ರಕಾರ, 2050 ರ ವೇಳೆಗೆ ನವೀಕರಿಸಬಹುದಾದ ಇಂಧನ ಮೂಲಗಳು ದೇಶದ ಶೇ.85 ಕ್ಕಿಂತ ಹೆಚ್ಚು ವಿದ್ಯುತ್ ಉತ್ಪಾದನೆಗೆ ಕಾರಣವಾಗುತ್ತವೆ ಎಂದು ಯೋಜಿಸಲಾಗಿದೆ. ಇದು 2021 ರಲ್ಲಿ ವರದಿಯಾದ ಶೇ 20 ರ ಗಮನಾರ್ಹ ಹೆಚ್ಚಳವನ್ನು ಪ್ರತಿನಿಧಿಸುತ್ತದೆ. ಈ ಪರಿವರ್ತನೆಯ ಪರಿಣಾಮವಾಗಿ, ವಾರ್ಷಿಕವಾಗಿ ಕನಿಷ್ಠ 28,000 ಉದ್ಯೋಗಗಳ ನಿವ್ವಳ ಹೆಚ್ಚಳವಾಗಬಹುದು ಎಂದು ಅಂದಾಜಿಸಲಾಗಿದೆ.

ಮುಂದಿಟ್ಟ ಹಾಲನ್ನು ತಿರಸ್ಕರಿಸಿದ ರಾಮಕೃಷ್ಣನ ಬೆಕ್ಕು

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಮ್ಮೆ ಕೃಷ್ಣದೇವರಾಯ ಹತ್ತಾರು ಜನರಿಗೆ ಸಣ್ಣ ಬೆಕ್ಕಿನ ಮರಿಗಳನ್ನು ಕೊಟ್ಟು, ಅವನನ್ನು ಸಾಕಲು ಅನುಕೂಲವಾಗುವಂತೆ ಒಂದೊಂದು ಹಸುವನ್ನು ಕೊಟ್ಟ.

''ಮಹಾಪ್ರಭೂ ನನಗೂ ಒಂದು ಬೆಕ್ಕಿನ ಮರಿ ಕೊಡಿ'' ಎಂದ ತೆನಾಲಿ ರಾಮಕೃಷ್ಣ. ಅರಸ ಅವನಿಗೂ ಒಂದು ಮರಿ ಮತ್ತು ಹಸುವನ್ನು ಕೊಟ್ಟು ''ನಿಮ್ಮಲ್ಲಿ ಬೆಕ್ಕನ್ನು ಯಾರು ಚೆನ್ನಾಗಿ ಬೆಳೆಸುತ್ತೀರೋ ಅವರಿಗೆ ಬಹುಮಾನ ಕೊಡ್ತಿನಿ ಎಂದ.

ಮೂರು ತಿಂಗಳ ಬಳಿಕ ರಾಜನ ಆಜ್ಞೆಯಂತೆ ಎಲ್ಲರೂ ಬೆಕ್ಕುಗಳನ್ನು ಕರೆತಂದರು. ಬೆಕ್ಕುಗಳಿಗೆಂದು ರಾಣಿವಾಸದವರು ಒಂದೊಂದು ಬಟ್ಟಲು ಹಾಲನ್ನಿಟ್ಟರು. ಬೇರೆಲ್ಲ ಬೆಕ್ಕುಗಳು ಹಾಲನ್ನು ಕುಡಿಯಲಾರಂಭಿಸಿದಾಗ ರಾಮಕೃಷ್ಣನ ಬೆಕ್ಕು ಮಾತ್ರ ಸಿರ್ ಎಂದು ಮುಖ ತಿರುಗಿಸಿತು. ಅದನ್ನು ಕಂಡ ಅರಸ ಕೇಳಿದ ''ರಾಮಕೃಷ್ಣ, ನಿನ್ನ ಬೆಕ್ಕೇಕೆ ಹಾಲು ಕುಡಿಯುತ್ತಿಲ್ಲ?''

''ಮಹಾಪ್ರಭೂ, ಬೆಕ್ಕುಗಳಿಗೆ ಕಣ್ಣು ಮುಚ್ಚಿ ಹಾಲು ಕುಡಿಯೋದೊಂದು ದುರಭ್ಯಾಸ. ನನ್ನ ಬೆಕ್ಕು ಹಾಗೆ ಮಾಡಬಾರದೂಂತ ಮೊದಲ ದಿನ ಬಿಸಿ ಹಾಲನ್ನ ಕೊಟ್ಟೆ. ಕುಡಿದಾಗ ಅದರ ಮೀಸೆ ಸುಟ್ಟಿತು. ಮತ್ತೆ ಪ್ರತಿದಿನವೂ ಹಾಗೆ ಮಾಡಿದೆ. ಈಗ ಬೆಕ್ಕು ಹಾಲನ್ನೇ ಕುಡಿಯೊದಿಲ್ಲ'' ಎಂದ ರಾಮಕೃಷ್ಣ.

''ಆದರೆ ನಿನ್ನ ಬೆಕ್ಕು ಬೇರೆಲ್ಲ ಬೆಕ್ಕುಗಳಿಗಿಂತ ದಪ್ಪವಾಗಿದೆಯಲ್ಲಾ, ಅದು ಹೇಗೆ?'' ಎಂದು ಪ್ರಶ್ನಿಸಿದ ಅರಸ.

''ಮಹಾಸ್ವಾಮೀ, ಪ್ರಾಣಿಗಳು ತಮ್ಮ ಆಹಾರಕ್ಕೆ ಇನ್ನೊಬ್ಬರನ್ನು ಅವಲಂಬಿಸೊಲ್ಲ. ಹಾಲಿಲ್ಲದಿದ್ದರೇನಂತೆ? ನನ್ನ ಬೆಕ್ಕು ಪ್ರತಿದಿನವೂ ಬೇಕಾದಷ್ಟು ಇಲಿ ಮತ್ತು ಪಾರಿವಾಳಗಳನ್ನು ತಿನ್ನುತ್ತಿತ್ತು. ಅದಕ್ಕೇ ಅದು ದಪ್ಪವಾಗಿದೆ'' ಎಂದ ರಾಮಕೃಷ್ಣ.

ರಾಜ ಸುಪ್ರಿತನಾಗಿ ''ಈ ಬೆಕ್ಕು ನಮಲ್ಲೇ ಇರಲಿ'' ಎಂದ.

''ಬೆಕ್ಕಿನ ಹಿಂದೆ ಬಂದ ಹಸು? ಎಂದು ಕೇಳಿದ ರಾಮಕೃಷ್ಣ.

''ಅದು ಗೋದಾನ. ಹಸು ನಿನಗೆ ಇರಲಿ'' ಎಂದು ನಕ್ಕು ನಡೆದ ಅರಸ.

ತೆನಾಲಿರಾಮಕೃಷ್ಣನ ಈ ಕಥೆ ನಾವು ಅನೇಕ ಬಾರಿ ಮಕ್ಕಳಿಗೆ ಹೇಳಿದ್ದೇವೆ ಅವನ ಜಾಣತನಕ್ಕೆ ತೀಕ್ಷ್ಣ ಬುದ್ಧಿಗೆ ಮೆಚ್ಚಿಗೆ ಕೂಡ ಸೂಚಿಸಿದ್ದೇವೆ. ಆದರೆ ರಾಮಕೃಷ್ಣ ಬೆಕ್ಕನ್ನು ಸಾಕಿದ ರೀತಿ ಒಂದು ಒಳಾರ್ಥವನ್ನು ನಮಗೆ ತಿಳಿಸಿಕೊಡುತ್ತದೆ ಅನಿಸುವುದಿಲ್ಲವೇ? ಎಲ್ಲರಂತೆ ಅವನು ಬೆಕ್ಕಿಗೆ ನಿತ್ಯವೂ ಹಾಲನ್ನು ಕೊಟ್ಟು ಮನೆಯಲ್ಲೇ ಅದು ಬೆಳೆಯಲು ಅವಕಾಶ ಮಾಡಿಕೊಡದೆ, ಪ್ರಾಣಿ ಧರ್ಮದಂತೆ ನಿತ್ಯವೂ ಅದು ಬೇಟೆಯಾಡಿ ಬದುಕುವುದನ್ನು ಅದಕ್ಕೆ ಕಲಿಸಿಕೊಟ್ಟ. ಅದರಿಂದಾಗಿ ಆ ಬೆಕ್ಕು ಆಹಾರಕ್ಕಾಗಿ ಅವನ ಮೇಲೆ ಅವಲಂಬಿತವಾಗಿದೆ

ತನ್ನ ಆಹಾರವನ್ನು ತಾನೇ ಬೇಟೆಯಾಡಿ ತಿನ್ನುವುದನ್ನು ರೂಢಿಸಿಕೊಂಡಿತು.

ನಮ್ಮ ಮಕ್ಕಳಿಗೂ ಕೂಡ ನಾವು ಇಂಥದ್ದೇ ಒಂದು ಜೀವನ ಕಲೆಯನ್ನು ಕಲಿಸಬೇಕು ಅಲ್ಲವೇ? ನಾವು ಎಷ್ಟೇ ಐಶ್ವರ್ಯವಂತ ರಾಗಿದ್ದರೂ, ಅನುಕೂಲಸ್ಥರಾಗಿದ್ದರೂ ಕೂಡ ನಾಳೆ ನಮ್ಮ ಮಕ್ಕಳು ಅವರ ಅನ್ನವನ್ನು ಅವರೇ ಸಂಪಾದಿಸಿಕೊಳ್ಳಲು ಶಕ್ತರಾಗಿರಬೇಕು. ಕೂತು ತಿಂದವನಿಗೆ ಕುಡಿಕೆ ಹಣ ಸಾಲದು ಎನ್ನುವ ಗಾದೆಯಂತೆ

ತಂದೆ-ತಾಯಿಗಳ ಐಶ್ವರ್ಯವನ್ನು ಅನುಭವಿಸಿ ಮೋಜು ಮಾಡುವ ಮಕ್ಕಳಿಗೆ ಯಾವುದು ಹೆಚ್ಚು ದಿನ ಉಳಿಯುವುದಿಲ್ಲ. ಮಕ್ಕಳಿಗೆ ನಾವು ಒಳ್ಳೆಯ ವಿದ್ಯೆ-ಬುದ್ಧಿ ದುಡಿಯುವ ಕಲೆಯನ್ನು ಹೇಳಿಕೊಟ್ಟಾಗ ನಾಳಿನ ದಿನ ಅವರು ಕೂಡ ಸಮಾಜಕ್ಕೆ ಬೇಕಾದವರಾಗಿ, ನಾಲ್ಕು ಜನಕ್ಕೆ ಪ್ರತ್ಯುಪಕಾರ ಮಾಡುವಂತೆ ಬೆಳೆಯುತ್ತಾರೆ. ಆದ್ದರಿಂದಲೇ ಮಕ್ಕಳ ಮೇಲೆ ಮಮಕಾರವೇ ಎಷ್ಟೇ ಇರಲಿ ಅವರನ್ನು ಆರಾಮದಾಯಕ ಬದುಕಿಗೆ ಒಗ್ಗಿಸಬೇಡಿ, ಕಷ್ಟ-ಸುಖ ಗೊತ್ತಾಗುವಂತೆ ಅವರನ್ನು ಬೆಳೆಸಿ. ಬದುಕಿನ ನಾನಾ ಕಷ್ಟಗಳ ಬಗ್ಗೆ ಗೊತ್ತಾದಾಗ ಅದಕ್ಕೆ ಹೇಗೆ ನಿಭಾಯಿಸಬೇಕು ಎನ್ನುವುದನ್ನು ಕೂಡ ಅವರು ತಿಳಿದುಕೊಳ್ಳುತ್ತಾರೆ. ಆದ್ದರಿಂದಲೇ ಮಕ್ಕಳಿಗೆ ಬದುಕುವ ಕಲೆಯನ್ನು ಹೇಳಿಕೊಡಿ , ಜೀವನ ಜ್ಞಾನವನ್ನು ತುಂಬಿ ಮುಂದೆ ಅವರ ಬದುಕನ್ನು ಅವರೇ ಆರಿಸಿಕೊಳ್ಳುತ್ತಾರೆ.

ಸುಬೇದಾರ; ಪ್ಯಾರಾಲಿಂಪಿಕ್ಸ್ ಆಟಗಾರ

● ಪುರುಷೋತ್ತಮ್ ವೆಂಕಿ, ಚಿತ್ರದುರ್ಗ



ಅವರು ಭಾರತೀಯ ಸೇನೆಯಲ್ಲಿ ಸುಬೇದಾರ್ ಆಗಿದ್ದವರು. ಜಮ್ಮು ಕಾಶ್ಮೀರದಲ್ಲಿ ಕರ್ತವ್ಯದಲ್ಲಿದ್ದಾಗ ಆಕಸ್ಮಿಕವಾಗಿ ನೆಲದಡಿ ಹೂತಿಟ್ಟ ಬಾಂಬ್ ಸಿಡಿದು ತನ್ನ ಎಡಗಾಲು ಕಳೆದುಕೊಂಡರು. ತನ್ನದಲ್ಲದ ತಪ್ಪಿಗೆ ಮುಂದಿನ ಹುದ್ದೆಗೆ ಬಡ್ತಿ ಪಡೆಯಲು ಆಗದೇ ದುಃಖ ಅನುಭವಿಸಿದರು. ಆದರೆ ತಮ್ಮ ಆತ್ಮಸ್ಥೈರ್ಯವನ್ನು ಕಳೆದುಕೊಳ್ಳದೇ ಜೀವನದಲ್ಲಿ ಏನಾದರೂ ಸಾಧಿಸಬೇಕು ಎಂದು ಮತ್ತೆ ಫೀನಿಕ್ಸ್‌ನಂತೆ ಎದ್ದು ನಿಂತು ಗೆದ್ದು ಬೀಗಿದರು. ಅವರೇ ಹೊಕಾಟೊ ಹೊಟೊಜೆ ಸೆಮಾ.

ಮೂಲತಃ ನಾಗಾಲ್ಯಾಂಡ್ ರಾಜ್ಯದವರಾದ ಇವರು ಪ್ರಸಕ್ತ ವರ್ಷದಲ್ಲಿ ಪ್ಯಾರಿಸ್‌ನಲ್ಲಿ ಜರುಗಿದ ಪ್ಯಾರಾ ಒಲಂಪಿಕ್ಸ್‌ನಲ್ಲಿ ಶಾಟ್ ಪುಟ್ ವಿಭಾಗದಲ್ಲಿ ಕಂಚಿನ ಪದಕ ಗೆದ್ದು ಇಡೀ ದೇಶವೇ ಸಂತಸವೇ ಪಡುವಂತಹ ದಾಖಲೆ ಮಾಡಿ ನಗೆಯನ್ನು ಬೀರಿದ್ದಾರೆ.

ನಾಗಾಲ್ಯಾಂಡ್ ರಾಜ್ಯದ ನುಯಿಲ್ಯಾಂಡ್ ಜಿಲ್ಲೆಯ ಪಿ.ವೊಹಾಟೊ ಗ್ರಾಮದವರಾದ ಹೊಕಾಟೊ ಸೆಮಾರವರು ಜನಿಸಿದ್ದು ಡಿಸೆಂಬರ್ 24. 1983ರಂದು. ವಿದ್ಯಾಭ್ಯಾಸ ಪೂರ್ತಿಯಾದ ನಂತರ ಭಾರತೀಯ ಸೇನೆಯ 9ನೇ ಅಸ್ಸಾಂ ರೆಜಿಮೆಂಟ್‌ನಲ್ಲಿ ಸುಬೇದಾರ್ ಆಗಿ ಆಯ್ಕೆಯಾದರು. ಅಲ್ಲಿಂದ ದೇಶ ಕಾಯುವ ಕೆಲಸಕ್ಕೆ ನಿಯೋಜನೆಗೊಂಡು ನಂತರ 2002ರಲ್ಲಿ ಕಾಶ್ಮೀರಕ್ಕೆ ವರ್ಗಾವಣೆಗೊಂಡರು. ಆದರೆ ದುರಾದೃಷ್ಟವಶಾತ್ ಅದೇ ವರ್ಷದಲ್ಲಿ ವೈರಿಗಳ ಹುಟ್ಟಡಗಿಸಲು ಲೈನ್ ಆಫ್ ಕಂಟ್ರೋಲ್ (ಎಲ್‌ಒಸಿ) ಯಲ್ಲಿ ಕಾರ್ಯಾಚರಣೆ ಮಾಡುತ್ತಿರುವಾಗ ನೆಲದಡಿಯಲ್ಲಿ ಶತ್ರುಗಳು ಹೂತಿಟ್ಟ ಬಾಂಬ್ ಸಿಡಿದು ತಮ್ಮ ಎಡಗಾಲು ಮೊಣಕಾಲಿನ ಕೆಳಗೆ ಪೂರ್ತಿಯಾಗಿ ಗಾಯಗಳಾಗಿ ಕೊನೆಗೆ ಕಾಲನ್ನು ಕತ್ತರಿಸಿ ತೆಗೆಯಬೇಕಾಯಿತು. ಸೇನೆಯಲ್ಲಿ ಸೇವೆ ಸಲ್ಲಿಸಬೇಕೆಂಬ ತಮ್ಮ ಆಸೆ ನುಚ್ಚುನೂರಾಯಿತು. ಮಾನಸಿಕವಾಗಿ ಜರ್ಝರಿತರಾದರು. ಆ ಕಹಿ ಘಟನೆಗಳನ್ನೆಲ್ಲಾ ಮರೆಯಲು ತುಂಬಾ ದಿನಗಳೇ ಕಳೆದವು. ನಂತರ ತಮ್ಮ 32ನೇ ವಯಸ್ಸಿನಲ್ಲಿ ತಮಗಿಷ್ಟವಾದ ಶಾಟ್ ಪುಟ್ ಗೇಮ್‌ನಲ್ಲಿ ಏನಾದರೂ ಸಾಧಿಸಬೇಕೆಂಬ ಪಣ ತೊಟ್ಟು ತಮ್ಮ ಕೋಚ್ ಆದ ರಾಕೇಶ್ ರಾವತ್ ಅವರ ಅಡಿಯಲ್ಲಿ ತರಬೇತಿ ಪಡೆದು ಮತ್ತಷ್ಟು ಪಳಗಿ ದರು. ಸತತ 20 ವರ್ಷಗಳ ಕಠಿಣ ಪರಿಶ್ರಮದಿಂದ 2022ರಲ್ಲಿ ಚೀನಾದ ಹ್ಯಾಂಗ್ ಝೌನಲ್ಲಿ ನಡೆದ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಮೊದಲು ಕಂಚಿನ ಪದಕ ಪಡೆಯುವ ಮೂಲಕ ಪದಕ ಬೇಟೆಗಿಳಿದರು. ಈ ವರ್ಷ ಪ್ಯಾರಿಸ್‌ನಲ್ಲಿ ಜರುಗಿದ ಪ್ಯಾರಾ ಒಲಂಪಿಕ್ಸ್‌ನಲ್ಲಿ ಶಾಟ್‌ಪುಟ್ ವಿಭಾಗದಲ್ಲಿ ಕಂಚಿನ ಪದಕ ಗೆದ್ದಿದ್ದು ಸಂತೋಷದ ವಿಷಯ. ಪ್ರಸ್ತುತ ಅವರಿಗೆ ಒಲಂಪಿಕ್ ಗೋಲ್ಡ್‌ಕ್ವೆಸ್ಟ್ ಎಂಬ ಎನ್‌ಜಿಒ ಆಸರೆಯಾಗಿದ್ದು ತನ್ನಂತೆ ಅಂಗವಿಕಲತೆ ಇರುವ ಅಥ್ಲೀಟ್ಸ್‌ಗಳು ಸಹ ಕ್ರೀಡಾ ಕ್ಷೇತ್ರದಲ್ಲಿ ಪದಕಗಳನ್ನು ಗೆದ್ದು ದೇಶಕ್ಕೆ ಹೆಸರು ತಂದುಕೊಡಬೇಕು ಎನ್ನುವ ಮಹದಾಸೆಯನ್ನು ಹೊಂದಿದ್ದು ಇದರ ಪರವಾಗಿ ಅಭಿಯಾನ ಕೂಡ ನಡೆಸುತ್ತಿದ್ದಾರೆ. ಅವರ ಕನಸು ಆದಷ್ಟು ಬೇಗ ಈಡೇರಲಿ. ಮುಂದೆ ಮತ್ತಷ್ಟು ಪದಕಗಳನ್ನು ಗೆಲ್ಲಲಿ ಎಂದು ಶುಭ ಹಾರೈಸೋಣ.

ಪದಬಂಧ



ಎಡದಿಂದ ಬಲಕ್ಕೆ:
3. ಶಿರವು ಸುತ್ತಿ ಬರುವುದನ್ನು ಹೀಗೆ ಹೇಳಬಹುದು (5)
6. ಸಭೆಯೊಂದರ ಮುಖ್ಯಸ್ಥ (4)
7. ಅನಾಥನು ಅಥವಾ ನಿರ್ಗತಿಕನು (3)
9. ಭೂಮಿಯ ಒಡೆಯನಾದ ರಾಜ (3)
11. ವಿಷಯವೊಂದರ ತಿರುಳು (2)
12. ಅತಿಯಾದ ಒತ್ತಾಯ (3)
13. ನೀರಿನ ಹಬೆ (2)
14. ಕಲ್ಲಿನಿಂದ ಬೀಸಿ ಹೊಡೆಯಲು ಮಾಡಿದ ಸಾಧನ (3)
16. ನಗಾರಿ ಅಥವಾ ಭೇರಿ (3)
18. ಸಮಾರೋಪದ ಮುಕ್ತಾಯ (4)
19. ಉಪನಯನವಾದ ನಂತರ ಹೆಗಲೇರಿ ಕುಳಿತುಕೊಳ್ಳುವುದು (5)

ಮೇಲಿನಿಂದ ಕೆಳಕ್ಕೆ:
1. ಮನದ ಚಿಂತೆ (3)
2. ತಪ್ಪು ಮಾಡಿದವನು (4)
4. ಅಮೂಲ್ಯ ವಸ್ತುಗಳನ್ನಿಡುವ ಕಬ್ಬಿಣದ ಪೆಟ್ಟಿಗೆ (3)
5. ಮಹತ್ತರವಾದ ಎಂದರ್ಥ (4)
8. ಯಮನಿಗೆ ಮತ್ತೊಂದು ಹೆಸರು (4)
9. ಸುಖದುಃಖಗಳಲ್ಲಿ ಸಮಪಾಲು ಪಡೆವ ಹೆಂಡತಿಗೆ ಹೀಗೊಂದು ಹೆಸರು (3)
10. ಗಾಳಿಗೆ ಪರ್ಯಾಯ ಪದ (4)
11. ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುವುದು (3)
13. ನಾಲ್ಕಕ್ಷರದ ಮೇಲುಹೊದಿಕೆ (4)
15. ಜೈನ ತೀರ್ಥಂಕರರಲ್ಲಿ ಕೊನೆಯವರು (4)
16. ಇಲ್ಲದ ತಪ್ಪನ್ನು ಹೊರಿಸಿ ಹೇಳುವುದು (3)
17. ಮತ್ತೊಂದು ಹೋಲಿಕೆ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 2. ರಾಯಸ 4. ಅರಗು 6. ಗಿರಣಿ 7. ತಾತ್ಸಾರ 8. ನಾಯಿ 9. ಸರಣಿ 11. ಡಿರಾ 13. ಸುತ 15. ಜಕಾತಿ 17. ಮತಂಗ 18. ಲತೆ 20. ತನು 22. ಮೋಹಕ 24. ಗಲ್ಲ 25. ಪಾತಳಿ 26. ಹಾಲಗ 27. ಕರಟ 28. ಕೆಲಸ

ಮೇಲಿನಿಂದ ಕೆಳಕ್ಕೆ: 1. ಉಗಿಬಂಡಿ 2. ರಾಣಿ 3. ಸತಾಯಿಸು 4. ಅರಸ 5. ಗುರಾಣಿ 10. ರಕ್ತಗತ 12. ರಾಜದ್ರೋಹ 14. ತಮ 16. ತಿಲ 19. ತೆಗಳಿಕೆ 21. ನುಡಿಗಟ್ಟು 22. ಮೋದಕ 23. ಕಪಾಟ 26. ಹಾಸ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಅಪಾಯಕಾರಿ ಉತ್ಸವ

ಜಗತ್ತಿನಲ್ಲಿ ಆಚರಣೆಯಲ್ಲಿರುವ ಅತ್ಯಂತ ಅಪಾಯಕಾರಿ ಉತ್ಸವಗಳಲ್ಲಿ ಜಪಾನ್ ದೇಶದ ಒನ್ಬಶಿರಾ ಉತ್ಸವ ಮೊದಲ ಐದರಲ್ಲಿ ಸ್ಥಾನಗಳಿಸಿದೆ. ಪ್ರತಿ ಆರು ವರುಷಗಳಿಗೊಮ್ಮೆ ಆಚರಿಸಲಾಗುವ ಈ ಉತ್ಸವಕ್ಕೆ ಸುಮಾರು 1200 ವರುಷಗಳಷ್ಟು ಹಳೆಯ ಇತಿಹಾಸವಿದೆ. ಒನ್ಬಶಿರಾ ಉತ್ಸವವು ಜಪಾನಿನ ದೊಡ್ಡ ಮೂರು ಅವಾಸ್ತವಿಕ ಕಲ್ಪನೆಯ ಉತ್ಸವಗಳಲ್ಲಿ ಒಂದಾಗಿದೆ. ಈ ಹಿಂದೆ 2004, 2010 ಮತ್ತು 2016ರಲ್ಲಿ ನಡೆದ ಉತ್ಸವದಲ್ಲಿ ಕ್ರಮವಾಗಿ ಎರಡು, ಎರಡು, ಒಂದು ಸಾವು ಸಂಭವಿಸಿದ್ದವು. ಈ ಕಾರಣದಿಂದಲೇ ಇದನ್ನು ಅತ್ಯಂತ ಅಪಾಯಕಾರಿ ಉತ್ಸವಗಳ ಪಟ್ಟಿಗೆ ಸೇರಿಸಲಾಗಿದೆ.

ಪುಸ್ತಕ ಲೋಕ



ಹಂಪಿ ಎಕ್ಸ್‌ಪ್ರೆಸ್

ವಸುಧೇಂದ್ರ ಅವರ ಹಂಪಿ ಎಕ್ಸ್‌ಪ್ರೆಸ್ ಕಥಾಸಂಕಲನಕ್ಕೆ ಅತ್ಯಂತ ವೇಗದಲ್ಲಿಯೇ ಓದಿಸಿಕೊಂಡು ಹೋಗುವ ಶಕ್ತಿಯಿದೆ. ಈ ಪುಸ್ತಕದ ಪ್ರತಿ ಕಥೆಯ ಓದಿನ ಪಯಣ ಸರಾಗವಾಗಿ ಮತ್ತು ಅಷ್ಟೇ ನಿರ್ಲಿಪ್ತವಾಗಿ ಶುರುವಾಗಿ ಕಥೆ ಮುಕ್ತಾಯಕ್ಕೆ ಬರುವಷ್ಟರಲ್ಲಿ ಗಾಢವಾದ ವಿಚಾರಧಾರೆಗೆ ಒಳಗಾಗಿಸುತ್ತವೆ. ಇಲ್ಲಿನ ಬಹುತೇಕ ಪಾತ್ರಗಳಿಗಿರುವ ಸ್ಥೈರ್ಯ ಮನೋಭಾವದಿಂದ, ಜೀವನದ ಆಳಕ್ಕೆ ಬಿದ್ದರೂ ಎದೆಗುಂದದೆ ಮೇಲೆದ್ದು ಜೀವಿಸಲು ಹೊರಟ ಆ ವಿಶಿಷ್ಟ ಪಾತ್ರಗಳ ಹೋರಾಟದ ಪ್ರಕ್ರಿಯೆಯಿಂದ ಈ ಪುಸ್ತಕ ಸೆಳೆಯುತ್ತದೆ. ಇಲ್ಲಿ ಬರುವ ಒಟ್ಟು ಎಂಟು ಕಥೆಗಳು, ನಮ್ಮ ಜೀವನದಲ್ಲೂ ಇಂಥಾ ಘಟನೆಗಳು ನಡೆದಿದೆಯಲ್ಲಾ ಅನ್ನಿಸುವಷ್ಟರ ಮಟ್ಟಿಗೆ ಆಪ್ತವಾಗುತ್ತದೆ.

ಟ್ವೀಟ್‌ಮೆಂಟ್

ಅರುಣ್ ಜಾವಗಲ್: ಮಕ್ಕಳ ಕಲಿಕೆಗೆ ತಾಯಿ ನುಡಿಯೇ ಸೂಕ್ತವಾದುದು, ಕನ್ನಡದ ಮಕ್ಕಳಿಗೆ ಕನ್ನಡ ಮಾಧ್ಯಮವೇ ಸೂಕ್ತ.

ಶಶಿ ಪಾಂಡವಪುರ: ದಿಟ ಸರ್, ತಾಯಿನುಡಿಯಲ್ಲಿ ರೀಸರ್ಚ್‌ನಲ್ಲಿ ಮುಂದಿರುವುದು. ಆದರೆ ಕನ್ನಡ ಕಲಿಕೆ ಸರಳವಾಗಬೇಕಿದೆ. ಕನ್ನಡ ಬೇಡ ಎನ್ನುವ ಕಾರಣ ಕಷ್ಟಕರವಾದ ಸಂಸ್ಕೃತ, ಅದರ ಬದಲು ಇಂಗ್ಲೀಷ್ ಮಿಶ್ರಿತ ಆಡುನುಡಿಯಲ್ಲಿ ಕಲಿಕೆ ಇರಲಿ, ಮಕ್ಕಳಿಗೆ ತಾವೇನು ಕಲಿಯುತ್ತಿದ್ದೇವೆ ಅರ್ಥವಾಗಲಿ. ಇಲ್ಲ, ಬರೀ ಹೊರಗಿನ ಕಂಪನಿಗಳ ಕೆಲಸಕ್ಕಾಗಿ ಬೇಡಬೇಕಾಗುತ್ತದೆ!

ಅಪಥ್ಯಾಹಾರದಿಂದ ಮನೋವಿಕಾರ!

● ಮಾಯಾ ಬಾಲಚಂದ್ರ

ಸ್ವಾಮಿ ಪ್ರಕಾಶಾನಂದ ಅವರು ನೈನಿತಾಲಿನ ಸಿಖಾದಲ್ಲಿ ಭಕ್ತರೊಬ್ಬರ ಮನೆಯಲ್ಲಿ ವಾಸ್ತವ್ಯ ಹೂಡಿದ್ದರು. ತಮ್ಮ ಉಪಹಾರವನ್ನು ತಾವೇ ಸಿದ್ಧಪಡಿಸಿ ಸ್ವೀಕರಿಸುವ ಪದ್ಧತಿ ಅವರದ್ದು. ಅಂತೆಯೇ ತಾವೇ ತಯಾರಿಸಿದ ರೊಟ್ಟಿಯನ್ನು ಆ ಮನೆಯ ನಾಯಿಗೆ ಹಾಕಿದರು. ಅದು ನಾಯಿಯ ನಿತ್ಯದ ಊಟದ ಸಮಯವಾಗಿದ್ದರೂ, ಆ ನಾಯಿ ರೊಟ್ಟಿಯನ್ನು ತಿನ್ನುವ ಆಸಕ್ತಿಯನ್ನೇ ತೋರಲಿಲ್ಲ. ಆಗ ಮನೆಯೊಡೆಯ ನಮ್ಮ ನಾಯಿ ನಾವು ಕೊಟ್ಟ ಊಟ ತಿಂಡಿಯನ್ನುಳಿದು ಬೇರೇನನ್ನೂ ತಿನ್ನುವುದಿಲ್ಲ. ಮನೆಯಲ್ಲಿ ಆಹಾರ ಪದಾರ್ಥಗಳನ್ನು ತೆರೆದಿಟ್ಟಿದ್ದರೂ, ಯಾವುದನ್ನೂ ತಿನ್ನಲು ಬರುವುದಿಲ್ಲ. ನಾವು ಹೇಳದೆ ಏನನ್ನೂ ತಿನ್ನುವುದಿಲ್ಲ ಎನ್ನುತ್ತಾನೆ. ಸ್ವಾಮೀಜಿ ನೀವು ಅದಕ್ಕೆ ತಿನ್ನಲು ಹೇಳಿರಿ ಎನ್ನುತ್ತಾರೆ. ಮನೆಯೊಡೆಯ ನಾಯಿಗೆ ಹೇಳಿದ ಇವರು ಧರ್ಮಾತ್ಮರು. ನಾವೂ ಅವರು ನೀಡಿದ್ದನ್ನು ಪ್ರಸಾದ ಎಂದು ಭಕ್ತಿಯಿಂದ ತಿನ್ನುತ್ತೇವೆ. ನೀನೂ ತಿನ್ನಬಹುದು ಎಂದು. ಕೂಡಲೇ ನಾಯಿ ಆ ರೊಟ್ಟಿಯನ್ನು ತಿಂದಿತು.

ಆಹಾರದ ವಿಷಯದಲ್ಲಿ ಮನುಷ್ಯನಿಗೆ ಪ್ರಾಣಿಗಳೇ ಮಾದರಿ. ಅನ್ನಾಹಾರ ಸೇವನೆಯ ವಿಚಾರದಲ್ಲಿ ಪಶು, ಪಕ್ಷಿಗಳಿಗಿರುವ ಸಂಯಮ ಮನುಷ್ಯನಿಗಿಲ್ಲದಿರುವುದು ವಿಪರ್ಯಾಸ. ಹಸಿವಾದಾಗ ಮಾತ್ರ, ಆರೋಗ್ಯಕ್ಕೆ ಹಿತವಾಗುವ ಆಹಾರವನ್ನು, ಮಿತವಾಗಿ ಸೇವಿಸುವ ಪ್ರಾಣಿಗಳಿಗೆ ರೋಗಗಳು ದೂರ. ಹಸಿವಿರಲಿ, ಇಲ್ಲದಿರಲಿ ದಿನವಿಡೀ ತಿನ್ನುತ್ತಾ ಇರುವ ಮನುಷ್ಯನಿಗೆ ಮನೋ, ದೈಹಿಕ ಕಾಯಿಲೆಗಳು ಅಪಾರ. ಆಹಾರವ ಕಿರಿದು ಮಾಡಿರಣ್ಣಾ, ಆಹಾರವ ಕಿರಿದು ಮಾಡಿ. ಆಹಾರದಿಂದ ವ್ಯಾಧಿ ಹಬ್ಬಿ ಬಲಿವುದಯ್ಯಾ. ಆಹಾರದಿಂ ನಿದ್ರೆ, ನಿದ್ರೆಯಿಂ ತಾಮಸ, ಅಜ್ಞಾನ, ಮೈಮರಹು, ಅಜ್ಞಾನದಿಂ ಕಾಮವಿಕಾರ ಹೆಚ್ಚಿ, ಕಾಯವಿಕಾರ, ಮನೋವಿಕಾರ, ಇಂದ್ರಿಯವಿಕಾರ, ಭಾವವಿಕಾರ, ವಾಯುವಿಕಾರವನುಂಟುಮಾಡಿ, ಸೃಷ್ಟಿಗೆ ತಹುದಾದ ಕಾರಣ ಕಾಯದ ಅತಿಪೋಷಣ ಬೇಡ. ಅತಿ ಪೋಷಣೆ ಮೃತ್ಯುವೆಂದುದು ಎಂದ ಅಕ್ಕಮಹಾದೇವಿಯ ವಚನವನ್ನು ಇಲ್ಲಿ ನೆನೆಯಬಹುದು. ಆಹಾರದ ಬಗ್ಗೆ ಶಿಸ್ತು ರೂಢಿಸಿಕೊಂಡಾಗ ಮಾತ್ರ ನಮ್ಮ ಆರೋಗ್ಯ ನಮ್ಮ ಕೈಯಲ್ಲಿ.

ಮಳೆಯಾದರೆ ಹೀಗೆ ಆಗಲಿ

ಮಳೆಯಾಗಿದೆ
ಮನದ ಯಾವುದೋ
ಮೂಲೆಯಲ್ಲಿ.
ಅಲ್ಲಿ ಚಿಗುರೊಡೆದಿದೆ
ಹಚ್ಚ ಹಸಿರ ಬಯಕೆ,
ದೊಡ್ಡದಾಗಿ ಬೆಳೆವ
ಹಂಬಲ ಅದಕೆ.

ಅಲ್ಲಿ ಸ್ವಚ್ಚ ಗಾಳಿಯಿದೆ
ಉಸಿರಾಟಕೆ.
ಅಚ್ಚ ಬಿಳುಪಿನ ಪರದೆಯಿದೆ
ಮನದ ಚಿತ್ರಗಳನು ಮುಚ್ಚು
ಮರೆಯಿಲ್ಲದೆ ತೋರಿಸಲು.

ಯಾವ ಅಸೂಯೆ, ಅಸಹನೆಗಳ
ಸುಳಿವು ಕಿಂಚಿತ್ತೂ ಇಲ್ಲ
ಆ ಮೂಲೆಯಲ್ಲಿ.

ಸದಾ ಧ್ಯಾನಸ್ಥ ಸ್ಥಿತಿ,
ಮಾಧುರ್ಯದ ನುಡಿಗಳದೇ
ಅಲ್ಲಿ ಮುಖ್ಯ ಉಪಸ್ಥಿತಿ.

ಮಳೆಯಾದರೆ ಹೀಗೆ ಆಗಲಿ
ಮನದ ಎಲ್ಲಾ ಮೂಲೆಗಳಲ್ಲಿ.

ಎಲ್ಲವೂ ಹಚ್ಚ ಹಸಿರಾದಾಗ
ಎಲ್ಲೆಡೆ ಸ್ವಚ್ಚ ಉಸಿರು ಹರಡಿದಾಗ
ಸಂತೃಪ್ತ ಬದುಕು, ಸಮೃದ್ಧ
ಬೆಳಕು.

ಅಜಯ್ ಅಂಗಡಿ